# ಆತ್ಮ ಪ್ರಪಂಚ ಮತ್ತು ಆತ್ಮೀಕ ಬೆಳವಣಿಗೆ

ಈ ಪುಸ್ತಕವು
ದೇವರ ಸೇವಕರಿಗೆ, ಸತ್ಯವೇದ ಶಾಲಾ
ವಿದ್ಯಾರ್ಥಿಗಳಿಗೆ ಹಾಗೂ ಆತ್ಮೀಕವಾಗಿ
ಆಳವಾಗಿ ಬೆಳೆಯಲು ಹಂಬಲಿಸುವ
ಎಲ್ಲಾ ದೇವಜನರಿಗೆ ಪರಿಶುದ್ಧಾತ್ಮನ
ಒಂದು ಉಡುಗೊರೆಯಾಗಿದೆ.



"ಕಾಣದ ದೇವರ ರಾಜ್ಯವನ್ನು ನಾವು ಕಾಣಲು ಪ್ರಾರಂಭಿಸಿದಾಗ,
ಈ ಲೋಕದಲ್ಲಿ ಅಸಾಧ್ಯವಾದ ಸಂಗತಿಗಳನ್ನು ನಾವು
ಮಾಡಲು ಪ್ರಾರಂಭಿಸುತ್ತೇವೆ"



ದೇವರ ರಾಜ್ಯದ ಪುಸ್ತಕ ಸರಣಿ ಸಂಖ್ಯೆ– 1

# ಆತ್ಮ ಪ್ರಪಂಚ
# ಮತ್ತು ಆತ್ಮೀಕ ಬೆಳವಣಿಗೆ

**House of Prayer [Prarthanalayam] Publication**

(Mathew 21:13)

ಈ ಪುಸ್ತಕವು ನಿಮಗೆ, ನಿಮ್ಮ ಕುಟುಂಬಕ್ಕೆ ಮತ್ತು ಬರಲಿರುವ ನಿಮ್ಮ ಸಂತತಿಗೆ ಒಂದು ಅಮೂಲ್ಯವಾದ ನಿಧಿಯಾಗಿರಲಿದೆ.

# THE SPIRIT WORLD AND SPIRITUAL GROWTH

Copyright @ 2020
By Evg. Shaji Joseph
All rights are reserved
First Edition: November 2020
Translated with Permission

Prarthanalayam Publishers, Ernakulam
No part of this publication may be reproduced or transmitted in any form or by any means, electronically, including photocopying recording, or any information storage and retrieval system, without permission in writing from the publisher.

For more information about distributaion
House of Prayer (Prarthanalayam) Ministries
Tel: 0091-4842411092 (India), 00971-7-2211059 (UAE)
Mob: 9567590469 (Ind) 9435254997 (Ind) 9741118968 (Kar)
Email: shajijosephemail@gmail.com
www.kingdommessages.com

# SPIRIT WORLD AND SPIRITUAL GROWTH

*Presented*

*To,..................................................................*

*This book (Gift) is my reflection of God's love towards you. Let it help you to understand and do God's will in your life.*

*By ...............................................................*

*"Not every one that saith unto me, Lord, Lord, shall enter into the kingdom of heaven; but he that doeth the will of my Father which is in heaven." (Mat. 7:21)*

# ಸಮರ್ಪಣೆ

“ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮಫಲದಿಂದಲೂ ಯೆಹೋವನನ್ನು ಸನ್ಮಾನಿಸು. ಹೀಗೆ ಮಾಡಿದರೆ ನಿನ್ನ ಕಣಜಗಳು ಸಮೃದ್ಧಿಯಿಂದ ತುಂಬುವವು, ತೊಟ್ಟಿಗಳಲ್ಲಿ ದ್ರಾಕ್ಷಾರಸವು ತುಂಬಿತುಳುಕುವದು.” (ಜ್ಞಾನೋ 3:9-10)

ಕರ್ತನನ್ನು ನಿನ್ನ ಆದಾಯದಿಂದಲೂ ಮತ್ತು ನಿನ್ನ ಬೆಳೆಯ ಪ್ರಥಮಫಲದಿಂದಲೂ ಸನ್ಮಾನಿಸು ಎಂಬ ವಾಕ್ಯದ ಪ್ರಕಾರ ಹಾಗೂ ದೇವರ ದೈವೋಕ್ತಿಯ ಪ್ರಕಾರ, ನಾನು ಈ ಪ್ರಥಮಫಲ ಪುಸ್ತಕವನ್ನು ನನ್ನ ಪರಲೋಕದ ತಂದೆಯ ಪಾದಗಳಲ್ಲಿ ಅರ್ಪಿಸುತ್ತೇನೆ.

ಕ್ರಿಸ್ತನ ಸುವಾರ್ತೆಗಾಗಿ ಕೆಲಸಮಾಡುವವರಿಗೆ, ಆತನ ರಾಜ್ಯಕ್ಕಾಗಿ ಹೋರಾಡುವ ಕ್ರಿಸ್ತನ ಸೇವಕರಿಗೆ, ಕ್ರಿಸ್ತನಲ್ಲಿ ನನ್ನ ಪ್ರಿಯ ಸಹೋದರ ಮತ್ತು ಸಹೋದರಿಯರಿಗೆ, ಆತ್ಮೀಕವಾಗಿ ಬೆಳೆಯುವದಕ್ಕೆ ಶ್ರದ್ಧೆಯಿಂದ ದಾಹಪಡುವ ಸ್ನೇಹಿತರಿಗೆ, ಸತ್ಯವೇದ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ, ನನ್ನ ಪ್ರೀತಿಯ ಸ್ನೇಹಿತರಿಗೆ, ಕುಟುಂಬಕ್ಕೆ, ತಮ್ಮ ಪ್ರಾರ್ಥನೆಗಳಿಂದ ಮತ್ತು ಹಣಕಾಸಿನಿಂದ ಈ ಸೇವೆಯನ್ನು ಬೆಂಬಲಿಸುವ ಗೌರವಾನ್ವಿತ ಸ್ನೇಹಿತರಿಗೆ ಹಾಗೂ ಪ್ರಿಯ ಓದುಗರಿಗೆ ಇದನ್ನು ಯೇಸುವಿನ ನಾಮದಲ್ಲಿ ಅರ್ಪಿಸುತ್ತೇನೆ.

ನಮ್ಮ ಕೈಯಲ್ಲಿನ ಈ ಪುಸ್ತಕವು ಭಾರತದ ರಾಜ್ಯವಾದ ಮಹಾರಾಷ್ಟ್ರದ ದೇವರ ಸೇವಕರ ಗುಂಪು ಇಲ್ಲದಿದ್ದರೆ ಬೆಳಕಿಗೆ ಬರುತ್ತಿರಲಿಲ್ಲ. ಅವರು ಮೊದಲು ಡಿವಿಡಿಗಳಲ್ಲಿ ಇದ್ದ ದೇವರ ದೈವೋಕ್ತಿಗಳನ್ನು ಬರೆಯಲು ಒತ್ತಾಯಿಸಿದರು. ಸಭಾಪಾಲಕ ಸಿಜಿ ಥಾಮಸ್ ಅವರ ಸಮರ್ಥ ನಾಯಕತ್ವದಡಿಯಲ್ಲಿ, ಈ ದೀನ ಸೇವಕರು, ಮಾತಾಡಲ್ಪಟ್ಟ ಸಂದೇಶಗಳನ್ನು ಮತ್ತೆ ಮತ್ತೆ ಕೇಳುವ ಮೂಲಕ ಸೆರೆಹಿಡಿಯುವ ಹಾಗೂ ಅಂತಿಮವಾಗಿ ಅದನ್ನು ಕಾಗದದ ಮೇಲೆ ಹಾಕುವ ಕೆಲಸವನ್ನು ಕೈಗೆತ್ತಿಕೊಂಡರು.

ಈ ಪುಸ್ತಕದ ಮೂಲಕ ದೇವರು ಎಲ್ಲರನ್ನೂ ಆಶೀರ್ವದಿಸಲಿ.....

ಕ್ರಿಸ್ತನಲ್ಲಿ,
ಸಹೋ. ಶಾಜಿ ಜೋಸೆಫ್

# ಕೃತಜ್ಞತೆ

ಕ್ರಿಸ್ತನ ಸಭೆಯನ್ನು ಮನುಷ್ಯನ ದೇಹಕ್ಕೆ ಹೋಲಿಸಲಾಗಿದೆ. ದೇಹದ ವಿವಿಧ ಭಾಗಗಳು ಜೊತೆಗೂಡಿದಾಗ ಮಾತ್ರ ಅದು ಪರಿಪೂರ್ಣ ಮಾನವ ದೇಹವಾಗುತ್ತದೆ. ಅದರಂತೆಯೇ ಅನೇಕರ ಪರಿಶ್ರಮದಿಂದ, ಈ ಪುಸ್ತಕವು ರೂಪುಗೊಂಡಿದೆ. ಎಲ್ಲರಿಗೂ ನನ್ನ ಪ್ರಾಮಾಣಿಕ ವಂದನೆಗಳು.

ಸ.ಪಾ. ಜ್ಯೂಕ್ಸಿ ಮ್ಯಾಥ್ಯು: ಈ ದೇವರ ಸೇವಕರ ಮೂಲಕ ದೇವರು ನನ್ನಲ್ಲಿ ದೈವೀಕ ಸ್ವಭಾವವನ್ನು ಬೆಳೆಸಿದರು. ನಿಮ್ಮ ಜೀವನ ನನಗೆ ಒಂದು ಮಾದರಿಯಾಗಿದೆ.

ಸ.ಪಾ. ಸಿಜಿ ಥಾಮಸ್, ಮಹಾರಾಷ್ಟ್ರ: ನಿಮ್ಮ ಉತ್ತೇಜನವಿಲ್ಲದೆಯೇ, ಈ ಪುಸ್ತಕವು ಜನಿಸುತ್ತಿರಲಿಲ್ಲ. ದೇವರ ದೈವೋಕ್ತಿಗಳನ್ನು ಲಿಖಿತ ಪದಗಳಾಗಿ ಪರಿವರ್ತಿಸಿದಕ್ಕೆ ನಿಮಗೆ ನನ್ನ ಪ್ರಾಮಾಣಿಕ ವಂದನೆಗಳು.

ಸಹೋ. ರಾಬಿನ್ ಚೇರಿಯನ್ & ಸಹೋ. ಗ್ಲೋರಿ ರಾಬಿನ್: ದೇವರು ನಿಮ್ಮನ್ನು ನನ್ನ ಬಲ ಮತ್ತು ಎಡ ಕೈಗಳಾಗಿ ಇರಿಸಿದ್ದಾರೆ. ನೀವು ದೇವರ ರಾಜ್ಯಕ್ಕಾಗಿ ಹಗಲು ರಾತ್ರಿ ಓಡುವ ವೀರರು.

ಸಹೋ. ಜಾರ್ಜ್ ವರ್ಗೀಸ್, ಸಹೋ. ಲಿನಿ ಮ್ಯಾಥ್ಯೂ ಮತ್ತು ಸಹೋ. ಮರೀನಾ ಬಿಜು: ಇದನ್ನು ಸಾಧ್ಯವಾಗಿ ಮಾಡಲು ನಿಮ್ಮ ಎಲ್ಲಾ ಪರಿಶ್ರಮಕ್ಕೆ, ನಿಮ್ಮೆಲ್ಲರಿಗೂ ನನ್ನ ಪ್ರಾಮಾಣಿಕ ವಂದನೆ.

ಛಾಪನಾ ಕಾರ್ಯ ಮಾಡಿದವರಿಗೆ ಮತ್ತು ತಮ್ಮ ಪ್ರಾರ್ಥನೆಯಿಂದ ತಮ್ಮ ಸಂಪತ್ತಿನಿಂದ, ತಮ್ಮ ಕಾರ್ಯಗಳಿಂದ ದೇವರ ಕೆಲಸಕ್ಕಾಗಿ ಒಟ್ಟಾಗಿ ಕೆಲಸಮಾಡಿದ ಪ್ರಪಂಚದಾದ್ಯಂತದ ಸಭೆಗಳ ಎಲ್ಲಾ ವಿಶ್ವಾಸಿಗಳಿಗೆ – ನಿಮ್ಮ ಕೆಲಸವು ಈ ಪುಸ್ತಕವನ್ನು ಅದ್ಭುತಗೊಳಿಸಿದೆ.

ಪ್ರಾರ್ಥನಾಲಯಂನಲ್ಲಿನ ದೇವರ ಸೇವಕರು ಮತ್ತು ಕೆಲಸಗಾರರು: ನನ್ನೊಂದಿಗೆ ನಿಲ್ಲುವುದರಿಂದ ನೀವು ನನ್ನನ್ನು ದೇವರ ಕೆಲಸದಲ್ಲಿ ಬೆಂಬಲಿಸಿದ್ದೀರಿ.

ಸ.ಪಾ. ಪೌಲ್ ಮಲಯಾಡಿ, ನಾಗ್ಪುರ: ನೀವು ನನ್ನನ್ನು ಉತ್ತೇಜಿಸಿದ್ದೀರಿ ಮತ್ತು ನನಗೆ ಮಾದರಿಯಾಗಿದ್ದೀರಿ.

ಸಹೋ. ಫಿಲಿಪ್ ಜಾರ್ಜ್: ನೀವು ನನ್ನ ಹಿಂದೆ ಕ್ರಿಸ್ತನ ದೊಡ್ಡ ಶಕ್ತಿಯಾಗಿದ್ದೀರಿ, ಅದರ ಮೂಲಕ ನಾನು ಅಡೆತಡೆಗಳ ಮಧ್ಯೆ ಮುಂದುವರಿಯಲು ಸಾಧ್ಯವಾಯಿತು.

ನನ್ನ ಕುಟುಂಬ: ದೇವರ ಉಡುಗೊರೆಯಾಗಿರುವ, ನನ್ನ ಹೆಂಡತಿ ಶೀಬಾ ಮತ್ತು ನನ್ನ ಮಕ್ಕಳು ಡಾನ್ ಹಾಗೂ ಡಾನಿ, ನಿಮ್ಮ ಸಹಕಾರವಿಲ್ಲದೆಯೇ ಈ ಕಾರ್ಯಗಳು

ಸಾಧ್ಯವಾಗುತ್ತಿರಲಿಲ್ಲ. ನೀವು ನನ್ನನ್ನು ತಾಳ್ಮೆಯೊಂದಿಗೆ ಅರ್ಥಮಾಡಿಕೊಂಡಿರಿ. ನೀವು ನನ್ನ ದರ್ಶನಗಳನ್ನು ನಿಮ್ಮ ದರ್ಶನಗಳಾಗಿ ತಗೆದುಕೊಂಡಿರಿ. ನನ್ನ ಪ್ರಯಾಣಗಳಲ್ಲಿ, ನನ್ನ ತಡರಾತ್ರಿ ಪ್ರಾರ್ಥನೆಗಳಲ್ಲಿ ಮತ್ತು ನನ್ನ ಲೇಖನಗಳ ಸಮಯದಲ್ಲಿ ನೀವು ನನ್ನೊಂದಿಗೆ ಬಾಧೆಪಟ್ಟಿರಿ ಮತ್ತು ಸಹಕರಿಸಿದಿರಿ. ನನಗಾಗಿ ನಿಮ್ಮ ಪ್ರಾರ್ಥನೆ ಮತ್ತು ಸಮರ್ಪಣೆ ನಮ್ಮ ಕುಟುಂಬವನ್ನು ಕೀರ್ತನೆ 128ರಲ್ಲಿ ಉಲ್ಲೇಖಿಸಿರುವ ಕುಟುಂಬವಾಗಿ ಮಾರ್ಪಡಿಸಿದೆ.

ನನ್ನ ಪೋಷಕರು, ವಿ.ಸಿ. ಜೋಸೆಫ್ & ಟ್ರೆಸ್ಸಾ ಜೋಸೆಫ್: ಮೋಶೆ ತನ್ನ ಕೈಗಳನ್ನು ಮೇಲೆ ಎತ್ತಿಹಿಡಿಯಲು ಸಹಾಯ ಮಾಡಿದ, ಆರೋನ ಮತ್ತು ಹೂರನಂತೆ ನೀವು ನನಗಿದ್ದೀರಿ. ಕ್ರಿಸ್ತನಿಗಾಗಿ ಹೆಚ್ಚು ಕೆಲಸಮಾಡಲು ದೇವರು ನಿಮ್ಮನ್ನು ಬಲಪಡಿಸಲಿ.

ಎಲ್ಲಕ್ಕಿಂತ ಮೇಲಾಗಿ, ನಾನು ನನ್ನ ದೇವರನ್ನು ವಂದಿಸುತ್ತೇನೆ. ಈ ದೇಹವು ಅನೇಕ ಭಾಗಗಳಿಂದ ಮಾಡಲ್ಪಟ್ಟಿದ್ದರೂ, ಜೀವವನ್ನು ಹೊಂದಿರದಿದ್ದರೆ ಅದು ಯಾವ ಪ್ರಯೋಜನವಿಲ್ಲದ ಪಾರ್ಥಿವ ಶರೀರ ಮಾತ್ರವಾಗಿದೆ. ಈ ಕೆಲಸಕ್ಕಾಗಿ ನಮ್ಮೆಲ್ಲರನ್ನೂ ಸಿದ್ಧಪಡಿಸಿದ್ದಕ್ಕಾಗಿ, ತನ್ನ ಉಸಿರನ್ನು ನಮಗೆ ತುಂಬಿದ ಕಾರಣಕ್ಕಾಗಿ ಮತ್ತು ನನಗೆ ಆತ್ಮದಿಂದ ತುಂಬಿದ ದೇವರ ವಾಕ್ಯಗಳನ್ನು ಪ್ರಕಟಮಾಡಿದ್ದಕ್ಕಾಗಿ ದೇವರಿಗೆ ಸ್ತೋತ್ರ. ಅದೇ ಜೀವವನ್ನು ಈ ಪುಸ್ತಕಕ್ಕೆ ಪ್ರಕಟಮಾಡುವ ಮೂಲಕ, ಜೀವದೊಂದಿಗಿನ ಪುಸ್ತಕವಾಗಿ ಮಾರ್ಪಡಿಸಿದ್ದಾನೆ.

# ಮುನ್ನುಡಿ



ಶಾಜಿ ಜೋಸೆಫ್ ರಿಂದ ಬರೆಯಲ್ಪಟ್ಟಿರುವ '*ಆತ್ಮ ಪ್ರಪಂಚ ಮತ್ತು ಆತ್ಮೀಕ ಬೆಳವಣಿಗೆ* ' ಪುಸ್ತಕವನ್ನು ಓದುವ ಒಳ್ಳೆಯ ಅವಕಾಶವನ್ನು ನಾನು ಪಡೆದೆ. ಇದು ಅಧ್ಯಯನ ಪುಸ್ತಕ. ಈ ಪುಸ್ತಕದಲ್ಲಿ ಅಸಂಖ್ಯಾತ ಸತ್ಯಗಳಿವೆ. ಆತ್ಮೀಕ ಜೀವನವನ್ನು ನಡೆಸಲು ಗಂಭೀರವಾಗಿ ಆಸಕ್ತಿಹೊಂದಿರುವ ಎಲ್ಲರೂ ಹೆಚ್ಚು ಏಕಾಗ್ರತೆಯಿಂದ ಓದಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

ಒಬ್ಬ ವ್ಯಕ್ತಿ ದೇವರ ಚಿತ್ತದಲ್ಲಿ ಜೀವಿಸಬೇಕಾದರೆ, ಅವನು ಪೂರ್ಣ ಬದಲಾವಣೆಗೆ ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು. ಕಾರಣ ಮನುಷ್ಯ ತ್ರೈಯೇಕಿ. ಅವನ ಆತ್ಮದಲ್ಲಿ ಪ್ರಾರಂಭವಾಗುವ ದೇವರ ಕಾರ್ಯವು ಅವನ ಪ್ರಾಣ ಮತ್ತು ದೇಹಕ್ಕೆ ಹರಡುತ್ತದೆ. ಇದು ಮಹಾ ಪರಿವರ್ತನಾ ಪ್ರಕ್ರಿಯೆ.

ನಮ್ಮ ಅನೇಕ ಯೋಜನೆಗಳು, ಉದ್ದೇಶಗಳು ಅಥವಾ ಕಾರ್ಯನಿರತ ಜೀವನ ಶೈಲಿಯು ಆ ಪರಿವರ್ತನೆಯನ್ನು ಎಂದಿಗೂ ಸರಿದೂಗಿಸುವದಿಲ್ಲ. ಇಂದು ನಮ್ಮಲ್ಲಿ ಅನೇಕರು ಹಳೆಯ ಮನುಷ್ಯನನ್ನು ಬಲಪಡಿಸುತ್ತಾ ಆತ್ಮೀಕ ಕಾರ್ಯಗಳನ್ನು ಅಸೂಯೆ, ಹೊಟ್ಟೆಕಿಚ್ಚು, ದ್ವೇಷ, ಜಗಳ, ಸ್ವಾರ್ಥಮನೋಭಾವ ಮತ್ತು ಭೌತಿಕ ಆಸೆಗಳೊಂದಿಗೆ ಮಾಡುತ್ತಿದ್ದಾರೆ. ಇದರ ಫಲಿತಾಂಶ ಆತ್ಮೀಕ ಮರಣ.

ಶಾಜಿ ಜೋಸೆಫ್ ನೀಡುವ ಎಚ್ಚರಿಕೆ ಇದು. ಪವಿತ್ರ ವಾಕ್ಯದ ಮೂಲಕ, ಪ್ರತೀ ವಿಶ್ವಾಸಿಯೂ ಕ್ರಿಸ್ತನ ಮನಸ್ಸನ್ನು ಹೊಂದಲು, ನಮ್ಮೊಳಗಿನ ಹಳೆಯ ಮನುಷ್ಯ ಸಾಯಬೇಕು ಎಂಬ ಅಂಶವನ್ನು ಲೇಖಕ ಸ್ಥಾಪಿಸುತ್ತಾರೆ.

ದೀನ ಹೃದಯ, ಕೇಂದ್ರೀಕೃತ ಅಧ್ಯಯನ, ನಿರಂತರ ಪ್ರಾರ್ಥನೆ ಮತ್ತು ನಿರಂತರ ಕ್ರಿಸ್ತೀಯ ಸೇವೆ ಶಾಜಿ ಜೋಸೆಫ್ ರ ವಿಶೇಷತೆಗಳು.

ಅವರ ಸಂದೇಶಗಳು ಜೀವವನ್ನು ಹೊಂದಿವೆ ಮತ್ತು ನಮ್ಮನ್ನು ಆಳವಾದ ಆಲೋಚನೆಗಳಿಗೆ ಕೊಂಡೊಯ್ಯುತ್ತವೆ. ಅದು ಕೇಳುಗರ ಸ್ವಭಾವವನ್ನು ಪರಿವರ್ತಿಸುವ ಶಕ್ತಿಯನ್ನು ಹೊಂದಿದೆ. ದೇವರು ತನ್ನ ಉಪದೇಶಗಳಿಗಾಗಿ ಅವರಿಗೆ ನೀಡಿದ ಪ್ರಕಟಣೆಗಳನ್ನು ಈ ಪುಸ್ತಕವನ್ನು ರೂಪಿಸಲು ಬರೆಯಲಾಗಿದೆ. ಇದು ಎಲ್ಲಾ ವರ್ಗದ ದೇವರ ಜನರಿಗೆ ಆಶೀರ್ವಾದವಾಗಿದೆ.

ಈ ಪುಸ್ತಕದಲ್ಲಿನ ಚರ್ಚೆಯು ಇದನ್ನು ಅಸಾಮಾನ್ಯ ಪುಸ್ತಕವನ್ನಾಗಿ ಮಾಡುತ್ತದೆ. ಎಲ್ಲಾ ವಿಶ್ವಾಸಿಗಳಿಗೆ ವಿಶೇಷವಾಗಿ ಸತ್ಯವೇದ ಶಾಲಾ ವಿದ್ಯಾರ್ಥಿಗಳಿಗೆ, ಕ್ರಿಸ್ತನ ಸೇವಕರಿಗೆ ಮತ್ತು ಹಿರಿಯರಿಗೆ ಇದನ್ನು ಓದಿ ಅರ್ಥಮಾಡಿಕೊಳ್ಳಲು ಇದು ಪ್ರಯೋಜನಕಾರಿಯಾಗಿದೆ.

ಪರಿಶುದ್ಧಾತ್ಮನು ಶಾಜಿ ಜೋಸೆಫ್ ರಿಗೆ ಅನೇಕ ಉತ್ತಮ ಪುಸ್ತಕಗಳನ್ನು ಬರೆಯಲು ಆಶೀರ್ವದಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

**ಸಭಾಪಾಲಕ. ಡಾ|| ಕೆ.ಸಿ. ಜಾನ್,**
ಅಧ್ಯಕ್ಷ, ಪವರ್ವಿಷನ್ ಟಿ.ವಿ,
ಮಾಜಿ ಐಪಿಸಿ ಸಾಮಾನ್ಯ ಅಧ್ಯಕ್ಷ.

# ಮುನ್ನುಡಿ



ಸಹೋ. ಶಾಜಿ ಜೋಸೆಫ್ ರಿಂದ ಬರೆಯಲ್ಪಟ್ಟಿರುವ '*ಆತ್ಮ ಪ್ರಪಂಚ ಮತ್ತು ಆತ್ಮೀಕ ಬೆಳವಣಿಗೆ* ' ಪುಸ್ತಕವನ್ನು ಓದುವ ಗೌರವ ನನಗೆ ದೊರಕಿತು. ಒಬ್ಬ ವ್ಯಕ್ತಿ ಪಶ್ಚಾತ್ತಾಪಪಟ್ಟರೆ, ದೀಕ್ಷಾಸ್ನಾನ ಪಡೆದರೆ, ಅನ್ಯಭಾಷೆಗಳಲ್ಲಿ ಮಾತಾಡುತ್ತಾನೆ ಮತ್ತು ಪೆಂತಕೋಸ್ತ್ ಸಭೆಯ ಸದಸ್ಯನಾಗುತ್ತಾನೆ. ಈ ಮೇಲಿನ ನಾಲ್ಕು ಅಥವಾ ಐದು ಆಚರಣೆಗಳಿದ್ದರೆ ಸಾಕು ಎಂದು ಸಾಮಾನ್ಯವಾಗಿ ನಂಬಲಾಗಿದೆ. ಸತ್ಯವೇದದಲ್ಲಿನ 66 ಪುಸ್ತಕಗಳಲ್ಲಿ, ಬಹುತೇಕ ವಿಶ್ವಾಸಿಗಳು ಇನ್ನೂ ಕೀರ್ತನೆಯ ಭಾಗವನ್ನು ಮಾತ್ರ ಉಪಯೋಗಿಸುತ್ತಾರೆ. ಅನೇಕ ಸತ್ಯವೇದಗಳಲ್ಲಿ ನಾವು ಈ ಭಾಗದಲ್ಲಿ ಮಾತ್ರ ಬೆರಳು ಗುರುತುಗಳನ್ನು ಕಾಣಬಹುದು. ಸುವಾರ್ತೆಯ ಅಥವಾ ಪತ್ರಿಕೆಗಳ ಮುಖ್ಯಭಾಗಗಳನ್ನು ಒಂದೇ ಒಂದು ಬಾರಿಯೂ ಓದದಿರುವಂತಹ ಅನೇಕ ವಿಶ್ವಾಸಿಗಳಿದ್ದಾರೆ. ಇದನ್ನು ಓದದೆಯೇ, ಅವರು "ವಿಶ್ವಾಸಿಗಳಂತೆ ಬದುಕುತ್ತಾರೆ" ಎಂದು ತೋರುತ್ತದೆ! ಬೋಧಕರೂ ಸಹ ಇದಕ್ಕೆ ಹೊರತಾಗಿಲ್ಲ. ಅವರು ಎಂದಿಗೂ ತಮ್ಮ ಉಪದೇಶಕ್ಕೆ ವಿಷಯಗಳಾಗಿ ತೆಗೆದುಕೊಳ್ಳದ ಅನೇಕ ಸತ್ಯವೇದ ಭಾಗಗಳಿವೆ! ಈ ಭಾಗಗಳನ್ನು ಮುಟ್ಟದೆಯೇ ಅವರು "ತಮ್ಮ ಸೇವೆಯಲ್ಲಿ ಮುಂದುವರಿಯಲು" ಸಾಧ್ಯವಾಗುತ್ತಿದೆ! ಓದದಿರುವ ಭಾಗಗಳು, ಉಪದೇಶಿಸದೇ ನಿರ್ಲಕ್ಷಿಸಲ್ಪಟ್ಟವುಗಳು, ಗಮನಿಸದೆ ತಿರುಗಿಸದ ಪುಟಗಳು, ವಿಶ್ವಾಸಿಗಳಿಗೆ ದೈವೀಕ ಆಲೋಚನೆಗಳಲ್ಲವೇ ಅಥವಾ ಆತ್ಮೀಕ ಸೂಚನೆಗಳಲ್ಲವೇ ಎಂಬ ಅಂಶವನ್ನು ನಾವು ಅರ್ಥಮಾಡಿಕೊಳ್ಳಬೇಕು. ಇದನ್ನು ಪರಿಗಣಿಸದೇ ಒಬ್ಬ ವಿಶ್ವಾಸಿ ನೈಜ ಆತ್ಮೀಕ ಜೀವನವನ್ನು ನಡೆಸುವದು ಹೇಗೆ? ಈ ವಿಷಯಗಳನ್ನು ಬೋಧಿಸದೇ, ಒಬ್ಬ ಸೇವಕ ಹೇಗೆ ತನ್ನ ವಾಕ್ಯದ ಸೇವೆಯನ್ನು ಪೂರ್ಣಗೊಳಿಸುವದು. '*ಆತ್ಮ ಪ್ರಪಂಚ ಮತ್ತು ಆತ್ಮೀಕ ಬೆಳವಣಿಗೆ* ' ಎಂಬ ಪುಸ್ತಕವು ಈ ಎಲ್ಲಕ್ಕಿಂತ ಹೆಚ್ಚಾಗಿ ಆತ್ಮೀಕವಾಗಿ ಹೆಚ್ಚು ಸತ್ಯವನ್ನು ಸೂಚಿಸುತ್ತದೆ.

ನಿರ್ಲಕ್ಷಿಸಲ್ಪಟ್ಟ ಅಥವಾ ತಪ್ಪಿಸಲ್ಪಟ್ಟ ಸತ್ಯವೇದದ ಆ ಭಾಗಗಳನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಸಹೋ. ಶಾಜಿ ಜೋಸೆಫ್ ವಾಕ್ಯವನ್ನು ಕಲಿಯಲು ಪ್ರಯತ್ನಿಸಿದಾಗ, ಸಾಮಾನ್ಯ ಅಧ್ಯಯನ ಮಾಡುವದಕ್ಕಿಂತಲೂ ಮುಖ್ಯವಾದ ಆತ್ಮೀಕ ಸತ್ಯಗಳನ್ನು ಕಂಡುಹಿಡಿಯಲು ಅವರಿಗೆ ಸಾಧ್ಯವಾಯಿತು. ಇದನ್ನೇ ಅವರು ತಮ್ಮ ಪುಸ್ತಕ '*ಆತ್ಮ ಪ್ರಪಂಚ ಮತ್ತು ಆತ್ಮೀಕ ಬೆಳವಣಿಗೆ'ಯಲ್ಲಿ* ಪ್ರಸ್ತುತಪಡಿಸುತ್ತಾರೆ. ಅಧ್ಯಯನವನ್ನು ಹೆಚ್ಚಿನ ನಿಖರತೆ, ಮೌಲ್ಯ ಮತ್ತು ಏಕಾಗ್ರತೆಯಿಂದ ನಡೆಸಲಾಗಿದೆ. ಅವರು ಅಸಾಧಾರಣ ಬೋಧನಾ ಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆಂದು ಕಂಡುಬರುತ್ತದೆ. ಅವರು ವಾಕ್ಯದ ಸಂಪೂರ್ಣ ಜ್ಞಾನ ಮತ್ತು ಪವಿತ್ರಾತ್ಮನಿಂದ ತುಂಬಿರುವ ಸತ್ಯವೇದ ಪಂಡಿತರು. ಅವರು ಪ್ರಶಂಸನೀಯ ಬೋಧನಾ ಶೈಲಿಯನ್ನು ಹೊಂದಿದ್ದಾರೆ, ಅದರ ಮೂಲಕ ವಾಕ್ಯಗಳನ್ನು ಕಲಿಯುತ್ತಿರುವ ವಿದ್ಯಾರ್ಥಿಗಳನ್ನು ಮತ್ತು ವಾಕ್ಯಗಳನ್ನು ಆಳವಾಗಿ ಹುಡುಕುವ ವಿಶ್ವಾಸಿಗಳನ್ನು ಅತ್ಯಂತ

ನಿಖರ ಮತ್ತು ಪವಿತ್ರಾತ್ಮನ ಉದಾತ್ತತೆಯೊಂದಿಗೆ ಮುನ್ನಡಸಲು ಅವರಿಗೆ ಸಾಧ್ಯವಾಯಿತು. ದೇವತಾಶಾಸ್ತ್ರದ ವಿಷಯಗಳನ್ನು ವಿಶೇಷವಾಗಿ ಅಂತಿಮಗತಿಶಾಸ್ತ್ರ ಪ್ರಾಯೋಗಿಕ ಕ್ರೈಸ್ತತ್ವ ಅಥವಾ ಆತ್ಮಶಾಸ್ತ್ರವನ್ನು ವಿವರಿಸುವಾಗ ತಪ್ಪುಗಳು ಸಂಭವಿಸಬಹುದು, ಅನುಮಾನಗಳು ಉದ್ಭವಿಸಬಹುದು ಮತ್ತು ಹಲವಾರು ಘೋಷಣೆಗಳು ಅಥವಾ ವ್ಯಾಖ್ಯಾನಗಳು ಅಭಿಪ್ರಾಯಗಳ ವ್ಯತ್ಯಾಸಕ್ಕೆ ಕಾರಣವಾಗಬಹುದು. ಆದರೆ ಪವಿತ್ರಾತ್ಮನ ಮುನ್ನಡೆಸುವಿಕೆಯ ಮೂಲಕ, ವಿವರಣಾತ್ಮಕ ಶೈಲಿಯು ವಾಕ್ಯಕ್ಕೆ ನ್ಯಾಯವನ್ನು ತಂದು ಸತ್ಯವನ್ನು ಕಂಡುಹಿಡಿಯಲು ಸಹಾಯಮಾಡಿತು. ಈ ಪುಸ್ತಕದಿಂದ ನಾನು ಅರ್ಥಮಾಡಿಕೊಂಡದ್ದು, ಸಹೋ. ಶಾಜಿ ಈ ಪುಸ್ತಕವನ್ನು ಬರೆದಿದ್ದರೂ ಸಹ, ಇದರಲ್ಲಿ ಪವಿತ್ರಾತ್ಮನ ಹೆಚ್ಚಿನ ಬಲಗೊಳ್ಳುವಿಕೆ ಇತ್ತು ಎಂದು ನಾನು ನಂಬುತ್ತೇನೆ.

ಈ ರೀತಿಯ ಬೋಧನೆಗಳು ತುಂಬಾ ವಿರಳ. ಓದುಗರ ಹೃದಯದಲ್ಲಿ ಮಾತನಾಡುವ ಈ ರೀತಿಯ ಪುಸ್ತಕಗಳನ್ನು ನಾನು ಇಷ್ಟಪಡುತ್ತೇನೆ. ಓದುಗರ ವ್ಯಕ್ತಿತ್ವ, ಅವರ ತಿಳುವಳಿಕೆ ಮತ್ತು ಅವರ ಸನ್ನಿವೇಶಗಳನ್ನು ಇದರಿಂದ ಪ್ರದರ್ಶಿಸಲಾಗುತ್ತದೆ ಹಾಗೂ ಅವರ ಬುದ್ಧಿವಂತಿಕೆ ಮತ್ತು ಆಲೋಚನೆಗಳು ಪವಿತ್ರಾತ್ಮನ ಸ್ಪರ್ಶನದ ಮೂಲಕ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುತ್ತವೆ. ಅವರು ತಮ್ಮ ವ್ಯಕ್ತಿತ್ವ ಮತ್ತು ದರ್ಶನದಲ್ಲಿ ಪರಿಶುದ್ಧಾತ್ಮನ ಒಳಗೊಳ್ಳುವಿಕೆಯನ್ನು ಅನುಭವಿಸುತ್ತಾರೆ. ವಾಕ್ಯವು ಕಾರ್ಯರೂಪದಲ್ಲಿದೆ ಎಂದು ಅವರು ನಿಕಟವಾಗಿ ಅರಿತುಕೊಳ್ಳುತ್ತಾರೆ. ಹೊಸದಾಗಿ ಹುಟ್ಟುವುದು, ಶಾಶ್ವತ ಜೀವನ, ಪಾಪದಿಂದ ಮುಕ್ತಿ, ಆತ್ಮದ ಪವಿತ್ರೀಕರಣ, ನೂತನ ಸೃಷ್ಟಿ, ಆಂತರಿಕ ಮನುಷ್ಯನನ್ನು ಬಲಪಡಿಸುವುದು, ಕ್ರಿಸ್ತನಲ್ಲಿ ಸ್ವಾತಂತ್ರ್ಯ, ಪವಿತ್ರಾತ್ಮನ ಕಡೆಗೆ ನಮ್ರತೆ, ಪಾಪದ ವಿರುದ್ಧ ಹೋರಾಡುವದು ಕೇವಲ ಬುದ್ಧಿವಂತಿಕೆಯ ಬೋಧನೆಗಳಿಗಿಂತಲೂ ಹೆಚ್ಚಾಗಿದೆ. ಆದರೆ ಆತ್ಮೀಕ ರೂಪಾಂತರವು ಆತ್ಮೀಕ ಮನುಷ್ಯನಿಗೆ ಆಗುತ್ತಿದೆ ಎಂದು ನಾವು ಅರಿತುಕೊಳ್ಳುತ್ತೇವೆ. ಇಲ್ಲಿ ಶರೀರವನ್ನು ಬಂಧಿಸಲಾಗುತ್ತದೆ, ಆತ್ಮೀಕ ಜೀವನವನ್ನು ಹುಟ್ಟಿಸಲಾಗುತ್ತದೆ, “ಸ್ವಯಂ” ಇನ್ನು ಮುಂದೆ ಇರುವದಿಲ್ಲ, ಕ್ರಿಸ್ತನೊಂದಿಗೆ ಬದಲಿಯಾಗುತ್ತದೆ. ವ್ಯಕ್ತಿಯನ್ನು ಪರಿವರ್ತಿಸುವ ಸಾಧ್ಯತೆಗಳನ್ನು ಹೊಂದಿರುವ ಇಂತಹ ಬೋಧನಾ ಮಾದರಿಗಳನ್ನು ಸಹೋ. ಶಾಜಿ ಮೈಗೂಡಿಸಿಕೊಂಡಿದ್ದಾರೆ.

ಆದರೆ ಅನೇಕರು ಅಂತಹ ಬೋಧನೆಗಳಿಗೆ “ಇವು ಕಠಿಣ ಮಾತುಗಳು” ಎಂದು ಪ್ರತಿಕ್ರಿಯಿಸುತ್ತಾರೆ. ಆದರೆ ಇದನ್ನು ಪರಿಶುದ್ಧಾತ್ಮನ ಹಸ್ತದಲ್ಲಿರುವ ಪುಸ್ತಕವೆಂದು ಪರಿಗಣಿಸಿ, ಸಂಪೂರ್ಣವಾಗಿ ಶರಣಾಗಲು ಸಿದ್ಧವಿರುವ ಮನಸ್ಸನ್ನು ಹೊಂದಿರುವ ವಿಶ್ವಾಸಿ ಇದನ್ನು “ಜೀವದ ವಾಕ್ಯಗಳು” ಎಂದು ಅನುಭವಿಸಬಹುದು. ಅವರು ಈ ಪುಸ್ತಕದಲ್ಲಿ ಆತ್ಮೀಕ ಸಂಪತ್ತು ಮತ್ತು ನಿಕ್ಷೇಪಗಳನ್ನು ಕಾಣಬಹುದು. 2010ರಲ್ಲಿ ನಾನು *‘ನಿಜವಾದ ಆತ್ಮೀಕತೆ’* ಪುಸ್ತಕವನ್ನು ಬರೆದಿದ್ದೇನೆ. ಅದು ಪ್ರಕಟಗೊಂಡಿರುವ ನನ್ನ 30ನೇ ಪುಸ್ತಕವಾಗಿದೆ. ಈ ಎರಡೂ ಪುಸ್ತಕಗಳಲ್ಲಿ ಒಂದೇ ರೀತಿಯ ಆಲೋಚನೆಗಳು ಪ್ರತಿಧ್ವನಿಸುತ್ತಿವೆ. ಈ ಪುಸ್ತಕದ ಎರಡನೇ ಭಾಗಕ್ಕೆ ಸಹೋ. ಶಾಜಿ “ದೇವರ ಶಾಲೆ ಮತ್ತು ಪರಿಶುದ್ಧಾತ್ಮನ ತರಬೇತಿ” ಎಂಬ ಶೀರ್ಷಿಕೆಯನ್ನು ನೀಡಿದ್ದಾರೆ. ನನ್ನ ಪುಸ್ತಕದ ನಾಲ್ಕನೇಯ ಅಧ್ಯಾಯಕ್ಕೆ “ಯೇಸುವಿನ ಶಾಲೆ” ಎಂಬ ಶೀರ್ಷಿಕೆ ಇತ್ತು. ನಮ್ಮ ಆಲೋಚನೆಗಳಲ್ಲಿ ನಾನು ಏಕತೆಯನ್ನು ಅನುಭವಿಸುತ್ತೇನೆ. ಸಹೋ. ಶಾಜಿಯ ಕೆಲವು ಹೇಳಿಕೆಗಳು ಬಹಳ ಮುಖ್ಯವೆಂದು ನಾನು ಭಾವಿಸುತ್ತೇನೆ:

“ಲೋಕವೇ, ನೀನು ಎರಡನೇಯ.”

“ಯೇಸುವಿನಂತೆ ಮತ್ತು ಪೌಲನಂತೆ ನಮಗೆ ಲೋಕವು ಎರಡನೇಯದಾಗಿರಲಿ ಮತ್ತು ದೇವರ ರಾಜ್ಯವು ಮೊದಲನೇಯದಾಗಿರಲಿ.”

“ನಮ್ಮಲ್ಲಿ ಅನೇಕರು ದೇವರ ರಾಜ್ಯದಲ್ಲಿ ಹೊಸದಾಗಿ ಜನಿಸಿದ್ದರೂ, ನಾವು ಎಂದಿಗೂ ತಮ್ಮ ಕಣ್ಣುಗಳನ್ನು ತೆರೆಯದ ಹಸುಮಕ್ಕಳಂತಿದ್ದೇವೆ.”

“ವಿಶ್ವಾಸಿಗಳೊಂದಿಗೆ ಸೈತಾನನ ಒಂದು ಸಿಡಿಮದ್ದು ಇದೆ. ಅದು ವಿಶ್ವಾಸಿಯೊಳಗಡೆ ಅಡಗಿರುವ ದೌರ್ಬಲ್ಯ ಹಾಗೂ ಅದನ್ನು ಗುರುತಿಸದೇ ಅವರು ಅದನ್ನು ಉಪಯೋಗಿಸಿದರೆ ಆ ವ್ಯಕ್ತಿಯಲ್ಲಿ ಆತ್ಮೀಕ ಮರಣ ಸಂಭವಿಸುತ್ತದೆ.”

“ಪ್ರಾಣವನ್ನು ಬಂಧಿಸಿರಿ ಮತ್ತು ಕಟ್ಟಿಹಾಕಿ.”

“ನಮ್ಮ ಮನಸ್ಸಿನೊಳಗೆ ಆತ್ಮದ ಭಾವಗಳನ್ನು ನಾವು ಬೆಳೆಸುವ ಅದೇ ಮಟ್ಟಕ್ಕೆ ಆಂತರಿಕ ಮನುಷ್ಯನು ಬಲಗೊಳ್ಳುತ್ತಾನೆ, ನಾವು ಎಷ್ಟು ಬಲಹೊಂದುತ್ತೇವೋ, ಅದೇ ಮಟ್ಟಕ್ಕೆ ಆ ಮನುಷ್ಯ ಶರೀರವನ್ನು ಬಂಧಿಸಬಹುದು ಮತ್ತು ಕಟ್ಟಿಹಾಕಬಹುದು.”

“ಸೈತಾನನು ನಮ್ಮ ಶರೀರದ ಸ್ವಭಾವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಾನೆ, ಪರಿಶುದ್ಧಾತ್ಮನು ನಮ್ಮ ಆತ್ಮದಲ್ಲಿ ವಾಸಿಸುತ್ತಾನೆ ಮತ್ತು ವಾಕ್ಯದ ಮೂಲಕ ಆತ್ಮದ ಸ್ವಭಾವವನ್ನು ನಮ್ಮ ಪ್ರಾಣಗಳಿಗೆ ನೀಡಲು ಪ್ರಯತ್ನಿಸುತ್ತಾನೆ.”

“ಹೊಸದಾಗಿ ಹುಟ್ಟಿದಿರುವವರು, ಅನೇಕ ಬಾರಿ ಕೇಳಿದರೂ ದೇವರ ರಾಜ್ಯದ ಸಂಗತಿಗಳನ್ನು ಅರ್ಥಮಾಡಿಕೊಳ್ಳುವದಿಲ್ಲ.”

“ಬೆಲೆಯನ್ನು ಪಾವತಿಸದೇ ಕ್ರಿಸ್ತನು ಏನನ್ನೂ ಮಾಡಲು ಆಗುವದಿಲ್ಲ, ಕಾರಣವೇನೆಂದರೆ ಸಭೆಯನ್ನು ಸಂಪಾದಿಸುವ ಸಲುವಾಗಿ ಕ್ರಿಸ್ತನು ಬೆಲೆಯನ್ನು ಪಾವತಿಸಿದ್ದಾನೆ.”

“ಕ್ರಿಸ್ತನು ನಮ್ಮ ಜೀವಿತಗಳಲ್ಲಿ ಅನುಮತಿಸುವ ನೊಗವು ನಾವು ಕೆಟ್ಟದ್ದನ್ನು ಮಾಡಿದ ನಂತರ ಅನುಭವಿಸುವ ಬಾಧೆಗಳಲ್ಲ ಬದಲಿಗೆ ಒಳ್ಳೆಯದ್ದನ್ನು ಮಾಡಿದಾಗ ನಾವು ಅನುಭವಿಸುವ ಬಾಧೆಗಳು.”

“ನಮಗೆ ಬೆಳೆಯದಿರುವ ಪೇತ್ರನ ಅಗತ್ಯವಿಲ್ಲ ಆದರೆ ಬೆಳೆದಿರುವ ಮತ್ತು ನಾವು ಪತ್ರಿಕೆಗಳಲ್ಲಿ ನೋಡುವ ಪೇತ್ರನ ಅಗತ್ಯವಿದೆ.”

ಈ ಪುಸ್ತಕವು ವಿಶ್ವಾಸಿಗಳು ಅತ್ಯಂತ ಗಾಂಭೀರ್ಯದಿಂದ ಪರಿಗಣಿಸಬೇಕಾದ ಮಹತ್ವಾದ ಸತ್ಯಗಳನ್ನು ಒಳಗೊಂಡಿರುವ ಉಗ್ರಾಣವಾಗಿದೆ. ಈ ಪುಸ್ತಕವು ಅನೇಕರನ್ನು ನೈಜ ಆತ್ಮೀಕ ಜೀವನ ಮತ್ತು ಶಿಷ್ಯತ್ವಕ್ಕೆ ಕರೆದೊಯ್ಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಸಹೋ.ಶಾಜಿ ಜೋಸೆಫ್ ಗೆ ಶುಭಹಾರೈಸುತ್ತೇನೆ ಮತ್ತು ಅವರಿಂದ ಹೆಚ್ಚು ಅಮೂಲ್ಯವಾದ ಪುಸ್ತಕಗಳನ್ನು ನಿರೀಕ್ಷಿಸುತ್ತೇನೆ.

**ಸುವಾ.ಜೆ.ಸಿ. ದೇವ್,**
ಮಾಜಿ ಪ್ರಾಂಶುಪಾಲರು,
ಫೈತ್ ಲೀಡರ್ಸ್ ಬೈಬಲ್ ಟ್ರೈನಿಂಗ್ ಸೆಂಟರ್,
ಪತ್ತನಂಥಿಟ್ಟ.

# ಪೀಠಿಕೆ

ಒಮ್ಮೆ ಓರ್ವ ಸಹೋದರಿ ಬೇಜಾರಿನ ಮುಖಭಾವದೊಂದಿಗೆ ಮತ್ತು ದುಃಖದಿಂದ ತುಂಬಿದ ಕಣ್ಣುಗಳೊಂದಿಗೆ ಒಂದು ವಾರದ ಸುವಾರ್ತಾ ಸೇವೆ ಮತ್ತು ಸ್ವಸ್ಥತಾ ಪ್ರಾರ್ಥನೆಗೆ ಹಾಜರಾಗಲು ಎರ್ನಾಕುಲಂನಲ್ಲಿನ ಪ್ರಾರ್ಥನಾಲಯಕ್ಕೆ ಬಂದರು. ಆಕೆಯ ಗಂಡನೂ ಸಹ ಅವಳೊಂದಿಗಿದ್ದನು. ಸಹೋದರಿ ಅವರ ಹೆಗಲ ಮೇಲೆ ಮತ್ತು ಕೈಗಳಲ್ಲಿ ಏನೋ ಭಾರವಾದ ವಸ್ತುವಿನೊಂದಿಗೆ ಬಂದರು. ಅವರು ಹತ್ತಿರಕ್ಕೆ ಬಂದಾಗ ಆಕೆಯ ಹೆಗಲ ಮೇಲಿದ್ದಂತಹದ್ದು ಯಾವುದೇ ವಸ್ತುವಾಗಿರಲಿಲ್ಲ ಬದಲಿಗೆ ದೇಹವು ಬೆಳೆಯದೆ ಇರುವಂತಹ ಮತ್ತು ಒಮ್ಮೆಯೂ ಸಹ ನಿಲ್ಲಲು ಸಾಧ್ಯವಾಗದ ಅವರ ಪ್ರಿಯ ಮಗು ಎಂದು ನಾವು ಅರಿತುಕೊಂಡೆವು. ಅವರ ಪರಿಸ್ಥಿತಿಯನ್ನು ನೋಡಿ ಅನೇಕ ಜನರು ಕದಲಿದರು ಮತ್ತು ಅವರ ಹೃದಯಗಳು ಬಾಧಿಸಿದವು.

ಲೋಕದ ವಿವಿಧ ಭಾಗಗಳಲ್ಲಿ, ಜನಿಸಿರುವ ಆದರೆ ಬೆಳವಣಿಗೆಯನ್ನು ಸಾಧಿಸದಿರುವ ಅಂತಹ ಅನೇಕ ಮಕ್ಕಳಿದ್ದಾರೆ. ನಾವು ಕೆಲವರನ್ನು ನೋಡಿರಬಹುದು ಅಥವಾ ವೈಯಕ್ತಿಕವಾಗಿ ತಿಳಿದಿರಬಹುದು. ಈ ಮಕ್ಕಳ ಆಲೋಚನೆಯೇ ನಮಗೆ ಕಣ್ಣೀರು ತರುತ್ತವೆ. ಆದ್ದರಿಂದ ತಮ್ಮ ಮಕ್ಕಳು ಹಗಲು ರಾತ್ರಿ ಬಾಧೆಪಡುವದನ್ನು ನೋಡಬೇಕಿರುವ ಪೋಷಕರ ಸ್ಥಿತಿಯನ್ನು ಸ್ವಲ್ಪ ಊಹಿಸಿ. ಕೆಲವು ದಿನಗಳ ಹಿಂದೆ ಯು.ಎ.ಇ. ನಲ್ಲಿ ಆಸ್ಪತ್ರೆಗೆ ಪಕ್ಕದಲ್ಲಿರುವ ಒಂದು ವೃದ್ಧಾಶ್ರಮಕ್ಕೆ ಭೇಟಿ ನೀಡುವ ಅವಕಾಶ ನನಗೆ ಸಿಕ್ಕಿತು. ಕೆಲವು ನಿವಾಸಿಗಳು ಮಕ್ಕಳಂತೆ ಕಾಣುತ್ತಿದ್ದರು, ಆದರೆ ವಾಸ್ತವವಾಗಿ ವಯಸ್ಸಿನ ಪ್ರಕಾರ ಅವರು ವಯಸ್ಸಾದವರಾಗಿದ್ದರು, ಆದರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳೆದಿರಲಿಲ್ಲ. ಅವರು ತಮಗಾಗಿ, ತಮ್ಮ ಕುಟುಂಬಗಳಿಗಾಗಿ, ಸಮುದಾಯಕ್ಕಾಗಿ, ರಾಜ್ಯಕ್ಕಾಗಿ ಅಥವಾ ಪ್ರಪಂಚಕ್ಕಾಗಿ ಏನನ್ನೂ ಮಾಡಲು ಸಾಧ್ಯವಾಗದ ಈ ಜನರನ್ನು ನೋಡಿ ನಮ್ಮ ಹೃದಯಗಳು ತೀವ್ರವಾಗಿ ಬಾಧನೆಗೊಳಗಾದವು. ವಾಸ್ತವವಾಗಿ ಅವರನ್ನು ಆ ಮನೆಯಲ್ಲಿ ಇರಿಸಿದ್ದ ಕಾರಣವೇನೆಂದರೆ ಅವರು ಇತರರಿಗೆ ಹೊರೆಯಾಗಿದ್ದರು ಅಥವಾ ತೊಂದರೆಯಾಗಿದ್ದರು. ಇದರ ಮೂಲಕ ಬೆಳವಣಿಗೆ ಸಾಧಿಸದಿರುವಂತಹವರು ಅವರ ಪೋಷಕರಿಗೆ ಮಾತ್ರವಲ್ಲ ಲೋಕಕ್ಕೂ ಸಹ ಹೊರೆಯಾಗುತ್ತಾರೆ ಎಂದು ದೇವರು ನನಗೆ ಕಲಿಸಿದರು.

ಈ ಪೀಠಿಕೆಯನ್ನು ಬರೆಯಲು ದೇವರ ಪ್ರಸನ್ನತೆಯಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದಾಗ ಮತ್ತು ನನ್ನನ್ನು ನಾನು ಸಿದ್ಧಪಡಿಸಿಕೊಳ್ಳುತ್ತಿದ್ದಾಗ, ನನ್ನ ಹೃದಯದ ಆಳದಲ್ಲಿ ಮರೆಯಾಗಿದ್ದ ಒಂದು ಸಂಗತಿಯನ್ನು ದೇವರಾತ್ಮನು ನನ್ನ ನೆನಪಿಗೆ ತಂದನು. ಸುಮಾರು ಎಂಟು ವರ್ಷಗಳ ಹಿಂದೆ, ನನ್ನ ಸಭಾಪಾಲಕರಾಗಿ ದೇವರು ಇರಿಸಿದ್ದ, ಈ ಲೋಕದಲ್ಲಿ ನನ್ನ ಆತ್ಮೀಕ ಶಿಕ್ಷಕರಾಗಿದ್ದ ಪಾಸ್ಟರ್ ಜ್ಯಾಕ್ಸಿ ಮಾಥ್ಯೂ ನಮಗೆ ಒಂದು ಸಂಗತಿಯನ್ನು ಕಲಿಸಿದ್ದರು.

ವ್ಯಕ್ತಿಯಾಗಿ ಅವರು ಕೇರಳದಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿದರು, ಭತ್ತದ ಮೈದಾನ, ಸರೋವರ, ಹಸಿರು ಮತ್ತು ಪ್ರಕೃತಿಯ ಸುಂದರತೆಯನ್ನು ನೋಡುತ್ತಾ ಬೆಳೆದರು.

ದೇವರು ಅವರಿಗೊಂದು ದರ್ಶನವನ್ನು ನೀಡಿದರು, ಅದು ಈ ರೀತಿಯಾಗಿತ್ತು. ಅವರು ಭತ್ತದ ಗದ್ದೆಯಲ್ಲಿ ಬಿತ್ತುವುದನ್ನು ನೋಡಿದರು. ಕೆಲವು ದಿನಗಳ ನಂತರ ಎಲ್ಲಾ ಭತ್ತವೂ ಬೆಳೆಯಿತು, ಗದ್ದೆಯಲ್ಲಿನ ಮಣ್ಣಿನ ಬಣ್ಣವು ಬದಲಾಯಿತು ಮತ್ತು ಸುಂದರವಾದ ಧಾನ್ಯಗಳು ನೆಲವನ್ನು ಆವರಿಸಿಕೊಳ್ಳುವಂತೆ ಹಸಿರ ಪರದೆಯನ್ನು ಹಾಕಿದಂತಿತ್ತು. ಅವರು ತುಂಬಾ ಸಂತೋಷಗೊಂಡರು ಮತ್ತು ಅವರ ಹೃದಯ ಸಂತುಷ್ಟಿಗೊಂಡಿತು. ಆದರೆ ಅವರು ನಂತರದಲ್ಲಿ ಕಂಡ ದೃಶ್ಯವು, ಅವರ ಹೃದಯದ ಸಂತುಷ್ಟಿ ಮತ್ತು ಅವರ ಸಂತೋಷವನ್ನು ನಾಶಮಾಡಿತು. ಇತರೆ ಗದ್ದೆಗಳಲ್ಲಿನ ಧಾನ್ಯಗಳು ಬೆಳೆದವು ಮತ್ತು ಕಟಾವಿಗೆ ಸಿದ್ಧವಾಗಿದ್ದವು ಆದರೆ ಒಂದು ಗದ್ದೆಯಲ್ಲಿನ ಧಾನ್ಯಗಳು ಬೆಳೆಯುತ್ತಿರಲಿಲ್ಲ. ದೇವರ ಸೇವಕನು ಆಳವಾಗಿ ಬಾಧನೆಗೊಳಗಾದರು.

ಈ ಮೇಲಿನ ದರ್ಶನದಲ್ಲಿ, ಅದು ಮನುಷ್ಯ ಜೀವಿ ಅಥವಾ ಗಿಡ ಅಥವಾ ಬೇರೆ ಯಾವ ವಸ್ತುವಾದರೂ, ದೇವರು ಉದ್ದೇಶಿಸಿರುವ ಬೆಳವಣಿಗೆಯನ್ನು ಅದು ಸಾಧಿಸದಿದ್ದರೆ ಅದು ಮಹಾ ದುಃಖಕ್ಕೆ ಕಾರಣವಾಗುತ್ತದೆ ಎಂಬ ಒಂದು ಸಂಗತಿಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ನಮ್ಮ ಆತ್ಮೀಕ ಬೆಳೆವಣಿಗೆಯೂ ಸಹ ಇದೇ ರೀತಿಯಾಗಿದೆ. ಯೇಸು ಕ್ರಿಸ್ತನ ಅಮೂಲ್ಯ ರಕ್ತದಿಂದ ಅವರು ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿದ್ದರೂ ತಮ್ಮ ಕಣ್ಣುಗಳನ್ನು ಎಂದಿಗೂ ತೆರೆಯದ ಹಸುಮಕ್ಕಳಂತೆ ನಮ್ಮಲ್ಲಿ ಅನೇಕರಿದ್ದಾರೆ ಎಂದು ಈ ಪುಸ್ತಕದಲ್ಲಿ ನನ್ನ ಮೂಲಕ ದೇವರು ಸಾರುತ್ತಿದ್ದಾರೆ. ನಮ್ಮ ತಂದೆಯ ಹಾಗೆ ಮತ್ತು ತಾಯಿಯ ಹಾಗೆ ಇರುವ ದೇವರು, ನಮ್ಮಲ್ಲಿ ಪ್ರತಿಯೊಬ್ಬರಿಗೂ ಆತ್ಮೀಕ ಬೆಳವಣಿಗೆಯನ್ನು ಸಿದ್ಧಮಾಡಿದ್ದಾರೆ. ಮಗು ತಾನು ಬೆಳೆಯದಿದ್ದರೆ ಹಾಗೂ ತನ್ನ ಕಣ್ಣು ತೆರೆಯದಿದ್ದರೆ ಇತರರಿಗೆ ಹೊರೆಯಾಗುವಂತೆ, ನಾವೂ ಸಹ ನಮ್ಮ ತಂದೆ ಮತ್ತು ಆತನ ಸ್ವರ್ಗೀಯ ಕುಟುಂಬಕ್ಕೆ ಹೊರೆಯಾಗುತ್ತೇವೆ. ಆದ್ದರಿಂದ ಪರಿಶುದ್ಧಾತ್ಮನ ಸಹಾಯದೊಂದಿಗೆ, ನಾವು ನಮ್ಮ ಕಣ್ಣುಗಳನ್ನು ತೆರೆಯೋಣ. ಮುಂದಿನ ಅಧ್ಯಾಯಗಳ ಮೂಲಕ, ದೇವರ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಕುಡಿಯುತ್ತಾ ಮತ್ತು ನಂತರ ದೇವರು ತನ್ನ ವಾಕ್ಯದ ಮೂಲಕ ಸಿದ್ಧಮಾಡಿರುವ ಗಟ್ಟಿ ಆಹಾರವನ್ನು ಸೇವಿಸುತ್ತಾ ಪಯಣವನ್ನು ನಾವು ಆನಂದಿಸೋಣ.

"ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೇಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ." (1 ಪೇತ್ರ 2:1-2)

ಬೆಳೆದ ಮಗನು ತನ್ನ ತಂದೆಯೊಂದಿಗೆ ಆತನ ಕೆಲಸದಲ್ಲಿ ಒಟ್ಟಿಗೆ ಕೆಲಸಮಾಡುವಂತೆ, ಅದೇರೀತಿಯಾಗಿ ಈ ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುವುದರಲ್ಲಿ ಕ್ರಿಸ್ತನೊಂದಿಗೆ ಜೊತೆ–ಕೆಲಸದವರ ಹಾಗೆ ನಾವೂ ಸಹ ಕೆಲಸಮಾಡೋಣ.

**"ನಾವು ದೇವರ ಜೊತೆ ಕೆಲಸದವರು." (1 ಕೊರಿ 3:9)**

# ಪರಿಚಯ

ನಿಜವಾಗಿಯೂ ಯೇಸುವನ್ನು ಪ್ರೀತಿಸುವಂತಹ ಅನೇಕರು, ದೇವರ ಕೆಲಸವನ್ನು ಮಾಡಲು ಅಬ್ಬರದಿಂದ ಪ್ರಾರಂಭಿಸುತ್ತಾರೆ ಆದರೆ ಸಮಸ್ಯೆಗಳು ಅವರ ಜೀವನವನ್ನು ಬಾಧಿಸಲು ಪ್ರಾರಂಭಿಸಿದಾಗ ವೇಗವನ್ನು ಕಳೆದುಕೊಳ್ಳುತ್ತಾರೆ, ಅವರಿಗೆ ಏನು ಮಾಡುವುದು ಮತ್ತು ಈ ಸಮಸ್ಯೆಗಳನ್ನು ಹೇಗೆ ಜಯಿಸುವದು ಎಂದು ತಿಳಿದಿಲ್ಲ. ಅವರು ಮುಂದೆ ಚಲಿಸಲು ಕಷ್ಟಪಡುತ್ತಾರೆ. ಕೆಲವರು ಬಿದ್ದುಹೋಗಬಹುದು ಅಥವಾ ಕೆಲವರು ಹಿಂಜಾರ ಬಹುದು. ಪ್ರೀತಿಯ ದೇವರ ಮಕ್ಕಳೇ, ಅಂತಹ ಸಂಗತಿ ನನ್ನ ಜೀವನದಲ್ಲಿ ಸಂಭವಿಸಿತು. ನಾನು ಎದುರಿಸುತ್ತಿದ್ದ ಆರ್ಥಿಕ ಸಂಕಷ್ಟಗಳನ್ನು ಲೋಕದ ರೀತಿಯಿಂದ ಜಯಿಸಲು ನಾನು ಪ್ರಯತ್ನಿಸಿದೆ ಆದರೆ ವಿಫಲನಾದೆ. ಕ್ರಿಸ್ತನು ಕಾರ್ಯರೂಪಕ್ಕೆ ತಂದ ದೇವರ ರಾಜ್ಯದ ಆಲೋಚನೆಗಳನ್ನು ನನ್ನ ಹಳೆಯ ಸ್ವಭಾವದ ಮೂಲಕ ಅನ್ವಯಿಸಲು ನಾನು ಪ್ರಯತ್ನಿಸಿದೆ, ಆದರೆ ಅದೂ ಸಹ ವೈಫಲ್ಯಕ್ಕೆ ಕೊಂಡೊಯ್ಯಿತು. ಪ್ರಿಯ ದೇವರ ಮಗುವೇ, ನನ್ನಂತೆಯೇ ನೀನೂ ಸಹ ಅದೇ ರೀತಿಯಲ್ಲಿ ವೈಫಲ್ಯವನ್ನು ಅನುಭವಿಸಿರಬಹುದು.

ಆದರೆ ಒಂದು ದಿನ ಸಂಗತಿಗಳು ಬದಲಾದವು. ನಮ್ಮ ಜಯಶಾಲಿ ಕರ್ತನಾದ ಮತ್ತು ರಕ್ಷಕನಾದ ಯೇಸು, ಸಹಾಯಕನಾಗಿ ಬಂದರು ಮತ್ತು ವಾಕ್ಯದ ಮೂಲಕ ದೇವರ ರಾಜ್ಯದ ಮಾರ್ಗಗಳ ಪ್ರಕಾರ ಹೇಗೆ ಜೀವಿಸುವದು; ನಂಬಿಕೆಯಿಂದ ಕಾಣದ ರಾಜ್ಯದಲ್ಲಿ ಇದ್ದುಕೊಂಡು ಹೇಗೆ ದೇವರ ರಾಜ್ಯದ ಮಾರ್ಗಗಳ ಪ್ರಕಾರ ಜಯಿಸುವುದು ಮತ್ತು ಕಾಣುವ ಲೌಕಿಕ ರಾಜ್ಯದಲ್ಲಿ ಕಾರ್ಯಮಾಡುವದು; ಮತ್ತು ಹೇಗೆ ಈ ಲೋಕದ ದೇವರಾಗಿರುವ ಸೈತಾನನ ಕೆಲಸಗಳನ್ನು ಗುರುತಿಸುವದು ಮತ್ತು ಅವನನ್ನು ಸೋಲಿಸುವದು ಎಂದು ನನಗೆ ಕಲಿಸಿದರು. ದೇವರು ನನ್ನನ್ನು ಈ ಮಾರ್ಗಗಳಲ್ಲಿ ನಡೆಸಿದಾಗ, ನನ್ನ ಅರಿವಿಲ್ಲದೆಯೇ, ದೇವರು ನನ್ನ ಆಂತರಿಕ ಮನುಷ್ಯನನ್ನು ಬೆಳೆಸಲು ಪ್ರಾರಂಭಿಸಿದರು. ಆತ್ಮೀಕ ಬೆಳವಣಿಗೆ ಏನು ಎಂದು ಆತನು ನನಗೆ ಕಲಿಸಿದನು. ನಾವು ರಕ್ಷಣೆ ಹೊಂದಿದಾಗ ಕಾಣದಿರುವ ದೇವರ ರಾಜ್ಯದಲ್ಲಿ ಏನು ಸಂಭವಿಸಿರಬಹುದು? ನಮ್ಮ ಆತ್ಮ, ಮನಸ್ಸು ಮತ್ತು ದೇಹಕ್ಕೆ ಯಾವ ಬದಲಾವಣೆ ಸಂಭವಿಸಿರಬಹುದು? ಮತ್ತು ಮುಂದುವರಿಕೆಯಲ್ಲಿ ಈ ಭೂಮಿಯ ಮೇಲೆ ನಮ್ಮ ಜೀವಿತದಲ್ಲಿ ಮತ್ತು ಶಾರೀರಿಕ ಮರಣದಲ್ಲಿ, ನಮ್ಮೊಳಗೆ ಯಾವ ಬದಲಾವಣೆಗಳು ಉಂಟಾಗಬಹುದು? ದೇವರು ನನಗೆ ಜ್ಞಾನೋದಯ ಮಾಡಿಸಿರುವ ವಾಕ್ಯಗಳ ಮೂಲಕ ಮತ್ತು ಚಿತ್ರಗಳ ಮೂಲಕ, ನೀವು ಈ ಪುಸ್ತಕದ ಪುಟಗಳನ್ನು ತಿರುಗಿಸಿದಂತೆ ಪರಿಶುದ್ಧಾತ್ಮನು ಅದ್ಭುತಕರವಾಗಿ ಕಲಿಸುತ್ತಾನೆ. ಇದರಲ್ಲಿ ದೇವರು ನಮಗೆ ಸಹಾಯಮಾಡಲಿ.

ನೀವು ಓದುವಾಗ, ಲೋಕಕ್ಕೆ ಅನುಗುಣವಾಗಿ ಓದುವವರಾಗಿರಬಾರದು ಬದಲಿಗೆ ವಾಕ್ಯದ ಪ್ರಕಾರ ಬುದ್ಧಿವಂತ ಓದುಗರಾಗಿರಬೇಕೆಂಬ ಅಂಶದ ಮೇಲೆ ನೀವು ಗಮನವಿರಿಸಬೇಕು. ಬೆರೋಯದಲ್ಲಿ ದೇವರ ವಾಕ್ಯವನ್ನು ಮಾತನಾಡಿದ ಜನರು ಥೆಸಲೋನಿಕದಲ್ಲಿನ ಜನರಿಗಿಂತ ಬುದ್ಧಿವಂತರಾಗಿದ್ದರು. (ಅ.ಕೃ 17:10-11) ಅವರು ಈ ವಾಕ್ಯಗಳನ್ನು ತಾವು ಮೊದಲು ಕಲಿತಿದ್ದರೊಂದಿಗೋ ಅಥವಾ ಅನುವಂಶಿಕವಾಗಿ ಪಡೆದದ್ದರೊಂದಿಗೋ ಹೋಲಿಸಲಿಲ್ಲ ಬದಲಿಗೆ ಅವರು ಅದನ್ನು ವಾಕ್ಯದೊಂದಿಗೆ ಹೋಲಿಸಿದರು ಹಾಗೂ ಅವರು ಕೇಳಿದ

ವಾಕ್ಯವನ್ನು ಅಂಗೀಕರಿಸಿದರು ಮತ್ತು ಅದನ್ನು ಉಪಯೋಗಿಸಿದರು. ಆದುದರಿಂದ ಈ ಪುಸ್ತಕದಿಂದ ದೇವರು ನಿಮಗೆ ನೀಡುವ ಪ್ರಕಟಣೆಗಳನ್ನು ನೀವು ಮೊದಲೇ ತಿಳಿದಿರುವದರೊಂದಿಗೆ ಹೋಲಿಸಬೇಡಿ ಬದಲಿಗೆ ಅದನ್ನು ದೇವರ ವಾಕ್ಯದೊಂದಿಗೆ ಮಾತ್ರ ಹೋಲಿಸಿ ಹಾಗೂ ವಾಕ್ಯದ ಪ್ರಕಾರ ಬೆರೋಯದವರ ಹಾಗೆ ಬುದ್ಧಿವಂತರಾಗಿ. ವಾಕ್ಯವು ಹೇಳುತ್ತದೆ, "ಎಲ್ಲಾ ಮನುಷ್ಯರೂ ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ." (ರೋಮಾ 3:4) ದೇವರ ವಾಕ್ಯ ಮಾತ್ರ ನಿಜ ಎಂಬುದು ಇದರ ಅರ್ಥ. ಪ್ರತಿಯೊಂದು ಮಾತನ್ನು ಎರಡು ಅಥವಾ ಮೂರು ಸಾಕ್ಷಿಗಳ (ವಾಕ್ಯ) ಬಾಯಿಯಲ್ಲಿ ಸ್ಥಾಪಿಸಲಾಗುವುದು. (2 ಕೊರಿ 13:1, ಯೆಶಾಯ 34:16)

ಪ್ರಾರ್ಥನೆಯೊಂದಿಗೆ ನಾವು ಓದಲು ಪ್ರಾರಂಭಿಸೋಣ...

# ಪರಿವಿಡಿ


ಸಮರ್ಪಣೆ 4
ಕೃತಜ್ಞತೆ 5
ಮುನ್ನುಡಿ 7
ಪೀಠಿಕೆ 13
ಪರಿಚಯ 15

**ಭಾಗ - 1**
**ಆತ್ಮ ಪ್ರಪಂಚ, ಆತ್ಮೀಕ ಬೆಳವಣಿಗೆ**

**ಅಧ್ಯಾಯ 1.**
**ಲೋಕವು ಎರಡನೇಯದಾಗಿರಬೇಕು 24**
ಅ) ಕಾಣದ ರಾಜ್ಯವನ್ನು ಯಾರು ನೋಡುತ್ತಾರೋ ಅವರು ಅಸಾಧ್ಯವಾದದ್ದನ್ನು ಮಾಡುತ್ತಾರೆ!
ಆ) ಮೊದಲನೇಯದಾಗಿದ್ದ ಲೋಕ, ಎರಡನೇಯದಾಗಿದೆ
ಇ) ಪೌಲನು ಕಾಣದ ದೇವರ ರಾಜ್ಯವನ್ನು ಮೊದಲು ಕಂಡನು
ಈ) ಆತ್ಮೀಕ ರಾಜ್ಯದಲ್ಲಿ ಪೌಲನ ಸಾಕ್ಷಿಗಳು
ಉ) ಆತ್ಮದಲ್ಲಿ ಪ್ರಾರ್ಥಿಸುವುದಕ್ಕೆ ಮೊದಲ ಸ್ಥಾನ
ಊ) ಆತ್ಮದಿಂದ ಹಾಡುವುದಕ್ಕೆ ಮೊದಲ ಸ್ಥಾನ
ಋ) ಯೇಸು ಅವರ ಸೇವೆಯನ್ನು ಆತ್ಮೀಕ ಲೋಕವನ್ನು ನೋಡುವ ಮೂಲಕ ಪ್ರಾರಂಭಿಸಿದರು
ಎ) ಆತ್ಮದಿಂದ ಆರಾಧಿಸುವುದು ಮತ್ತು ಬುದ್ಧಿಯಿಂದ ಆರಾಧಿಸುವುದು
ಏ) ಆತ್ಮದಲ್ಲಿ ಆರಾಧಿಸುವುದು ಹೇಗೆ?
ಐ) ಆತ್ಮೀಕ ಸ್ಥಿತಿ
ಒ) ಕ್ರಿಸ್ತನು ಮಹತ್ವ ನೀಡಿದ್ದು - ಮೊದಲು ದೇವರ ರಾಜ್ಯಕ್ಕೆ

**ಅಧ್ಯಾಯ 2.**
**ದೇವರ ಚಿತ್ತವನ್ನು ತಿಳಿಯಿರಿ, ಲೋಕದಲ್ಲಿ ಅದನ್ನು ನೆರವೇರಿಸಿ 41**
ಅ) ದೈವೀಕ ಸ್ವಭಾವ ಮತ್ತು ಲೋಕದಲ್ಲಿ ಮನುಷ್ಯನ ಪ್ರಾಮುಖ್ಯತೆ
ಆ) ಈ ಲೋಕದ ಮೇಲೆ ಅಧಿಕಾರವನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ
ಇ) ಸತ್ಯವು ನಮ್ಮನ್ನು ಬಿಡುಗಡೆ ಮಾಡುತ್ತದೆ
ಈ) ದೇವರ ಚಿತ್ತವನ್ನು ಅರಿತುಕೊಳ್ಳುವಲ್ಲಿ ಮುಖ್ಯ ತಡೆಗಳು

ಅಧ್ಯಾಯ 3.
ಒಬ್ಬ ವ್ಯಕ್ತಿಯ ನಂಬಿಕೆಯ ಜೀವಿತದಲ್ಲಿ ಅವನ ಆಂತರಿಕ ಅಡಿಪಾಯದ ರಚನೆ 47
ಅ) ಆತ್ಮ, ಪ್ರಾಣ, ಶರೀರ
ಆ) ದೇಹ, ಪ್ರಾಣ ಅಥವಾ ಆತ್ಮ, ಯಾವುದು ಹೊಸ ಸೃಷ್ಟಿ?
ಇ) ಆದಾಮನ ಪಾಪ ಮತ್ತು ಮನುಷ್ಯನ ರಚನೆಯಲ್ಲಿ ಬದಲಾವಣೆ
ಈ) ಪ್ರಾಣದಿಂದ ಶರೀರಕ್ಕೆ ಬೀಳುವಿಕೆ

ಅಧ್ಯಾಯ 4.
ಕಾಣದ ಲೋಕದಿಂದ ಕಾಣುವ ಲೋಕದೊಳಗೆ ಪ್ರವೇಶ 61
ಅ) ಹೊಸ ಮನುಷ್ಯನು ಆಳ್ವಿಕೆ ಮಾಡಲು ಸೃಷ್ಟಿಸಲ್ಪಟ್ಟಿದ್ದಾನೆ
ಆ) ಜಯಿಸುವುದಕ್ಕಾಗಿ ಹೊಸದಾಗಿ ಹುಟ್ಟಿದ್ದು
ಇ) ನಾವು ಒಂದೇ ಸಮಯದಲ್ಲಿ ಎರಡು ಲೋಕದಲ್ಲಿ ಜೀವಿಸುತ್ತಿದ್ದೇವೆ
ಈ) ದೇವರ ವಾಕ್ಯವು ವ್ಯಕ್ತಿಯನ್ನು ಎರಡು ಭಾಗವಾಗಿ ವಿಭಾಗಿಸುತ್ತದೆ
ಉ) ದೈವೀಕ ಮನುಷ್ಯರ ಕಾರ್ಯನಿರ್ವಹಿಸುವ ಮಾದರಿ
ಊ) ಆಲೋಚನೆಗಳಿಂದ ರಾಜ್ಯಗಳನ್ನು ಬದಲಾಯಿಸುವುದು
ಋ) ಹೊಸ ದ್ರಾಕ್ಷಾರಸ ಮತ್ತು ಹಳೆಯ ಬುದ್ದಲಿ

ಅಧ್ಯಾಯ 5.
ದೇವರ ರಾಜ್ಯದಲ್ಲಿ ಸುಂದರವಾಗಿರುವವರು 75
ಅ) ದೀನತೆ ಮತ್ತು ಬೆಲೆಯನ್ನು ಪಾವತಿಸುವದು
ಆ) ಬೆಲೆಯನ್ನು ಪಾವತಿಸುವುದರ ಪ್ರಾಮುಖ್ಯತೆ
ಇ) ದೇವರು ಕಾರ್ಯಮಾಡಬೇಕಾ ಅಥವಾ ಸೈತಾನ ಕಾರ್ಯಮಾಡಬೇಕಾ?

ಅಧ್ಯಾಯ 6.
ಆತ್ಮೀಕ ಬೆಳವಣಿಗೆ ಎಂದರೇನು? 80
ಅ) ಆತ್ಮೀಕ ಬೆಳವಣಿಗೆ ಮತ್ತು ಅದರ ವಿವಿಧ ಬದಿಗಳು
ಆ) ಜ್ಞಾನದ ಕೊರತೆಯಿಂದ ದೇವರ ಜನರು ನಾಶವಾಗುತ್ತಿದ್ದಾರೆ
ಇ) ಆಳವಾದ ಆತ್ಮೀಕ ಬೆಳವಣಿಗೆಯಲ್ಲಿ
ಈ) ಹೊಸದಾಗಿ ಹುಟ್ಟಿದ್ದಾನೆ ಆದರೆ ಕಾರ್ಯಗಳು ಒಳ್ಳೇಯದಾಗಿಲ್ಲ! ಯಾಕೆ?
ಉ) ಪಾಪಮಾಡಲು ಸಾಧ್ಯವಾಗದಂತಹ ವ್ಯಕ್ತಿ
ಊ) ದೇವರ ಆತ್ಮ, ಮನುಷ್ಯನ ಆತ್ಮ, ಪ್ರಾಣ, ಶರೀರ ಮತ್ತು ಲೋಕ ಹಾಗೂ ಸೇವೆಯಲ್ಲಿ ಅವುಗಳೊಂದಿಗಿನ ಸಂಬಂಧಗಳು

ಅಧ್ಯಾಯ 7.
ಆತ್ಮ, ಪ್ರಾಣ ಮತ್ತು ದೇಹದ ಕಾರ್ಯ 96
ಅ) ಒಂದರಷ್ಟು ಹಿಂಬಡ್ತಿ ಮತ್ತು ಎರಡರಷ್ಟು ಮುಂಬಡ್ತಿ
ಆ) ಆದಾಮನ ಪತನ ಮತ್ತು ಮನುಕುಲದ ಮಹಾ ನಷ್ಟ
ಇ) ಮನುಷ್ಯನ ಎರಡರಷ್ಟು ಮುಂಬಡ್ತಿ
ಈ) ಆದಾಮನ ಮಹಿಮೆ ಮತ್ತು ನೂತನ ಸೃಷ್ಟಿಯ ಮಹಿಮೆಯ ನಡುವಿನ ವ್ಯತ್ಯಾಸ
ಉ) ನೀವು ಲೋಕಕ್ಕೆ ಬೆಳಕಾಗಿದ್ದೀರಿ
ಊ) ಮುಂಬಡ್ತಿಗೆ ಸಿದ್ಧರಾಗಿರಿ

ಅಧ್ಯಾಯ 8.
ದೇವರ ರಾಜ್ಯದಲ್ಲಿ ತಮ್ಮ ಕಣ್ಣುಗಳನ್ನು ಎಂದಿಗೂ ತೆರೆಯದ ಹಸುಮಕ್ಕಳು 108
ಅ) ಸೈತಾನನ ಸಂಪತ್ತಿನಿಂದ ಬಿಡುಗಡೆ ಬೇಕು ಬದಲಿಗೆ ಸೈತಾನನಿಂದಲ್ಲ
ಆ) ದೇವರ ರಾಜ್ಯದ ಸಂಪತ್ತು ಮತ್ತು ವಿಮೋಚಿಸಲ್ಪಟ್ಟ ವ್ಯಕ್ತಿಯ ಒಳಗೆ ಸೈತಾನನ ರಾಜ್ಯ
ಇ) ಹೇಗೆ ದೇವರು ನಮ್ಮ ಮೂಲಕ ದೇವರ ರಾಜ್ಯದ ಆಶೀರ್ವಾದವನ್ನು ಬಿಡುಗಡೆ ಮಾಡುತ್ತಾರೆ?

ಅಧ್ಯಾಯ 9.
ವಿಶ್ವಾಸಿಗಳಲ್ಲಿ ಸೈತಾನನ ಸಿಡಿಮದ್ದು 116
ಅ) ಹೇಗೆ ಶರೀರದ ಭಾವನೆಗಳು ಬಂದವು?
ಆ) ಮನಸ್ಸನ್ನು ಕುರುಡುಮಾಡುವ ಭಾವನೆಗಳು
ಇ) ಮೊದಲು ಬರುವ ಆಲೋಚನೆಯನ್ನು ಸ್ವೀಕರಿಸುವಲ್ಲಿ ಎಚ್ಚರವಾಗಿರಿ!
ಈ) ಗಲಾತ್ಯ ಸಭೆಯ ರಕ್ಷಣೆಹೊಂದಿದ ಜನರು ದೇವರ ರಾಜ್ಯವನ್ನು ಪಡೆಯುತ್ತಾರೆಯೇ?
ಉ) ದೇವರ ಮಕ್ಕಳೇ ಎದ್ದೇಳಿ, ಇನ್ನು ಮುಂದೆ ಸ್ವಯಂ–ಮೋಸಹೋಗಬೇಡಿ !
ಊ) ನೂತನವಾಗದ ಮನಸ್ಸಿನಲ್ಲಿ ಶರೀರಭಾವವಿದೆ

## ಭಾಗ – 2
## ದೇವರ ಶಾಲೆ ಮತ್ತು ಪರಿಶುದ್ಧಾತ್ಮನ ತರಬೇತಿ


**ಅಧ್ಯಾಯ 10.**

**ಮನುಷ್ಯನಲ್ಲಿ ಪರಿಶುದ್ಧಾತ್ಮನ ಕಾರ್ಯ** **127**

ಅ) ತಂದೆಯಿಂದ ನೆಡಲ್ಪಡದ ಗಿಡಗಳು

ಆ) ಪರಿಶುದ್ಧಾತ್ಮನ ತರಬೇತಿ (ಮುಂಗೋಪವನ್ನು ಕಿತ್ತುಹಾಕುತ್ತದೆ)

**ಅಧ್ಯಾಯ 11.**

**ವಿಮೋಚಿಸಲ್ಪಟ್ಟ ವ್ಯಕ್ತಿಯಲ್ಲಿ ಎರಡು ಜೀವಗಳು** **136**

ಅ) ಪ್ರಾಣಕ್ಕಾಗಿ ಕಾದಾಟ

ಆ) ಹಾಗಾದರೆ ರಕ್ತ ಅಥವಾ ಆತ್ಮ, ಇದರಲ್ಲಿ ಯಾವುದು ಜೀವ ನೀಡುತ್ತದೆ?

ಇ) ಎರಡು ಜೀವಗಳು (ಸೂಖೆ ಮತ್ತು ಝೋಯೆ)

ಈ) ಸೂಖೆ ಮತ್ತು ಝೋಯೆ ನಡುವಿನ ವ್ಯತ್ಯಾಸ

**ಅಧ್ಯಾಯ 12.**

**ನಾನು ಪರಿವರ್ತನೆಯ ಪ್ರಕ್ರಿಯೆಯಲ್ಲಿದ್ದೇನೆ** **143**

ಅ) ಗೋಧಿಯ ಕಾಳು ಸಾಯಬೇಕು (ಶರೀರದ ಭಾವಗಳು ನಾಶವಾಗಬೇಕು)

ಆ) ಬದಲಾವಣೆಯ ಪ್ರಕ್ರಿಯೆ

ಇ) ಹೇಗೆ ಕ್ರಿಸ್ತನು ನಮ್ಮನ್ನು ಸಿದ್ಧಗೊಳಿಸುತ್ತಿದ್ದಾನೆ? (ಎರಡು ರೀತಿಯ ತೋಟಗಳು)

ಈ) ಪ್ರಾಣವನ್ನು ಬಂಧಿಸಿರಿ

ಉ) ಮನಸ್ಸಿನಲ್ಲಿ ಎರಡು ಭಾವಗಳ ನಡುವೆ ಯುದ್ಧ

ಊ) ಪಾಪದ ಕ್ಷಮೆ ಮತ್ತು ಪಾಪದ ಸ್ವಭಾವ

ಋ) ಹೊಸ ಆತ್ಮೀಕ ಆಯುಧ

ಎ) ಮನುಷ್ಯನ ಚಿತ್ತದಿಂದ ದೇವರ ಚಿತ್ತಕ್ಕೆ

ಏ) ಮಗುವಿನಂತೆ ಬೆಳೆಯಿರಿ

ಐ) ಆತ್ಮೀಕ ಬೆಳವಣಿಗೆಯಲ್ಲಿ ಕಾಲ್ಪನಿಕ ರೂಪುರೇಖೆ

ಒ) ಪಾಪದ ನೊಗ, ಯೇಸುವಿನ ನೊಗ

**ಅಧ್ಯಾಯ 13.**

**ನೀವು ಲೋಕಕ್ಕೆ ಬೆಳಕಾಗಿದ್ದೀರಿ** **173**

ಅ) ಬೆಳಕು ನಮ್ಮಿಂದ ಅಡಗಿಸಲ್ಪಟ್ಟಿದೆ

ಆ) ಸಮಸ್ಯೆಯ ನಡುವೆ ದೇವರ ಮನುಷ್ಯನ ನೋಟ

ಇ) ಪರೀಕ್ಷೆ ಮತ್ತು ಶೋಧನೆಗಳ ನಡುವಿನ ವ್ಯತ್ಯಾಸವೇನು?

ಈ) ಪರೀಕ್ಷೆಗಳು ಯಾಕೆ?

ಅಧ್ಯಾಯ 14.
**ಈ ಲೋಕದಲ್ಲಿ ಝೋಯೆ ಮನುಷ್ಯನ (ದೇವಪುತ್ರರು) ಪ್ರಕಟಗೊಳ್ಳುವಿಕೆ 179**
ಅ) ದೇವರ ಪುತ್ರರು (ಝೋಯೆ ಮನುಷ್ಯರು)
ಆ) ಹೇಗೆ ನಾವು ರಾಜ್ಯವನ್ನು ಬದಲಾಯಿಸುತ್ತೇವೆ?
ಇ) ಮನುಷ್ಯನ ಜೀವದಿಂದ ದೇವರ ಜೀವಕ್ಕೆ ಪರಿವರ್ತನೆ (ಸೂಖೆಯಿಂದ ಝೋಯೆಗೆ)
ಈ) ದೇವಪುತ್ರರು ಪ್ರಕಟವಾಗುವುದರಲ್ಲಿ ಅಡಚಣೆಗಳು
ಉ) ನೂತನ ಸೃಷ್ಟಿಯಿಂದ ಆಳ್ವಿಕೆ
ಊ) ಎಂದಿಗೂ ವಿರೋಧಿಸದ ಹಾವುಗಳು
ಋ) ಎಂದಿಗೂ ಕಚ್ಚದ ಜೇನುನೊಣಗಳು
ಎ) ಎಂದಿಗೂ ಹಾನಿಮಾಡದ ಕಡಜಗಳು
ಏ) ವಿಷಪದಾರ್ಥವನ್ನೇನಾದರೂ ಕುಡಿದರೆ ನಿಮಗೆ ಏನಾದರೂ ಸಂಭವಿಸುತ್ತದೆಯೇ?
ಐ) ದೇವರ ಜೀವ ಮನುಷ್ಯನ ಜೀವವನ್ನು ನುಂಗುವುದು (ಝೋಯೆ ಸೂಖೆಯನ್ನು ನುಂಗುವುದು)
ಒ) ಗುಡಾರ – ಮಾನವ ರಚನೆ

ಅಧ್ಯಾಯ 15.
**ನೋಡಿ, ಬೆಲೆ ಪಾವತಿಸಿ ಮತ್ತು ಪಡೆಯಿರಿ 201**
ಅ) ಬೆಲೆಯನ್ನು ಪಾವತಿಸಿ
ಆ) ಭೂಮಿಯ ಮೇಲ್ವಿಚಾರಕರು
ಇ) ಬೆಲೆಯನ್ನು ಪಾವತಿಸುವುದರ ಮಹತ್ವ (ಹೇಗೆ ಪಡೆಯುವುದು?)

ಅಧ್ಯಾಯ 16.
**ಶಿಲುಬೆಯ ಮೂರು ವೈರಿಗಳು 217**
ಅ) ನೊಗ (ಶಿಲುಬೆ)
ಆ) ಸೈತಾನನ ಬಯಕೆ ಏನಾಗಿರಬಹುದು?
ಇ) ನೊಗವನ್ನು ತೆಗೆದುಹಾಕಿರಿ
ಈ) ಶಿಲುಬೆಯ ಮೊದಲನೇ ವೈರಿ
ಉ) ಶಿಲುಬೆಯ ಎರಡನೇಯ ವೈರಿ
ಊ) ಬೆಳವಣಿಗೆಯನ್ನು ಸಾಧಿಸದ ದೇವರ ಸೇವಕ ಮತ್ತು ಬೆಳವಣಿಗೆಯನ್ನು ಸಾಧಿಸಿರುವ ದೇವರ ಸೇವಕ
ಋ) ಮನುಷ್ಯನ ಆಲೋಚನೆ ಹಾಗೂ ಸೈತಾನನ ಗುರಿ ಒಂದೇ ಆಗಿದೆ
ಎ) ಶಿಲುಬೆಯ ಮೂರನೇ ವೈರಿ

# ಭಾಗ - 1

# ಆತ್ಮ ಪ್ರಪಂಚ, ಆತ್ಮೀಕ ಬೆಳವಣಿಗೆ



*ಅಧ್ಯಾಯ 1*

# ಲೋಕವು ಎರಡನೇಯದಾಗಿರಬೇಕು

*"ಹೀಗಿರುವುದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." (ಮತ್ತಾಯ 6:33)*

ನಾವೆಲ್ಲರೂ ಜೀವಿಸುತ್ತಿರುವ ಭೌತಿಕ ಪ್ರಪಂಚದ ಬಗ್ಗೆ ತಿಳಿದಿದ್ದೇವೆ, ಆದರೆ ವಾಸ್ತವವಾಗಿ ನಾವು ನೋಡುವ ಈ ಭೌತಿಕ ಪ್ರಪಂಚವನ್ನು ನಿಯಂತ್ರಿಸುವ, ಆತ್ಮೀಕ ಪ್ರಪಂಚದ ಕುರಿತು ಸಂಪೂರ್ಣ ನಿರ್ಲಕ್ಷ್ಯವುಳ್ಳವರಾಗಿದ್ದೇವೆ. ಆತ್ಮೀಕ ಮನುಷ್ಯನು ಮರೆಮಾಡಲ್ಪಟ್ಟಿದ್ದಾನೆ. ಸ್ವತಃ ಯೇಸು ಕ್ರಿಸ್ತನೇ, ಈ ಲೋಕದಲ್ಲಿ ಆತ್ಮೀಕ ಪ್ರಪಂಚದಿಂದ ಕಾರ್ಯನಿರ್ವಹಿಸಿದರು. ಸ್ಪಷ್ಟವಾಗಿ ಹೇಳುವುದಾದರೆ, ಆತನ "ಐಹಿಕ ಸೇವೆಯಲ್ಲಿ ಮಹಾ ಸಾಧನೆಯನ್ನು ಸಾಧಿಸುವಂತೆ ಸಹಾಯ ಮಾಡಿದ, ಕಾಣದ ದೇವರ ರಾಜ್ಯದ ಮೂಲಕ ಕಾಣುವ ಲೋಕದಲ್ಲಿ ಯೇಸು ಕಾರ್ಯ ನಿರ್ವಹಿಸಿದರು." ಯೇಸು ತಾನು ಮಾಡಿದಂತೆಯೇ ನಾವೂ ಸಹ ಕಾರ್ಯ ಮಾಡಬೇಕೆಂದು ಬಯಸುತ್ತಾರೆ. ವಾಕ್ಯವು ಎಫೆಸದವರಿಗೆ 5:1ರಲ್ಲಿ ಹೇಳುತ್ತದೆ, **"ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ."** ಯೇಸು ತಂದೆಯ ಚಿತ್ತವನ್ನು ಮಾಡಲು ಮಾತ್ರ ತವಕಿಸಿದರು ಮತ್ತು ಆತನನ್ನು ಅನುಸರಿಸುವವರಾದ ನಮಗೂ, "ಮೊದಲು ಕಾಣದ ದೇವರ ರಾಜ್ಯವನ್ನು ತವಕಿಸುವುದನ್ನು ನಿರೀಕ್ಷಿಸಲಾಗಿದೆ."

**"ಹೀಗಿರುವುದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯು ನೀತಿಗಾಗಿಯು ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." (ಮತ್ತಾಯ 6:33)**

ಮೇಲಿನ ವಾಕ್ಯವನ್ನು ಪರಿಗಣಿಸಿ, ನಮ್ಮನ್ನು ನಾವು ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬಹುದು. ಎಲ್ಲಿ ನಾವು ಈ ಕಾಣದ ರಾಜ್ಯವನ್ನು ಕಾಣಬಹುದು? ಆತ್ಮೀಕ ರಾಜ್ಯವನ್ನು ಕಾಣಲು ಹೇಗೆ ಸಾಧ್ಯ? ಮನುಷ್ಯನ ಆತ್ಮ ಮತ್ತು ಆತ್ಮೀಕ ರಾಜ್ಯದ ನಡುವಿನ ಸಂಬಂಧವೇನು? ಈ ಭೂಮಿಯಲ್ಲಿ ಆತ್ಮೀಕವಾಗಿ ಆತ್ಮೀಕ ಪ್ರಪಂಚದಲ್ಲಿ ನಾವು ಹೇಗೆ ಬೆಳೆಯಬಹುದು? ಸರ್ವಶಕ್ತ ದೇವರನ್ನು ಅವಲಂಬಿಸಿ, ದೇವರು ಆತನ ಚಿತ್ತವನ್ನು ನೆರವೇರಿಸಲು ನಮ್ಮ ಜೀವಿತವನ್ನು ಹೆಚ್ಚು ಫಲಭರಿತವಾಗಿ ಮಾಡಲು, ಆತ್ಮೀಕ ಪ್ರಪಂಚ ಮತ್ತು ಅದರ ಕಾರ್ಯ ನಿರ್ವಹಿಸುವ ತತ್ವಗಳ ಕುರಿತು ಹೆಚ್ಚು ಜ್ಞಾನ ಸಂಪಾದಿಸಲು ಪ್ರಾರ್ಥನೆಯೊಂದಿಗೆ ಪ್ರಕಟಣೆಗಳ ಉಗ್ರಾಣಕ್ಕೆ ನಾವು ಪ್ರವೇಶಿಸೋಣ.

ಒಮ್ಮೆ "ದೇವರ ರಾಜ್ಯ ಯಾವಾಗ ಬರುತ್ತದೆಂದು?" ಕೆಲವು ಫರಿಸಾಯರು ಯೇಸುವನ್ನು ಕೇಳಿದರು. ಯೇಸು ಈ ರೀತಿಯಾಗಿ ಉತ್ತರಿಸಿದರು, **"ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ, ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವುದಕ್ಕಾಗದು, ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ ಎಂದು ಉತ್ತರಕೊಟ್ಟನು." (ಲೂಕ 17:20-21)**

ದೇವರ ರಾಜ್ಯವು ನಮ್ಮ ಭೌತಿಕ ಕಣ್ಣುಗಳಿಂದ ಕಾಣಲಾಗದಂಥ ಆತ್ಮೀಕ ಲೋಕ ಎಂದು ಯೇಸುವಿನ ಉತ್ತರ ವಿವರಿಸುತ್ತದೆ. ಯೇಸುವು ಕೆಳಗಿನ ಈ ಭೂಮಿಗೆ ಬಂದ ಉದ್ದೇಶವು ಈ ಲೋಕದಲ್ಲಿ ದೇವರ ರಾಜ್ಯವನ್ನು ಪ್ರಕಟಮಾಡುವುದು ಮತ್ತು ಸ್ಥಾಪಿಸುವುದಾಗಿತ್ತು.

**"ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ" ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು."**
**(ಮಾರ್ಕ 1:15)**

## ಅ) ಕಾಣದ ರಾಜ್ಯವನ್ನು ಯಾರು ನೋಡುತ್ತಾರೋ ಅವರು ಅಸಾಧ್ಯವಾದದ್ದನ್ನು ಮಾಡುತ್ತಾರೆ!

ಯೇಸು ದೇವರ ರಾಜ್ಯ ನಿಮ್ಮೊಳಗೆ ಇದೆ ಎಂದು ವಿವರಿಸಿದಾಗ, ನಮ್ಮೊಳಗೆ ಇರುವಂತಹ, ದೇವರ ರಾಜ್ಯದಲ್ಲಿ ಜೀವಿಸುವಂತಹ ಅನುಭವವನ್ನು ನಮ್ಮಲ್ಲಿ ಎಷ್ಟು ಜನ ಹೊಂದಿದ್ದೇವೆ ಎಂದು ತಿಳಿಯುವುದು ಅಗತ್ಯವಾಗಿದೆ. ಆದಾಗ್ಯೂ, ಈಗಿನ ಸಮಕಾಲೀನ ಪ್ರಪಂಚದ ವಿಶ್ವಾಸಿಗಳು ವಿಭಿನ್ನವಾಗಿ ಯೋಚಿಸುತ್ತಾರೆ.

ಬಹುತೇಕ ವಿಶ್ವಾಸಿಗಳು ಎತ್ತಲ್ಪಡುವಿಕೆಯ ನಂತರ ದೇವರ ರಾಜ್ಯದಲ್ಲಿ ಜೀವಿಸುವುದಕ್ಕಾಗಿ ಯೋಚಿಸುತ್ತಿದ್ದಾರೆ. ಇತರರು ಅವರ ಸಾವಿನ ನಂತರ ದೇವರ ರಾಜ್ಯದಲ್ಲಿ ಜೀವಿಸಲು ಕಾಯುತ್ತಿದ್ದಾರೆ, ಆದರೆ ಯೇಸು ಹೇಳಿದಂತೆ ನಮ್ಮೊಳಗೆ ಇರುವ ದೇವರ ರಾಜ್ಯದಲ್ಲಿ ಜೀವಿಸಲು ನಮ್ಮಲ್ಲಿ ಕೆಲವರು ಮಾತ್ರ ಪ್ರಾರಂಭಿಸಿದ್ದೇವೆ.

ಪ್ರಿಯ ದೇವರ ಮಗುವೆ, ನಿನ್ನ ಅಭಿಪ್ರಾಯವೇನು? ನೀನು ಈಗಲೂ ಸಾವು ಅಥವಾ ಎತ್ತಲ್ಪಡುವಿಕೆ ನಂತರ ದೇವರ ರಾಜ್ಯದಲ್ಲಿ ಜೀವಿಸಲು ಯೋಚಿಸುತ್ತಿದ್ದರೆ, ನೀನು ತಪ್ಪಾಗಿ ಅರ್ಥಮಾಡಿಕೊಂಡಿದ್ದೀಯ. ಈಗಲೇ ನೀನು ದೇವರ ರಾಜ್ಯದಲ್ಲಿ ಜೀವಿಸುವ ಅನುಭವವನ್ನು ಹೊಂದಲು ಪ್ರಾರಂಭಿಸು, ಹಾಗಾದರೆ ನಿನ್ನ ಆತ್ಮೀಕ ಜೀವಿತವು ಯೇಸುವಿನಂತೆ ಜಯಪ್ರದವಾಗುತ್ತದೆ.

ಒಬ್ಬ ಆಶೀರ್ವಾದಿತ ದೇವರ ಸೇವಕರು ಒಮ್ಮೆ ಹೇಳಿದರು, **"ಕಾಣದಿರುವ ಸಂಗತಿಗಳನ್ನು ಕಾಣಲು ಪ್ರಾರಂಭಿಸಿದಾಗ ಅಸಾಧ್ಯವಾದ ಸಂಗತಿಗಳನ್ನು ಮಾಡಲು ನಾವು ಪ್ರಾರಂಭಿಸುತ್ತೇವೆ."**

ನಮ್ಮೊಳಗೆ ವಾಸಿಸುತ್ತಿರುವ ಪರಿಶುದ್ಧಾತ್ಮನಿಂದ ನೀಡಲ್ಪಟ್ಟಿರುವ ದೇವರ ವಾಕ್ಯದಿಂದ, ಈ ಕಾಣುವ ಲೋಕವನ್ನು ನಿಯಂತ್ರಿಸುತ್ತಿರುವ ಕಾಣದ ದೇವರ ರಾಜ್ಯವನ್ನು ನಾವು ನೋಡಿದಾಗ, ಯೇಸುವಿನಂತೆಯೇ ಅಸಾಧ್ಯ ಮತ್ತು ಅದ್ಭುತ ಸಂಗತಿಗಳನ್ನು ಈ

ಲೋಕದಲ್ಲಿ ಮಾಡಲು ಪ್ರಾರಂಭಿಸುತ್ತೇವೆ. ಆಗ ದೇವರ ರಾಜ್ಯವು ನಮ್ಮ ಮೂಲಕ ಲೋಕದಲ್ಲಿ ಬೆಳೆಯುತ್ತದೆ, ಅದು ನಮ್ಮನ್ನು ಜಯಭರಿತ ಆತ್ಮೀಕ ಜೀವಿತಕ್ಕೆ ನಡೆಸುತ್ತದೆ. ಈ ಬೆಳವಣಿಗೆಯ ವಿವರಣೆಯು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

## ಆ) ಲೋಕ, ಮೊದಲನೇಯದಾಗಿದ್ದದ್ದು, ಎರಡನೇಯದಾಗಿದೆ

ಯೇಸು ಕ್ರಿಸ್ತನ ಅತ್ಯಮೂಲ್ಯ ರಕ್ತದಿಂದ ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿರುವ ಎಲ್ಲರೂ ಕಾಣುವ ಲೋಕದ ಬದಲಿಗೆ, ಅವರು ಹೊಸದಾಗಿ ಹುಟ್ಟಿರುವ ಕಾಣದ ದೇವರ ರಾಜ್ಯವನ್ನು ನೋಡಲೇಬೇಕು. ಕಾಣದಿರುವ ಆತ್ಮೀಕ ಲೋಕದ ಕುರಿತು ನಾವು ನಿರ್ಲಕ್ಷಿತರಾಗಿದ್ದ ಸಮಯವಿತ್ತು, ಹಾಗಾಗಿ ಈ ಲೋಕದ ಮಕ್ಕಳ ರೀತಿಯಲ್ಲಿ ನಾವು ಜೀವಿಸಿದೆವು. ಭೌತಿಕ ಲೋಕವೇ ನಮ್ಮ ಆದ್ಯತೆಯಾಗಿತ್ತು. ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿ, ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿದವರಾದದರಿಂದ, ನಾವು ಜೀವಿಸುವ ಪ್ರಪಂಚದ ಬದಲಾಗಿ ದೇವರ ರಾಜ್ಯಕ್ಕೆ ನಾವು ನಮ್ಮ ಮೊದಲ ಆದ್ಯತೆಯನ್ನು ನೀಡಬೇಕು. ವಾಕ್ಯವು ನಮಗೆ ಏನು ಹೇಳುತ್ತದೆ ಎಂದು ನಾವು ನೆನೆಸಿಕೊಳ್ಳಬೇಕು, **"ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು." (1 ಯೋಹಾನ 2:17)**

ಇಂದು, ನಾವೆಲ್ಲರೂ ಎರಡು ಪ್ರಪಂಚ ಅಥವಾ ಎರಡು ಪ್ರದೇಶಗಳಲ್ಲಿ ಒಂದೇ ಸಮಯದಲ್ಲಿ ಜೀವಿಸುತ್ತೇವೆ. ಮೊದಲನೇಯದಾಗಿ ನಮ್ಮ ಭೌತಿಕ ಕಣ್ಣುಗಳಿಂದ ನೋಡುವಂತಹ ಮತ್ತು ಭೌತಿಕ ಶರೀರದೊಂದಿಗೆ ಜೀವಿಸುವಂತಹ ಪ್ರಪಂಚ, ಮತ್ತು ಎರಡನೇಯದಾಗಿ 2 ಕೊರಿಂಥ 5:17ರಲ್ಲಿ ಹೇಳಿರುವಂತೆ ಹೊಸ ಸೃಷ್ಟಿಯಾಗಿ, ನಮ್ಮ ಆತ್ಮೀಕ ಕಣ್ಣುಗಳಿಂದ ಮಾತ್ರನೋಡಬಹುದಾದ ಮತ್ತು ನಮ್ಮ ಆತ್ಮೀಕ ಶರೀರ ಅಸ್ತಿತ್ವದಲ್ಲಿರುವ ಆತ್ಮೀಕ ಪ್ರಪಂಚ. **"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ, ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿಯು ಹೋಗಿ ಎಲ್ಲಾ ನೂತನವಾಯಿತು." (2 ಕೊರಿಂಥ 5:17)**

ಆತ್ಮೀಕ ಪ್ರಪಂಚವನ್ನು ಎರಡು ರಾಜ್ಯಗಳಾಗಿ ವಿಂಗಡಿಸಬಹುದು: ದೇವರ ರಾಜ್ಯ ಮತ್ತು ಸೈತಾನನ ರಾಜ್ಯ. ನಮ್ಮ ಆಲೋಚನೆಗಳನ್ನು ನಿರ್ವಹಿಸಲು ನಮ್ಮ ದೇಹವು ಭೌತಿಕ ರಾಜ್ಯದಲ್ಲಿ ಉಳಿಯುತ್ತದೆ ಎಂಬ ವಾಸ್ತವವನ್ನು ಹೊರತುಪಡಿಸಿ ನಮ್ಮ ಆಲೋಚನೆಗಳು ಯಾವುದಾದರು ಒಂದು ರಾಜ್ಯದಲ್ಲಿ ಕಾರ್ಯನಿರ್ವಹಿಸಲು ನಮ್ಮನ್ನು ಪ್ರೇರೇಪಿಸುತ್ತವೆ. ನಾವು ಶಾರೀರಿಕವಾಗಿ ಯೋಚಿಸಿದಾಗ ಅಥವಾ "ಲೋಕದ ಪ್ರೀತಿಯಲ್ಲಿ" ನೆಲೆಸಿದಾಗ, ಸೈತಾನನ ರಾಜ್ಯದಲ್ಲಿ ಇರಲು ಒಲವು ತೋರಿಸುತ್ತೇವೆ, ಆದರೆ ದೇವರ ವಾಕ್ಯದ ಮೂಲಕ ನಾವು ಯೋಚಿಸಿದಾಗ ನಮ್ಮ ಪ್ರಾಣದಲ್ಲಿ, ದೇವರ ರಾಜ್ಯದಲ್ಲಿ ನೆಲೆಸಲು ಒಲವು ತೋರಿಸುತ್ತೇವೆ.

## ಇ) ಪೌಲನು ಕಾಣದ ದೇವರ ರಾಜ್ಯವನ್ನು ಮೊದಲು ಕಂಡನು

ಪೌಲನು ಮೊದಲಿಗೆ ದೇವರ ರಾಜ್ಯವನ್ನು ಕಂಡನು. ಅಂದರೆ ಆತನು ಯಾವಾಗಲು ಭೌತಿಕ ರಾಜ್ಯವನ್ನು ದೇವರ ರಾಜ್ಯದ ಮುಖಾಂತರ ಕಂಡನು. ಪೌಲನು ಭೌತಿಕ ರಾಜ್ಯದಲ್ಲಿ ಕಾರ್ಯ ಮಾಡಿದರೂ, ಅದು ಆತನಿಗೆ ಎರಡನೇಯದ್ದಾಗಿತ್ತು ಮತ್ತು ದೇವರ ರಾಜ್ಯವು ಅವನಿಗೆ ಪ್ರಧಾನವಾಗಿತ್ತು. ಪೌಲನು ಮೊದಲಿಗೆ ದೇವರ ರಾಜ್ಯವನ್ನು ಪರಿಗಣಿಸುವುದು ಮತ್ತು ಲೋಕಕ್ಕೆ ಎರಡನೇಯ ಸ್ಥಾನವನ್ನು ನೀಡುವುದರ ಕುರಿತು ನಮಗೆ ಆಶ್ಚರ್ಯವಾಗಬಹುದು. ಆತನು ವಾಸ್ತವವಾಗಿಯೂ ದೇವರ ರಾಜ್ಯವನ್ನು ಮೊದಲಿಗೆ ಕಂಡನೇ ಮತ್ತು ಜೀವಿಸಿದನೇ?

ಈ ವಾಕ್ಯದ ಸಾರಾಂಶವನ್ನು ಅರ್ಥೈಸಿಕೊಳ್ಳಲು, ನಾವು ಏನು ನೋಡುತ್ತೇವೆ ಮತ್ತು ನಾವು ಏನು ಕೇಳುತ್ತೇವೆ ಅದು ನಮ್ಮ ಹೃದಯಕ್ಕೆ ಬರುತ್ತದೆ. "ಹೃದಯದಲ್ಲಿ ತುಂಬಿರಿವುದೇ ಬಾಯಲ್ಲಿ ಹೊರಡುವದು." (ಮತ್ತಾಯ 12:34)

**ಪೌಲನು ಕೊರಿಂಥದವರಿಗೆ ಬರೆದಂತಹ ಪತ್ರಿಕೆಯಲ್ಲಿನ ಒಂದು ವಾಕ್ಯದ ಮೇಲೆ, ನಮ್ಮ ಗಮನವನ್ನು ಕೇಂದ್ರೀಕರಿಸೋಣ.**

**"ಹಾಗಾಗದೆ ದೇವರು ಅಪೋಸ್ತಲರಾದ ನಮ್ಮನ್ನು ಮರಣವಿಧಿ ಹೊಂದಿದವರನ್ನೋ ಎಂಬಂತೆ ಕಡೆಯವರಾಗಿ ತೋರಿಸಿದ್ದಾನೆಂದು ನನಗೆ ತೋಚುತ್ತದೆ; ನಾವು ದೇವದೂತರಿಗೂ ಮನುಷ್ಯರಿಗೂ ಅಂತೂ ಜಗತ್ತಿಗೆಲ್ಲಾ ನೋಟವಾದೆವು." (1 ಕೊರಿಂಥ 4:9)**

ಇಲ್ಲಿ ಪೌಲನು "ಅಪೋಸ್ತಲರು ಜಗತ್ತಿಗೆಲ್ಲಾ ನೋಟವಾದೆವು" ಎಂದು ಹೇಳಿಕೆಯನ್ನು ಬರೆದಾಗ ಅವನು ಮನಸ್ಸಿನಲ್ಲಿ ಎರಡೂ ಪ್ರಪಂಚವನ್ನು ಇಟ್ಟು ಕೊಂಡಿದ್ದನು, ಕಾರಣ ದೇವದೂತರು ಆತ್ಮೀಕ ರಾಜ್ಯಕ್ಕೆ ಸೇರಿದವರು ಮತ್ತು ಮನುಷ್ಯರು ಸ್ವಾಭಾವಿಕವಾಗಿ ಭೌತಿಕ ಪ್ರಪಂಚಕ್ಕೆ ಸೇರಿದವರು. ಪೌಲನ ದೃಷ್ಟಿಯನ್ನು ನೋಡಿರಿ, ಅವನು ಮೊದಲು ಕಾಣುವ ಲೋಕದ ಜನರ ಬದಲಾಗಿ ದೇವದೂತರನ್ನು ಮೊದಲು ಸೂಚಿಸಿದನು.

## ಈ) ಆತ್ಮೀಕ ರಾಜ್ಯದಲ್ಲಿ ಪೌಲನ ಸಾಕ್ಷಿಗಳು

ಪೌಲನು ತಿಮೋಥೆಗೆ ಬರೆದ ಇನ್ನೊಂದು ಭಾಗದಲ್ಲಿ, ಭೌತಿಕ ಪ್ರಪಂಚದಲ್ಲಿನ ಜನರನ್ನು ಸಾಕ್ಷಿಗಳನ್ನಾಗಿ ಮಾಡಲು ಅಲ್ಲ, ಬದಲಿಗೆ ಆತ್ಮೀಕ ಪ್ರಪಂಚದಲ್ಲಿನವರನ್ನು ಸಾಕ್ಷಿಗಳನ್ನಾಗಿ ಮಾಡುವುದನ್ನು ನಾವು ನೋಡಬಹುದು.

**"ನೀನು ವಿಚಾರಿಸುವುದಕ್ಕೆ ಮೊದಲೇ ತಪ್ಪು ಹೊರಿಸದೆಯೂ ಪಕ್ಷಪಾತದಿಂದ ಏನೂ ಮಾಡದೆಯೂ ನಾನು ಹೇಳಿರುವ ಮಾತುಗಳ ಪ್ರಕಾರವೇ ನಡೆಯಬೇಕೆಂದು ದೇವರ ಮುಂದೆಯೂ ಕ್ರಿಸ್ತ ಯೇಸುವಿನ ಮುಂದೆಯೂ ಆಯಲ್ಪಟ್ಟಿರುವ ದೇವದೂತರ ಮುಂದೆಯೂ ಖಂಡಿತವಾಗಿ ಹೇಳುತ್ತೇನೆ." (1 ತಿಮೋ 5:21)**

ಇಲ್ಲಿ, ಪೌಲನು ಆತ್ಮೀಕ ಪ್ರಪಂಚದಲ್ಲಿರುವವರನ್ನು ಸಾಕ್ಷಿಗಳಾಗಿ ಇರಿಸುತ್ತಾನೆ. ಸಾಮಾನ್ಯವಾಗಿ ನಾವು ಸಾಕ್ಷಿಗಳೊಂದಿಗೆ ಪತ್ರವನ್ನು ಬರೆಯುವಾಗ, ಸಭಾಪಾಲಕರು, ಪಾದ್ರಿ ಅಥವಾ ಸಭೆಯ ಧರ್ಮಾಧಿಕಾರಿ ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತಾ (ನಾಮ ಮತ್ತು ಉಪನಾಮದೊಂದಿಗೂ) ಮತ್ತು ಆ ವ್ಯಕ್ತಿಯ ಸ್ಥಳ ಅಥವಾ ಅವರು ವಾಸಿಸುವ ಪ್ರದೇಶವನ್ನು ಸೂಚಿಸುತ್ತಾ ಉಲ್ಲೇಖಿಸುತ್ತೇವೆ. ನಾವು ಎಲ್ಲಾ ಸಮಯದಲ್ಲೂ ಯಾವುದಕ್ಕೂ ಮತ್ತು ಎಲ್ಲದಕ್ಕೂ ಮನುಷ್ಯರನ್ನು ಅವಲಂಬಿಸುತ್ತೇವೆ. ಆದರೆ ಪೌಲನು ಯಾವಾಗಲು ಆತನ ಸಾಕ್ಷಿಗಳನ್ನು ಆತ್ಮೀಕ ರಾಜ್ಯದಿಂದ ಪಟ್ಟಿಮಾಡಿದ್ದಾನೆ (ದೇವರು, ಕ್ರಿಸ್ತ ಯೇಸು, ಗೌರವಾನ್ವಿತ ದೇವದೂತರು ಮತ್ತು ಹೀಗೆ). ಪೌಲನು ಭೌತಿಕ ಆಲೋಚನೆಯೊಂದಿಗಿನ ಸ್ವಾಭಾವಿಕ ಮನುಷ್ಯನಾಗಿದ್ದನು, ಆದರೆ ಆತನು ಕ್ರಿಸ್ತ ಯೇಸುವನ್ನು ಸಂಧಿಸಿದಾಗ, ಅವನು ಬದಲಾದ ವ್ಯಕ್ತಿಯಾದನು, ವಿಶೇಷವಾಗಿ ಅವನ ಆಲೋಚನೆಗಳಲ್ಲಿ ಬದಲಾವಣೆ ಉಂಟಾಯಿತು. ಪ್ರಿಯರೇ, ಪೌಲನು ಅವನ ಆಲೋಚನೆಗಳನ್ನು ಬದಲಾಯಿಸಿಕೊಳ್ಳಬಹುದಾದರೆ, **ನಾವು ಸಹ ನಮ್ಮ ಯೋಚಿಸುವ ರೀತಿಯನ್ನು ಬದಲಾಯಿಸುವಂತೆ ದೇವರನ್ನು ಅನುಮತಿಸಬಾರದೇ?**

## ಉ) ಆತ್ಮದಲ್ಲಿ ಪ್ರಾರ್ಥಿಸುವುದಕ್ಕೆ ಮೊದಲ ಸ್ಥಾನ

ಕೊರಿಂಥದಲ್ಲಿ ಎರಡು ರೀತಿಯ ಪ್ರಾರ್ಥನೆಯನ್ನು ಸೂಚಿಸಲಾಗಿದೆ. ಮೊದಲನೇಯದು ಆತ್ಮದಿಂದ ಪ್ರಾರ್ಥಿಸುವುದು ಮತ್ತು ಎರಡನೇಯದು ಬುದ್ಧಿಯಿಂದ ಪ್ರಾರ್ಥಿಸುವುದು:

**"ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು ಬುದ್ದಿಯಿಂದಲೂ ಹಾಡುವೆನು." (1 ಕೊರಿಂಥ 14:15)**

ಸಾಮಾನ್ಯವಾಗಿ ವಿಶ್ವಾಸಿಗಳು ಬುದ್ಧಿಯಿಂದ ಪ್ರಾರ್ಥಿಸುವುದಕ್ಕೆ ಪ್ರಾರಂಭಿಸುತ್ತಾರೆ ಮತ್ತು ನಂತರ ಆತ್ಮದಿಂದ ಪ್ರಾರ್ಥಿಸುತ್ತಾರೆ. ಆದರೆ ಪೌಲನು ಆತ್ಮದಿಂದ ಪ್ರಾರ್ಥಿಸುವುದಕ್ಕೆ ಪ್ರಾರಂಭಿಸುತ್ತಿದ್ದನು. ಆತನು ಹೇಳುತ್ತಾನೆ, "ನಾನು ಆತ್ಮದಿಂದ ಪ್ರಾರ್ಥಿಸುವೆನು ಬುದ್ಧಿಯಿಂದಲೂ ಪ್ರಾರ್ಥಿಸುವೆನು." ಪೌಲನು ತಾನು ಹೊಸದಾಗಿ ಹುಟ್ಟಿದಂತಹ ದೇವರ ರಾಜ್ಯಕ್ಕೆ ಹೆಚ್ಚು ಮಹತ್ವವನ್ನು ನೀಡಿದನು. ಇತರ ಮಾತುಗಳಲ್ಲಿ ಹೇಳುವದಾದರೆ ಸ್ವಾಭಾವಿಕ ವಿಷಯಗಳ ಬದಲಾಗಿ ಆತ್ಮೀಕ ವಿಷಯಗಳಿಗೆ ಆತನು ಹೆಚ್ಚು ಮಹತ್ವ ನೀಡಿದನು. ಪೌಲನು ಮೊದಲು ಆತ್ಮದಿಂದ ಪ್ರಾರ್ಥಿಸಿದನು ಮತ್ತು ನಂತರ ಭೌತಿಕ ಪ್ರಪಂಚದಲ್ಲಿ ಪ್ರಾರ್ಥಿಸಲು ಅವನ ಬುದ್ಧಿಯನ್ನು ಉಪಯೋಗಿಸಿದನು. ನೀವು ಕೇಳಬಹುದು, ಹಾಗಾದರೆ ಯಾವಾಗ ಅವನು ಬುದ್ಧಿಯಲ್ಲಿ ಪ್ರಾರ್ಥಿಸಿದನು? ಪೌಲನು ಬೇರೆಯವರೊಂದಿಗೆ ಪ್ರಾರ್ಥಿಸಿದಾಗ, ಅವರು ಪ್ರಾರ್ಥನೆಯನ್ನು ಅರ್ಥಮಾಡಿಕೊಳ್ಳುವಂತೆ ಮತ್ತು ಅದಕ್ಕೆ "ಆಮೆನ್" ಎಂದು ಹೇಳುವಂತೆ ಅವರ ಮುಂದೆ ಪ್ರಾರ್ಥಿಸಿದನು. (1 ಕೊರಿ 14:16-19) ಪೌಲನಂತೆಯೇ, ನಾವು ಆತ್ಮದಿಂದ ಪ್ರಾರ್ಥಿಸಲು ಪ್ರಾರಂಭಿಸಬೇಕಾದರೆ, ಕೊಲೊಸ್ಸೆ 3:2ರಲ್ಲಿ ವಾಕ್ಯ ಹೇಳುವಂತೆ, ನಾವು ನಮ್ಮ ಮನಸ್ಸನ್ನು ಪರಲೋಕದ ಸಂಗತಿಗಳ ಮೇಲೆ ಅಥವಾ ಮೇಲಿರುವಂಥವುಗಳ ಮೇಲೆ ಇಡಬೇಕು.

## ಊ) ಆತ್ಮದಿಂದ ಹಾಡುವುದಕ್ಕೆ ಮೊದಲ ಸ್ಥಾನ

1 ಕೊರಿಂಥದವರಿಗೆ 14:15ರಲ್ಲಿ ಪೌಲನು ಮೊದಲು ಆತ್ಮದಿಂದ ಹಾಡುತ್ತಾನೆ ಮತ್ತು ನಂತರದಲ್ಲಿ ಬುದ್ಧಿಯಿಂದ ಹಾಡುತ್ತಾನೆ.

ಮತ್ತಾಯನು ಬರೆದ ಸುವಾರ್ತೆ 13:44ರಲ್ಲಿ, **"ಪರಲೋಕರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ[ನಿಧಿ] ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡುಕೊಂಡನು."**

ಹೊಲದಲ್ಲಿ ಹೂಳಿಟ್ಟ ದ್ರವ್ಯದಂತೆ ಪರಲೋಕರಾಜ್ಯವು ಇದೆ. ಮತ್ತಾಯ 13:38ರಲ್ಲಿ, ಹೊಲವೆಂದರೆ ಈ ಲೋಕ. ದ್ರವ್ಯವನ್ನು ಪರಲೋಕರಾಜ್ಯಕ್ಕೆ ಹೋಲಿಸಲಾಗಿದೆ. ಇಲ್ಲಿ, ಪೌಲನಂತಹ ಅಪೋಸ್ತಲ, ಮೊದಲು ನೋಡುವುದು ಪರಲೋಕರಾಜ್ಯ, ಹೂಳಿಟ್ಟ ದ್ರವ್ಯ. ಅವರು ಲೋಕಕ್ಕೆ, ಬೇರೆ ಮಾತುಗಳಲ್ಲಿ ಹೇಳುವದಾದರೆ, ಮಣ್ಣಿಗೆ ಎರಡನೇ ಸ್ಥಾನವನ್ನು ನೀಡುತ್ತಿದ್ದರು. ಖಂಡಿತವಾಗಿ ದ್ರವ್ಯವು ಮಣ್ಣು ಅಥವಾ ಹೊಲಕ್ಕಿಂತ ಹೆಚ್ಚು ಬೆಲೆಯುಳ್ಳದ್ದಾಗಿದೆ. ಓದುತ್ತಿರುವವರ ಹೃದಯವನ್ನು ಸ್ಪರ್ಶಿಸಲು ಮತ್ತು ತೆರೆಯಲು ದೇವರಾತ್ಮನು ಈಗಾಗಲೇ ಪ್ರಾರಂಭಿಸಿದ್ದಾರೆ ಎಂದು ನಾನು ನನ್ನ ಆತ್ಮದಲ್ಲಿ ನೆನೆಸುತ್ತೇನೆ. ಈಗಿನಿಂದ ನೀವು ಹೊಸ ಪ್ರಕಟಣೆಗಳನ್ನು ಸ್ವೀಕರಿಸಲು ಪ್ರಾರಂಭಿಸುತ್ತೀರಿ. ಸರ್ವಶಕ್ತನಾದ ದೇವರಿಗೆ ಧನ್ಯವಾದಗಳು.

## ಋ) ಯೇಸು ಅವರ ಸೇವೆಯನ್ನು ಆತ್ಮೀಕ ಲೋಕವನ್ನು ನೋಡುವ ಮೂಲಕ ಪ್ರಾರಂಭಿಸಿದರು

ನಾವು ನಮ್ಮ ಗಮನವನ್ನು ಯೇಸುವಿನ ಮತ್ತು ಯೂದನು ಆತನನ್ನು ಮುತ್ತಿನಿಂದ ಅಗಲಿದ ಒಲೀವ್ ಬೆಟ್ಟದ ಗೆತ್ಸೆಮನೆಯಲ್ಲಿ ಯೇಸು ಹೇಗೆ ಮಾತನಾಡಿದರು ಎನ್ನುವುದರ ಮೇಲೆ ಕೇಂದ್ರೀಕರಿಸೋಣ! ಯೂದನು ಮಹಾಯಾಜಕರು ಮತ್ತು ಹಿರಿಯರಿಂದ ಯೇಸುವನ್ನು ಹಿಡಿಯಲು ಮಹಾ ದುರುದ್ದೇಶದಿಂದ ಗೆತ್ಸೆಮನೆಗೆ ಬಂದಾಗ, ಪೇತ್ರನು ಮಹಾಯಾಜಕನ ಸೇವಕನ ಕಿವಿಯನ್ನು ಕತ್ತರಿಸಿದನು. ಸೇವಕನ ಕಿವಿಯನ್ನು ಸ್ವಸ್ಥಮಾಡಿದ ನಂತರ ಯೇಸು ಪೇತ್ರನಿಗೆ ಕತ್ತಿಯನ್ನು ಅದರ ಸ್ಥಳದಲ್ಲಿಡುವಂತೆ ಹೇಳಿದರು ಮತ್ತು ಮುಂದುವರೆಸುತ್ತಾ ಹೇಳಿದರು, "ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು." (ಮತ್ತಾ 26:52) **"ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೆಂದೂ ಬೇಡಿಕೊಂಡರೆ ಆತನು ನನಗೆ ಈಗಲೇ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವದಿಲ್ಲವೆಂದೂ ನೆನೆಸುತ್ತೀಯ?" (ಮತ್ತಾ 26:53)** ನಾವು ಇದನ್ನು ಓದುವಾಗ ಯೇಸುವಿನ ಮಾತಿನಲ್ಲಿ ಏನಾದರೂ ವಿಶಿಷ್ಟ ಅಥವಾ ಅಸಾಮಾನ್ಯವಾದದ್ದನ್ನು ಗ್ರಹಿಸುವುದಿಲ್ಲ. ಆದರೆ, ಮೇಲಿನದನ್ನು ಪರಿಶುದ್ಧಾತ್ಮನ ಸಹಾಯದಿಂದ ನಾವು ವಿವೇಚಿಸಿದರೆ, ಆತನು ಆತ್ಮೀಕ ಲೋಕವನ್ನು ನೋಡುತ್ತಾ ಹೇಳುತ್ತಾರೆಂದು ಅರ್ಥಮಾಡಿಕೊಳ್ಳಬಹುದು.

ಇಲ್ಲಿ ಯೇಸು ಎಂದೂ ತಪ್ಪಿಸಿಕೊಳ್ಳಲು ಬಯಸಲಿಲ್ಲ, ಆದರೂ ಪೇತ್ರನಿಗೆ "ಅವರನ್ನು ಹಿಡಿಯಲು ಬಂದ ದುರುದ್ದೇಶದಿಂದ ತಪ್ಪಿಸಿಕೊಳ್ಳಲು, ಆತನು ತಂದೆಯನ್ನು ಕೇವಲ 12 ಗಣಗಳಲ್ಲ, ಬದಲಿಗೆ 12 ಗಣಗಳಿಗಿಂತಲೂ ಹೆಚ್ಚು ಮಂದಿ ದೇವದೂತರನ್ನು ಕೇಳಬಹುದು" ಎಂದು ಹೇಳುತ್ತಾರೆ.

ಅನೇಕ ರೀತಿಯ ಶಸ್ತ್ರಾಸ್ತ್ರಗಳನ್ನು ಹೊಂದಿರಬಹುದಾದ ಒಂದು ಗುಂಪನ್ನು ಹಿಡಿಯುವುದಕ್ಕೆ ಹೋಲಿಸಿದರೆ, ಒಬ್ಬ ಕಳ್ಳನನ್ನು ಹಿಡಿಯಲು ದೊಡ್ಡ ಪಡೆಯ ಅಗತ್ಯವೇನೂ ಇಲ್ಲ. ಯೇಸು ಅವರ ಕೆಲವು ಶಿಷ್ಯರೊಂದಿಗೆ ತೋಟದಲ್ಲಿ ಏಕಾಂತವಾಗಿದ್ದರು ಎಂದು ನಾವು ನೆನಪಿಸಿಕೊಳ್ಳೋಣ. ಯೇಸುವನ್ನು ಹಿಡಿಯಲು ಎಷ್ಟು ಸೈನಿಕರು ಬೇಕು? ಎಂದು ನೀವು ನೆನೆಸುತ್ತೀರಾ? ನೂರು, ಇನ್ನೂರು ಅಥವಾ ಹೆಚ್ಚೆಂದರೆ ಐನೂರು! ಆದರೆ **"12 ಗಣಗಳಿಗಿಂತಲೂ ಹೆಚ್ಚು ಮಂದಿ ದೇವದೂತರನ್ನು"** ಸೂಚಿಸುವ ಯೇಸುವಿನ ಚಿತ್ರಣದ ಹೇಳಿಕೆಯನ್ನು ನೋಡಿರಿ, ಯೇಸು ತನ್ನ ತಂದೆಯಿಂದ ಕೇಳುವದಾದರೆ, ಅವರ ಲೆಕ್ಕದಲ್ಲಿದ್ದ ದೂತರ ಸಂಖ್ಯೆಯನ್ನು ಎಣಿಸಲು ನಾನು ನಿಮಗೆ ಸಹಾಯ ಮಾಡುತ್ತೇನೆ. ಒಂದು ಗಣ ಎಂದರೆ ಆರು ಸಾವಿರ (6,000) ದೇವದೂತರು. ಹನ್ನೆರಡು ಗಣ ಎಂದರೆ 6,000 × 12 = 72,000. ಈ ಪರಿಸ್ಥಿತಿಯಲ್ಲಿ, ತಪ್ಪಿಸಿಕೊಳ್ಳುವ ಸಲುವಾಗಿ, ತಾನು 72,000 ಕ್ಕಿಂತಲೂ ಹೆಚ್ಚು ದೇವದೂತರನ್ನು ಪಡೆಯುತ್ತೇನೆ ಎಂದು ಯೇಸು ಹೇಳುತ್ತಾರೆ.

ಯೇಸು ಇಲ್ಲಿ ಲೆಕ್ಕವನ್ನು ತಪ್ಪಿದ್ದಾರೆ ಎಂದು ನಾವು ಯೋಚಿಸಬಹುದು. ಐನೂರು ಅಥವಾ ಸಾವಿರ ಸೈನಿಕರಿಂದ ಬಂಧಿಯಾಗುವುದರಿಂದ ತಪ್ಪಿಸಿಕೊಳ್ಳಲು, 72,000 ಕ್ಕಿಂತಲೂ ಹೆಚ್ಚು ದೇವದೂತರನ್ನು ಯೇಸು ಅಧಿಕಾರದಲ್ಲಿ ಹೊಂದಿದ್ದರು. ಯೇಸುವಿನಿಂದ ತಪ್ಪು ಎಣಿಕೆಯಾಗಿತ್ತು ಎಂದು ನೀವು ನೆನೆಸುತ್ತೀರ? ಇಲ್ಲ, ಎಂದಿಗೂ ಇಲ್ಲ ಮತ್ತು ಇದರ ಹಿಂದಿನ ಕಾರಣವೇನೆಂದರೆ ಯೇಸು ನಾವು ಯೋಚಿಸುವ ರೀತಿಯಲ್ಲಿ ಎಂದಿಗೂ ಯೋಚಿಸಲಿಲ್ಲ! ಯಾವಾಗಲೂ ಮೊದಲಿಗೆ ಭೌತಿಕವಾಗಿ ಅವಲಂಬಿತವಾಗುವ ನಮ್ಮ ರೀತಿಯ ಬದಲಾಗಿ ಯೇಸು ಯಾವಾಗಲೂ ಆತ್ಮೀಕ ಪ್ರಪಂಚದ ಮೂಲಕವಾಗಿ ನೋಡಿದರು ಮತ್ತು ನಡೆದುಕೊಂಡರು. ನಮ್ಮ ಮನಸ್ಸನ್ನು ಪುನಃಶ್ಚೇತನಗೊಳಿಸಲು ಮತ್ತು ಒಬ್ಬ ದೇವರ ದೂತನ ಸಾಮರ್ಥ್ಯದ ಬಗ್ಗೆ ತಿಳಿಯಲು, ನಾವು 2 ಅರಸುಗಳು 19:35ನ್ನು ಗಮನಿಸೋಣ. ಅದೇ ರಾತ್ರಿಯಲ್ಲಿ ಯೆಹೋವನ **ಒಬ್ಬ ದೂತನು** ಹೊರಟುಬಂದು ಅಶ್ಶೂರ್ಯರ ಪಾಳೆಯದಲ್ಲಿ ಲಕ್ಷದ ಎಂಭತ್ತೈದು ಸಾವಿರ ಮಂದಿ (185,000) ಸೈನಿಕರನ್ನು ಸಂಹರಿಸಿದನು, ಎಂದು ಬರೆದಿದೆ. ಇಲ್ಲಿ ಐನೂರು ಅಥವಾ ಸಾವಿರ ಜನರನ್ನು ಬಂಧಿಸಲು **ಕೇವಲ ಒಬ್ಬ ದೇವದೂತನೂ ಸಾಕಷ್ಟಾಯಿತು.** ಒಬ್ಬ ದೇವರ ದೂತನು ಅಶ್ಶೂರ್ಯರದ ಪಾಳೆಯದಲ್ಲಿ ಪ್ರಬಲ ಕಾರ್ಯವನ್ನು ಮಾಡಬಹುದಾದರೆ, ಯೇಸುವಿಗೆ ಯಾಕೆ 72,000 ಕ್ಕಿಂತಲೂ ಹೆಚ್ಚು ದೇವದೂತರು ಬೇಕು? ಯೇಸು ಕ್ರಿಸ್ತನು ಅವರ ಮಾತಿನ ಮುಖಾಂತರ ಏನನ್ನು ತಿಳಿಸಲು ಪ್ರಯತ್ನಿಸುತ್ತಿದ್ದಾರೆ?

ಆತ್ಮೀಕ ವ್ಯಕ್ತಿಗೆ ಇದರ ಕಾರಣವನ್ನು ಗ್ರಹಿಸಲು ಸುಲಭ, ಆದರೆ ಸಾಮಾನ್ಯ ಮನುಷ್ಯನಿಗೆ ಅರ್ಥಮಾಡಿಕೊಳ್ಳಲು ಕಷ್ಟ. ಯೇಸು ಭೌತಿಕ ಲೋಕಕ್ಕಿಂತ ಹೆಚ್ಚಾಗಿ ಆತ್ಮೀಕ ಲೋಕವನ್ನು ದೃಷ್ಟಿಸುವವರಾಗಿದ್ದರು/ರುತ್ತಿದ್ದರು. ಸೈತಾನ ಮತ್ತು ಅವನ ಸಹ ದೂತರು

"ಇವನೇ ಭಾದ್ಯಸ್ಥನು, ಬನ್ನಿ ಇವನನ್ನು ಕೊಂದು ಹಾಕೋಣ, ಇವನ ಸ್ವಾಸ್ಥ್ಯವನ್ನು ನಾವೇ ತೆಗೆದುಕೊಳ್ಳೋಣ" (ಮತ್ತಾ 21:38) ಎಂದು ಹೇಳುವ ಮೂಲಕ ಏನನ್ನು ತಿಳಿಸುತ್ತಿದ್ದಾರೆ ಎನ್ನುವುದನ್ನು ನಮ್ಮ ಕರ್ತನಿಗೆ ಮುಂಗಡವಾಗಿಯೇ ನೋಡಲು ಸಾಧ್ಯವಾಯಿತು. ನಮ್ಮಲ್ಲಿ ಬಹುತೇಕರಿಗೆ ಈ ದೃಷ್ಟಾಂತದಲ್ಲಿನ ಈ ನಿರ್ಧಿಷ್ಟ ವಾಕ್ಯದ ಅರ್ಥ ತಿಳಿದಿಲ್ಲ. (ಮತ್ತಾ 21:33-41)

"ಒಬ್ಬ ಮನೆಯ ಯಜಮಾನನಿದ್ದನು. ಅವನು ಒಂದು ದ್ರಾಕ್ಷೇತೋಟವನ್ನು ಮಾಡಿ ಅದರ ಸುತ್ತಲೂ ಬೇಲಿಹಾಕಿಸಿ ಅದರಲ್ಲಿ ದ್ರಾಕ್ಷೆಯ ಅಲೆಯನ್ನು ಮಾಡಿಸಿ ಹೊಡೆಯನ್ನು ಕಟ್ಟಿಸಿ ಒಕ್ಕಲಿಗರಿಗೆ ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋದನು. ಫಲಕಾಲ ಹತ್ತರವಾದಾಗ ತನಗೆ ಬರಬೇಕಾದ ಹಣ್ಣುಗಳನ್ನು ತೆಗೆದುಕೊಂಡು ಬರುವದಕ್ಕಾಗಿ ಆ ಒಕ್ಕಲಿಗರ ಬಳಿಗೆ ತನ್ನ ಆಳುಗಳನ್ನು ಕಳುಹಿಸಲು ಆ ಒಕ್ಕಲಿಗರು ಅವನ ಆ ಆಳುಗಳನ್ನು ಹಿಡುಕೊಂಡು ಒಬ್ಬನನ್ನು ಹೊಡೆದರು, ಒಬ್ಬನನ್ನು ಕಡಿದುಹಾಕಿದರು, ಒಬ್ಬನನ್ನು ಕಲ್ಲೆಸೆದು ಕೊಂದರು. ಪುನಃ ಮೊದಲಿನವರಿಗಿಂತ ಹೆಚ್ಚುಮಂದಿ ಆಳುಗಳನ್ನು ಕಳುಹಿಸಿದನು, ಅವರಿಗೂ ಹಾಗೆಯೇ ಮಾಡಿದರು. ಕಡೆಯಲ್ಲಿ ನನ್ನ ಮಗನಿಗಾದರೂ ಮರ್ಯಾದೆ ತೋರಿಸಾರು ಅಂದುಕೊಂಡು ತನ್ನ ಮಗನನ್ನು ಅವರ ಬಳಿಗೆ ಕಳುಹಿಸಿದನು." ಆದರೆ ಒಕ್ಕಲಿಗರು ಮಗನನ್ನು ಕಂಡಾಗ, ಮತ್ತಾಯ 21:38ರಲ್ಲಿ ಬರೆದಿರುವ ಆ ಮಾತುಗಳನ್ನು ಆಡಿದರು.

**"ಇವನೇ ಭಾದ್ಯಸ್ಥನು, ಬನ್ನಿ ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ಥ್ಯವನ್ನು ನಾವೇ ತೆಗೆದುಕೊಳ್ಳೋಣ." (ಮತ್ತಾ 21:38)**

ನಂತರ, ಅವನನ್ನು ದ್ರಾಕ್ಷೇತೋಟದಿಂದ ಹೊರಕ್ಕೆ ದೊಬ್ಬಿದರು ಮತ್ತು ಕೊಂದುಹಾಕಿದರು. ಈ ದೃಷ್ಟಾಂತದಲ್ಲಿ, ಮನೆಯ ಯಜಮಾನನು ದೇವರು; ಆತನ ಸೇವಕರು ದೇವರ ಪ್ರವಾದಿಗಳು; ಮತ್ತು ಮಗನು ಯೇಸು ಕ್ರಿಸ್ತನು. "ಇವನೇ ಭಾದ್ಯಸ್ಥನು, ಬನ್ನಿ ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ಥ್ಯವನ್ನು ನಾವೇ ತೆಗೆದುಕೊಳ್ಳೋಣ" ಎಂದು ಹೇಳುವ ಒಕ್ಕಲಿಗನು ಯಾರು? ಅದು ಯೆಹೂದ್ಯರು ಅಥವಾ ಅನ್ಯಜನರು ಎಂದು ನಾವು ಯೋಚಿಸಿದರೆ, ನಾವು ತಪ್ಪಾಗಿದ್ದೇವೆ. ಯೆಹೂದ್ಯರು ಅಥವಾ ಅನ್ಯರು ಇದನ್ನು ಹೇಳಿದರು ಎಂದು ಎಲ್ಲಿಯೂ ನಾವು ಪರಿಶುದ್ಧ ವಾಕ್ಯದಲ್ಲಿ ಓದಲಿಲ್ಲ. ಹಾಗಾದರೆ ಆ ಒಕ್ಕಲಿಗನು ಯಾರು?

ಆತ್ಮೀಕ ಪ್ರಪಂಚದಲ್ಲಿ ಲೂಸಿಫರ ಮತ್ತು ಅವನ ಸಹವರ್ತಿಗಳೇ ಆ ಒಕ್ಕಲಿಗರು. ಸೈತಾನ ಮತ್ತು ಅವನ ಗುಂಪು ಈ ಭೌತಿಕ ಪ್ರಪಂಚದಲ್ಲಿ ಯೇಸುವನ್ನು ಕೊಲ್ಲಲು ಯೆಹೂದ್ಯರು ಮತ್ತು ಅನ್ಯಜನರನ್ನು ಆಯುಧವಾಗಿ ಬಳಸುತ್ತಿದ್ದರು. ಈ ಭೌತಿಕ ಲೋಕದಲ್ಲಿನ ಜನರೊಂದಿಗೆ ನಮಗೆ ಯುದ್ಧವಿಲ್ಲ. ಆತ್ಮೀಕ ಪ್ರಪಂಚದಲ್ಲಿ ಸೈತಾನ ಮತ್ತು ಅವನ ಸೇನೆಯೊಂದಿಗೆ ನಾವು ಯುದ್ಧಮಾಡುತ್ತೇವೆ. ಆದುದರಿಂದಲೇ ದೇವರ ವಾಕ್ಯವು ಹೇಳುತ್ತದೆ, **"ನಾವು ಹೋರಾಡುವುದು ಮನುಷ್ಯಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ**

**ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ." (ಎಫೆ 6:12)**

ಪ್ರಿಯ ಓದುಗರೇ, ಯೇಸು ಯಾಕೆ 72,000 ದೇವದೂತರು ತನ್ನನ್ನು ಬಿಡುಗಡೆ ಮಾಡಲು ಸೂಚಿಸಿದರು ಎಂಬ ವಿಷಯಕ್ಕೆ ನಾನು ಮರಳುತ್ತಿದ್ದೇನೆ. ಯೇಸು ಇದನ್ನು ಹೇಳಿದರ ಕಾರಣವೇನೆಂದರೆ "ಇವನೇ ಭಾದ್ಯಸ್ಥನು, ಬನ್ನಿ ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ಥ್ಯವನ್ನು ನಾವೇ ತೆಗೆದುಕೊಳ್ಳೋಣ" ಎಂದು ಹೇಳುತ್ತಾ ಆತನ ವಿರುದ್ಧವಾಗಿ ಲೂಸಿಫರ ಮತ್ತು ಅವನ ದುಷ್ಟದೂತರು ಬರುವುದನ್ನು ಕಂಡರು. ಅದು ಅಂಧಕಾರದ ದೊರೆತನದ ಕಾಲ ಎಂದು ಯೇಸು ಸ್ಪಷ್ಟವಾಗಿ ತಿಳಿದಿದ್ದರು.

**"ನಾನು ದಿನಾಲೂ ದೇವಾಲಯದಲ್ಲಿ ನಿಮ್ಮ ಸಂಗಡ ಇದ್ದಾಗ ನೀವು ನನ್ನ ಮೇಲೆ ಕೈಹಾಕಲಿಲ್ಲ; ಆದರೆ ಇದು ನಿಮ್ಮ ಕಾಲ, ಇದು ಅಂಧಕಾರದ ದೊರೆತನ ಎಂದು ಹೇಳಿದನು." (ಲೂಕ 22:53)**

ಯೇಸು ಎಂದಿಗೂ ಭೌತಿಕ ಯುದ್ಧದ ಕುರಿತು ಹೇಳಲಿಲ್ಲ ಮತ್ತು ಕಾವಲುಗಾರರ ಮೇಲೆ ಜಯ ಹೊಂದಲು ಅಲ್ಪ ಚಿಂತಿತನಾಗಿದ್ದರು. ಯೇಸು ಆತ್ಮೀಕ ಪ್ರಪಂಚದಲ್ಲಿ ದುಷ್ಟ ರಾಜ್ಯವನ್ನು ಕಂಡರು ಮತ್ತು ಸೈತಾನನನ್ನು ಸೋಲಿಸುವ ಮುಖಾಂತರ ತನ್ನ ಉದ್ದೇಶವನ್ನು ನೆರವೇರಿಸಬೇಕು ಎಂದು ಅರ್ಥಮಾಡಿಕೊಂಡರು. ಸ್ವರ್ಗೀಯ ಜ್ಞಾನದಲ್ಲಿ ಕಾರ್ಯಮಾಡಲು ಮತ್ತು ಸೈತಾನನ ರಾಜ್ಯವನ್ನು ತನ್ನ ಮರಣದ ಮೂಲಕ ನಾಶಮಾಡಲು ಅವರು ಬಯಸಿದರು. (ಇಬ್ರಿ 2:14)

ಪ್ರಿಯ ಓದುಗರೇ, ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿದ ಜನರಾಗಿ, ಈಗ ನಮ್ಮ ಬಹುತೇಕ ಕಾರ್ಯಗಳು ಆತ್ಮೀಕ ಮಂಡಲದಲ್ಲಾಗಿರಬೇಕು. ಯಾವಾಗ ನಾವು ಕಾಣದ ಮಂಡಲದಲ್ಲಿ ಬದಲಾವಣೆ ಮಾಡಿಕೊಳ್ಳುತ್ತೇವೋ, ಆಗ ಭೌತಿಕ ಪ್ರಪಂಚವನ್ನು ಬದಲಾಯಿಸಲು ನಮಗೆ ಸುಲಭವಾಗುತ್ತದೆ. ಆತ್ಮೀಕ ಪ್ರಪಂಚದಲ್ಲಿ ದೇವರ ಕಾರ್ಯವಿಲ್ಲದೇ, ಭೌತಿಕ ಪ್ರಪಂಚದಲ್ಲಿ ನಮ್ಮ ಎಲ್ಲಾ ಕಾರ್ಯಗಳು ವ್ಯರ್ಥವಾಗಿವೆ. **"ಯೆಹೋವನು ಮನೇ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವುದು ವ್ಯರ್ಥ; ಯೆಹೋವನು ಪಟ್ಟಣವನ್ನು ಕಾಯದಿದ್ದರೆ ಕಾವಲುಗಾರರು ಅದನ್ನು ಕಾಯುವದು ವ್ಯರ್ಥ." (ಕೀರ್ತ 127:1)**

ಜಯಭರಿತ ಜೀವಿತಕ್ಕೆ, ನಮ್ಮ ಹೃದಯದಲ್ಲಿ ವಾಸಿಸುವ ಪರಿಶುದ್ಧಾತ್ಮನಿಂದ ನೀಡಲ್ಪಟ್ಟ ದೇವರ ವಾಕ್ಯದ ಪ್ರಕಾರ "ಆತ್ಮೀಕ ದೇವರ ರಾಜ್ಯದಿಂದ" ನಮ್ಮ ಕಾರ್ಯಗಳು ಪ್ರಾರಂಭವಾಗಬೇಕು. ಹೀಗಾಗಿ ಯೇಸು ಮತ್ತು ಪೌಲನಂತೆ, ನಮ್ಮ ಜೀವಿತದಲ್ಲಿ ಲೋಕ ಎರಡನೇಯ ಮತ್ತು ದೇವರ ರಾಜ್ಯ ಮೊದಲನೇಯದಾಗಿರಲಿ.

## ಎ) ಆತ್ಮದಿಂದ ಆರಾಧಿಸುವುದು ಮತ್ತು ಬುದ್ಧಿಯಿಂದ ಆರಾಧಿಸುವುದು

ಯೋಹಾನನು ಬರೆದ ಸುವಾರ್ತೆಯ ಪ್ರಕಾರ, ಅಧ್ಯಾಯ 4ರಲ್ಲಿ, ಸಮಾರ್ಯದ ಹೆಂಗಸು ಯೇಸುವನ್ನು ಕೇಳಿದಳು,

**"ನಮ್ಮ ಹಿರಿಯರು ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತಿದ್ದರು; ಆದರೆ ನೀವು ಆರಾಧನೆಮಾಡತಕ್ಕ ಸ್ಥಳವು ಯೆರೂಸಲೇಮಿನಲ್ಲಿ ಅದೆ ಅನ್ನುತ್ತೀರಿ." (ಯೋಹಾ 4:20)**

ನಿಖರವಾಗಿ ಎಲ್ಲಿ ದೇವರನ್ನು ಅವರು ಆರಾಧಿಸಬೇಕು ಎಂದು ಯೇಸುವನ್ನು ಆ ಹೆಂಗಸು ಕೇಳುತ್ತಿರುವಂತೆ ಅನ್ನಿಸುತ್ತದೆ. ಯೇಸುವಿನ ಉತ್ತರದ ಸಾರಾಂಶವೇನಾಗಿತ್ತೆಂದರೆ, ಬುದ್ಧಿಯಿಂದ ಆರಾಧಿಸುವುದು ಅಂತ್ಯವಾಗಲಿದೆ ಮತ್ತು ಸತ್ಯವಾಗಿ ಆರಾಧಿಸುವವರಿಗೆ ದೇವರನ್ನು ಆತ್ಮದಲ್ಲಿ ಆರಾಧಿಸಲು ಸಮಯವು ಬಂದಿದೆ ಎಂಬುದಾಗಿ.

**ಯೋಹಾನ 4:21-23ರಲ್ಲಿ, ಯೇಸು ಆಕೆಗೆ ಹೇಳುತ್ತಾರೆ, "ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ, ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ. ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ. ಆದದರಿಂದ ನಾವು ಅರಿತಿರುವುದನ್ನೇ ಆರಾಧಿಸುವವರಾಗಿದ್ದೇವೆ; ನೀವು ಅರಿಯದೆ ಇರುವಂಥದನ್ನು ಆರಾಧಿಸುವವರು. ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ."**

ಬೇರೆ ಮಾತುಗಳಲ್ಲಿ ಹೇಳುವದಾದರೆ, ಲೋಕವು ಅದರ ಭೌತಿಕ ತಿಳುವಳಿಕೆಯಿಂದ ಗ್ರಹಿಸುವುದಲ್ಲ ನಿಜವಾದ ಆರಾಧನೆ, ಬದಲಿಗೆ ಆತ್ಮೀಕ ತಿಳಿಯುವಳಿಕೆಯಿಂದ, ದೇವರನ್ನು ಆತ್ಮದಲ್ಲಿ ಆರಾಧಿಸುವುದು ನಿಜವಾದ ಆರಾಧನೆ ಎಂದು ಯೇಸು ವಿವರಿಸುತ್ತಾರೆ. ಪರಿಶುದ್ಧಾತ್ಮನು ನಮಗೆ ನೀಡುವ ವಾಕ್ಯದಿಂದ ನಮ್ಮ ಆತ್ಮೀಕ ಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈ ವಾಕ್ಯಗಳು ನಮ್ಮ ಹೃದಯದ ಕಣ್ಣುಗಳನ್ನು ತೆರೆಯುತ್ತವೆ, ಅಂದರೆ ನಮ್ಮ ಮನಸ್ಸನ್ನು ತೆರೆಯುತ್ತವೆ. ದೇವರ ವಾಕ್ಯದ ಮೂಲಕ, ನಮ್ಮ ಆತ್ಮೀಕ ಶರೀರ ವಾಸಿಸುವಲ್ಲಿ, ನಮ್ಮ ಆತ್ಮೀಕ ಸ್ಥಿತಿಯನ್ನು ನಮಗೆ ನೋಡಲು ಆಗ ಸಾಧ್ಯವಾಗುತ್ತದೆ ಮತ್ತು ದೇವರನ್ನು ಆತ್ಮದಲ್ಲಿ ಆರಾಧಿಸಲು ಸಾಧ್ಯವಾಗುತ್ತದೆ. ಈಗಿನಿಂದ, ನಿಜವಾದ ಆರಾಧನೆಗೆ ಮಹತ್ವವನ್ನು ನೀಡಲು ನಾವು ಹೋರಾಡೋಣ. ಅದಾಗಿದೆ ದೇವರನ್ನು ಸತ್ಯದಲ್ಲಿ ಆರಾಧಿಸುವುದು ಮತ್ತು ಆತ್ಮದಲ್ಲಿ ಆರಾಧಿಸುವುದು.

## ಏ) ಆತ್ಮದಲ್ಲಿ ಆರಾಧಿಸುವುದು ಹೇಗೆ?

ಪರಿಶುದ್ಧಾತ್ಮನ ಸಹಾಯದಿಂದ ಮಾತ್ರವೇ ನಮಗೆ ದೇವರನ್ನು ಸತ್ಯದಲ್ಲಿ ಮತ್ತು ಆತ್ಮದಲ್ಲಿ ಆರಾಧಿಸಲು ಸಾಧ್ಯ. ಮೊದಲಿಗೆ ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಬೇಕು ಮತ್ತು ನಂತರ ವಾಕ್ಯದ ಮೂಲಕ ಆತನ ಪ್ರಸ್ತುತ ಸ್ಥಿತಿ ಅಥವಾ ಎಲ್ಲಿ ಆತನ ಆತ್ಮೀಕ ಶರೀರವಿದೆ ಎಂದು ಅರ್ಥಮಾಡಿಕೊಳ್ಳಬೇಕು. ನಮ್ಮನ್ನು ನಾವು ತಗ್ಗಿಸಿಕೊಳ್ಳುವ ಮೂಲಕ ಮತ್ತು ದೇವರಾತ್ಮನಿಗೆ ಒಪ್ಪಿಸಿಕೊಳ್ಳುವ ಮೂಲಕ ನಾವು ದೇವರನ್ನು ಸ್ತುತಿಸಲು ಪ್ರಾರಂಭಿಸಬೇಕು. ಪರಿಶುದ್ಧಾತ್ಮನು ನಮ್ಮ ಆತ್ಮೀಕ ಶರೀರವನ್ನು ಉಪಯೋಗಿಸಲು ಪ್ರಾರಂಭಿಸುತ್ತಾರೆ. ಆಗ ಅದ್ಭುತವಾಗಿ, ಆರಾಧನೆ ಆತ್ಮದಲ್ಲಿ ಪ್ರಕಟವಾಗುತ್ತದೆ. ಇದು ನಮ್ಮ ಭೌತಿಕ ಶರೀರ ಮತ್ತು ನಮ್ಮ ಪರಿಸ್ಥಿತಿಯ ಮೇಲೂ ಇದು ಪ್ರತಿಬಿಂಬಿಸುತ್ತದೆ. ಕೆಲವರು ಅವರಿಗೆ ತಿಳಿಯದ ಭಾಷೆಯಲ್ಲಿ ಮಾತನಾಡುತ್ತಾರೆ, ಅದನ್ನು ಅವರು ಅವರ ಬುದ್ಧಿಯಿಂದ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಕೆಲವರು ಭಾಷೆಯ ಅರ್ಥವನ್ನು ಹೊಂದುತ್ತಾರೆ. ಪರಿಶುದ್ಧಾತ್ಮನು ಬಯಸುವಂತೆ ಕೆಲವರು ಆತ್ಮ ಪರವಶರಾಗುತ್ತಾರೆ, ಕೆಲವರು ದರ್ಶನಗಳನ್ನು ಕಾಣುತ್ತಾರೆ (1 ಕೊರಿ 12:11). ದೇವರ ರಾಜ್ಯದಲ್ಲಿ, ಆತ್ಮದಲ್ಲಿ ಆರಾಧಿಸುವುದರಿಂದ ನಾವು ಅದರ ಪ್ರತಿಫಲವನ್ನು ಭೌತಿಕ ಪ್ರಪಂಚದಲ್ಲಿ ಕಾಣುತ್ತೇವೆ.

ಈಗ, ಒಂದು ಪ್ರಶ್ನೆ ಮೇಲೇಳಬಹುದು. "ನನ್ನ ಆತ್ಮೀಕ ಸ್ಥಿತಿಯೇನು? ನಮ್ಮ ಪ್ರಸ್ತುತ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು, ಇದು ಏನನ್ನು ತಿಳಿಸುತ್ತದೆ?"

ನಮ್ಮ ಪ್ರಾಣ, ಮತ್ತು ಆತ್ಮದ ಮಧ್ಯೆ ಇಡಲ್ಪಟ್ಟಿರುವ ಪರದೆಯ ಕಾರಣದಿಂದ, ಇಂದು ನಾವು ನಮ್ಮ ಆತ್ಮೀಕ ಸ್ಥಿತಿಯ ಕುರಿತ ಜ್ಞಾನದಲ್ಲಿ ಕೊರತೆಯುಳ್ಳವರಾಗಿದ್ದೇವೆ (ಚಿತ್ರ 30). ನಾವು ನಮ್ಮ ಆತ್ಮೀಕ ಸ್ಥಿತಿಯನ್ನು ದೇವರ ವಾಕ್ಯವೆಂಬ ಕನ್ನಡಿಯ ಮುಖಾಂತರ ನೋಡುತ್ತೇವೆ. ವಾಹನವನ್ನು ಚಲಾಯಿಸುವ ವ್ಯಕ್ತಿಯು ಹಿಂದಿರುವ ಚಿತ್ರಣಗಳನ್ನು ನೋಡಲು ಅವನ ದೃಷ್ಟಿಯನ್ನು ಹಿಂದಕ್ಕೆ ನೆಟ್ಟಿರುವುದಿಲ್ಲ, ಅದರಂತೆಯೇ ನಮಗೆ ಸಂಬಂಧಿಸಿದ ಸಂಗತಿಗಳನ್ನು ಭಾಗಶಃ ತಿಳಿದುಕೊಳ್ಳುವಂತೆಯೇ, ದೇವರ ವಾಕ್ಯವೆಂಬ ಕನ್ನಡಿ ನಮಗೆ ನೀಡಲ್ಪಟ್ಟಿದೆ.

**"ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ [ದೇವರ ಮುಖವು] ನಮಗೆ ಮೊಬ್ಬಾಗಿ ಕಾಣಿಸುತ್ತದೆ; ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈಗ ಸ್ವಲ್ಪಮಾತ್ರ ನನಗೆ ತಿಳಿದದೆ; ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು." (1 ಕೊರಿ 13:12)**

ಅದಕ್ಕಾಗಿಯೇ ಕೊರಿಂಥದವರಿಗೆಯಲ್ಲಿ, ಈಗ ನಮಗೆ ಸ್ವಲ್ಪ ತಿಳಿದದೆ, ಎಂದು ಬರೆದಿದೆ. ಯಾವಾಗ ಸಮಯದ ಪರಿಪೂರ್ಣತೆ ಬರುತ್ತದೋ, ಅಂದರೆ ಯಾವಾಗ ದೇವರ ರಾಜ್ಯ ಸ್ಥಾಪಿಸಲ್ಪಡುತ್ತದೋ (1 ಕೊರಿ 13:9-10) ಅವಾಗ ದೇವರ ರಾಜ್ಯದ ಕುರಿತು ಜ್ಞಾನದ ವಾಕ್ಯ ಅಥವಾ ಅಪೂರ್ಣ ಪ್ರವಾದನೆಯ ಅಗತ್ಯವಿಲ್ಲ. ಕಾರಣ ನಾವು ದೇವರ ರಾಜ್ಯವನ್ನು ನಮ್ಮ ಆತ್ಮೀಕ ಕಣ್ಣುಗಳಿಂದ ನೇರವಾಗಿ ನೋಡುತ್ತೇವೆ. ನಮಗೆ ಹೇಗೆ ತಿಳಿದಿರಬೇಕೋ


ಹಾಗೆ ನಮಗೆ ತಿಳಿಯಲ್ಪಡುತ್ತದೆ. ಅಲ್ಲಿಯವರೆಗೆ ದೇವರ ವಾಕ್ಯವೆಂಬ ಕನ್ನಡಿಯ ಮೂಲಕ ಆತ್ಮೀಕ ಪ್ರಪಂಚವನ್ನು ನಾವು ನೋಡಬೇಕು ಮತ್ತು ನಮ್ಮ ಆತ್ಮೀಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು.

**"ಅಪೂರ್ಣವಾಗಿ ತಿಳುಕೊಳ್ಳುತ್ತೇವೆ, ಅಪೂರ್ಣವಾಗಿ ಪ್ರವಾದಿಸುತ್ತೇವೆ. ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವದು." (1 ಕೊರಿ 13:9-10)**

## ಐ) ಆತ್ಮೀಕ ಸ್ಥಿತಿ

ಯೇಸು ಕ್ರಿಸ್ತನ ರಕ್ತದಿಂದ ಬಿಡಿಸಲ್ಪಟ್ಟ ವ್ಯಕ್ತಿಯ ಆತ್ಮೀಕ ಸ್ಥಿತಿಯನ್ನು ಉಲ್ಲೇಖಿಸುತ್ತಾ, ಇಬ್ರಿಯ ಅಧ್ಯಾಯ 12ರಲ್ಲಿ ತುಂಬಾ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ನಾವೆಲ್ಲರೂ ಎಲ್ಲಿಯವರೆಗೂ ಬಂದಿದ್ದೇವೆ ಎಂದು ನಮಗೆ ಹೇಳುತ್ತಾ ಏಳು ಆತ್ಮೀಕ ಸ್ಥಿತಿಯನ್ನು ಅಲ್ಲಿ ಉಲ್ಲೇಖಿಸಲಾಗಿದೆ.

**"ಆದರೆ ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲ ಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ." (ಇಬ್ರಿಯ 12:22-24)**




*ವಿಶ್ವಾಸಿಯ ಐಹಿಕ ಮತ್ತು ಸ್ವರ್ಗೀಯ ಸ್ಥಿತಿಗತಿಗಳು*

**ಚಿತ್ರ 1**

**ಮೊದಲನೇ ಸ್ಥಿತಿ**

ನಾವು ಜೀವಂತ ದೇವರ ಪಟ್ಟಣದಲ್ಲಿ ಅಂದರೆ ಪರಲೋಕದ ಯೆರೂಸಲೇಮಿನಲ್ಲಿ ನಿಂತಿದ್ದೇವೆ. ಇಂದು ನಾವು ಪ್ರಪಂಚದಲ್ಲಿ ಕಾಣುವ ಭೌತಿಕ ಯೆರೂಸಲೇಮಲ್ಲ, ಇದು ಪರಲೋಕದ್ದು (ಇಬ್ರಿ 12:22).

**ಎರಡನೇ ಸ್ಥಿತಿ**

ಕೋಟ್ಯಾನುಕೋಟಿ ದೇವದೂತರ ಮಧ್ಯೇ ನಾವು ಬಂದಿದ್ದೇವೆ, ನಮ್ಮ ರಕ್ಷಕನು ಅಷ್ಟು ದೊಡ್ಡವನು ಎಂದು ನಾವು ನೆನಪಿನಲ್ಲಿಡಬೇಕು (ಇಬ್ರಿ 12:22).

**ಮೂರನೇ ಸ್ಥಿತಿ**

ಸತ್ತವರೊಳಗೆ ಮೊದಲು ಎಬ್ಬಿಸಲ್ಪಟ್ಟ ಯೇಸು ಕ್ರಿಸ್ತನ ಸಭೆಯೊಳಗೆ ನಾವು ಬಂದಿದ್ದೇವೆ. ನಮ್ಮ ಹೆಸರು ಪರಲೋಕದಲ್ಲಿ ಬರೆಯಲ್ಪಟ್ಟಿದೆ. ಇದು ಪರಲೋಕದ ಸಾಮಾನ್ಯ ಸಭೆಯೂ ಹೌದು (ಇಬ್ರಿ 12:23).

**ನಾಲ್ಕನೇ ಸ್ಥಿತಿ**

ದೇವರು, ಎಲ್ಲರ ನ್ಯಾಯಾಧಿಪತಿ, ಅವರೂ ಸಹ ಇದ್ದಾರೆ (ಇಬ್ರಿ 12:23).

**ಐದನೇ ಸ್ಥಿತಿ**

ಅವರ ಭೌತಿಕ ಪ್ರಪಂಚದ ಜೀವಿತದಲ್ಲಿ, ಒಳ್ಳೆಯ ಓಟವನ್ನು ಓಡಿದಂತಹ ಮತ್ತು ದೇವರ ಚಿತ್ತವನ್ನು ಮಾಡುವ ಮುಖಾಂತರ ಪರಲೋಕಕ್ಕೆ ಹೋದಂತಹ ಕೆಲವು ಪುರುಷರ ಆತ್ಮಗಳ ಮಧ್ಯಕ್ಕೆ ನಾವು ಬಂದಿದ್ದೇವೆ. ಅಬ್ರಹಾಮನು ಇದ್ದಾನೆ, ಯೆಹೋಶುವನು ಇದ್ದಾನೆ, ದಾವೀದನು ಇದ್ದಾನೆ ಮತ್ತು ಶುದ್ಧೀಕರಿಸಲ್ಪಟ್ಟ ಎಲ್ಲಾ ಪುರುಷರ ಆತ್ಮಗಳು ಮಾತ್ರ ಇವೆ. ನಾವೂ ಸಹ ಅಲ್ಲಿದ್ದೇವೆ; ಆದರೆ ನಮ್ಮ ಶುದ್ಧೀಕರಣ ಇನ್ನೂ ಮುಗಿದಿಲ್ಲ, ಅದು ಇನ್ನೂ ನಡೆಯುತ್ತಿದೆ. ನಾವು ಯೇಸು ಕ್ರಿಸ್ತನ ಸಭೆಯಲ್ಲಿದ್ದೇವೆ (ಇಬ್ರಿ 12:23).

**ಆರನೇ ಸ್ಥಿತಿ**

ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಇದ್ದಾರೆ. ನಮಗೆ ಮಧ್ಯಸ್ಥಿಕೆ ವಹಿಸುತ್ತಾ ಕ್ರಿಸ್ತನು ದೇವರ ಬಲಗಡೆಯಲ್ಲಿ ಕುಳಿತಿದ್ದಾರೆ. ನಾವು ಅಲ್ಲಿಗೆ ಬಂದಿದ್ದೇವೆ (ಇಬ್ರಿ 12:24, 7:25).

**ಏಳನೇ ಸ್ಥಿತಿ**

ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಯೇಸುವಿನ ರಕ್ತ ಇದೆ (ಇಬ್ರಿ 12:24). ನಾವು ನಮ್ಮ ಭೌತಿಕ ಶರೀರದಲ್ಲಿ, ಈ ಲೋಕದಲ್ಲಿ ಜೀವಿಸುತ್ತಾ ಮತ್ತೆ ಪಾಪ ಮಾಡಿ ಮತ್ತು ತಿಳಿಯದೆ ನಮ್ಮ ನೀತಿಯ ವಸ್ತ್ರವು ಕಲೆಯಾದರೆ, ಅಲ್ಲಿ ನಮ್ಮ ಪಾಪವನ್ನು ತೊಳೆಯಲು ಯೇಸುವಿನ ರಕ್ತವನ್ನು ನಾವು ಹೊಂದಿದ್ದೇವೆ. ನಾವು ಅಲ್ಲಿಗೆ ಬಂದಿದ್ದೇವೆ (1 ಯೋಹಾ 2:1, 1:7, ಪ್ರಕ 7:14).

**"ಯಾವನಾದರೂ ಪಾಪ ಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನೂ ಸಹ ನಿವಾರಣಮಾಡುತ್ತಾನೆ." (1 ಯೋಹಾ 2:1-2)**

**"ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ." (1 ಯೋಹಾ 1:7)**

**"ಇವರು ಮಹಾ ಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ." (ಪ್ರಕ 7:14)**

ಪ್ರಿಯ ದೇವರ ಮಗುವೇ, ನಾವು ನೋಡುವ ಜಗತ್ತು ಮತ್ತು ಅದರಲ್ಲಿರುವ ಎಲ್ಲವೂ ಒಂದು ದಿನ ನಾಶವಾಗುತ್ತದೆ. ಇದು ತಾತ್ಕಾಲಿಕ. ವಾಕ್ಯವು ಹೇಳುತ್ತದೆ, "ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು." (2 ಕೊರಿ 4:18) ಆದರೆ ನಾವು ನಮ್ಮ ಭೌತಿಕ ಕಣ್ಣುಗಳಿಂದ ಕಾಣಲಾಗದ, ಆದರೂ ನಮ್ಮ ಆತ್ಮೀಕ ಶರೀರ ಅಸ್ತಿತ್ವದಲ್ಲಿರುವ, ದೇವರ ರಾಜ್ಯವು ಶಾಶ್ವತ ಮತ್ತು ಎಂದಿಗೂ ನಶಿಸುವುದಿಲ್ಲ.

**"ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು" (2 ಕೊರಿ 4:18)**

ನಾವು ದೇವರ ರಾಜ್ಯವನ್ನು ವಾಕ್ಯವೆಂಬ ಕನ್ನಡಿಯ ಮುಖಾಂತರ ಮಾತ್ರ ನೋಡಲು ಸಾಧ್ಯ. ನಮ್ಮ ಹೊರಗಿನ ಮನುಷ್ಯನು ತಾತ್ಕಾಲಿಕ ಮತ್ತು ನಾವು ಈಗ ಕಾಣುವ ಲೋಕೀಯ ಸ್ಥಿತಿಯಲ್ಲಿ ಆ ಮನುಷ್ಯನು ಜೀವಿಸುತ್ತಾನೆ. ಆದರೆ ದಿನೇ ದಿನೇ ನೂತನವಾಗಬೇಕಿರುವ ಒಳಗಿನ ಮನುಷ್ಯನು, ನಿತ್ಯವಾದ ಆತ್ಮೀಕ ಲೋಕದಲ್ಲಿದ್ದಾನೆ.

## ಒ) ಕ್ರಿಸ್ತನು ಮಹತ್ವ ನೀಡಿದ್ದು - ಮೊದಲು ದೇವರ ರಾಜ್ಯಕ್ಕೆ

ಅನೇಕ ವಾಕ್ಯಗಳ ಮೂಲಕ, ನಮ್ಮ ಜೀವಿತದಲ್ಲಿ ಭೌತಿಕ ಪ್ರಪಂಚವನ್ನು ಎರಡನೇ ಸ್ಥಾನಕ್ಕೆ ತಳ್ಳಿ, ನಿತ್ಯವಾದ ದೇವರ ರಾಜ್ಯಕ್ಕೆ ಪ್ರಾಧಾನ್ಯತೆಯನ್ನು ನೀಡಬೇಕೆಂದು ದೇವರಾತ್ಮನು ನಮಗೆ ತೋರಿಸಿದ್ದಾರೆ. ಇದನ್ನೇ ಯೇಸು ಕ್ರಿಸ್ತನು ಲೋಕವನ್ನು ಮತ್ತು ಅದರ ಐಶ್ವರ್ಯವನ್ನು ಹುಡುಕುತ್ತಿದ್ದ ಜನರಿಗೆ, ಮೊದಲು ದೇವರ ರಾಜ್ಯವನ್ನು ಹುಡುಕುವಂತೆ ಹೇಳಿದ್ದು.

**"ಹೀಗಿರುವುದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." (ಮತ್ತಾ 6:33)**

ಮತ್ತು ಯೇಸು ಅವರ ಶಿಷ್ಯರಿಗೆ ಹೇಳಿದ್ದು, "ಲೋಕದ ಬಗ್ಗೆ ಸಾರಲು ಅಲ್ಲ, ಬದಲಿಗೆ ದೇವರ ರಾಜ್ಯದ ಬಗ್ಗೆ ಸಾರಲು."

**"ದೇವರ ರಾಜ್ಯದ ವಿಷಯವನ್ನು ಸಾರುವದಕ್ಕೂ ಅಸ್ವಸ್ಥರಾದವರನ್ನು ಸ್ವಸ್ಥಮಾಡುವದಕ್ಕೂ ಅವರನ್ನು ಕಳುಹಿಸಿದನು." (ಲೂಕ 9:2)**

ಯೇಸು ಕ್ರಿಸ್ತನಿಗೆ ದಾರಿಯನ್ನು ಸಿದ್ಧಮಾಡುವ ಸಲುವಾಗಿ ತಂದೆಯಾದ ದೇವರಿಂದ ಕಳುಹಿಸಲ್ಪಟ್ಟ ಸ್ನಾನಿಕನಾದ ಯೋಹಾನನೂ ಸಹ, ದೇವರ ರಾಜ್ಯದ ಕುರಿತು ಸಾರಿದನು. (ಮತ್ತಾ 3:2) ಯೇಸುವಿನ ಮೊದಲ ಸಂದೇಶ ಮತ್ತು ಅವರು ಪರಲೋಕಕ್ಕೆ ಏರಿಹೋಗುವ ಮೊದಲು ಸಾರಿದ ಕೊನೇಯ ಸಂದೇಶವೂ ಸಹ (ಅ.ಕೃ. 1:2-3) ದೇವರ ರಾಜ್ಯದ ಕುರಿತಾಗಿತ್ತು. (ಮತ್ತಾ 4:17)

**"ಪರಲೋಕರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ." (ಮತ್ತಾ 3:2)**

**"ಅಂದಿನಿಂದ ಯೇಸು – ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು." (ಮತ್ತಾ 4:17)**

**"ಪವಿತ್ರಾತ್ಮನ ಮೂಲಕ ಆಜ್ಞೆ ಕೊಟ್ಟು ಮೇಲಣ ಲೋಕವನ್ನೇರಿದ ದಿನದ ವರೆಗೆ ವಿವರಿಸಿದೆನಷ್ಟೆ. ಆತನು ಬಾಧೆಪಟ್ಟು ಸತ್ತ ಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೋಸ್ತಲರಿಗೆ ತೋರಿಸಿಕೊಂಡನು. ನಾಲ್ವತ್ತು ದಿವಸಗಳ ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು." (ಅ.ಕೃ 1:2-3)**

ಪ್ರಿಯ ದೇವರ ಮಗುವೇ, ನಿನಗೆ ತಾತ್ಕಾಲಿಕವಾಗಿರುವ ಲೋಕವು ಬೇಕಾ ಅಥವಾ ದೇವರೊಂದಿಗೆ ಶಾಶ್ವತವಾಗಿರುವ ಲೋಕವು ಬೇಕಾ ಎಂದು ನಿರ್ಧರಿಸುವುದು ನಿನಗೆ ಸೇರುತ್ತದೆ. ದೇವರ ರಾಜ್ಯವು ಮೊದಲನೇದಾಗಿರಲಿ ಮತ್ತು ಸರಿಯಾದ ಸ್ಥಾನವು ನೀಡಲ್ಪಡಲಿ ಮತ್ತು ತಾತ್ಕಾಲಿಕ ಪ್ರಪಂಚವು ಎರಡನೇಯದಕ್ಕೆ ತಳ್ಳಲ್ಪಡಲಿ.

**"ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು." (1 ಯೋಹಾ 2:17)**

**ಲೋಕವೇ, ನಾನು ಎರಡನೇ ಸ್ಥಾನದಲ್ಲಿ ನಿನ್ನನ್ನು ಇರಿಸುತ್ತೇನೆ!**

**ಲೋಕವೇ, ನೀನು ಎರಡನೇಯ!**

## ❖ ಪ್ರಾರ್ಥನೆ




*ಪರಲೋಕದ ತಂದೆಯೇ, ನನ್ನನ್ನು ನಾನು ನಿನ್ನ ಪವಿತ್ರ ಕರದೊಳಗೆ ತಗ್ಗಿಸಿಕೊಳ್ಳುತೇನೆ. ಭೌತಿಕ ಪ್ರಪಂಚವನ್ನು, ನಿಯಂತ್ರಿಸುವ ಆತ್ಮೀಕ ಪ್ರಪಂಚದ ನಿಜತ್ವವನ್ನು ಅರ್ಥಮಾಡಿಕೊಳ್ಳುವಂತೆ ನನಗೆ ಸಹಾಯ ಮಾಡಿದ್ದಕ್ಕಾಗಿ ನಿಮಗೆ ವಂದನೆ. ಕರ್ತನೇ, ನಿತ್ಯವಾಗಿರುವ ನಿನ್ನ ರಾಜ್ಯವನ್ನು ನಾನು ಅನುಭವಿಸುವಂತೆ ನನಗೆ ಸಾಧ್ಯಮಾಡು. ಕರ್ತನೇ, ನನ್ನ ಆಲೋಚನೆಗಳು ನಿನ್ನ ವಾಕ್ಯದ ಪ್ರಕಾರವಿರಲಿ ಮತ್ತು ನಿನ್ನ ಪರಿಶುದ್ಧಾತ್ಮನ ಸಹಾಯದಿಂದ ನಿನ್ನನ್ನು ಆತ್ಮದಲ್ಲಿ ಆರಾಧಿಸುವಂತೆ ನನಗೆ ಸಹಾಯ ಮಾಡು. ಮತ್ತೊಮ್ಮೆ ನನ್ನನ್ನು ನಾನು ಒಪ್ಪಿಸಿಕೊಡುತ್ತೇನೆ, ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು


1. ಇಂದಿನ ಬಹುತೇಕ ಜನರು ಆತ್ಮೀಕ ಲೋಕದ ಕುರಿತು ನಿರ್ಲಕ್ಷಿತರಾಗಿದ್ದಾರೆ. ಅವರು ಜೀವಿಸುವಂತಹ ಮತ್ತು ಕಾರ್ಯಮಾಡುವಂತಹ ಪ್ರಸ್ತುತ ಭೌತಿಕ ಪ್ರಪಂಚದ ಕುರಿತು ಮಾತ್ರವೇ ತಿಳಿದವರಾಗಿದ್ದಾರೆ. ಭೌತಿಕ ಪ್ರಪಂಚವನ್ನು ನಿಯಂತ್ರಿಸುವ ಆತ್ಮೀಕ ಪ್ರಪಂಚದ ಕುರಿತು ಕೆಲವೇ ಕೆಲವರು ಮಾತ್ರ ಅರಿತಿದ್ದಾರೆ.
2. ಯಾವಾಗ ನಾವು ಕಾಣದ ದೇವರ ರಾಜ್ಯವನ್ನು ಕಾಣಲು ಪ್ರಾರಂಭಿಸುತ್ತೇವೋ, ಅಂದಿನಿಂದ ಲೋಕಕ್ಕೆ ಅಸಾಧ್ಯವಾಗಿ ಕಾಣುವ ಸಂಗತಿಗಳನ್ನು ಮಾಡಲು ಪ್ರಾರಂಭಿಸುತ್ತೇವೆ.
3. ಲೋಕವೂ ಮತ್ತು ಅದರ ಆಶೆಯೂ ಗತಿಸಿಹೋಗುತ್ತವೆ; ಆದರೆ ದೇವರ ಚಿತ್ತವನ್ನು ಮಾಡುವ ಅನೇಕರೊಂದಿಗೆ ನಾವು ಹೊಸದಾಗಿ ಹುಟ್ಟಿದ ದೇವರ ರಾಜ್ಯವು, ನಿತ್ಯವಾಗಿರುತ್ತದೆ.
4. ಇಂದು ನಾವೆಲ್ಲರೂ ಒಂದೇ ಸಮಯದಲ್ಲಿ ಎರಡು ಪ್ರದೇಶಗಳಲ್ಲಿ ಜೀವಿಸುತ್ತಿದ್ದೇವೆ; ನಮ್ಮ ಭೌತಿಕ ಕಣ್ಣುಗಳೊಂದಿಗೆ ನಮ್ಮ ಭೌತಿಕ ಶರೀರವು ಅಸ್ತಿತ್ವದಲ್ಲಿರುವ ಲೋಕ ಮತ್ತು ಆತ್ಮೀಕ ಕಣ್ಣುಗಳೊಂದಿಗೆ ಆತ್ಮೀಕ ಶರೀರವು ಅಸ್ತಿತ್ವದಲ್ಲಿರುವ ಆತ್ಮೀಕ ಲೋಕ.
5. ಆತ್ಮೀಕ ಪ್ರಪಂಚದಲ್ಲಿ ಎರಡು ರಾಜ್ಯಗಳಿವೆ; ದೇವರ ರಾಜ್ಯ ಮತ್ತು ಸೈತಾನನ ರಾಜ್ಯ. ನಮ್ಮ ಆಲೋಚನೆಗೆ ತಕ್ಕಂತೆ ನಾವು ಯಾವುದಾದರೊಂದು ರಾಜ್ಯದಲ್ಲಿರಲು ಆಯ್ಕೆ ಮಾಡಬಹುದು. ಯಾವಾಗ ನಾವು ಲೌಕಿಕ

ಯೋಚನೆಗಳನ್ನು ಮಾಡುತ್ತೇವೋ, ಆಗ ಸೈತಾನನ ರಾಜ್ಯದಲ್ಲಿ ನೆಲೆಸುತ್ತೇವೆ, ಆದರೆ ನಾವು ದೇವರ ವಾಕ್ಯದ ಪ್ರಕಾರ ಯೋಚಿಸಿದಾಗ ನಾವು ದೇವರ ರಾಜ್ಯದಲ್ಲಿ ನೆಲೆಸುತ್ತೇವೆ. ಆದಾಗ್ಯೂ ನಮ್ಮ ದೇಹವು ದೇವರು ಇಟ್ಟಿರುವ ಸಮಯದವರೆಗೂ ಲೋಕದ ರಾಜ್ಯದಲ್ಲಿ ಅಸ್ತಿತ್ವದಲ್ಲಿರುತ್ತದೆ.


6. ನಮ್ಮ ಹೋರಾಟ ಈ ಭೌತಿಕ ಪ್ರಪಂಚದ ಜನರ ವಿರುದ್ಧವಲ್ಲ ಬದಲಿಗೆ ಆತ್ಮೀಕ ಪ್ರಪಂಚದಲ್ಲಿ ಸೈತಾನ ಮತ್ತು ಅವನ ಸೇನೆಯ ವಿರುದ್ಧವಾಗಿದೆ. (ಎಫೆಸ 6:12)
7. ಪರಿಶುದ್ಧಾತ್ಮನ ಸಹಾಯದಿಂದ ಮಾತ್ರ ನಾವು ದೇವರನ್ನು ಆತ್ಮದಲ್ಲಿ ಆರಾಧಿಸಲು ಸಾಧ್ಯ.
8. ವಾಸ್ತವದಲ್ಲಿ, ನಮ್ಮ ಆತ್ಮೀಕ ಸ್ಥಿತಿಯನ್ನು ಅರಿತುಕೊಳ್ಳಲು ಅನುಮತಿಸದ ಪರದೆಯೊಂದು ನಮ್ಮ ಆತ್ಮ ಮತ್ತು ನಮ್ಮ ಪ್ರಾಣದ ಮಧ್ಯೆಯಿದೆ. ಇಂದು, ನಾವು ನಮ್ಮ ಆತ್ಮೀಕ ಸ್ಥಿತಿಯನ್ನು ದೇವರ ವಾಕ್ಯವೆಂಬ ಕನ್ನಡಿಯ ಮೂಲಕ ನೋಡಬಹುದು.
9. ನಮ್ಮ ಹೊರಗಿನ ಮನುಷ್ಯ ತಾತ್ಕಾಲಿಕ ಮತ್ತು ನಾವು ನೋಡುವ ಲೋಕೀಯ ಸ್ಥಿತಿಯಲ್ಲಿ ಅವನಿದ್ದಾನೆ. ಇನ್ನೊಂದು ಬದಿಯಲ್ಲಿ, ಒಳಗಿನ ಮನುಷ್ಯನು ಶಾಶ್ವತವಾದ ದೇವರ ರಾಜ್ಯದಲ್ಲಿದ್ದಾನೆ ಮತ್ತು ಅವನನ್ನು ದಿನೇ ದಿನೇ ನೂತನಗೊಳಿಸಬೇಕು.





ವಿಶ್ವಾಸಿಯ ಐಹಿಕ ಮತ್ತು ಸ್ವರ್ಗೀಯ ಸ್ಥಿತಿಗತಿಗಳು
(ಚಿತ್ರ 1)





ಆದಾಮನ ಪಾಪ ಮತ್ತು ಮನುಷ್ಯನ ರಚನೆಯಲ್ಲಿ ಬದಲಾವಣೆ. ಬಿದ್ದುಹೋಗುವ ಮೊದಲು ಮನುಷ್ಯ ದೇವರ ಮಹಿಮೆಯಿಂದ ತುಂಬಿದ್ದನು (ಚಿತ್ರ 4)





ಬಿದ್ದುಹೋದ ನಂತರ, ಮನುಷ್ಯ ಮಹಿಮೆಯನ್ನು ಕಳೆದುಕೊಂಡನು ಮತ್ತು ಆತ್ಮ, ಪ್ರಾಣ ಹಾಗೂ ಶರೀರಗಳು ಭ್ರಷ್ಟವಾದವು (ಚಿತ್ರ 5)





ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿರುವ ವಿಮೋಚಿಸಲ್ಪಟ್ಟ ಆತ್ಮ ಮನುಷ್ಯ ಮತ್ತು ವಿಮೋಚಿಸಲ್ಪಡದ ಪ್ರಾಣ ಮತ್ತು ಶರೀರ ಅವುಗಳ ವಿಮೋಚನೆಗಾಗಿ ಕಾಯುತ್ತಿರುವದು (ಚಿತ್ರ 8)





ಬಿದ್ದುಹೋಗುವ ಮೊದಲು ಆದಾಮನಿಗೆ ಒಂದೇ ಸಮಯದಲ್ಲಿ ಎರಡು ಲೋಕಗಳಲ್ಲಿ **(ಮಂಡಲಗಳು)** ಜೀವಿಸಲು ಸಾಧ್ಯವಾಗುತ್ತಿತ್ತು (ಚಿತ್ರ 7)





ಭೌತಿಕ ಶರೀರ ಮತ್ತು ಪ್ರಾಣ ಜೊತೆಯಾಗಿ ಬಾಹೀರಿಕ ಮನುಷ್ಯ ಎಂದು ಕರೆಯಲ್ಪಡುತ್ತವೆ (ಚಿತ್ರ–12)




ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮ ಮತ್ತು ಪ್ರಾಣ ಜೊತೆಯಾಗಿ ಆಂತರಿಕ ಮನುಷ್ಯ ಎಂದು ಕರೆಯಲ್ಪಡುತ್ತವೆ **(**ಚಿತ್ರ–11)





ಮನುಷ್ಯನಲ್ಲಿ ಅವನ ಮೊದಲನೇ ಹಂತದ ಕಾರ್ಯದ ಪ್ರಗತಿಗೆ ಅನುಗುಣವಾಗಿ ಪವಿತ್ರಾತ್ಮನು ಅವನ ಎರಡನೇ ಹಂತದ ಕಾರ್ಯಕ್ಕಾಗಿ ಮನುಷ್ಯನ ಆತ್ಮದಿಂದ ಲೋಕಕ್ಕೆ ಬಿಡುಗಡೆಯಾಗುತ್ತಿರುವುದು (ಚಿತ್ರ–14)





ಮನುಷ್ಯನ ಮಹಿಮೆ. ಬಿದ್ದುಹೋಗುವ ಮೊದಲು ಮತ್ತು ನಂತರ

(ಚಿತ್ರ–16)





ದೇವರ ಜೀವ ಅಥವಾ ಝೋಯೆ ಆತ್ಮದಲ್ಲಿ ವಾಸಿಸುತ್ತಿರುವದು, ಮನುಷ್ಯನ ಜೀವ ಅಥವಾ ಸೂಖೆ ಪ್ರಾಣದಲ್ಲಿ ವಾಸಿಸುತ್ತಿರುವದು (ಚಿತ್ರ 19)





ಶರೀರಕ್ಕೆ ವಿಧೇಯರಾಗುವದು ಆತ್ಮೀಕ ಮರಣಕ್ಕೆ ನಡೆಸುತ್ತದೆ. **(ರೋಮಾ 8:13)**

(ಚಿತ್ರ–24)





ಆತ್ಮಕ್ಕೆ ವಿಧೇಯವಾಗುವದರಿಂದ ಆಂತರಿಕ ಮನುಷ್ಯನು ಬೆಳೆಯುತ್ತಿದ್ದಾನೆ


(ಚಿತ್ರ–26)





ಹೊಸದಾಗಿ ಹುಟ್ಟಿದ ವ್ಯಕ್ತಿಯ ಶಾರೀರಿಕ ಭಾವಗಳು, ಲೋಕಕ್ಕೆ ಪ್ರಕಾಶಿಸಲು ಪ್ರಯತ್ನಿಸುತ್ತಿರುವ ಅವನಲ್ಲಿನ ಕ್ರಿಸ್ತನ ಬೆಳಕನ್ನು ನಿರ್ಬಂಧಿಸುತ್ತಿವೆ (ಚಿತ್ರ–27)




ಆತ್ಮವು ಪ್ರಾಣವನ್ನು ಭೌತಿಕ ಮರಣದಲ್ಲಿ ನುಂಗುತ್ತದೆ
(ಚಿತ್ರ–29)




ಗುಡಾರ ಮತ್ತು ಮನುಷ್ಯನ ರಚನೆಯ ನಡುವಿನ ಸಂಬಂಧ
(ಚಿತ್ರ– 30)




ಯೇಸುವಿನ ಸಾವಿನ ಸಮಯದಲ್ಲಿ, ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು ಮತ್ತು ಮಹಾಪರಿಶುದ್ಧ ಸ್ಥಳ, ಪರಿಶುದ್ಧ ಸ್ಥಳವನ್ನು ನುಂಗಿತು
(ಚಿತ್ರ– 31



## ಅಧ್ಯಾಯ 2

# ದೇವರ ಚಿತ್ತವನ್ನು ತಿಳಿಯಿರಿ, ಲೋಕದಲ್ಲಿ ಅದನ್ನು ನೆರವೇರಿಸಿ

*"ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು."*
*(ಯೋಹಾನ 8:32)*

ಇಂದು, ಅಲ್ಪವಾಗಿ ಉತ್ತರವನ್ನು ತಿಳಿದಿರುವ ಅನೇಕ ಪ್ರಶ್ನೆಗಳನ್ನು ಜನರು ಹೊಂದಿರಬಹುದು. ಅವರ ಕುರಿತು ದೇವರ ಚಿತ್ತವೇನು? ದೇವರು ಯಾಕೆ ಅವರನ್ನು ಕರೆದಿದ್ದಾನೆ? ದೇವರ ಚಿತ್ತ ನಮಗೆ ಹೇಗೆ ತಿಳಿಯುತ್ತದೆ? ನಮ್ಮ ಹೃದಯಕ್ಕೆ ಬರುವ ಇಂತಹ ಪ್ರಶ್ನೆಗಳು ಅಥವಾ ಆಲೋಚನೆಗಳು ಅನೇಕ ಸಾಧ್ಯತೆಗಳಿಗೆ ತೆರೆಯುವಂತಹ ಬಾಗಿಲಿನಂತಿವೆ, ಆದರೆ ಸಾವಿರಾರು ಬಾಗಿಲುಗಳ ಮಧ್ಯೆ ಜೀವಿತದಲ್ಲಿ ಜಯವನ್ನು ಸಾಧಿಸಲು ಗುರುತಿಸಲ್ಪಡಬೇಕಾದಂತಹ ಮತ್ತು ನಡೆಯಲ್ಪಡಬೇಕಾದಂತಹ ಅವುಗಳಲ್ಲೊಂದು ಬಾಗಿಲು ಸರ್ವಶಕ್ತ ದೇವರಿಗೆ ಸೇರುತ್ತದೆ.

## ಅ) ದೈವೀಕ ಸ್ವಭಾವ ಮತ್ತು ಲೋಕದಲ್ಲಿ ಮನುಷ್ಯನ ಪ್ರಾಮುಖ್ಯತೆ

2000 ವರ್ಷಗಳಿಗಿಂತಲೂ ಹಿಂದೆ ಕ್ರಿಸ್ತನು ಈ ಭೂಮಿಯ ಮೇಲೆ ಬಂದನು ಮತ್ತು ಶುಭಸಂದೇಶವನ್ನು ಸಾರಿದನು. ಆತನು ಈ ಭೂಮಿಯಲ್ಲಿ ದೇವರ ಆಳ್ವಿಕೆಯನ್ನು ಘೋಷಿಸಿದನು. ಇಂದು ಆತನ ರಾಜ್ಯದಲ್ಲಿ ಜನಿಸಿದ ಕ್ರೈಸ್ತರಾಗಿ, ದೇವರ ಆಳ್ವಿಕೆಯ ಕುರಿತು ನಮಗೆ ತಿಳಿದಿಲ್ಲ ಮತ್ತು ಆತನ ಪ್ರಾಂತ್ಯವನ್ನು ವಿಸ್ತರಿಸುವುದರಲ್ಲಿ ನಾವು ನಿರ್ವಹಿಸಬೇಕಾದ ಮಹತ್ವದ ಪಾತ್ರದ ಕುರಿತು ಯಾವ ಪರಿಕಲ್ಪನೆಯನ್ನು ಹೊಂದಿಲ್ಲ ಎನ್ನುವುದು ದುರದೃಷ್ಟಕರವಾಗಿದೆ. ನಾವು ಕೇಳಬೇಕಾದ ಪ್ರಶ್ನೆಯೆಂದರೆ ಈ ಲೋಕದಲ್ಲಿ ಕ್ರಿಸ್ತನಿಂದ ನಾವು ಹೇಗೆ ಉಪಯೋಗಿಸಲ್ಪಡಬಹುದು? ದೇವರ ಆಳ್ವಿಕೆಯನ್ನು ಸಾರಲು ಇಂದು ನಮ್ಮೊಂದಿಗೆ ನಮ್ಮ ಕರ್ತನು ಆತನ ದೇಹದಲ್ಲಿಲ್ಲ ಆದರೆ ಆತನು ನಮ್ಮೊಂದಿಗೆ ಆತನ ಆತ್ಮದಲ್ಲಿದ್ದಾನೆ. ಆತ್ಮವು ಈ ಲೋಕದಲ್ಲಿ ಕಾರ್ಯಮಾಡಲು ಅಧಿಕಾರವನ್ನು ಹೊಂದಿಲ್ಲ ಆದರೆ ದೇಹವು ಹೊಂದಿದೆ. ಆತ್ಮವು ಕಾರ್ಯಮಾಡಲು ಮನುಷ್ಯನು ಒಪ್ಪಿಸಿಕೊಟ್ಟರೆ ಅಥವಾ ಅನುಮತಿಸಲು ಸಿಧ್ದವಿದ್ದರೆ ಮಾತ್ರ ಆತ್ಮವು ಉಪಯೋಗಿಸಲು ಸಾಧ್ಯ.

ನಮ್ಮೊಳಗೆ ಕರ್ತನ ಆತ್ಮನು ಕಾರ್ಯಮಾಡಲು ಆಗುವ ಸ್ಥಳ ನಮ್ಮ ಯೋಚನೆಯಲ್ಲಿದೆ ಅಥವಾ ನಮ್ಮ ಮನಸ್ಸಿನಲ್ಲಿದೆ. ನಾವು ಒಪ್ಪಿಸಿಕೊಟ್ಟರೆ, ದೇವರು ನಮ್ಮ ಯೋಚನೆಯಲ್ಲಿ ಕಾರ್ಯಮಾಡುತ್ತಾನೆ ಮತ್ತು ನಮಗೆ ಆತನ ಆಲೋಚನೆಯನ್ನು

ನೀಡುತ್ತಾನೆ. ನಾವು ಯಾವಾಗ ಈ ಆಲೋಚನೆಗಳನ್ನು ಗುರುತಿಸುತ್ತೇವೋ ಮತ್ತು ಈ ಆಲೋಚನೆಗಳ ಪ್ರಕಾರ ಕಾರ್ಯ ಮಾಡುವಂತೆ ನಮ್ಮ ದೇಹವನ್ನು ಉಪಯೋಗಿಸುತ್ತೇವೋ ಆವಾಗ ಮಾತ್ರವೇ ಪರಲೋಕದಲ್ಲಿರುವ ಪ್ರಕಾರ ಈ ಲೋಕದಲ್ಲಿಯೂ ದೇವರ ಚಿತ್ತ ನೆರವೇರುತ್ತದೆ.

ಕರ್ತನ ಶಿಷ್ಯರು ಪ್ರಾರ್ಥಿಸುವುದಕ್ಕೆ ಕಲಿಸುವಂತೆ ಆತನನ್ನು ಕೇಳದಾಗ, ಕರ್ತನು ಅವರಿಗೆ ಕಲಿಸಿದಂತಹ, ಪ್ರಾರ್ಥನೆಯ ಮುಖ್ಯ ಭಾಗ, ಈ ರೀತಿ ಪ್ರಾರ್ಥಿಸುವಂಥದಾಗಿತ್ತು, **"ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." (ಮತ್ತಾಯ 6:10)**

ನನ್ನ ಓದುಗರು ಒಂದು ಪ್ರಶ್ನೆಯನ್ನು ಹೊಂದಿರಬಹುದು ಭೂಲೋಕದ ವಿಷಯಗಳಲ್ಲಿ ಕರ್ತನು ಮಧ್ಯ ಪ್ರವೇಶಿಸಲು, ನಾವು ಪ್ರಾರ್ಥಿಸುವುದು ಏಕೆ ಇಷ್ಟು ಅಗತ್ಯ? ಕಾರಣ, ಆತನು ನ್ಯಾಯವಂತನು ಮತ್ತು ಆತನಿಗೆ ಆತನ ದೈವೀಕ ಸ್ವಭಾವವನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ಆತನ ಸಿಂಹಾಸನದ ಅಡಿಪಾಯವು ನ್ಯಾಯದ ಮೇಲೆ ಹಾಕಲ್ಪಟ್ಟಿದೆ ಎಂದು ವಾಕ್ಯ ಹೇಳುತ್ತದೆ. ಹಾಗಾಗಿ ಆತನ ಬಾಯಿಂದ ಈಗಾಗಲೇ ಹೇಳಲ್ಪಟ್ಟಿರುವ ಆತನ ಮಾತಿಗೆ ವಿರುದ್ಧವಾಗಿ ಏನನ್ನೂ ಮಾಡುವುದಿಲ್ಲ. ಇದನ್ನು ಕೆಳಗಿನ ವಾಕ್ಯವೃಂದಗಳಿಂದ ವಿವರಿಸುತ್ತೇನೆ.

## ಆ) ಈ ಲೋಕದ ಮೇಲೆ ಅಧಿಕಾರವನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ

ಮನುಷ್ಯನನ್ನು ಸೃಷ್ಟಿಮಾಡಿದ ನಂತರ, ದೇವರು ಮಾಡಿದ ಮೊದಲ ಕೆಲಸ ಅವರಿಗೆ ಅಧಿಕಾರವನ್ನು ಕೊಡುವುದಾಗಿತ್ತು. ದೇವರು ಅವರನ್ನು ಆಶೀರ್ವದಿಸಿದನು ಮತ್ತು ಹೇಳಿದನು, **"ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ದೊರೆತನಮಾಡಿರಿ ಅಂದನು." (ಆದಿ 1:28)**

ಕರ್ತನು ಆತನ ಬಾಯಿಂದ ಒಮ್ಮೆ ಹೇಳಿದ ಮಾತುಗಳನ್ನು ಎಂದಿಗೂ ಬದಲಾಯಿಸುವುದಿಲ್ಲ. ಒಂದು ಪದವೂ ಬದಲಾಗುವುದಿಲ್ಲ.

**"ನನ್ನ ಒಡಂಬಡಿಕೆಯನ್ನು ಭಂಗಪಡಿಸುವುದಿಲ್ಲ; ನನ್ನ ಮಾತನ್ನು ಬದಲಿಸುವುದಿಲ್ಲ."**
**(ಕೀರ್ತ 89:34)**

ಇದು ದೇವರ ವಿಶೇಷತೆ, ಏನೆಂದರೆ ಆತನು ಏನನ್ನೆಲ್ಲ ಆದೇಶಿಸುತ್ತಾನೋ ಅದು ಎಂದಿಗೂ ಬದಲಾಗುವುದಿಲ್ಲ ಶಾಸ್ತ್ರವು ಹೇಳುತ್ತದೆ, "ಭೂಮ್ಯಾಕಾಶಗಳು ಅಳಿದುಹೋಗುವವು ಆದರೆ ನನ್ನ ಮಾತುಗಳು ಅಳಿದು ಹೋಗುವುದೇ ಇಲ್ಲ." (ಮತ್ತಾ24:35)

**"ಪರಲೋಕವು ಯೆಹೋವನದು; ಭೂಲೋಕವನ್ನು ನರಸಂತಾನಕ್ಕೆ ಕೊಟ್ಟಿದ್ದಾನೆ." (ಕೀರ್ತ 115:16)**

ನಮ್ಮ ದೇವರು ನೆನ್ನೆಯೂ ಇವತ್ತೂ ಒಂದೆಯಾಗಿದ್ದಾನೆ ಮತ್ತು ಎಂದೆಂದಿಗೂ ಹಾಗೆಯೇ ಇರುತ್ತಾನೆ. ದೇವರು ಭೂಮಿಯ ಮೇಲೆ ಕಾರ್ಯಮಾಡಲು, ನಾವು ಆತನ ದೈವಿಕ ಮಧ್ಯಸ್ಥಿಕೆಗಾಗಿ ಪ್ರಾರ್ಥಿಸಬೇಕು. ಕೇವಲ ಪ್ರಾರ್ಥಿಸುವುದು ಮಾತ್ರವಲ್ಲ ಬದಲಿಗೆ ಈ ಭೂಲೋಕದಲ್ಲಿ ನಮ್ಮ ಮೂಲಕ ಆತನ ಆತ್ಮವು ಕಾರ್ಯಮಾಡಲು ನಮ್ಮ ದೇಹವನ್ನು ಸ್ವಯಂಪ್ರೇರಿತವಾಗಿ ಒಪ್ಪಿಸಿಕೊಡಬೇಕು. ಪರಿಶುದ್ಧಾತ್ಮನು ಕೊರತೆ ಹೊಂದಿರುವ ಒಂದೇ ಸಂಗತಿಯೆಂದರೆ ಅದು ಭೌತಿಕ ಶರೀರ, ಹೀಗಾಗಿ ಈ ಲೋಕದಲ್ಲಿ ಮನುಷ್ಯನ ಸಹಾಯವಿಲ್ಲದೆ ಸೈತಾನನೂ ಸಹ ಕಾರ್ಯಮಾಡಲು ಸಾಧ್ಯವಿಲ್ಲ. ಸೈತಾನನು ಮನುಷ್ಯನನ್ನು ಮುಂದಿಟ್ಟು ಮತ್ತು ಅವನ(ಸೈತಾನ) ಚಿತ್ತವನ್ನು ನೀಡುತ್ತಾ, ಅವನ(ಮನುಷ್ಯನ) ಆಲೋಚನೆಗಳನ್ನು ಆಕ್ರಮಿಸುತ್ತಾ ಹಾಗೂ ಮನುಷ್ಯನ ಮೂಲಕ ಅವನ ಕಾರ್ಯಗಳನ್ನು ಸಾಧಿಸುತ್ತಾ ಕಾರ್ಯನಿರ್ವಹಿಸುತ್ತಾನೆ. ಕಾನೂನುಬದ್ಧವಾಗಿ, ಸೈತಾನನು ಈ ಲೋಕದಲ್ಲಿ ಯಾವ ಹಕ್ಕು ಅಥವಾ ಅಧಿಕಾರವನ್ನು ಹೊಂದಿಲ್ಲ. ಆದರೆ ಕಾನೂನುಬಾಹಿರವಾಗಿ ಆದಾಮನಿಂದ ಕದ್ದುಕೊಂಡು ಅಧಿಕಾರವನ್ನು ಪಡೆದುಕೊಂಡನು. ಅವನು ಪ್ರಾರಂಭದಿಂದಲೂ ವಂಚಕನಾಗಿದ್ದನು ಮತ್ತು ಈ ಲೋಕದಲ್ಲಿ ಕಾರ್ಯಮಾಡಲು ಭೌತಿಕ ಶರೀರವನ್ನು ಹುಡುಕುತ್ತಿದ್ದಾನೆ. ದೇವರೂ ಸಹ ಇದೇ ರೀತಿಯಾಗಿ ಕಾರ್ಯಮಾಡುತ್ತಾರೆ. ದೇಶಕ್ಕಾಗಿ ಪೌಳಿಯ ಒಡಕಿನಲ್ಲಿ ನಿಲ್ಲುವುದಕ್ಕೆ ಒಬ್ಬ ಮನುಷ್ಯನನ್ನು ಕಾಣಲು ಆತನಿಗೆ ಆಗಲಿಲ್ಲ ಎಂದು ಆಶ್ಚರ್ಯಗೊಂಡಿರುವುದಾಗಿ ದೇವರು ನಮಗೆ ಹೇಳುತ್ತಾರೆ.

**"ನಾನು ದೇಶವನ್ನು ಹಾಳುಮಾಡದಂತೆ ನನ್ನೆದುರಿಗೆ ದೇಶರಕ್ಷಣೆಗಾಗಿ ಪೌಳಿಯ ಒಡಕಿನಲ್ಲಿ ನಿಲ್ಲುವುದಕ್ಕೂ ಗೋಡೆಯನ್ನು ಗಟ್ಟಿಮಾಡುವುದಕ್ಕೂ ತಕ್ಕವನನ್ನು ನಾನು ಹುಡುಕಲು ಯಾರು ಸಿಕ್ಕಲಿಲ್ಲ." (ಯೆಹೆ 22:30)**

ಯೆಶಾಯ 6:8ರಲ್ಲಿ, "ಯಾವನು ನಮಗೋಸ್ಕರ ಹೋಗುವನು?" ಎಂದು ಕರ್ತನು ಕೇಳುವುದನ್ನು ನಾವು ಕಾಣಬಹುದು. ಯಾರು ಹೋಗುತ್ತಾರೆ ಎಂದು ವಿಶ್ವದ ಸೃಷ್ಟಿಕರ್ತನು ಕೇಳುತ್ತಿದ್ದಾರೆ. ದೇವರು ಬಯಸುವುದಾದರೆ ಆತನು ಬಯಸುವ ಎಲ್ಲವನ್ನು ಆತನು ಮಾಡಬಹುದು ಆದರೆ ಮೊದಲೇ ಸೂಚಿಸಿದಂತೆ, ದೇವರು ನ್ಯಾಯಯುತ ದೇವರು. ದೇವರು ಪ್ರಪಂಚದ ಒಡೆಯನಾಗಿದ್ದರೂ, ಆತನು ಮನುಷ್ಯರಿಗೆ ಈ ಪ್ರಪಂಚದ ಅಧಿಕಾರವನ್ನು ನೀಡಿದ್ದಾನೆ ಮತ್ತು ಆಹ್ವಾನಿಸಲ್ಪಡದೇ ಮಧ್ಯಪ್ರವೇಶಿಸುವುದಿಲ್ಲ. ಅದೇ ನಾವು ಪ್ರಾರ್ಥಿಸುವುದರ ಕಾರಣ.

> ದೇವರು ನ್ಯಾಯಯುತ ದೇವರು. ದೇವರು ಪ್ರಪಂಚದ ಒಡೆಯನಾಗಿದ್ದರೂ, ಆತನು ಈ ಲೋಕದ ಅಧಿಕಾರವನ್ನು ಮನುಷ್ಯನಿಗೆ ನೀಡಿದ್ದಾನೆ ಮತ್ತು ಆಹ್ವಾನಿಸಲ್ಪಡದೇ ಆತನು ಮಧ್ಯ ಪ್ರವೇಶಿಸುವುದಿಲ್ಲ. ಅದೇ ನಾವು ಪ್ರಾರ್ಥಿಸುವುದರ ಕಾರಣ.

ದೇವರ ಈ ವ್ಯಕ್ತಿತ್ವದ ಕಾರಣದಿಂದ, ಆತನು ನಮಗೆ ನೀಡಿರುವುದನ್ನು ಬದಲಾಯಿಸಲು ಸಾಧ್ಯವಿಲ್ಲ. ಆತನ ಮಾತುಗಳು ಎಂದಿಗೂ ಬದಲಾಗುವುದಿಲ್ಲ.

## ಇ) ಸತ್ಯವು ನಮ್ಮನ್ನು ಬಿಡುಗಡೆ ಮಾಡುತ್ತದೆ

ದೇವರ ಮಾತುಗಳು ಎಂದಿಗೂ ಬದಲಾಗುವುದಿಲ್ಲ. ಇದು ಕರ್ತನನ್ನು ತಿಳಿದುಕೊಂಡವರಿಗೆ, ರಕ್ಷಣೆಯನ್ನು ಅನುಭವಿಸಿರುವವರಿಗೆ, ಕರ್ತನ ಸೇವೆ ಮಾಡುವವರಿಗೆ, ಆತನ ಸೇವಾ ಕಾರ್ಯವನ್ನು ಮಾಡುವವರಿಗೆ ಮತ್ತು ದೇವರ ವಾಕ್ಯವನ್ನು ಸಾರುವವರಿಗೆ ಶುಭ ಸುದ್ದಿಯಾಗಿದೆ. **ನಾವು ಅಸಾಮಾನ್ಯ ದೇವರ ಅಸಾಮಾನ್ಯ ಮಕ್ಕಳಾಗಿದ್ದೇವೆ.** ನಮ್ಮ ದೇವರು ಅಸಾಮಾನ್ಯವಾಗಿ ಕಾರ್ಯಮಾಡುತ್ತಿರುವಾಗ, ನಾವೂ ಸಹ ಅಸಮಾನ್ಯವಾಗಿ ಕಾರ್ಯಮಾಡಬೇಕು ಆದರೆ ಅನೇಕ ಬಾರಿ, ನಿರ್ಲಕ್ಷ್ಯತೆಯಿಂದ ನಮಗೆ ಹಾಗೆ ಮಾಡಲಾಗುವುದಿಲ್ಲ. ಹೋಶೇಯ 4:6ರಲ್ಲಿ ದೇವರ ವಾಕ್ಯವು ಹೇಳುತ್ತದೆ ಪ್ರಾರ್ಥನೆಯ ಕೊರತೆಯಿಂದ ನಾಶವಾಗಿದ್ದಾರೆಂದಲ್ಲ; ಜನರು ಜ್ಞಾನದ ಕೊರತೆಯಿಂದ ನಾಶವಾಗಿದ್ದಾರೆಂದು ಹೇಳುತ್ತದೆ.

**"ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ." (ಹೋಶೆಯ 4:6)**

ಯೋಹಾನ 8:32ರಲ್ಲಿ ಹೇಳುತ್ತದೆ,

**"ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವುದು."**

ಅನೇಕರು ಅವರನ್ನು ಬಿಡುಗಡೆ ಮಾಡುವ ಈ ಸತ್ಯದ ಕುರಿತು ಅರಿತಿಲ್ಲ. ಅವರು ಬುದ್ಧಿವಂತರೆಂದು ಮತ್ತು ಅವರಿಗೆ ಎಲ್ಲಾ ತಿಳಿದದೆಯೆಂದೂ ಪ್ರಪಂಚಕ್ಕೆ ತೋರಿಸುತ್ತಾರೆ. ಆದರೆ ವಾಸ್ತವವಾಗಿ ವಾಕ್ಯದ ಕುರಿತು ನಿರ್ಲಕ್ಷ್ಯವುಳ್ಳವರಾಗಿದ್ದಾರೆ. ಅವರು ಆತ್ಮೀಕ ಹಾಲನ್ನು ಸೇವಿಸಲು ಮುಂದುವರೆಸುತ್ತಾರೆ ಆದರೆ ಗಟ್ಟಿ ಆಹಾರಕ್ಕೆ ಸಿದ್ಧರಾಗಿಲ್ಲ. ನಾವು ವಾಕ್ಯದ ಮೂಲಕ ಮುಂದುವರೆಯುವುದನ್ನು ದೇವರು ಬಯಸುತ್ತಾರೆ. ಅರ್ಥಮಾಡಿಕೊಳ್ಳಲು ಪರಿಶುದ್ಧಾತ್ಮನು ನಮಗೆ ನೀಡುವಂತಹ ವಾಕ್ಯದ ಮೂಲಕ, "ವಾಕ್ಯದಿಂದ ಹಾಗೂ ಪ್ರಾರ್ಥನೆಯಿಂದ ಜೀವಿಸುತ್ತಾ" ದೇವರ ಚಿತ್ತವನ್ನು ಮಾಡಬೇಕು. ಹಾಗೆ ಮಾಡುವುದರಿಂದ, ಅಂತಹ ವಿಶ್ವಾಸಿಗಳು ಲೋಕವನ್ನು ಕದಲಿಸಲು ಮತ್ತು ತಲೆಕೆಳಗಾಗಿಸಲು ಮತ್ತು ರಕ್ಷಣೆಯ ಮೊದಲ ತತ್ವಗಳೊಂದಿಗೆ ಮುಂದುವರೆಯಲು ವಿಫಲವಾಗುವುದರ ಬದಲಿಗೆ, ಶಕ್ತಿಯೊಂದಿಗೆ ದೇವರ ಚಿತ್ತವನ್ನು ನೆರವೇರಿಸಲು ಸಹಾಯ ಮಾಡುತ್ತದೆ.

## ಈ) ದೇವರ ಚಿತ್ತವನ್ನು ಅರಿತುಕೊಳ್ಳುವಲ್ಲಿ ಮುಖ್ಯ ತಡೆಗಳು

ಇಂದು ನಾವು ದೇವರ ಚಿತ್ತವನ್ನು ಅರಿತುಕೊಳ್ಳುವುದಿಲ್ಲ. ಪರಿಶುದ್ಧಾತ್ಮನು ಮಾತನಾಡದಿರುವುದರಿಂದಲ್ಲ ಬದಲಿಗೆ ಪರಿಶುದ್ಧಾತ್ಮನು ಏನು ಮಾತನಾಡುತ್ತಿದ್ದಾನೆ ಎಂದು ನಾವು ಅರ್ಥಮಾಡಿಕೊಳ್ಳದಿರುವುದರಿಂದ. ಯಾರಾದರೊಬ್ಬರು ನೀವು ಅರ್ಥ

ಮಾಡಿಕೊಳ್ಳಲಾರದ, ಅರೇಬಿಕ್ ಭಾಷೆಯಲ್ಲಿ ಏನನ್ನಾದರೂ ಕೇಳಿದರೆ (ಉದಾ: ಶು ಅಕ್ಬರಾಕ್ ಎಂಟೆ?) ನೀವು ಆಶ್ಚರ್ಯಚಕಿತರಾಗಿ ನಿಂತುಬಿಡುವಿರಿ. ಅದು ನಿಮಗೆ ಅರ್ಥವಾಗದ ಮಾತಾಗಿದೆ ಮತ್ತು ನಿಮಗೆ ಅರೇಬಿಕ್ ತಿಳಿದಿಲ್ಲದ್ದರಿಂದ ಉತ್ತರಿಸಲು ನಿಮಗೆ ಸಾಧ್ಯವಾಗುವುದಿಲ್ಲ. ಆದರೆ, ನಿಮಗೆ ತಿಳಿದಿರುವ ಕನ್ನಡದಲ್ಲಿ ಅದನ್ನು ಕೇಳಿದರೆ (ಉದಾ: ನೀವು ಚೆನ್ನಾಗಿದ್ದೀರಾ?) ತಕ್ಷಣವೇ, ಚೆನ್ನಾಗಿದ್ದೇನೆ ಎಂದು ನೀವು ಉತ್ತರಿಸುತ್ತೀರ. ನೀವು ಕನ್ನಡವನ್ನು ಅರ್ಥಮಾಡಿಕೊಂಡದ್ದರ ಕಾರಣವೇನೆಂದರೆ ಮೊದಲೇ ಕನ್ನಡವು ನಿಮ್ಮ ಹೃದಯದಲ್ಲಿತ್ತು. ಅಂತೆಯೇ, ನಮ್ಮ ಹೃದಯದಲ್ಲಿ ನಾವು ದೇವರ ವಾಕ್ಯವನ್ನು ಹೊಂದಿದ್ದರೆ ಮಾತ್ರ ವಾಕ್ಯದ ಮೂಲಕ ದೇವರಾತ್ಮನು ಏನನ್ನು ಮಾತನಾಡುತ್ತಿದ್ದಾರೆ ಎಂದು ನಾವು ಅರಿತುಕೊಳ್ಳಬಹುದು.

ಮತ್ತೊಂದು ಉದಾಹರಣೆಯೆಂದರೆ ನಾವು ಬಾಂಬೆ ಆಕಾಶವಾಣಿ ಕೇಂದ್ರವನ್ನು ಹಾಕಿದರೆ ಎಂದಿಗೂ ದೆಹಲಿ ಎಫ್.ಎಮ್. ಕೇಂದ್ರವನ್ನು ಪಡೆಯುವುದಿಲ್ಲ. ಅದರಂತೆಯೇ, ನಾವು ಲೋಕದ ಕಡೆಗೆ ತಿರುಗಿದ್ದರೆ, ನಮಗೆ ಪರಿಶುದ್ಧಾತ್ಮನು ನೀಡುವಂತಹ ದೇವರ ರಾಜ್ಯದ ಸಂದೇಶವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ನಾವು ಮುಂದೆ ಓದಿದಂತೆಲ್ಲಾ ದೇವರಾತ್ಮನ ಧ್ವನಿಯನ್ನು ಗುರುತಿಸುವುದಕ್ಕೆ ನಮ್ಮ ಮನಸ್ಸನ್ನು ಹೇಗೆ ತಿರುಗಿಸುವುದು, ನಮ್ಮ ಕುರಿತು ದೇವರ ಚಿತ್ತವನ್ನು ಹೇಗೆ ಅರಿತುಕೊಳ್ಳುವುದು ಮತ್ತು ಅದನ್ನು ಈ ಲೋಕದಲ್ಲಿ ಹೇಗೆ ಮಾಡುವುದು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಈ ಅಧ್ಯಾಯದ ಪದಗಳ ಮೂಲಕ ನೀನು ನನಗೆ 'ನೀಡಿರುವ' ಪರಲೋಕದ ಜ್ಞಾನಕ್ಕಾಗಿ ವಂದನೆಗಳು. ನಿನ್ನ ಪ್ರಿಯ ಮಗುವಾಗಿ ನಿನ್ನನ್ನು ಅನುಕರಿಸಲು, ನನಗೆ ಸಹಾಯ ಮಾಡು ಕರ್ತನೆ. ನಿನ್ನ ವಾಕ್ಯವು ನನ್ನ ಹೃದಯದಲ್ಲಿ ನಿಧಿಯಾಗಿರಲಿ ಹಾಗಾದರೆ ನನಗೆ ಪರಿಶುದ್ಧಾತ್ಮನು ಹೇಳುವುದನ್ನು ಭಾಗಶಃ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ರಕ್ಷಣೆಯ ಮಟ್ಟದಲ್ಲೀ ನಾನು ಅಂಟಿಕೊಳ್ಳದಂತೆ, ಬದಲಿಗೆ ನಿನ್ನ ವಾಕ್ಯದಲ್ಲಿ ಆಳಕ್ಕೆ ಬೆಳೆಯುವಂತೆ, ನಿನ್ನ ಚಿತ್ತ ತಿಳಿಯುವಂತೆ ಹಾಗೂ ಮೊಣಕಾಲಿನಲ್ಲಿರುವಂತೆ ಮತ್ತು ಈ ಲೋಕದಲ್ಲಿ ವ್ಯತ್ಯಾಸವನ್ನುಂಟುಮಾಡುವಂತೆ ನನಗೆ ಸಾಧ್ಯಮಾಡು. ನಿನ್ನ ಪರಿಶುದ್ಧ ಹಸ್ತಕ್ಕೆ ಸಂಪೂರ್ಣವಾಗಿ ನನ್ನನ್ನು ಒಪ್ಪಿಸಿಕೊಡುತ್ತೇನೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಕ್ರಿಸ್ತನು ಇಂದು ನಮ್ಮೊಂದಿಗಿದ್ದಾನೆ. ಆತನ ದೇಹದಲ್ಲಿ ಅಲ್ಲ ಬದಲಿಗೆ ಆತನ ಆತ್ಮದಲ್ಲಿ. ಆತ್ಮವು ಈ ಲೋಕದಲ್ಲಿ ಕಾರ್ಯ ಮಾಡಲು

ಅಧಿಕಾರವನ್ನು ಹೊಂದಿಲ್ಲ ಆದರೆ ದೇಹವು ಹೊಂದಿದೆ. ಹಾಗಾಗಿ ಆತ್ಮವು ಈ ಲೋಕದಲ್ಲಿ ಕಾರ್ಯಮಾಡಲು ಬಯಸಿದರೆ ಅದು ದೇಹದ ಮೂಲಕ ಮಾತ್ರ. ನಾವು ಒಪ್ಪಿಸಿಕೊಟ್ಟರೆ, ದೇವರು ನಮ್ಮ ಆಲೋಚನೆಯಲ್ಲಿ ಕಾರ್ಯಮಾಡುತ್ತಾರೆ ಮತ್ತು ನಮಗೆ ಅವರ ಆಲೋಚನೆಯನ್ನು ನೀಡುತ್ತಾರೆ, ನಾವು ಈ ಆಲೋಚನೆಗಳನ್ನು ಗುರುತಿಸಿದಾಗ ಮತ್ತು ಈ ಆಲೋಚನೆಗಳ ಪ್ರಕಾರ ಕಾರ್ಯನಿರ್ವಹಿಸಲು ನಮ್ಮ ದೇಹವನ್ನು ಉಪಯೋಗಿಸಿದಾಗ ಮಾತ್ರ, ಪರಲೋಕದಲ್ಲಿರುವಂತೆಯೇ ಈ ಲೋಕದಲ್ಲಿಯೂ ದೇವರ ಚಿತ್ತ ನೆರವೇರುತ್ತದೆ.

2. ಪರಲೋಕದಲ್ಲಿರುವಂತೆಯೇ ಈ ಭೂಮಿಯಲ್ಲಿ ದೇವರ ಚಿತ್ತ ನೆರವೇರಲು, ಅಧಿಕಾರ ಕೊಡಲ್ಪಟ್ಟಿರುವಂಥ ನಾವು, ಅದಕ್ಕಾಗಿ ಪ್ರಾರ್ಥಿಸಿದಾಗ ಅಥವಾ ನಮ್ಮನ್ನು ಒಪ್ಪಿಸಿಕೊಟ್ಟಾಗ ಸಾಧ್ಯವಾಗುತ್ತದೆ. ಅದಕ್ಕಾಗಿಯೇ ಆ ರೀತಿಯಾಗಿ ನಾವು ಪ್ರಾರ್ಥಿಸುವಂತೆ ಕ್ರಿಸ್ತನು ನಮ್ಮನ್ನು ಕೇಳಿಕೊಂಡಿದ್ದು. (ಮತ್ತಾಯ 6:9-10).
3. ದೇವರ ವಿಶೇಷತೆಯೇನೆಂದರೆ ಆತನು ಏನನ್ನು ಆದೇಶಿಸುತ್ತಾನೋ ಅದನ್ನು ಎಂದಿಗೂ ಬದಲಾಯಿಸಲು ಆಗುವುದಿಲ್ಲ.
4. ನಾವು ರಕ್ಷಣೆಯ ಮೊದಲ ಮೆಟ್ಟಿಲಿನಲ್ಲಿ ಮಾತ್ರವೇ ನಿಲ್ಲಬಾರದು ಬದಲಿಗೆ ದೇವರ ವಾಕ್ಯದಲ್ಲಿ ಮುಂದುವರೆಯಬೇಕು. ಪರಿಶುದ್ಧಾತ್ಮನು ನಮಗೆ ನೀಡುವ ವಾಕ್ಯದ ಮೂಲಕ, ದೇವರು ನಮಗೆ ಏನಿಟ್ಟಿದ್ದಾರೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಮತ್ತು ಲೋಕದಲ್ಲಿ ದೇವರ ಚಿತ್ತವನ್ನು ನೆರವೇರಿಸಬೇಕು.
5. ಇಂದು ನಾವು ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳುವುದಿಲ್ಲ, ಪರಿಶದ್ಧಾತ್ಮನು ಮಾತನಾಡದಿರುವುದರಿಂದಲ್ಲ, ಬದಲಿಗೆ ಪರಿಶುದ್ಧಾತ್ಮನು ಏನು ಮಾತನಾಡುತ್ತಿದ್ದಾನೆ ಎಂದು ನಾವು ಅರ್ಥಮಾಡಿಕೊಳ್ಳದಿರುವುದರಿಂದ. ಇದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ನಮ್ಮ ಹೃದಯದಲ್ಲಿ ನಾವು ದೇವರ ವಾಕ್ಯವನ್ನು ಹೊಂದಿರಬೇಕು.
6. ನಾವು ಸಾಮಾನ್ಯರಲ್ಲ, ಬದಲಿಗೆ ನಾವು ಅತ್ಯಂತ ಉನ್ನತ ದೇವರ ಅಸಾಮಾನ್ಯ ಮಕ್ಕಳು.
7. ದೇವರು ನ್ಯಾಯವಂತ ದೇವರು, ದೇವರು ಲೋಕದ ಒಡೆಯನಾಗಿದ್ದರೂ, ಆತನು ಮನುಷ್ಯನಿಗೆ ಲೋಕದ ಅಧಿಕಾರವನ್ನು ನೀಡಿದ್ದಾನೆ ಮತ್ತು ಆಹ್ವಾನಿಸಲ್ಪಡದೇ ಮಧ್ಯಪ್ರವೇಶಿಸುವುದಿಲ್ಲ. ಇದೇ ನಾವು ಪ್ರಾರ್ಥಿಸುವುದರ ಕಾರಣ.



*ಅಧ್ಯಾಯ 3*

# ಒಬ್ಬ ವ್ಯಕ್ತಿಯ ನಂಬಿಕೆಯ ಜೀವಿತದಲ್ಲಿ ಅವನ ಆಂತರಿಕ ಅಡಿಪಾಯದ ರಚನೆ

*“ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.” (1 ಥೆಸಲೋನಿಕದವರಿಗೆ 5:23)*

## ಅ) ಆತ್ಮ, ಪ್ರಾಣ, ಶರೀರ

ಒಬ್ಬ ವಿಶ್ವಾಸಿಯ ಆಂತರಿಕ ಅಡಿಪಾಯದ ರಚನೆ ಏನು ಎಂದು ನಾವೆಲ್ಲರೂ ಅರ್ಥಮಾಡಿಕೊಳ್ಳಲೇಬೇಕು. ಇದನ್ನು ಅರ್ಥ ಮಾಡಿಕೊಳ್ಳದೆ ಶಕ್ತಿಯುತ ಆತ್ಮೀಕ ಜೀವನವನ್ನು ನಡೆಸಲು ಕಷ್ಟಕರವಾಗುತ್ತದೆ.

ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿದ್ದಾಗ, ಅವನು ಹೊಸ ಸೃಷ್ಟಿ. ಹೊಸ ಸೃಷ್ಟಿಯೆಂದರೆ ಮೊದಲು ಇದ್ದಂತದ್ದಲ್ಲ. ವಾಕ್ಯವು ಹೇಳುತ್ತದೆ ನಾವು ಕ್ರಿಸ್ತನೊಂದಿಗೆ ಶಿಲುಬೆಗೇರಿಸಲ್ಪಟ್ಟಿದ್ದೇವೆ, ಅಂದರೆ ಆದಾಮನ ಪಾಪದಿಂದ ದೇವರಿಂದ ಪ್ರತ್ಯೇಕಿಸಲ್ಪಟ್ಟ ನಮ್ಮ ಆತ್ಮ, ಶಿಲುಬೆಗೇರಿಸಲ್ಪಟ್ಟಿದೆ. ಮರಣ ಎಂಬ ಪದದ ಅರ್ಥ “ಪ್ರತ್ಯೇಕತೆ” ಅಥವಾ ಚಲನೆಯಿಲ್ಲದ ಭಾಗ ಎಂದು.

**“ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು, ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.” (2 ಕೊರಿಂಥ 5:17)**


ಮೇಲಿನ ವಾಕ್ಯದಿಂದ ನಮ್ಮಲ್ಲಿ ಅನೇಕರು ಆಶ್ಚರ್ಯಗೊಳ್ಳಬಹುದು, ಯಾವುದು ಹೊಸ ಸೃಷ್ಟಿ? ಏನು ಅಥವಾ ಯಾರು ಮರಣ ಹೊಂದಿದ್ದಾರೆ? ಏನು ಹೊಸದಾಯಿತು ಇವುಗಳು ಉತ್ತರಿಸಲು ಕಷ್ಟವಾದ ಪ್ರಶ್ನೆಗಳು ಆದರೆ ನಾವು ಅವುಗಳನ್ನು ಅರ್ಥಮಾಡಿಕೊಂಡರೆ ಮತ್ತು ಅಳವಡಿಸಿಕೊಂಡರೆ, ನಂತರ ನಮ್ಮ ಸುತ್ತಲಿನ ಪ್ರದೇಶ (ಸ್ಥಿತಿ) ಬದಲಾಗುತ್ತದೆ.

## ಆ) ದೇಹ, ಪ್ರಾಣ ಅಥವಾ ಆತ್ಮ, ಯಾವುದು ಹೊಸ ಸೃಷ್ಟಿ?

**“ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.” (1 ಥೆಸಲೋನಿಕದವರಿಗೆ 5:23)**

1 ಥೆಸಲೋನಿಕದವರಿಗೆ 5:23ರಲ್ಲಿ ವಿವರಿಸಿರುವಂತೆ ಮನುಷ್ಯನ ಮೂರು ಭಾಗಗಳು ಆತ್ಮ, ಪ್ರಾಣ ಮತ್ತು ಶರೀರವಾಗಿದೆ. ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಹೇಗೆಂದರೆ ದೇವರು ತಂದೆ, ಮಗ ಮತ್ತು ಪರಿಶುದ್ಧಾತ್ಮ ಎಂಬ ತ್ರೈಯೇಕತ್ವದಲ್ಲಿರುವಂತೆಯೇ, ಮನುಷ್ಯನು ಆತ್ಮ, ಪ್ರಾಣ ಮತ್ತು ಶರೀರದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಎಲ್ಲಾ ಮೂರು ಅವುಗಳದ್ದೇ ವಿಭಿನ್ನ ಜವಾಬ್ದಾರಿಗಳನ್ನು ಹೊಂದಿವೆ. ನಾವು ಈ ಮೂರೂ ವಿಭಿನ್ನ ಭಾಗಗಳ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಂಡರೆ, ಯಾವ ಭಾಗವು ಹೊಸ ಸೃಷ್ಟಿಯಾಗಿದೆ ಎಂದು ನಾವು ತಿಳಿದು ಕೊಳ್ಳುತ್ತೇವೆ. ನಾವು ಆತ್ಮ ಪ್ರಾಣ ಮತ್ತು ಶರೀರ – ಮನುಷ್ಯನ ಮೂರು ಭಾಗಗಳ ಕರ್ತವ್ಯಗಳನ್ನು ಮುಂದೆ ಕಾಣುತ್ತೇವೆ.

> ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಹೇಗೆಂದರೆ ದೇವರು ತಂದೆ, ಮಗ ಮತ್ತು ಪರಿಶುದ್ಧಾತ್ಮ ಎಂಬ ತ್ರೈಯೇಕತ್ವದಲ್ಲಿ ಇರುವಂತೆಯೇ, ಮನುಷ್ಯನು ಆತ್ಮ, ಪ್ರಾಣ ಮತ್ತು ಶರೀರದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ.




*ದೇವರ ವಾಕ್ಯದ ಪ್ರಕಾರ ಮನುಷ್ಯನ ಮೂರು ಭಾಗಗಳು (1 ಥೆಸ 5:23)*

**ಚಿತ್ರ - 2**

## ದೇಹದ ಮೂಲಭೂತ ಕಾರ್ಯಗಳು

ದೇಹವು ಲೋಕದ ಕುರಿತು ನಮ್ಮನ್ನು ಜಾಗೃತರಾಗುವಂತೆ ಮಾಡುತ್ತದೆ. ಅಂದರೆ, ಒಬ್ಬ ವ್ಯಕ್ತಿ ನಮ್ಮನ್ನು ಮುಟ್ಟಿದರೆ, ನಾವು ಅದನ್ನು ನಮ್ಮ ದೇಹದ ಮೇಲೆ ಸ್ಪರ್ಶದ ಜ್ಞಾನದಿಂದ ಅರಿತುಕೊಳ್ಳುತ್ತೇವೆ. ನಾವು ಇದನ್ನು ರಕ್ಷಣೆಯ ಅನುಭವವನ್ನು ಹೊಂದುವ ಮೊದಲೇ

ತಿಳಿದಿದ್ದೆವು. ಈಗಲೂ ಸಹ ಅದೇ ರೀತಿಯಾಗಿ ನಾವು ಅರಿಯುತ್ತೇವೆ, ಹಾಗಾಗಿ ದೇಹವು ಸತ್ತಿಲ್ಲ ಮತ್ತು ಕ್ರಿಸ್ತನೊಂದಿಗೆ ಅದು ಶಿಲುಬೆಗೇರಿಸಲ್ಪಟ್ಟಿಲ್ಲ.

## ಪ್ರಾಣದ ಮೂಲಭೂತ ಕಾರ್ಯಗಳು

ಅಂತೆಯೇ ಪ್ರಾಣದ ಕರ್ತವ್ಯವು ನಮ್ಮನ್ನು ಸ್ವಯಂ–ಪ್ರಜ್ಞಾವಂತರನ್ನಾಗಿ ಮಾಡುವುದು. ನಾವು ಯಾರೆಂದು ಅರಿತುಕೊಳ್ಳುವಂತೆ ನಮಗೆ ಸಹಾಯ ಮಾಡುವದು ನಮ್ಮ ಪ್ರಾಣವಾಗಿದೆ. ನಾವು ನೂತನ ಸೃಷ್ಟಿಯಾದಾಗ, ನಮ್ಮ ಹೆಸರು, ನಮ್ಮ ಕುಟುಂಬ, ನಮ್ಮ ಹಿಂದಿನ ಜೀವಿತ, ಇತ್ಯಾದಿಗಳನ್ನು ನಾವು ಮರೆಯುವುದಿಲ್ಲ. ಇದರ ಅರ್ಥವೇನೆಂದರೆ ಪ್ರಾಣವು ನೂತನ ಸೃಷ್ಟಿಯಾಗಲಿಲ್ಲ. ಅಂದರೆ ಪ್ರಾಣವು ಸತ್ತಿಲ್ಲ. (1 ಥೆಸಲೋನಿಕದವರಿಗೆ 5:23)

## ಆತ್ಮದ ಮೂಲಭೂತ ಕಾರ್ಯಗಳು

ಆದಾಗ್ಯೂ ಆತ್ಮವು, ದೇವರ ಕಡೆಗೆ ಅಥವಾ ಆತ್ಮ ಪ್ರಪಂಚದ ಜಾಗೃತಿಯ ಕುರಿತು ನಮ್ಮನ್ನು ಪ್ರಜ್ಞಾವಂತರಾಗುವಂತೆ ಮಾಡುತ್ತದೆ. ಅತ್ಮವು ದೇವರೊಂದಿಗೆ ಸಂಪರ್ಕಗೊಳ್ಳುವಂತೆ ಮತ್ತು ದೇವರ ಪ್ರಸನ್ನತೆಯನ್ನು ತಿಳಿದುಕೊಳ್ಳುವಂತೆ ನಮಗೆ ಸಹಾಯ ಮಾಡುತ್ತದೆ. ಆದಾಮನು ಪಾಪ ಮಾಡಿದ ಸಮಯದಿಂದ ದೇವರು ಇದ್ದಾನೆಂದು ಪ್ರಾಣವು (ಮನಸ್ಸು) ತಿಳಿದಿದ್ದರು, ಅವನಿಗೆ ದೇವರ ಪ್ರಸನ್ನತೆಯನ್ನು ಆತ್ಮದ ಮೂಲಕ ಅರಿಯಲು ಸಾಧ್ಯವಾಗಲಿಲ್ಲ. ಆತ್ಮದಲ್ಲಿ, ಆದಾಮನು ದೇವರಿಂದ ದೂರವಾದನು ಮತ್ತು ಅದು ಆತ್ಮೀಕ ಮರಣ, ಮನುಷ್ಯನು ಆತ್ಮವನ್ನು ಹೊಂದಿಲ್ಲ ಎಂಬುದು ಅದರ ಅರ್ಥವಲ್ಲ. ದೇವರೊಂದಿಗೆ ಸಂಬಂಧವನ್ನು ಹೊಂದಿರದ ಆತ್ಮವನ್ನು ಅವನೊಳಗೆ ಹೊಂದಿದ್ದಾನೆ. ಆದರೆ ಸಂತೋಷದ ಸುದ್ದಿಯೇನೆಂದರೆ, ಒಬ್ಬ ವ್ಯಕ್ತಿಯು ಹೊಸದಾಗಿ – ಹುಟ್ಟಿದವನಾದಾಗ, ಹಳೆಯ ಮನುಷ್ಯನ ಆತ್ಮವು ಕ್ರಿಸ್ತನೊಂದಿಗೆ ಶಿಲುಬೆಗೇರಿಸಲ್ಪಡುತ್ತದೆ ಮತ್ತು ದೇವರು ಅವನಿಗೆ ಹೊಸ ಆತ್ಮವನ್ನು ನೀಡುತ್ತಾರೆ. ಅವನು ಹೊಸದಾಗಿ ಸೃಷ್ಟಿಸಲ್ಪಟ್ಟ ಸ್ವರ್ಗೀಯ ಮನುಷ್ಯನಾಗುತ್ತಾನೆ.

**"ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು." (ಗಲಾತ್ಯ 2:20)**


**"ನಾನು ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ; ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿಮಾಡುವೆನು. ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು." (ಯೆಹೆ 36:25-26)**

ಒಬ್ಬ ವ್ಯಕ್ತಿ ಹೊಸದಾಗಿ ಹುಟ್ಟುವ ಮೊದಲು, ಅವನು ಇನ್ನೊಬ್ಬ ಮನುಷ್ಯನನ್ನು ನೋಡುವಾಗ ಅನುಭವಿಸುವಂತಹ ಅನುಭವದಂತೆ ದೇವರ ಪ್ರಸನ್ನತೆಯನ್ನು ಅನುಭವಿಸುವುದಿಲ್ಲ, ಕಾರಣ ಅವನ ಆತ್ಮದಲ್ಲಿ ಅವನು ದೇವರಿಂದ ಬೇರ್ಪಟ್ಟಿದ್ದಾನೆ. ಆದರೆ ಹೊಸದಾಗಿ ಹುಟ್ಟಿದ ನಂತರ, ವ್ಯಕ್ತಿಯು ದೇವರ ಪ್ರಸನ್ನತೆಯನ್ನು ಅನುಭವಿಸಲು ಪ್ರಾರಂಭಿಸುತ್ತಾನೆ. ಕಾರಣ ಅವನು ಆತ್ಮದ ಮಂಡಲದಲ್ಲಿ ಅಥವಾ ದೇವರ ರಾಜ್ಯದಲ್ಲಿ ನೂತನವಾಗಿ ಹುಟ್ಟಿದ್ದಾನೆ.

ಒಬ್ಬ ವ್ಯಕ್ತಿ ಅವನ ದೇಹದಲ್ಲಿ ಅಥವಾ ಅವನ ಪ್ರಾಣದಲ್ಲಿ ಹೊಸ ಸೃಷ್ಟಿಯಾಗುವುದಿಲ್ಲ, ಬದಲಿಗೆ ಅವನು ತನ್ನ ಆತ್ಮದಲ್ಲಿ ಹೊಸ ಸೃಷ್ಟಿ ಯಾಗುತ್ತಾನೆ.

> ಒಬ್ಬ ವ್ಯಕ್ತಿ ಅವನ ದೇಹದಲ್ಲಿ ಅಥವಾ ಅವನ ಪ್ರಾಣದಲ್ಲಿ ಹೊಸ ಸೃಷ್ಟಿ ಆಗುವುದಿಲ್ಲ, ಬದಲಿಗೆ ಅವನು ತನ್ನ ಆತ್ಮದಲ್ಲಿ ಹೊಸ ಸೃಷ್ಟಿಯಾಗುತ್ತಾನೆ.


ಒಬ್ಬನು ನೂತನ ಸೃಷ್ಟಿಯಾದಾಗ, ಒಂದು ಹೊಸ ಆತ್ಮ ಮತ್ತು ಒಂದು ಹೊಸ ಹೃದಯವು ಅವನಿಗೆ ನೀಡಲ್ಪಡುತ್ತದೆ. ಈ ಆತ್ಮೀಕ ಮನುಷ್ಯ ಅಥವಾ "ಸ್ವರ್ಗೀಯ ಮನುಷ್ಯ" ದೇವರ ಪ್ರಸನ್ನತೆಗೆ ಜಾಗೃತನಾಗಿ ಮಾಡಲ್ಪಟ್ಟಿರುತ್ತಾನೆ (ಚಿತ್ರ 3). ನೀವು ಹೊಸದಾಗಿ ಹುಟ್ಟಿದ ವ್ಯಕ್ತಿಯಾಗಿದ್ದರೆ, ಕ್ರಿಸ್ತನನ್ನು ಸ್ವೀಕರಿಸಿದ ನಂತರ ನೀವು ದೇವರ ಪ್ರಸನ್ನತೆಯನ್ನು ಅನುಭವಿಸಲು ಸಾಧ್ಯವಾಗುತ್ತಿರುವ ಜೀವಿತ ಮತ್ತು ನಿಮ್ಮ ಹಳೆಯ ಜೀವಿತವನ್ನು ನೆನಪಿಗೆ ತಂದುಕೊಳ್ಳಬೇಕೆಂದು ನಾನು ಬಯಸುತ್ತೇನೆ. ನೀವು ಪ್ರಾರ್ಥಿಸಲು ಎಲ್ಲಿಯಾದರು ಕುಳಿತುಕೊಳ್ಳುವಾಗ, ಆ ಸ್ಥಳದಲ್ಲಿ ದೇವರ ಮಹಾ ಪ್ರಸನ್ನತೆ ಇದೆ ಎಂದು ಆತ್ಮದಲ್ಲಿ ಹಿರಿಯರು ಹೇಳುವುದನ್ನು ಗಮನಿಸಿದ್ದೀರಾ?




*ಒಬ್ಬ ವ್ಯಕ್ತಿ ಅವನ ದೇಹದಲ್ಲಿ ಅಥವಾ ಅವನ ಪ್ರಾಣದಲ್ಲಿ ನೂತನ ಸೃಷ್ಟಿಯಾಗುವದಿಲ್ಲ, ಬದಲಿಗೆ ಅವನ ಆತ್ಮದಲ್ಲಿ ನೂತನ ಸೃಷ್ಟಿಯಾಗುತ್ತಾನೆ*


**ಚಿತ್ರ – 3**

## ಇ) ಆದಾಮನ ಪಾಪ ಮತ್ತು ಮನುಷ್ಯನ ರಚನೆಯಲ್ಲಿ ಬದಲಾವಣೆ




*ಆದಾಮನ ಪಾಪ ಮತ್ತು ಮನುಷ್ಯನ ರಚನೆಯಲ್ಲಿ ಬದಲಾವಣೆ. ಬಿದ್ದುಹೋಗುವ ಮೊದಲು ಮನುಷ್ಯ ದೇವರ ಮಹಿಮೆಯಿಂದ ತುಂಬಿದ್ದನು*

**(ಚಿತ್ರ 4)**




*ಬಿದ್ದುಹೋದ ನಂತರ, ಮನುಷ್ಯ ಮಹಿಮೆಯನ್ನು ಕಳೆದುಕೊಂಡ ಮತ್ತು ಆತ್ಮ, ಪ್ರಾಣ ಹಾಗೂ ಶರೀರಗಳು ಭ್ರಷ್ಟವಾದವು*

**(ಚಿತ್ರ 5)**

ನಾವು ನೂತನ ಸೃಷ್ಟಿಯಾಗುವ ಮೊದಲು, ನಮ್ಮ ಆತ್ಮವು ಸೈತಾನನಿಂದ ಪೂರ್ಣವಾಗಿ ಪ್ರಭಾವಕ್ಕೊಳಗಾಗಿತ್ತು. ಆದಾಮನು ಪಾಪಮಾಡಿದಾಗ, ಅವನು ದೇವರಾತ್ಮನೊಂದಿಗೆ ಸಂಬಂಧವನ್ನು ಮಾತ್ರವೇ ಕಳೆದುಕೊಳ್ಳಲಿಲ್ಲ, ಬದಲಿಗೆ ದೇವರು ಅವನಿಗೆ ನೀಡಿದ್ದ ಮಹಿಮೆಯನ್ನೂ ಕಳೆದುಕೊಂಡನು.

**"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ." (ರೋಮಾ 3:23)**

ಆದಾಮನ ಪಾಪದ ಮೂಲಕ ನಾವೆಲ್ಲರು ಪಾಪಿಗಳಾಗಿದ್ದೇವೆ ಮತ್ತು ನಮ್ಮ ಮಹಿಮೆಯನ್ನು ಕಳೆದುಕೊಂಡಿದ್ದೇವೆ. ಆದಾಮನು ದೇವರಿಗೆ ಅವಿಧೇಯನಾದನು ಮತ್ತು ಸೈತಾನನಿಗೆ ವಿಧೇಯನಾದನು. ಹಾಗೂ ಇದರಿಂದ, ಆದಾಮನ ಪ್ರಾಣದ ಮೂಲಕ ಸೈತಾನನು ಆದಾಮನ ಆತ್ಮದಲ್ಲಿ ಸ್ಥಳವನ್ನು ತೆಗೆದುಕೊಂಡನು.

**"ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ; ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ." (ಜ್ಞಾನೋ 20:27)**

ಸೈತಾನನು ಯಾವಾಗಲೂ ದೇವರ ಸ್ಥಾನವನ್ನು ಬಯಸುತ್ತಾನೆ.

**"ನೀನು ನಿನ್ನ ಮನಸ್ಸಿನಲ್ಲಿ– ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು." (ಯೆಶಾಯ 14:13)**

ಆದ್ದರಿಂದಲೇ, ನಾವು ಆತ್ಮದಲ್ಲಿ ಹೊಸ ಸೃಷ್ಟಿಯಾದಾಗ, ಕತ್ತಲೆಯಿಂದ ಅಥವಾ ಸೈತಾನನ ವಶದಿಂದ ಬಿಡುಗಡೆಯಾದೆವು ಎಂದು ವಾಕ್ಯದಲ್ಲಿ ಹೇಳುತ್ತದೆ.

**"ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು." (ಕೊಲೊ 1:13)**

**"ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವುದರಿಂದ ಪಾಪ ಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು." (ಅ.ಕೃ 26:18)**

ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, ದೇವರ ಮಕ್ಕಳು ಒಮ್ಮೆ ಅವಿಧೇಯತ್ವದಲ್ಲಿ ನಡೆದರು ಎಂದು ಹೇಳುತ್ತದೆ.

**"ನೀವು ಪೂರ್ವದಲ್ಲಿ ಅಪರಾಧಗಳನ್ನು ಪಾಪಗಳನ್ನು ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರನಡೆಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೆಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ." (ಎಫೆಸ 2:2)**

ದೇವರ ಆತ್ಮನು ನಮ್ಮ ಆತ್ಮದೊಂದಿಗೆ ವಾಸಿಸುತ್ತಿದ್ದಾಗ, ಎಲ್ಲವೂ ಒಳ್ಳೆಯದಾಗಿತ್ತು ಮತ್ತು ಪರಿಶುದ್ಧವಾಗಿತ್ತು. ಆದರೆ ಆದಾಮನು (ಆದಿಕಾಂಡ 2:7ರ ಪ್ರಕಾರ ಬದುಕುವ ಪ್ರಾಣಿಯಾಗಿರುವವನು) ಅವನ ಹಕ್ಕನ್ನು ಬಿಟ್ಟುಕೊಟ್ಟ ಸಮಯ, ಸೈತಾನನು ಆದಾಮನ ಪ್ರಾಂತ್ಯದೊಳಗೆ ಪ್ರವೇಶಿಸಿದನು ಮತ್ತು ಅವನ ಆತ್ಮದ ಮೇಲೆ ಒಡೆಯನಾದನು ಹಾಗೂ ಅವನ ಮನಸ್ಸಿನ ಆಲೋಚನೆಗಳನ್ನು ಭ್ರಷ್ಟಗೊಳಿಸಿದನು ಹಾಗೂ ಈ ಮೂಲಕ ದೇಹವನ್ನು ಸೋಂಕಿತಗೊಳಿಸಿದನು. ಹಾಗಾಗಿ, ಪಾಪದಿಂದ ಸೈತಾನನು ಮನುಷ್ಯನ ಆತ್ಮ, ಪ್ರಾಣ ಮತ್ತು ಶರೀರವನ್ನು ಪ್ರಭಾವಗೊಳಿಸಿದನು ಮತ್ತು ಭ್ರಷ್ಟಗೊಳಿಸಿದನು. ಸತ್ಯವೇದ ಹೇಳುತ್ತದೆ, **"ಜ್ಞಾನಿಗಳ ಸಹವಾಸಿ ಜ್ಞಾನಿಯಾಗುವನು; ಜ್ಞಾನಹೀನರ ಒಡನಾಡಿ ಸಂಕಟಪಡುವನು." (ಜ್ಞಾನೋ 13:20)**

ಅದರ ಅರ್ಥ, ಅಜ್ಞಾನಿಗಳ ಸಂಗಡ ನಡೆದರೆ ನಾವೂ ಸಹ ಅಜ್ಞಾನಿಗಳಾಗುತ್ತೇವೆ. ದೇವರು ಪರಿಶುದ್ಧನಾಗಿ ಸೃಷ್ಟಿಮಾಡಿದ್ದ ಮನುಷ್ಯನು ಸೈತಾನನ ಸ್ವಭಾವ ಹೊಂದಿದವನಾಗಿ ಬದಲಾದನು. ಪ್ರತೀ ಮನುಷ್ಯರ ಆಲೋಚನೆಯು ಕೆಟ್ಟದಾಯಿತು.

**ಪ್ರಾಣ**

ಪ್ರಾಣದ ಕುರಿತಾದ ಹೆಚ್ಚಿನ ಜ್ಞಾನವು "ಆತ್ಮೀಕ ಬೆಳವಣಿಗೆ"ಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಮನುಷ್ಯನ ರಚನೆಯಲ್ಲಿ ಆತ್ಮವು ಬಹು ಮುಖ್ಯ ಮತ್ತು ಉನ್ನತ ಭಾಗವಾಗಿದೆ. ನಮ್ಮ ಪ್ರಾಣದಲ್ಲಿ 3 ಭಾಗಗಳಿವೆ. ಅವು ಯಾವದೆಂದರೆ ಮನಸ್ಸು, ಚಿತ್ತ, ಮತ್ತು ನಮ್ಮ ಭಾವನೆಗಳು. ನಾವು ನಮ್ಮ ಮನಸ್ಸಿನೊಂದಿಗೆ ಚಿಂತಿಸುತ್ತೇವೆ, ಚಿತ್ತದಿಂದ ನಿರ್ಧಾರಮಾಡುತ್ತೇವೆ ಮತ್ತು ನಿರ್ಧಾರಗಳನ್ನು ಪೂರ್ತಿಕರಿಸಲು ನಾವು ಉಪಯೋಗಿಸುವ ತೋರ್ಪಡಿಸುವಿಕೆಗಳು (ನಗು, ಕೋಪ, ಅಳು, ಇತ್ಯಾದಿ) ನಮ್ಮ ಭಾವನೆಗಳ ಮೂಲಕವಾಗಿದೆ. ನಮ್ಮ ಶರೀರದ ಉದ್ದೇಶ ನಾವು ಈಗಿರುವ ಪ್ರದೇಶವಾಗಿರುವ ಭೌತಿಕ ಜಗತ್ತಿನೊಂದಿಗೆ ಸಂವಹನಿಸುವುದಾಗಿದೆ.


## ಈ) ಪ್ರಾಣದಿಂದ ಶರೀರಕ್ಕೆ ಬೀಳುವಿಕೆ

ದೇವರಾತ್ಮನು ಮನುಷ್ಯನಿಂದ ನಿರ್ಗಮಿಸಿದಾಗ ಮತ್ತು ಆ ಸ್ಥಳ ಸೈತಾನನಿಂದ ಆಕ್ರಮಿಸಲ್ಪಟ್ಟಾಗ, ಮನುಷ್ಯನು ಹಿಂಬಡ್ತಿಸಲ್ಪಟ್ಟನು ಅಥವಾ ದೇವರು ಅವನಿಗೆ ನೀಡಿದ ಸ್ಥಾನವನ್ನು ಕಳೆದುಕೊಂಡನು. ಆದಾಮನು ಸೃಷ್ಟಿಸಲ್ಪಟ್ಟಾಗ, ಒಂದೇ ಸಮಯದಲ್ಲಿ ಅವನು ಎರಡು ಲೋಕದೊಂದಿಗೆ ಸಂಪರ್ಕಿಸಲು ಆಗುತ್ತಿತ್ತು. ಕಾರಣ ಅವನು ಎರಡು ಶರೀರವನ್ನು ಹೊಂದಿದ್ದನು.


1.**ಭೌತಿಕ ಶರೀರ** : ಭೌತಿಕ ಪ್ರಪಂಚದೊಂದಿಗೆ ಸಂವಹನಿಸುವ ಸಲುವಾಗಿ (ಉದಾ: ಉದ್ಯಾನವನದಲ್ಲಿ ಕೆಲಸಮಾಡಲು, ಅವನು ಭೂಮಿಯಲ್ಲಿದ್ದಾಗ ಎಲ್ಲಾ ರೀತಿಯ ಕೆಲಸಗಳನ್ನು ಮಾಡಲು) .

**2.ಆತ್ಮೀಕ ಶರೀರ :** ದೇವರೊಂದಿಗೆ, ಆತ್ಮೀಕ ಪ್ರಪಂಚದೊಂದಿಗೆ ಸಂವಹನಿಸಲು.

ಅವನು ಈ ಎರಡೂ ಶರೀರವನ್ನು ಹೊಂದಿದ್ದರೂ, ದೇವರು ಅವನನ್ನು ಮಧ್ಯದ ಭಾಗವಾಗಿರುವ ಪ್ರಾಣದ ಹಂತದಲ್ಲಿ ಇರಿಸಿದ್ದರು (ಚಿತ್ರ6).




**ಚಿತ್ರ – 6**




*ಬಿದ್ದುಹೋಗುವ ಮೊದಲು ಆದಾಮನಿಗೆ ಒಂದೇ ಸಮಯದಲ್ಲಿ ಎರಡು ಲೋಕಗಳಲ್ಲಿ (ಮಂಡಲಗಳು) ಜೀವಿಸಲು ಸಾಧ್ಯವಾಗುತ್ತಿತ್ತು*

**(ಚಿತ್ರ 7)**

ಆತ್ಮ – ಮೊದಲ ಸ್ಥಾನ (ರಾಜ)

ಪ್ರಾಣ – ಎರಡನೇ ಸ್ಥಾನ (ಸೇವಕ)

ಶರೀರ – ಮೂರನೇ ಸ್ಥಾನ (ದಾಸ)

ದೇವರು ಮಾನವನನ್ನು ಸೃಷ್ಟಿಸಿದಾಗ ಅವನನ್ನು ನಿಯಂತ್ರಿಸುವ ಭಾಗವು ಆತನ ಪ್ರಾಣವಾಗಿತ್ತು, ಆದರೆ ಅದೇ ಸಮಯದಲ್ಲಿ ಅವನು ಭೌತಿಕ ಶರೀರ ಮತ್ತು ಆತ್ಮೀಕ ಶರೀರವನ್ನು ಹೊಂದಿದ್ದನು.

ಆದಿಕಾಂಡ 2:7 ಹೇಳುತ್ತದೆ, ದೇವರು ನೆಲದಿಂದ ಮಣ್ಣನ್ನು ತೆಗೆದುಕೊಂಡನು, ಮನುಷ್ಯನನ್ನು ಮಾಡಿದನು ಮತ್ತು ಅವನ ಜೀವಶ್ವಾಸವನ್ನು ಇವನೊಳಗೆ ಊದಿದನು. ಲೋಕದಿಂದ ತೆಗೆಯಲ್ಪಟ್ಟದ್ದನ್ನು ಮತ್ತು ಪರಲೋಕದಿಂದ ತೆಗೆಯಲ್ಪಟ್ಟದ್ದನ್ನು ಒಟ್ಟಿಗೆ ಸೇರಿಸುವುದರ ಮೂಲಕ ಒಂದು ಹೊಸ ಸೃಷ್ಟಿಯು ಮಾಡಲ್ಪಟ್ಟಿತು. ಮನುಷ್ಯನು **ಬದುಕುವ ಪ್ರಾಣಿಯಾದನು .**

ದೇವರು ಮಾನವನನ್ನು ಸೃಷ್ಟಿಸಿದಾಗ ಅವನನ್ನು ನಿಯಂತ್ರಿಸುವ ಭಾಗವು ಆತನ ಪ್ರಾಣವಾಗಿತ್ತು. ಆದರೆ ಅದೇ ಸಮಯದಲ್ಲಿ ಅವನು ಭೌತಿಕ ಶರೀರ ಮತ್ತು ಆತ್ಮೀಕ ಶರೀರವನ್ನು ಹೊಂದಿದ್ದನು. ಅವೆರಡುಗಳಲ್ಲೊಂದಕ್ಕೆ ಅವನು ಬಯಸಿದ ಹಾಗೆ ಚಲಿಸಬಹುದಾಗಿತ್ತು. ಮಾನವನು ಇಷ್ಟಪಟ್ಟಿದ್ದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ದೇವರು ಅವನಿಗೆ ಕೊಟ್ಟಿದ್ದರು, ಅಂದರೆ ಯಾವಾಗಲು ಉನ್ನತವಾಗಿರುವ ಆತ್ಮ (ಮುಂಬದಿ) ಅಥವಾ ದೇಹ(ಹಿಂಬದಿ)ವನ್ನು ಆರಿಸಿಕೊಳ್ಳಬಹುದಾಗಿತ್ತು . ಹಾಗೆಯೇ ಮನುಷ್ಯನಿಗೆ ಜೀವ (ಆತ್ಮ) ಅಥವಾ ಮರಣ (ದೇಹ) ಗಳ ಮಧ್ಯೆ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನೂ ಕೊಡಲಾಗಿತ್ತು.

"ದೇವರ ಉದ್ದೇಶವನ್ನು" ನೆರವೇರಿಸುವ ಸಲುವಾಗಿ, ಸ್ವತಃ ದೇವರೇ ಮನುಷ್ಯನ "ಇಚ್ಛಾ ಶಕ್ತಿ"ಯಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಸತ್ಯವೇದದುದ್ದಕ್ಕೂ ನಾವು ಇದೇ ಸಂಗತಿಯನ್ನು ಕಾಣಲು ಸಾಧ್ಯವಾಗುತ್ತದೆ (ಆದಿ 2:9,16,17; ಧರ್ಮೋಪದೇಶಕಾಂಡ 30:19; ಜ್ಞಾನೋಕ್ತಿ 18:21). ಏದೆನ್ ತೋಟದಲ್ಲಿ, ಎರಡು ಮರಗಳನ್ನು ಸೂಚಿಸಲಾಗಿದೆ.

1.**ಜೀವ ವೃಕ್ಷ** (ಮುಂಬದಿ) [ಜೀವ]

2.**ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಜ್ಞಾನವೃಕ್ಷ** (ಹಿಂಬದಿ) [ಮರಣ]

ದೇವರು ಆದಾಮ ಮತ್ತು ಹವ್ವಳಿಗೆ ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದು ಎಂದು ಹೇಳಿದನು, ಹಾಗೆ ಮಾಡಿದರೆ ನೀವು ನಿಜವಾಗಿಯೂ ಸಾಯುವಿರಿ ಎಂದು ಅವರಿಗೆ ದೇವರು ಎಚ್ಚರಿಸಿದನು. ಆದರೆ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರವನ್ನು ಮನುಷ್ಯನು ಆರಿಸಿಕೊಂಡಾಗ, ಆತ್ಮದೊಂದಿಗಿನ

ಸಂಬಂಧವು ಕಳೆದುಹೋಯಿತು ಮತ್ತು ಅವರು ದೇವರಿಂದ ಬೇರ್ಪಟ್ಟರು. ಬೇರೆ ಮಾತುಗಳಲ್ಲಿ ಹೇಳುವದಾದರೆ , ಅವರು ಆತ್ಮದ ಮಂಡಲದಿಂದ ಬೇರ್ಪಟ್ಟರು. ಅವರು ಆತ್ಮೀಕವಾಗಿ ಮರಣಹೊಂದಿದರು. ನಂತರ ದೇವರು ಅವರನ್ನು ಏದೇನ್ ತೋಟದಿಂದ ಹೊರಡಿಸಿದರು.

**"ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವುದಕ್ಕಾಗಿ ಅವನನ್ನು ಏದೇನ್ ತೋಟದಿಂದ ಹೊರಡಿಸಿಬಿಟ್ಟನು." (ಆದಿಕಾಂಡ 3:23)**

ಅದರ ಅರ್ಥ ಆದಾಮನು ಎರಡನೇ ಹಂತದಿಂದ ಮೂರನೇ ಹಂತಕ್ಕೆ ಇಳಿಸಲ್ಪಟ್ಟನು. ಅಂದರೆ ಪ್ರಾಣದ ಹಂತದಿಂದ ಶರೀರದ ಹಂತಕ್ಕೆ ಹಿಂಬಡ್ತಿಸಲ್ಪಟ್ಟನು. ಮನುಷ್ಯನು ಪಾಪಮಾಡುವ ಮೊದಲು, ದೇವರು ಅವನನ್ನು **"ಬದುಕುವ ಪ್ರಾಣಿ"** ಅಥವಾ "ಆತ್ಮದೊಂದಿಗಿನ ಪ್ರಾಣ" ಎಂದು ಕರೆದರು.

**"ಹೀಗಿರಲು ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು." (ಆದಿಕಾಂಡ 2:7)**

ಆದರೆ ಮಾನವನು ಪಾಪ ಮಾಡಿದ ನಂತರ, ದೇವರು ಮನುಷ್ಯನನ್ನು **"ಪ್ರಾಣಿ"** ಎಂದು ಕರೆಯಲಿಲ್ಲ, ಬದಲಿಗೆ **"ಮರ್ತ್ಯರೇ"** ಎಂದು ಕರೆದನು. ಮಾನವನು ಕೇವಲ ಮಾಂಸಧಾರಿ.

"ಆಗ ಯೆಹೋವನು – ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವುದಿಲ್ಲ; ಅವರು ಭ್ರಷ್ಟರಾದದರಿಂದ ಮರ್ತ್ಯರೇ." (ಆದಿಕಾಂಡ 6:3)

> ದೇವರು ಮಾನವನನ್ನು ಸೃಷ್ಟಿಸಿದಾಗ ಅವನನ್ನು ನಿಯಂತ್ರಿಸುವ ಭಾಗವು ಆತನ ಪ್ರಾಣವಾಗಿತ್ತು, ಆದರೆ ಅದೇ ಸಮಯದಲ್ಲಿ ಅವನು ಭೌತಿಕ ಶರೀರ ಮತ್ತು ಆತ್ಮೀಕ ಶರೀರವನ್ನು ಹೊಂದಿದ್ದನು .

ಇದು ಮಾನವನು ಪ್ರಾಣವನ್ನು ಹೊಂದಿಲ್ಲ ಎಂದು ತಿಳಿಸುವುದಿಲ್ಲ, ಬದಲಿಗೆ ಈಗ ಅವನನ್ನು ನಿಯಂತ್ರಿಸುವುದು ಶರೀರವಾಗಿದೆ. ಇದರ ಅರ್ಥ ಅವನು ತನ್ನ ದೃಷ್ಟಿಯನ್ನು ಕಳೆದುಕೊಂಡಿದ್ದಾನೆ. "ದೇವರ ಹೃದಯದಲ್ಲಿ ನಮ್ಮ ಮೇಲೆ ಇರುವ ಉದ್ದೇಶವನ್ನು ನಾವು ತಿಳಿದುಕೊಂಡಾಗ, ಅದು ನಮ್ಮ ದೃಷ್ಟಿಯಾಗಿದೆ [ದರ್ಶನವಾಗಿದೆ]." ಮಾನವನು ಅವನ ಐದು ಇಂದ್ರಿಯಗಳ ಮೂಲಕ ನಡೆಯಲು ಪ್ರಾರಂಭಿಸಿದನು. ಸತ್ಯವೇದದ ವಾಕ್ಯಗಳಲ್ಲಿ ಹೇಳುವ ಪ್ರಕಾರ, "ಮಾನವನು ನೋಡುವುದರ ಮೂಲಕ ನಡೆಯಲು ಪ್ರಾರಂಭಿಸಿದನು." (2 ಕೊರಿಂಥ 5:7) ಅದರ ಅರ್ಥ, ಅವನು ಮೂರನೇ ಸ್ಥಾನಕ್ಕೆ ಅಂದರೆ ಶರೀರಕ್ಕೆ ಇಳಿಸಲ್ಪಟ್ಟನು. ಮೊದಲು ಪ್ರಾಣದ ಸ್ಥಾನದಲ್ಲಿದ್ದಾಗ, ಅವನು ಆತ್ಮೀಕ ಪ್ರಪಂಚ ಹಾಗೆಯೇ ಭೌತಿಕ ಪ್ರಪಂಚವನ್ನು ನೋಡಲು ಸಾಧ್ಯವಾಗುತ್ತಿತ್ತು. ಆದರೆ ಅವನು ಕೆಳಗಿಳಿಸಲ್ಪಟ್ಟಾಗ, ಆತ್ಮೀಕ ಪ್ರಪಂಚದ ಜಾಗ್ರತೆಯನ್ನು ಕಳೆದುಕೊಂಡನು.

ದೇವರು ಮನುಷ್ಯನನ್ನು, ಆತ್ಮವು ನಿಯಂತ್ರಿಸುವ ಸ್ಥಾನದಲ್ಲಿ ಇರಲು (ಮೊದಲ ಹಂತ) ಬಯಸಿದನು ಆದರೆ ಪಾಪದಿಂದ ಅವನು ಮೂರನೇ ಸ್ಥಾನಕ್ಕೆ ಅಂದರೆ ಶರೀರಕ್ಕೆ ಹಿಂಬಡ್ತಿಸಲ್ಪಟ್ಟನು. ಈ ಸ್ಥಿತಿಯಲ್ಲಿ, ಬಿದ್ದು ಹೋಗಿರುವ ಮನುಷ್ಯನನ್ನು ಬಿಡಿಸುವ ಸಲುವಾಗಿ, ದೇವರು ತನ್ನ ಪ್ರೀತಿಯನ್ನು ಯೇಸುವಿನ ಮೂಲಕ ಶಿಲುಬೆಯ ಮೇಲೆ ತೋರಿಸುತ್ತಾರೆ. ಅವನು ಮನುಕುಲದ ಪಾಪಕ್ಕಾಗಿ ಸತ್ತನು ಒಬ್ಬ ವ್ಯಕ್ತಿ ಪಾಪ ಮಾಡಿದಾಗ, ಅದು ಇತರರಿಗೂ ಮುಂದುವರೆಸಲ್ಪಟ್ಟಿತು. ಆದಾಮನ ಪಾಪದ ಮೂಲಕ ನಾವೆಲ್ಲರು ಪಾಪಿಗಳಾದೆವು. ನಾವೆಲ್ಲರು ದೇವರಿಂದ ಬೇರ್ಪಟ್ಟೆವು. ಯೇಸುವನ್ನು ನಮ್ಮ ರಕ್ಷಕನಾಗಿ ಸ್ವೀಕರಿಸಿದಾಗ, ಅದೇ ಕ್ಷಣದಿಂದ ದೇವರೊಂದಿಗೆ ಸಂಪರ್ಕ ಹೊಂದಿಲ್ಲದ ಆತ್ಮವು ಹೊಸದಾಗಿ ಹುಟ್ಟಿತು, ಅಂದರೆ ನಮ್ಮ ಆತ್ಮವು ಹೊಸದಾಗಿ ಹುಟ್ಟಿತು, ನಾವು ದೇವರೊಂದಿಗೆ ಒಂದೇ ಆತ್ಮವಾದೆವು. ಇದು ಹಳೆಯ ಒಡಂಬಡಿಕೆಯ ಒಂದು ಮಹತ್ವದ ಪ್ರವಾದನೆಯ ನೆರವೇರುವಿಕೆ.

**"ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು." (ಯೆಹೆಜ್ಕೇಲ 36:25-26)**

ದೇವರು ಮನುಷ್ಯನನ್ನು ಒಂದು ಉದ್ದೇಶದಿಂದ ಸೃಷ್ಟಿಸಿದನು. ಅದು, 'ಆತ್ಮವು ಹೇಳುತ್ತದೆ, ಪ್ರಾಣವು ಅದನ್ನು ಸ್ವೀಕರಿಸುತ್ತದೆ ಮತ್ತು ಅದಕ್ಕೆ ಒಪ್ಪುತ್ತದೆ ಹಾಗೂ ದೇಹವನ್ನು ಬಳಸಿಕೊಂಡು ಅದನ್ನು ಸಂಭವಿಸುವಂತೆ ಮಾಡುತ್ತದೆ.'

ದೇವರಾತ್ಮನಿಂದ ನಡೆಸಲ್ಪಡುವವರು ದೇವರ ಪುತ್ರರು. ದೇವರು ಮನುಷ್ಯನನ್ನು ಆ ಉದ್ದೇಶದಿಂದ ಸೃಷ್ಟಿಸಿದನು. ಅಂದರೆ ಆತ್ಮವು ಹೇಳುತ್ತದೆ, ಪ್ರಾಣವು ಸ್ವೀಕರಿಸುತ್ತದೆ ಮತ್ತು ಅದಕ್ಕೆ ಒಪ್ಪಿಗೆ ನೀಡುತ್ತದೆ ಹಾಗೂ ದೇಹವನ್ನು ಉಪಯೋಗಿಸಿ ಅದು ಸಂಭವಿಸುವಂತೆ ಮಾಡುತ್ತದೆ.

ರೋಮಾಪುರದವರಿಗೆ 8:14 ಹೇಳುತ್ತದೆ, **"ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು."** ಈ ನಿರ್ದೇಶನದಲ್ಲಿ ಏನಾದರೂ ಬದಲಾವಣೆಯಾದರೆ, ಅಂದರೆ ಶರೀರವು ಹೇಳುವಂತದ್ದನ್ನು ನಾವು ಮಾಡಿದರೆ ನಿಜವಾಗಿಯೂ ನಾವು ಸಾಯುತ್ತೇವೆ.

"ನೀವು **ಶರೀರಭಾವವನ್ನು ಅನುಸರಿಸಿ** ಬದುಕಿದರೆ **ಸಾಯುವುದು** ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವುದಾದರೆ ಜೀವಿಸುವಿರಿ." (ರೋಮಾ 8:13)

**ಪ್ರತಿಯೊಂದೂ ಆತ್ಮದಿಂದಲೇ ಪ್ರಾರಂಭವಾಗಬೇಕು. ನಾವು ನೋಡುವುದರಿಂದ ಜೀವಿಸಿದರೆ, ಶರೀರದ ಪ್ರಕಾರ ನಾವು ಜೀವಿಸುತ್ತೇವೆ, ಆದರೆ ನಾವು "ನಂಬಿಕೆ"ಯಿಂದ ದೇವರ ವಾಕ್ಯದಿಂದ ಜೀವಿಸುತ್ತಿದರೆ, ಆತ್ಮದಿಂದ ಜೀವಿಸುತ್ತಿದ್ದೇವೆ.**

ಭೌತಿಕ ಲೋಕದೊಂದಿಗೆ ಸಂವಹನಿಸಲು ದೇವರು ಶರೀರವನ್ನು ಸೃಷ್ಟಿಸಿದರು ಆದರೆ ಯಾವಾಗ ಮನುಷ್ಯನ ಆತ್ಮವನ್ನು ಸೈತಾನನು ಪಾಪದಿಂದ ಪ್ರಭಾವಿಸಿದನೋ ಆಗ ಸೈತಾನಿಕ ಕಾರ್ಯ ಪ್ರಾಣ ಮತ್ತು ದೇಹವನ್ನು ತುಂಬಿತು. ಹಾಲಿನ ಪಾತ್ರೆಯೊಳಗೆ ಒಂದು ಹನಿ ನೀಲಿ ಶಾಯಿ (ಇಂಕ್) ಬಿದ್ದರೆ ಹಾಲಿನ ಬಣ್ಣವು ನೀಲಿಯಾಗಿ ಬದಲಾಗುತ್ತದೆ. ಅದೇ ರೀತಿಯಲ್ಲಿ, ದೇವರು ಸೃಷ್ಟಿಸಿದ ಪರಿಶುದ್ಧ ದೇಹವು ಕೇವಲ ಮರ್ತ್ಯವಾಯಿತು ಮತ್ತು ಮನುಷ್ಯನ ಆಲೋಚನೆಗಳು ಮಲಿನವಾದವು. ಪಾಪದಿಂದ ಆತ್ಮದಲ್ಲಿ ಮನುಷ್ಯನು ತಾನೇ ಸ್ವತಃ ದೇವರಿಂದ ಬೇರ್ಪಟ್ಟದ್ದರಿಂದ ಮತ್ತು ಸೈತಾನನು ಅವನ ಜೀವಿತದಲ್ಲಿ ಆಳ್ವಿಕೆ ತೆಗೆದುಕೊಳ್ಳಲು ಅನುಮತಿಸಿದರಿಂದ ಈ ಸಂಗತಿಗಳು ಜರುಗಿದವು. ನಾವು ಯಾರಲ್ಲಿಯೂ ಅಥವಾ ಯಾವುದರಲ್ಲಿಯೂ ಒಳ್ಳೇತನವನ್ನು ಕಾಣಲು ಸಾಧ್ಯವಾಗದಿರುವುದಕ್ಕೆ ಇದು ಬಹುಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಒಬ್ಬ ವ್ಯಕ್ತಿ ಅವನೊಳಗೆ ಶೇಕಡಾ 95ರಷ್ಟು ಒಳ್ಳೇದನ್ನು ಹೊಂದಿದ್ದರೆ, ನಾವು ಅದನ್ನು ನಿರ್ಲಕ್ಷಿಸುತ್ತೇವೆ ಮತ್ತು ಅವನಲ್ಲಿ ಶೇಕಡಾ 5ರಷ್ಟು ಕೆಟ್ಟತನವನ್ನು ನೋಡುತ್ತೇವೆ. ಇನ್ನೊಂದು ಬದಿಯಲ್ಲಿ, ಒಬ್ಬ ವ್ಯಕ್ತಿ ಅವನಲ್ಲಿ ಶೇಕಡಾ 1ರಷ್ಟು ಒಳ್ಳೇದನ್ನು ಮತ್ತು 99ರಷ್ಟು ಕೆಟ್ಟತನವನ್ನು ಹೊಂದಿದ್ದರೆ, ಒಬ್ಬ ನಿಜವಾದ ದೇವರ ಮಗುವು, ಲಭ್ಯವಿರುವ ಶೇಕಡಾ 1ರಷ್ಟು ಒಳ್ಳೇದನ್ನು ತೆಗೆದುಕೊಳ್ಳುತ್ತಾನೆ, ಅವನ/ಅವಳ ಶೇಕಡಾ 1ರಷ್ಟು ಒಳ್ಳೇದರ ಬಗ್ಗೆ ಮಾತನಾಡುತ್ತಾನೆ ಮತ್ತು ದೇವರ ವಾಕ್ಯ ಹಾಗೂ ತನ್ನ ಆತ್ಮನ ಶಕ್ತಿಯಿಂದ ಅವನ ಎಲ್ಲಾ ದುರ್ನಡತೆಯಿಂದ ಕ್ರಿಸ್ತನ ಸ್ವಭಾವಕ್ಕೆ ಬದಲಾಗುವಂತೆ ಆ ವ್ಯಕ್ತಿಗೆ ಸಹಾಯ ಮಾಡುತ್ತಾನೆ.

ಇದನ್ನೇ ನಮ್ಮ ಕರ್ತನು ಶಿಲುಬೆಯ ಮೇಲೆ ಮಾಡಿದ್ದು. ಪಾಪವನ್ನೇ ಅರಿಯದ ಮನುಷ್ಯನು ತಮ್ಮ ಕಾರ್ಯಗಳ ನಿಮಿತ್ತ ಸಾವಿಗೆ ಅರ್ಹರಾಗಿದ್ದ ಇಬ್ಬರು ಕಳ್ಳರ ಮಧ್ಯದಲ್ಲಿ ಶಿಲುಬೆಗೇರಿಸಲ್ಪಟ್ಟನು. ಚಿಕ್ಕಂದಿನಿಂದಲೂ ಈ ಕಳ್ಳರು ಅನೇಕರನ್ನು ದೋಚಿರಬಹುದು, ಅನೇಕರನ್ನು ಸಾಯಿಸಿರಬಹುದು ಮತ್ತು ಅನೇಕ ಪಾಪಗಳನ್ನು ಮಾಡಿರಬಹುದು. ಮೊದಲಿಗೆ ಅವರಿಬ್ಬರೂ ಯೇಸುವನ್ನು ದೂಷಿಸಿದರು. ಆದರೆ ಶಿಲುಬೆಯ ಮೇಲೆ ಯೇಸುವಿನ ಉತ್ತರವನ್ನು ಅವರು ಕಂಡಾಗ, “ಅವರು ತಾವು ಏನು ಮಾಡುತ್ತೇವೆಂಬದನ್ನು ಅರಿಯರು, ಅವರನ್ನು ಕ್ಷಮಿಸು” ಈ ಮಾತುಗಳು ಒಬ್ಬ ಕಳ್ಳನಿಗೆ ಪಶ್ಚಾತ್ತಾಪ ಮತ್ತು ಮನತಿರುಗುವಿಕೆಯನ್ನು ತಂದವು ಮತ್ತು ಅವನು ಶಿಲುಬೆಯ ಮೇಲೆ ಯೇಸುವಿಗೆ ಹೇಳಿದನು, “ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ, ನನ್ನನ್ನು ನೆನೆಸಿಕೋ.” ಇದು ಅವನ ಜೀವನದಲ್ಲಿನ ಮೊದಲ ಒಳ್ಳೆಯ ಮಾತುಗಳಾಗಿರಬಹುದು. ಆ ಏಕೈಕ ಒಳ್ಳೆಯ ಸಂಗತಿಯನ್ನು ಹಿಡಿದುಕೊಂಡದ್ದರಿಂದ ಮತ್ತು ಮಿಕ್ಕಿದ್ದ 99%ರಷ್ಟರ ಕೆಟ್ಟದ್ದನ್ನು ಮರೆತದ್ದರಿಂದ ಅವನು ದೇವರ ರಾಜ್ಯಕ್ಕೆ ಸೇರಿಸಲ್ಪಟ್ಟನು. ಯೇಸುವಿನಂತೆಯೇ ನಾವೂ ಸಹ ಒಬ್ಬ ವ್ಯಕ್ತಿಯಲ್ಲಿನ 99%ರಷ್ಟರ ಕೆಟ್ಟದ್ದನ್ನು ನೋಡದೆ 1%ರಷ್ಟರ ಒಳ್ಳೇದನ್ನು ನೋಡಲು ಪ್ರಯತ್ನಿಸಬೇಕು, ಅದನ್ನು ಉತ್ತೇಜಿಸಬೇಕು ಮತ್ತು 99%ರಷ್ಟರ ಕೆಟ್ಟದ್ದನ್ನು ಒಳ್ಳೇಯದಾಗಿ ಬದಲಾಯಿಸಬೇಕು. ಕ್ರಿಸ್ತನನ್ನು ನಮ್ಮ ಮಾದರಿಯನ್ನಾಗಿ ಮಾಡಿಕೊಳ್ಳಬೇಕು.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನೀನು ನನಗೆ ನೀಡಿರುವ ತಿಳುವಳಿಕೆಗಾಗಿ ವಂದನೆಗಳು. ನನ್ನ ದೇಹ ಅಥವಾ ಪ್ರಾಣವಲ್ಲ, ನನ್ನ ಆತ್ಮವಾಗಿದೆ ನೂತನವಾಗಿರುವುದು ಎಂದು ನಾನು ಅರಿತುಕೊಂಡೆ, ಹಾಗಾಗಿ ನಾನು ಎಲ್ಲವನ್ನೂ ಆತ್ಮದಿಂದ ಪ್ರಾರಂಭಿಸುವಂತೆ ನನಗೆ ಸಹಾಯಮಾಡು. ಕರ್ತನೇ, ಶರೀರದ ಪ್ರಕಾರ ಜೀವಿಸಿ ನೋಟದಿಂದ ನಡೆಯುವುದರ ಬದಲಾಗಿ ಆತ್ಮದಿಂದ ಜೀವಿಸಿ ನಂಬಿಕೆಯಿಂದ ನಡೆಯುವುದಕ್ಕೆ ನನಗೆ ಸಹಾಯ ಮಾಡು, ಆದರಿಂದ ನಾವು ನಿನ್ನ ಮಕ್ಕಳಾಗಿ ಪ್ರಕಟಗೊಳ್ಳುವೆವು. ಮತ್ತೊಮ್ಮೆ ನಾನು ನಿನ್ನ ಮುಂದೆ ಸಮರ್ಪಿಸಿ ಕೊಳ್ಳುತ್ತಿದ್ದೇನೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಆದಾಮನು ಪಾಪ ಮಾಡಿದ ಸಮಯದಿಂದ, ಪ್ರಾಣವು ದೇವರ ಇರುವಿಕೆಯನ್ನು ತಿಳಿದಿದ್ದರೂ, ಮನುಷ್ಯನು ಆತ್ಮದ ಮೂಲಕ ದೇವರ ಪ್ರಸನ್ನತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಯಾಕೆಂದರೆ ಅವನ ಆತ್ಮದಲ್ಲಿ ಸ್ವತಃ ಅವನೇ, ಪಾಪದ ದೆಸೆಯಿಂದ ದೇವರಿಂದ ಬೇರ್ಪಡಿಸಿಕೊಂಡನು.
2. ಒಬ್ಬ ವ್ಯಕ್ತಿಯು ಅವನ ದೇಹದಲ್ಲಿ ಅಲ್ಲ ಅಥವಾ ಪ್ರಾಣದಲ್ಲಿ ಅಲ್ಲ ಬದಲಿಗೆ ಅವನ ಆತ್ಮದಲ್ಲಿ ನೂತನ ಸೃಷ್ಟಿಯಾಗುತ್ತಾನೆ.
3. ಪ್ರತಿಯೊಂದೂ ಸಹ ಆತ್ಮದಿಂದಲೇ ಪ್ರಾರಂಭವಾಗಬೇಕು. ನಾವು ನೋಟದಿಂದಲ್ಲ ಬದಲಾಗಿ ನಂಬಿಕೆಯಿಂದ ಜೀವಿಸಬೇಕು. ನಾವು ನೋಟದಿಂದ ಜೀವಿಸಿದರೆ, ಶರೀರದ ಪ್ರಕಾರವಾಗಿ ಜೀವಿಸುತ್ತೇವೆ ಆದರೆ ನಾವು ನಂಬಿಕೆಯಿಂದ ಜೀವಿಸಿದರೆ, ಆತ್ಮದಿಂದ ಜೀವಿಸುತ್ತೇವೆ.
4. ಮನುಷ್ಯನು ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಅದರಲ್ಲಿ ದೇವರು ತಂದೆ, ಮಗ ಮತ್ತು ಪರಿಶುದ್ಧಾತ್ಮ, ಅದರಂತೆಯೇ ಮನುಷ್ಯನು ಆತ್ಮ, ಪ್ರಾಣ ಮತ್ತು ಶರೀರ.
5. ಸತ್ಯವೇದವು ಹೇಳುತ್ತದೆ, ಮನುಷ್ಯನು ಬದುಕುವ ಪ್ರಾಣಿಯಾದನು. (ಆದಿಕಾಂಡ 2:7) ದೇವರು ಮನುಷ್ಯನನ್ನು ಸೃಷ್ಟಿಸಿದಾಗ, ಮನುಷ್ಯನನ್ನು ನಿಯಂತ್ರಿಸುತ್ತಿದ್ದ ಭಾಗವು ಪ್ರಾಣವಾಗಿತ್ತು, ಅದೇ ಸಮಯದಲ್ಲಿ ಅವನು ಆತ್ಮೀಕ ಶರೀರ ಮತ್ತು ಭೌತಿಕ ಶರೀರವನ್ನು ಹೊಂದಿದ್ದನು.

6. ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು. (ರೋಮಾ 8:14) ದೇವರು ಮನುಷ್ಯನನ್ನು ಆ ಉದ್ದೇಶದಿಂದ ಸೃಷ್ಟಿಸಿದರು. ಅಂದರೆ ಆತ್ಮವು ಹೇಳುತ್ತದೆ, ಪ್ರಾಣವು ಅದಕ್ಕೆ ಒಪ್ಪುತ್ತದೆ ಮತ್ತು ಶರೀರವನ್ನು ಉಪಯೋಗಿಸಿ ಅದನ್ನು ಈ ಲೋಕದಲ್ಲಿ ಜರುಗಿಸುತ್ತದೆ. ಇದರ ನಿರ್ದೇಶನವು "ಒಳಗಿನಿಂದ ಹೊರಕ್ಕೆ."
7. ಈ ನಿರ್ದೇಶನವು "ಹೊರಗಿನಿಂದ ಒಳಕ್ಕೆ" ಬದಲಾದರೆ, ಅಂದರೆ ನಮಗೆ ಶರೀರವು ಹೇಳುವುದನ್ನು ನಾವು ಮಾಡಿದರೆ (ನೋಡುವುದರಿಂದ ನಡೆಯುವುದು) , ನಾವು ನಿಜನಿಜವಾಗಿಯೂ ಮರಣಿಸುತ್ತೇವೆ. (ರೋಮಾ 8:13)



*ಅಧ್ಯಾಯ 4*

# ಕಾಣದ ಲೋಕದಿಂದ ಕಾಣುವ ಲೋಕದೊಳಗೆ ಪ್ರವೇಶ

*"ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವುದು; ಕಾಣದಿರುವಂಥದು ಸದಾಕಾಲವೂ ಇರುವುದು." (2 ಕೊರಿ 4:18)*

ಈ ಅಧ್ಯಾಯವು ಓದುಗರಿಗೆ ಹೇಗೆ ಆತ್ಮೀಕ ವ್ಯಕ್ತಿಯು ಈ ಲೋಕದಲ್ಲಿ ಕಾರ್ಯ ನಿರ್ವಹಿಸಬೇಕೆಂಬ ಪರಿಕಲ್ಪನೆಯನ್ನು ನೀಡುತ್ತದೆ.

ಒಬ್ಬ ಲೌಕಿಕ ಮನುಷ್ಯನು ಅವನ ಕಾರ್ಯವನ್ನು ಲೋಕದಿಂದ ಪ್ರಾರಂಭಿಸುತ್ತಾನೆ ಮತ್ತು ಲೋಕದಲ್ಲಿ ಮುಗಿಸುತ್ತಾನೆ. ಆದರೆ ಒಬ್ಬ ಆತ್ಮೀಕ ವ್ಯಕ್ತಿಯು ಭೂಮಿಯ ಮೇಲೆ ಅವನ ಕಾರ್ಯವನ್ನು ದೇವರ ರಾಜ್ಯದಿಂದ ಪ್ರಾರಂಭಿಸುತ್ತಾನೆ ಮತ್ತು ಲೋಕದಲ್ಲಿ ಮುಗಿಸುತ್ತಾನೆ.

## ಅ) ಹೊಸ ಮನುಷ್ಯನು ಆಳ್ವಿಕೆ ಮಾಡಲು ಸೃಷ್ಟಿಸಲ್ಪಟ್ಟಿದ್ದಾನೆ

**"ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್." (ಪ್ರಕ 1:6)**

**"ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು." (ಪ್ರಕ 5:10)**

ದೇವರು ಬಯಸಿದಂತಹ ಪರಿಪೂರ್ಣ ಮನುಷ್ಯನು ಆತ್ಮವಾಗಿತ್ತು. ಆದುದರಿಂದಲೇ, ದೇವರ ವಾಕ್ಯವು ಹೇಳುತ್ತದೆ,

**"ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ – ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು! ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು." (ಆದಿ 2:16-17)**

ಆದಾಮನು ದೇವರಿಗೆ ಅವಿಧೇಯನಾದಾಗ, ಅವನ ಶರೀರದಲ್ಲಿ ಸಾಯುವ ಬದಲು (ಭೌತಿಕ ಮರಣ) ಅವನು ಅವನ ಆತ್ಮದಲ್ಲಿ ಸಾಯುವುದಕ್ಕೆ (ಆತ್ಮೀಕ ಮರಣ) ಇದೇ ಕಾರಣ. ದೇವರು ಮನುಷ್ಯನನ್ನು ಈ ಲೋಕದಲ್ಲಿ ಸೃಷ್ಟಿಸಿದಾಗ, ಅವನನ್ನು ಪ್ರಾಣವು

ನಿಯಂತ್ರಿಸುವ ಭಾಗವಾಗಿ ಸೃಷ್ಟಿಸಿದನು.

"ಹೀಗಿರಲು ಯೆಹೋವದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು **"ಬದುಕುವ ಪ್ರಾಣಿಯಾದನು."** (ಆದಿ 2:7)

ಆದರೆ ಯೇಸುವನ್ನು ನಮ್ಮ ರಕ್ಷಕನನ್ನಾಗಿ ನಾವು ಸ್ವೀಕರಿಸುವಾಗ, ನಮ್ಮ ಆತ್ಮವು ಹೊಸದಾಗಿ ಸೃಷ್ಟಿಸಲ್ಪಟ್ಟಿತು (2 ಕೊರಿ 5:17, ಯೆಹೆ 36:25-26)ಮತ್ತು ದೇವರು ಪ್ರಾರಂಭದಲ್ಲೇ ತಮ್ಮ ಹೃದಯದಲ್ಲಿ ಬಯಸಿದಂತೆಯೇ, ಮನುಷ್ಯನ ನಿಯಂತ್ರಿಸುವ ಭಾಗವನ್ನು **"ಹಳೆಯ ಭ್ರಷ್ಟ ಪ್ರಾಣ"**ದಿಂದ **"ಹೊಸದಾಗಿ ಸೃಷ್ಟಿಸಲ್ಪಟ್ಟ ಆತ್ಮಕ್ಕೆ"** ಸ್ಥಳಾಂತರಿಸಿದರು.

ಈ ನೂತನವಾಗಿ ಸೃಷ್ಟಿಸಲ್ಪಟ್ಟ ಹೊಸದಾಗಿ ಹುಟ್ಟಿದ ವ್ಯಕ್ತಿಯು ಒಬ್ಬ "ಆತ್ಮ ಮನುಷ್ಯನು". ಇವನು ಕರ್ತನೊಂದಿಗೆ ಒಂದೇ ಆತ್ಮವಾಗಿದ್ದಾನೆ. ಸತ್ಯವೇದವು ನಮಗೆ ಹೇಳುತ್ತದೆ, "ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ."

**"ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ."**
**(1 ಕೊರಿ 6:17)**


ಇದರ ಅರ್ಥ ಹೊಸದಾಗಿ ಸೃಷ್ಟಿಸಲ್ಪಟ್ಟ ಮನುಷ್ಯನ ಆತ್ಮ ಮತ್ತು ದೇವರ ಆತ್ಮ (ಪರಿಶುದ್ಧಾತ್ಮ) ಒಂದಾದವು ಮತ್ತು ಒಂದೇ ಆತ್ಮವಾದವು. ಅವನು ನಮ್ಮ ಲೌಕೀಯ ಉಡುಪಿನೊಳಗೆ, ಅಂದರೆ ದೇಹದೊಳಗೆ, **"ನೂತನ ಸ್ವರ್ಗೀಯ ಮನುಷ್ಯ" ನಾಗಿದ್ದಾನೆ.** ನಮ್ಮ ನಶಿಸುವ ದೇಹವು ಸಾಯುತ್ತದೆ ಆದರೆ ಈ ನೂತನ ಸ್ವರ್ಗೀಯ ಮನುಷ್ಯನು ಎಂದಿಗೂ ಸಾಯುವುದಿಲ್ಲ.

ಓಹ್! ದೇವರು ಮನುಕುಲದ ಮೇಲೆ ಎಂಥಾ ಆಶೀರ್ವಾದವನ್ನು ಸುರಿಸಿದ್ದಾರೆ. ದೇವರ ಜೀವ ನಮ್ಮೊಳಗಿದೆ ಮತ್ತು ನಾವು ಅವನೊಂದಿಗೆ ಒಂದೇ ಆತ್ಮವಾಗಿದ್ದೇವೆ. ದೇವರು ನಮ್ಮೊಳಗೆ ನೆಲೆಸಿದ್ದಾರೆ. ಮತ್ತು ಅದರಿಂದ ನಮ್ಮ ಮೂಲಕ ಪರಲೋಕವು ಭೂಮಿಯ ಮೇಲಿದೆ.

ಪ್ರಿಯ ಓದುಗರೇ, ನಮ್ಮ ಕರ್ತನು ನಮ್ಮೊಳಗೆ ತುಂಬಿಸಿರುವ ಅದೇ "ದೇವರ ಜೀವ"ದಿಂದ ಈಗ ನೀವು ತುಂಬಲ್ಪಟ್ಟಿದ್ದೀರಾ? ಈಗ ನಾನು ಅನುಭವಿಸುತ್ತಿರುವಂಥಹ ಅದೇ ಅಭಿಷೇಕವನ್ನು ಇದನ್ನು ಓದುತ್ತಿರುವಂಥಹ ಪ್ರತಿಯೊಬ್ಬರೂ ಅನುಭವಿಸಬೇಕೆಂದು ಮತ್ತು ಅದು ದಿನೇ ದಿನೇ ಹೆಚ್ಚಾಗಬೇಕೆಂದು ನಾನು ದೇವರಿಗೆ ಪ್ರಾರ್ಥಿಸುತ್ತೇನೆ.

ಕೆಳಗಿನದ್ದು, ಶಿಲುಬೆಯ ಮೇಲೆ ಯೇಸುವಿನಿಂದ ಪೂರ್ತೀಕರಿಸಲ್ಪಟ್ಟ ಕಾರ್ಯದ ಮೂಲಕ ಸ್ಥಾಪಿಸಲ್ಪಟ್ಟ, ಈಗ ಹೊಸ ಒಡಂಬಡಿಕೆಯ ಕಾಲದಲ್ಲಿ ಜರುಗುತ್ತಿರುವಂತಹ ಹಳೆಯ ಒಡಂಬಡಿಕೆಯ ಒಂದು ಪ್ರವಾದನೆಯಾಗಿದೆ.

**"ನಾನು ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ; ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿಮಾಡುವೆನು. ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು." (ಯೆಹೆ 36:25-26)**




*ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿರುವ ವಿಮೋಚಿಸಲ್ಪಟ್ಟ ಆತ್ಮ ಮನುಷ್ಯ ಮತ್ತು ವಿಮೋಚಿಸಲ್ಪಡದ ಪ್ರಾಣ ಮತ್ತು ಶರೀರ ಅವುಗಳ ವಿಮೋಚನೆಗಾಗಿ ಕಾಯುತ್ತಿರುವದು* **(ಚಿತ್ರ 8)**

ಎಫೆಸ 4:23-24ರಲ್ಲಿ ನಾವು ನೋಡುತ್ತೇವೆ,

**"ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯಯುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ."**

ಇದೇ ಸಂಗತಿಯು ರೋಮಾ 12:2ರಲ್ಲಿಯೂ ಇದೆ.

## ಆ) ಜಯಿಸುವುದಕ್ಕಾಗಿ ಹೊಸದಾಗಿ ಹುಟ್ಟಿದ್ದು

ನೂತನ ಮನುಷ್ಯನು ದೇವರ ಸಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ.

**"ಯಾಕಂದರೆ ದೇವರಿಂದ ಹುಟ್ಟಿರುವಂಥದ್ದೆಲ್ಲವೂ ಲೋಕವನ್ನು ಜಯಿಸುತ್ತದೆ, ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ." (1 ಯೋಹಾನ 5:4)**

ಯೇಸು ಮತ್ತು ಅವರ ನಂತರದಲ್ಲಿ, ಪೇತ್ರನು ನೀರಿನ ಮೇಲೆ ನಡೆದರು ಮತ್ತು ಇದನ್ನು ಸಾಬೀತು ಪಡಿಸಿದರು. (ಮತ್ತಾಯ 14:22-33) ಭೂಮಿಯು ಗುರುತ್ವಾಕರ್ಷಣ ಬಲದ ನಿಯಮವನ್ನು ಹೊಂದಿದೆ; ನೀರು ಸ್ನಿಗ್ಧತೆಯ ನಿಯಮವನ್ನು ಹೊಂದಿದೆ, ಆದರೂ ಯೇಸು ಈ ಭೂಮಿಯ ನಿಯಮಗಳನ್ನು ಸೋಲಿಸಿದರು, ಎಲ್ಲಾ ಪ್ರತಿಕೂಲಗಳನ್ನೂ ಜಯಿಸಿದರು ಮತ್ತು ನೀರಿನ ಮೇಲೆ ನಡೆದರು. ಅವರು ಗುರುತ್ವಾಕರ್ಷಣ ಬಲವನ್ನು

> ಅದರ ಅರ್ಥವೇನೆಂದರೆ ನಾವು ನಂಬಿಕೆಯಿಂದ ಕಾರ್ಯಮಾಡುವಾಗ ಅಥವಾ ಮೇಲಿನ ರಾಜ್ಯದ ನಿಯಮದಲ್ಲಿ ಅಂದರೆ ಕಾಣದ ದೇವರ ರಾಜ್ಯದ ನಿಯಮದಲ್ಲಿ ಕಾರ್ಯಮಾಡುವಾಗ, ಲೋಕದ ನಿಯಮವು (ಕೆಳಗಿನ ರಾಜ್ಯ) ನಮಗೆ ಅಧೀನವಾಗುತ್ತದೆ.

(g=9.81 m/s2) ಸೋಲಿಸುವ ಮೂಲಕ ಈ ಲೋಕದ ನಿಯಮವನ್ನು ಜಯಿಸಿದರು. ದೇವರ ರಾಜ್ಯದ ನಿಯಮವು ಬರುವಾಗ, ಕೆಳಗಿನ ಲೋಕೀಯ ರಾಜ್ಯದ ನಿಯಮವು ಅಧೀನವಾಗುತ್ತದೆ. ನೂತನ ಮನುಷ್ಯನನ್ನು ಸೃಷ್ಟಿಸಿದ ಮೇಲಿನ ನಿಯಮವು ಬಂದಾಗ, ಕೆಳಗಿನ ನಿಯಮವು ಬದಲಾಯಿತು. ಕೆಳಗಿನ ರಾಜ್ಯದ ಅಥವಾ ಲೋಕದ ಆಲೋಚನೆಗಳ ಪ್ರಕಾರ ಯೋಚಿಸುತ್ತಾ ನಾವು ಚಿಂತಿತರಾಗಬಾರದು (ಏನನ್ನು ತಿನ್ನಬೇಕು , ಏನನ್ನು ಕುಡಿಯಬೇಕು) ; ಬದಲಿಗೆ ಮೇಲಿನ ರಾಜ್ಯದಲ್ಲಿ, ಅಂದರೆ ದೇವರ ರಾಜ್ಯದಲ್ಲಿ ಜನಿಸಿರುವ ನಾವು, ಕೆಳಗಿನ ರಾಜ್ಯವನ್ನು ಸೃಷ್ಟಿಸಲು ದೇವರು ಉಪಯೋಗಿಸಿದಂತಹ ಕೆಲಸದ ವಿಧಾನವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದರ ಪ್ರಕಾರ ಕಾರ್ಯಮಾಡಲು ಪ್ರಾರಂಭಿಸಬೇಕು. ಅನಂತರವೇ ಕೆಳಗಿನ ರಾಜ್ಯದಲ್ಲಿ ದೇವರ ಚಿತ್ತವನ್ನು ಮಾಡುತ್ತಾ ನಾವು ಜಯಭರಿತವಾಗಿ ಜೀವಿಸಲು ಸಾಧ್ಯ. ಇದಕ್ಕೆ ನಮ್ಮ ಕೆಲಸದ ಮಾದರಿಯು ಲೋಕದ ಮಾದರಿಯಿಂದ ದೇವರ ರಾಜ್ಯದ ಮಾದರಿಗೆ ಬದಲಾಗಬೇಕು. **"ಹೀಗಿರುವುದರಿಂದ, ಮೊದಲು ನೀವು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ . ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." (ಮತ್ತಾಯ 6:33)**

ಪೇತ್ರನು ಯಾಕೆ ನೀರಿನ ಮೇಲೆ ನಡೆದನು ಮತ್ತು ಯಾಕೆ ಅವನು ಮುಳುಗುವು ದಕ್ಕಿದ್ದನು ಎನ್ನುವುದರ ಹಿಂದೆ ಒಂದು ಸಂದೇಶವಿದೆ.

## ಇ) ನಾವು ಒಂದೇ ಸಮಯದಲ್ಲಿ ಎರಡು ಲೋಕದಲ್ಲಿ ಜೀವಿಸುತ್ತಿದ್ದೇವೆ

**ಭೌತಿಕ ಲೋಕ ಮತ್ತು ಆತ್ಮೀಕ ಲೋಕ**

1. ಕಾಣುವ ಲೋಕ (ಭೌತಿಕ ಲೋಕ)
2. ಕಾಣದ ಲೋಕ (ಆತ್ಮೀಕ ಲೋಕ)

> ನಾವು ಒಂದೇ ಸಮಯದಲ್ಲಿ ಎರಡು ಲೋಕದಲ್ಲಿ ಜೀವಿಸುತ್ತಿದ್ದೇವೆ.

2 ಕೊರಿಂಥ 4:18ರಲ್ಲಿ ಹೇಳುತ್ತದೆ, **"ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವುದು; ಕಾಣದಿರುವಂಥದು ಸದಾಕಾಲವೂ ಇರುವುದು."**

ಅಬ್ರಹಾಮ ಮತ್ತು ಇಸಾಕನಂತಹ ವ್ಯಕ್ತಿಗಳು ಕಾಣುವಂತಹ ಈ ಲೋಕಕ್ಕೆ ಬಂದು ಹೋಗಿದ್ದರೂ ಸಹ, ಅವರು ಕಾಣದ ಲೋಕದಿಂದ ಹೋಗಿಲ್ಲ. "ಅವರು ಸಾವನ್ನಪ್ಪಿದ್ದಾರೆ" ಎಂದು ಹೇಳುತ್ತಾ ಯೆಹೂದ್ಯರು ಯೇಸುವಿನೊಂದಿಗೆ ವಾದಿಸಿದಾಗ, ಯೇಸು ಹೇಳಿದರು, "ಇಲ್ಲ, ದೇವರು ಜೀವವಿಲ್ಲದವರಿಗೆ ದೇವರಲ್ಲ."

**"ದೇವರು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ. ಆತನಿಗೆ ಎಲ್ಲರೂ ಜೀವಿಸುವವರೇ ಎಂದು ಹೇಳಿದನು." (ಲೂಕ 20:37,38)**

ದೇವರಿಗೆ ಯಾರೊಬ್ಬರೂ ಸತ್ತಿಲ್ಲ. ದೇವರ ವಾಕ್ಯವು ನಮಗೆ ಹೇಳುತ್ತದೆ, **"ಯಾವನಾದರೂ ನನ್ನ ವಾಕ್ಯವನ್ನು ಕೈಕೊಂಡು ನಡೆದರೆ ಅವನು ಎಂದಿಗೂ ಸಾವನ್ನು ಕಾಣುವುದಿಲ್ಲ." (ಯೋಹಾನ 8:51)** ಅಬ್ರಹಾಮನು ಸತ್ತಿದ್ದಾನೆ ಎಂದು ಹೇಳುತ್ತಾ ಯೆಹೂದ್ಯರು ಯೇಸುವಿನೊಂದಿಗೆ ವಾದಿಸಿದಾಗ, ಅಬ್ರಹಾಮನು ಈಗ ನನ್ನ ದಿನವನ್ನು ನೋಡುತ್ತಿದ್ದಾನೆ ಮತ್ತು ಸಂತೋಷಗೊಳ್ಳುತ್ತಿದ್ದಾನೆ ಎಂದು ಯೇಸು ಹೇಳಿದರು.

**"ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು." (ಯೋಹಾನ 8:56)**

ಕಾಣದ ಲೋಕದಲ್ಲಿ ದೇವದೂತರಿದ್ದಾರೆ. ನಾವೆಲ್ಲರೂ ಕಾವಲು ದೂತರನ್ನು ಹೊಂದಿದ್ದೇವೆ. ಅವರು ನಾವು ನೋಡಿರದ ನಮ್ಮ ಮುತ್ತಜ್ಜ ಹಾಗೂ ಮುತ್ತಜ್ಜಿಯರನ್ನು ನೋಡಿದ್ದಾರೆ. ಅವರು ನಾವು ನೋಡಿರದ ಅಬ್ರಹಾಮ ಮತ್ತು ಇಸಾಕರನ್ನು ನೋಡಿದ್ದಾರೆ. ಅವರು ಆದಾಮ ಮತ್ತು ಹವ್ವರನ್ನು ನೋಡಿದ್ದಾರೆ ಮತ್ತು ಈಗ ಅವರು ನಮ್ಮನ್ನು ಗಮನಿಸುತ್ತಿದ್ದಾರೆ.

"ಈ ಚಿಕ್ಕವರಲ್ಲಿ ಒಬ್ಬನನ್ನಾದರೂ ತಾತ್ಸಾರಮಾಡಬಾರದು ನೋಡಿರಿ; ಪರಲೋಕದಲ್ಲಿ ಅವರ ದೂತರು ಪರಲೋಕದಲ್ಲಿರುವ ನನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿದ್ದಾರೆ ಎಂದು ನಿಮಗೆ ಹೇಳುತ್ತೇನೆ." (ಮತ್ತಾಯ 18:10)

ಆ ಆತ್ಮಲೋಕದಲ್ಲಿ ಸಾವಿಲ್ಲ. ಆದರೆ ಭೌತಿಕ ಲೋಕದಲ್ಲಿರುವ ನಾವು ಭೌತಿಕ ಶರೀರದಿಂದ ಬೇರ್ಪಡುತ್ತೇವೆ.

2 ಕೊರಿಂಥ 4:16ರಲ್ಲಿ ಹೇಳುತ್ತದೆ,

"ಆದದರಿಂದ ನಾವು ಧೈರ್ಯಗೆಡುವುದಿಲ್ಲ, ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ."

## ಈ) ದೇವರ ವಾಕ್ಯವು ವ್ಯಕ್ತಿಯನ್ನು ಎರಡು ಭಾಗವಾಗಿ ವಿಭಾಗಿಸುತ್ತದೆ:

1. **ಬಾಹ್ಯ ಮನುಷ್ಯ** : ಕಾಣುವ ಮತ್ತು ಭೌತಿಕ ಶರೀರಕ್ಕೆ ಸಂಬಂಧಿಸಿದ ವ್ಯಕ್ತಿ.

2. **ಆಂತರಿಕ ಮನುಷ್ಯ** : ಕಾಣದ ಶಾಶ್ವತವಾದ ಸ್ವರ್ಗೀಯ ಶರೀರಕ್ಕೆ ಸಂಬಂಧಿಸಿದ ವ್ಯಕ್ತಿ.

ಬಾಹ್ಯ ಮನುಷ್ಯ ಮತ್ತು ಆಂತರಿಕ ಮನುಷ್ಯನ ಹೆಚ್ಚಿನ ಮಾಹಿತಿಯನ್ನು 6ನೇ ಅಧ್ಯಾಯದಲ್ಲಿ ವಿವರಿಸಲಾಗುತ್ತದೆ.

## ಉ) ದೈವೀಕ ಮನುಷ್ಯರ ಕಾರ್ಯನಿರ್ವಹಿಸುವ ಮಾದರಿ

ದೇವರ ಜ್ಞಾನವನ್ನು ಪಡೆದಿರುವಂತಹ ವ್ಯಕ್ತಿಯು ಕಾರ್ಯನಿರ್ವಹಿಸಲು ಬಾಹ್ಯ ಮನುಷ್ಯನನ್ನು ಮಾತ್ರವಲ್ಲ ಬದಲಿಗೆ ಆಂತರಿಕ ಮನುಷ್ಯನನ್ನೂ ಬಳಸುತ್ತಾನೆ. ಆದರೆ ಭೌತಿಕ ಅಥವಾ ಲೋಕೀಯ ಮನುಷ್ಯನು ಬಾಹ್ಯ ಮನುಷ್ಯನೊಂದಿಗೆ ಮಾತ್ರ ಕಾರ್ಯನಿರ್ವಹಿಸುತ್ತಾ ಕೆಲಸಗಳನ್ನು ಮಾಡುತ್ತಾನೆ. ಅಂತಹ ವ್ಯಕ್ತಿಗಳು, ದೇವರ ವಾಕ್ಯ ಹೇಳುವ ಪ್ರಕಾರ, ನೋಟದಿಂದ ಜೀವಿಸುತ್ತಿದ್ದಾರೆ. ಆದರೂ ಆಂತರಿಕ ವ್ಯಕ್ತಿಯ ಮೂಲಕ ದೇವರಿಂದ ಪಡೆದುಕೊಂಡಂತಹ ವಾಕ್ಯದಿಂದ ಜೀವಿಸಿದಾಗ – ಅವನು ನಂಬಿಕೆಯಿಂದ ಜೀವಿಸುತ್ತಾನೆ. (2 ಕೊರಿಂಥ 5:7) "ಆಂತರಿಕ ಮನುಷ್ಯನಿಂದ ಬಾಹ್ಯ ಮನುಷ್ಯನನ್ನು ಉಪಯೋಗಿಸುವುದು ನಮ್ಮ ಮಾದರಿಯಾಗಿದೆ." ಆದಾಗ್ಯೂ ವಾಕ್ಯದಲ್ಲಿ ಬರೆಯಲ್ಪಟ್ಟಿರುವಂತೆ: "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ." (1ಕೊರಿಂಥ 2:9-10)

ನಮ್ಮನ್ನು ನಾವು ದೇವರ ಮಕ್ಕಳೆಂದು ಕರೆದುಕೊಳ್ಳುತ್ತಾ ಲೋಕೀಯ ಮಾದರಿಯನ್ನು ಉಪಯೋಗಿಸುವುದನ್ನು ಮುಂದುವರೆಸಲು ಸಾಧ್ಯವಿಲ್ಲ. ಈ ಲೋಕದ ಮಾನದಂಡವನ್ನು ಅನುಸರಿಸದಂತೆ ದೇವರ ವಾಕ್ಯವು ನಮಗೆ ಹೇಳುತ್ತದೆ.

**"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ." (ರೋಮಾ 12:2)**

ನಿಜವಾದ ದೇವರ ಮಗುವಿನ ಜೀವಿತ ಬಾಹ್ಯದಿಂದ ಆಂತರ್ಯದ ಜೀವಿತವಲ್ಲ ಬದಲಿಗೆ ಆಂತರ್ಯದಿಂದ ಬಾಹ್ಯದ ಜೀವಿತವಾಗಿದೆ.

ದೇವರ ವಾಕ್ಯದಲ್ಲಿ ನಂಬಿಕೆಯಿಟ್ಟು ನಾವು ಮುಂದೆ ಹೆಜ್ಜೆಯಿಟ್ಟ ಕ್ಷಣ, ನಾವು ಯೋಚಿಸುವ ನಂಬಿಕೆಯಲ್ಲ; ಬದಲಿಗೆ ದೇವರಿಂದ ಬಂದಂತಹ ಮಾತು ಅಥವಾ ರೇಮಾದಿಂದ ಮುಂದೆ ಹೆಜ್ಜೆಯಿಟ್ಟ ಕ್ಷಣ, ಲೋಕದ ಎಲ್ಲಾ ನಿಯಮಗಳು ನಮಗೆ ಅಧೀನವಾಗುತ್ತವೆ.

ಪೇತ್ರನು ಆಂತರಿಕದಿಂದ ಬಾಹೀರಿಕ ಮಾದರಿಯನ್ನು, ಅಂದರೆ ದೇವರ ರಾಜ್ಯದ ಮಾದರಿಯನ್ನು ಉಪಯೋಗಿಸಿದಾಗ ನೀರಿನ ಮೇಲೆ ನಡೆದನು. ಆದರೆ ಅವನು ಬಾಹ್ಯದಿಂದ ಆಂತರಿಕ ಮಾದರಿಯಲ್ಲಿ, ಅಂದರೆ ಲೋಕೀಯ ಮಾದರಿಯಿಂದ ಕಾರ್ಯನಿರ್ವಹಿಸಿದಾಗ ನೀರಿನಲ್ಲಿ ಮುಳುಗಲು ಪ್ರಾರಂಭಿಸಿದನು. ಕ್ರಿಸ್ತನು ನೀರಿನ ಮೇಲೆ ನಡೆದಾಗ, ಲೋಕದ ಎಲ್ಲಾ ನಿಯಮಗಳು ವಿಫಲವಾದವು. ಅದನ್ನು ನೋಡಿ, ಪೇತ್ರನೂ ಅದನ್ನೇ ಮಾಡುವಂತೆ ಅವನಿಗೆ ಆಜ್ಞಾಪಿಸುವಂತೆ ಕ್ರಿಸ್ತನನ್ನು ಕೋರಿದನು. ಎಲ್ಲಾ ಸಂಗತಿಗಳು ಕ್ರಿಸ್ತನಿಂದ ಅಂದರೆ ದೇವರ ವಾಕ್ಯದಿಂದ ಪ್ರಾರಂಭವಾಗಬೇಕು ಎಂದು ಪೇತ್ರನು ಚೆನ್ನಾಗಿ ತಿಳಿದಿದ್ದನು. ಅದು ಹಾಗಿಲ್ಲದಿದ್ದರೆ, ಪೇತ್ರನು ಕೋರುತ್ತಿರಲಿಲ್ಲ, ಮತ್ತು "ಯೇಸುವಿನಿಂದಾದರೆ ನಾನು ಸಹ ಮಾಡಬಹುದು" ಎಂದು ನೆನೆಸಿ ನೀರಿಗೆ ನೆಗೆಯುತ್ತಿದ್ದನು ಹಾಗೂ ಖಂಡಿತವಾಗಿ ಮುಳುಗುತಿದ್ದನು.

**"ಎಲ್ಲಾ ಒಳ್ಳೇ ದಾನಗಳು ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನು ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ." (ಯಾಕೋಬ 1:17)**

ಬಹುತೇಕ ಜನರ ನಂಬಿಕೆಯು ವಿಫಲವಾಗುತ್ತದೆ, ಕಾರಣ ಅವರ ನಂಬಿಕೆಯು ಸ್ವಯಂನಿಂದಾಗಿದೆ, ಅದು ಲೋಕದಿಂದ ಪ್ರಾರಂಭವಾಗುತ್ತದೆ. ಅಂತಹ ನಂಬಿಕೆಯನ್ನು ನಾವು 'ಆತ್ಮ–ವಿಶ್ವಾಸ' ಎಂದು ಕರೆಯುತ್ತೇವೆ. ಆದರೆ, ಆತ್ಮನು ತೆಗೆದುಕೊಳ್ಳುವಂತಹ ಮತ್ತು ನಮಗೆ ನೀಡುವಂತಹ ದೇವರ ವಾಕ್ಯದಿಂದಲೇ ನಮ್ಮ ನಂಬಿಕೆ ಪ್ರಾರಂಭವಾಗಬೇಕು.

**"ಯಾವದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ." (ರೋಮ 14:23)**

ಇಲ್ಲಿ ಪೇತ್ರನಿಗೆ ತಾನು ಎಲ್ಲಿಂದ ಪ್ರಾರಂಭಿಸಬೇಕು ಎನ್ನುವುದು ತಿಳಿದಿತ್ತು. ಅವನು ಯೇಸುವಿಗೆ ಪ್ರಾರ್ಥಿಸಿದಾಗ, ನಮ್ಮ ಕರ್ತನು ತಕ್ಷಣವೇ "ಬಾ" (ಹೇಳಲ್ಪಟ್ಟ ಮಾತು – ರೇಮಾ) ಎಂಬ ಪದದೊಂದಿಗೆ ಉತ್ತರಿಸಿದರು. ಯೇಸುವು ಪೇತ್ರನ ಪ್ರಶ್ನೆಯನ್ನು ಕೇಳಿದಾಗ, ಅವರು ವಾದಿಸಲಿಲ್ಲ ಬದಲಿಗೆ ತುಂಬಾ ಸಂತೋಷಗೊಂಡರು. ಅದಕ್ಕೆ ಕಾರಣವೇನಾಗಿತ್ತೆಂದರೆ ಯೇಸು ಕ್ರಿಸ್ತನು ಅವರ ಶಿಷ್ಯರು ಯಾವಾಗಲೂ ಆತನನ್ನು ಹಿಂಬಾಲಿಸಬೇಕೆಂದು ಬಯಸುತ್ತಾರೆ.

**"ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕಹಾಗೆ ಆತನನ್ನು ಅನುಸರಿಸುವವರಾಗಿರಿ." (ಎಫೆಸ 5:1)**

ಪೇತ್ರನು “ಬಾ” ಎಂಬ ಪದವನ್ನು ಪಡೆದಾಗ, ತಕ್ಷಣವೇ ತುಂಬಾ ಸಂತೋಷದಿಂದ ಅವನು ಯೇಸುವಿನ ಕಡೆಗೆ ಧಾವಿಸಿದನು. ಪೇತ್ರನು ಕಾಣದ ಲೋಕದಿಂದ ಕಾಣುವ ಲೋಕದಲ್ಲಿ ಅಥವಾ ದೇವರ ರಾಜ್ಯದಿಂದ ಲೋಕದಲ್ಲಿ ಜೀವಿಸಲು ಪ್ರಾರಂಭಿಸಿದನು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಅವನು ದೇವರ ರಾಜ್ಯದಿಂದ ‘ಶಬ್ದ’ (ಬಾ) ವನ್ನು ಪಡೆದನು ಮತ್ತು ಲೋಕದಲ್ಲಿ ಆ ‘ಶಬ್ದದ’ ಪ್ರಕಾರವಾಗಿ ಕಾರ್ಯಮಾಡಲು ಪ್ರಾರಂಭಿಸಿದನು. ಹಾಗಾಗಿ ಕಾಣುವ ಕೆಳಗಿನ ಭೌತಿಕ ಪ್ರಪಂಚವು ಕಾಣದ ಮೇಲಿನ ದೇವರ ರಾಜ್ಯಕ್ಕೆ ಅಧೀನವಾಯಿತು. ಇಲ್ಲಿ ಗುಪ್ತ ಸಂದೇಶವೇನೆಂದರೆ, ದೇವರ ವಾಕ್ಯದಲ್ಲಿ ನಂಬಿಕೆಯಿಟ್ಟು ನಾವು ಮುಂದೆ ಹೆಜ್ಜೆಯಿಟ್ಟ ಕ್ಷಣ, ನಾವು ಯೋಚಿಸುವ ನಂಬಿಕೆಯಲ್ಲ, ಬದಲಿಗೆ ದೇವರಿಂದ ಬಂದಂತಹ ಮಾತು ಅಥವಾ ರೇಮಾದಿಂದ ಮುಂದೆ ಹೆಜ್ಜೆಯಿಟ್ಟ ಕ್ಷಣ, ಲೋಕದ ಎಲ್ಲಾ ನಿಯಮಗಳು ನಮಗೆ ಅಧೀನವಾಗುತ್ತವೆ.

ಮರುಕ್ಷಣವೇ ಪೂರ್ಣ ಸನ್ನಿವೇಶದಲ್ಲಿ ನಾವು ಒಂದು ಬದಲಾವಣೆಯನ್ನು ಕಾಣುತ್ತೇವೆ. ಪೇತ್ರನು ಮುಳುಗಲು ಪ್ರಾರಂಭಿಸುತ್ತಾನೆ ಕಾರಣ ಅವನು ಕಾರ್ಯಮಾಡುವ ರಾಜ್ಯವನ್ನು ಬದಲಾಯಿಸುತ್ತಾನೆ. ಪಯಣದ ಪ್ರಾರಂಭದಲ್ಲಿ, ಮಾತನ್ನು (ಬಾ) ಕೇಳುತ್ತಾ ಮತ್ತು ಆಂತರಿಕದಿಂದ ಬಾಹೀರಿಕವಾಗಿ ಕಾರ್ಯಮಾಡುತ್ತಾ ಅದರ ಪ್ರಕಾರ ಯೋಚಿಸುತ್ತಾ, ಪೇತ್ರನು ಆತ್ಮದಲ್ಲಿ ಜೀವಿಸುತ್ತಿದ್ದನು. ಹೀಗಾಗಿ ಅವನು ಲೋಕದ ವಿರುದ್ಧ ಜಯಿಸುತ್ತಿದ್ದನು. ಆದರೆ ಒಮ್ಮೆ ಅವನು ಐದು ಇಂದ್ರಿಯಗಳನ್ನು ಉಪಯೋಗಿಸಲು ಪ್ರಾರಂಭಿಸಿದಾಗ ಮತ್ತು ಬಾಹ್ಯವಾದ ಕೆಳಗಿನ ಲೋಕವನ್ನು ಸ್ಪರ್ಶಿಸಿದಾಗ ಅವನು ಮುಳುಗಲು ಪ್ರಾರಂಭಿಸಿದನು. ಅವನು ಅವನ ಕಣ್ಣನ್ನು ಸಮುದ್ರಕ್ಕೆ ಮತ್ತು ಕಿವಿಗಳನ್ನು ಗಾಳಿಯ ಶಬ್ದಕ್ಕೆ ತೆರೆದನು. ಅವನು ಎರಡು ಮುಖ್ಯ ದ್ವಾರಗಳನ್ನು, ಅಂದರೆ ಕಣ್ಣುಗಳು & ಕಿವಿಗಳನ್ನು (ಮತ್ತಾಯ 13:14) ತೆರೆದಾಗ, ಲೋಕದ ಆಲೋಚನೆಗಳು (ಗಾಳಿ ಮತ್ತು ಸಮುದ್ರ), ಅವನ ಹೃದಯದಲ್ಲಿ ಮಾತಿನ (ಬಾ) ಆಲೋಚನೆಗಳನ್ನು ಜಜ್ಜಿದವು ಮತ್ತು ತೆಗೆದುಹಾಕಿದವು. ಈಗ ಅವನ ಹೃದಯದಲ್ಲಿನ ಆಲೋಚನೆಗಳಿಂದ, ಅವನು ಕಾರ್ಯಮಾಡುವ ರಾಜ್ಯವನ್ನು ದೇವರ ರಾಜ್ಯದಿಂದ ಭೌತಿಕ ರಾಜ್ಯಕ್ಕೆ ಬದಲಾಯಿಸಿದನು. ಅದಕ್ಕನುಸಾರವಾಗಿ, ಗುರುತ್ವಾಕರ್ಷಣ ಬಲವೆಂಬ, ಲೋಕದ ನಿಯಮದ ಪ್ರಕಾರ, ಪೇತ್ರನು ನೀರಿನೊಳಗೆ ಎಳೆಯಲ್ಪಟ್ಟನು. ಯಾವಾಗೆಂದರೆ ಅವನು ಬಾಹೀರಿಕದಿಂದ ಆಂತರಿಕಕ್ಕೆ ಜೀವಿಸಲು ಪ್ರಾರಂಭಿಸಿದಾಗ, ಲೋಕವು ಅವನನ್ನು ಸೋಲಿಸಿತು (ಮತ್ತಾಯ 14:29-30). ಇಂದು, ಅದೇ ಸಂಗತಿಯು ಬಹುಪಾಲು ವಿಶ್ವಾಸಿಗಳಿಗೆ ಸಂಭವಿಸುತ್ತದೆ. ಅವರು ಬಾಹೀರಿಕದಿಂದ ಆಂತರಿಕಕ್ಕೆ ಜೀವಿಸುತ್ತಾರೆ ಆದಕಾರಣ ಸೋಲಿಸಲ್ಪಡುತ್ತಾರೆ. ಈ ಅಧ್ಯಾಯದ ಪ್ರಾರಂಭದಲ್ಲಿ ಸೂಚಿಸಲಾಗಿದ್ದಂತಹ ವಾಕ್ಯಗಳನ್ನು ನೆನಪಿಸಿಕೊಳ್ಳಿರಿ.

> ಒಬ್ಬ ಲೌಕಿಕ ಮನುಷ್ಯನು ಅವನ ಕಾರ್ಯವನ್ನು ಲೋಕದಿಂದ ಪ್ರಾರಂಭಿಸುತ್ತಾನೆ ಮತ್ತು ಲೋಕದಲ್ಲಿ ಮುಗಿಸುತ್ತಾನೆ, ಆದರೆ ಒಬ್ಬ ಆತ್ಮೀಕ ಮನುಷ್ಯನು ಭೂಮಿಯ ಮೇಲೆ ಅವನ ಕಾರ್ಯವನ್ನು ಕಾಣದ ದೇವರ ರಾಜ್ಯದಿಂದ ಪ್ರಾರಂಭಿಸುತ್ತಾನೆ ಮತ್ತು ಕಾಣುವ ಲೋಕದಲ್ಲಿ ಮುಗಿಸುತ್ತಾನೆ.

ಇದರಿಂದ ನಾವು ಏನನ್ನು ಕಲಿಯುತ್ತೇವೆಂದರೆ ನಮ್ಮ ಯೋಚನೆಗಳಲ್ಲಿ ನಾವು ನಮ್ಮ ಪ್ರಾಣವನ್ನು ದೇವರ ರಾಜ್ಯದಿಂದ ಸೈತಾನನ ರಾಜ್ಯಕ್ಕೆ ಅಥವಾ ಲೋಕಕ್ಕೆ ಸ್ಥಳಾಂತರಿಸಬಹುದು. ಎಲ್ಲಿ ನಮ್ಮ ಪ್ರಾಣದ ಮನಸ್ಸು ಇರಿಸಲ್ಪಟ್ಟಿದೆಯೋ ಅದರ ಫಲಿತಾಂಶ ಈ ಲೋಕದಲ್ಲಿ ಗೆಲುವು, ಸೋಲು, ಅನಾರೋಗ್ಯ ಅಥವಾ ಇತರೆ ರೂಪಗಳಲ್ಲಿ ನಮ್ಮ ದೇಹದ ಮೂಲಕ ಪ್ರಕಟವಾಗುತ್ತದೆ. ಅಂತಿಮವಾಗಿ ನಮ್ಮ ಪ್ರಾಣವು ನಿತ್ಯಜೀವದಲ್ಲಿ ಅಥವಾ ನಿತ್ಯಮರಣದಲ್ಲಿ ಕೊನೆಗೊಳ್ಳುತ್ತದೆ.

ಮುಂದಿನ ಭಾಗದಲ್ಲಿ "ಪ್ರಾಣ-ಸ್ಥಳಾಂತರ"ದ ಬಗ್ಗೆ ಹೆಚ್ಚು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸೋಣ.


## ಊ) ಆಲೋಚನೆಗಳಿಂದ ರಾಜ್ಯಗಳನ್ನು ಬದಲಾಯಿಸುವುದು

ಯೇಸು ಹೇಳಿದರು, "ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವುದಷ್ಟೆ." (ಮತ್ತಾಯ 6:21)

ಆದಿಕಾಂಡ 2:7ರಿಂದ ಮನುಷ್ಯನು ಆತ್ಮೀಕ ಶರೀರ ಮತ್ತು ಭೌತಿಕ ಶರೀರದೊಂದಿಗಿನ "ಪ್ರಾಣಿ" ಎಂದು ನಮಗೆ ತಿಳಿದಿದೆ. ನಾವು ನಮ್ಮ ಮನಸ್ಸಿನಲ್ಲಿನ ಆಲೋಚನೆಗಳನ್ನು ಅವಲಂಬಿಸಿ ದೇವರ ರಾಜ್ಯದಲ್ಲಿ ಅಥವಾ ಸೈತಾನನ ರಾಜ್ಯದಲ್ಲಿ ಅಥವಾ ಲೋಕದಲ್ಲಿ ನಮ್ಮ ಪ್ರಾಣವನ್ನು ಇರಿಸಬಹುದು. ದೇವರ ವಾಕ್ಯವನ್ನು ನಾವು ಚಿಂತಿಸಿದಾಗ ಅಥವಾ ಧ್ಯಾನಿಸಿದಾಗ, ನಾವು ನಮ್ಮ ಆತ್ಮವನ್ನು ದೇವರ ರಾಜ್ಯದಲ್ಲಿ ಇರಿಸುತ್ತೇವೆ, ಅದರ ಫಲಿತಾಂಶವು ದೇವರು ನಮ್ಮ ಜೀವಿತದಲ್ಲಿ ಬಯಸುವಂತಹ ಫಲವಾಗಿ ಈ ಲೋಕದಲ್ಲಿ ನಮ್ಮ ಶರೀರದ ಮೂಲಕ ಪ್ರಕಟಗೊಳ್ಳುತ್ತದೆ. ಈ ಆತ್ಮದ ಆಲೋಚನೆಗಳು (ವಾಕ್ಯ) ಅಂತಿಮವಾಗಿ ನಾವು ನಿತ್ಯಜೀವವನ್ನು ಹೊಂದಿಕೊಳ್ಳುವಂತೆ ಸಹಾಯಮಾಡುತ್ತವೆ.

"ಯೆಹೋವನ **ಧರ್ಮಶಾಸ್ತ್ರದಲ್ಲಿ** ಆನಂದಪಡುವವನಾಗಿ ಅದನ್ನೇ ಹಗಲಿರುಳು **ಧ್ಯಾನಿಸುತ್ತಿರುವವನೋ** ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು, ಅಂಥ ಮರವು ತಕ್ಕ ಕಾಲದಲ್ಲಿ **ಫಲಕೊಡುತ್ತದಲ್ಲಾ;** ಅದರ ಎಲೆ ಬಾಡುವುದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವುದು." (ಕೀರ್ತ 1:2-3)

"**ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ** ಮನಶ್ಶಾಂತಿಯೂ ಆಗಿದೆ." (ರೋಮ 8:6)




*ಮನಸ್ಸಿನ ಆಲೋಚನೆಗಳಿಂದ ಪ್ರಾಣ ಮೂರೂ ವಿವಿಧ ಪ್ರದೇಶಗಳಲ್ಲಿ ನಿಲ್ಲಬಹುದು*

**ಚಿತ್ರ–9**

ಆದರೆ ಅವಿಧೇಯತ್ವದಿಂದ ದೇವರ ಪ್ರಸನ್ನತೆಯಿಂದ ಸ್ವಯಂ ದೂರವಾದ ಮತ್ತು ಸೈತಾನನ ರಾಜ್ಯದ ಆಳ್ವಿಕೆಯ ಕೆಳಗೆ ಬಂದ ಆದಾಮನಂತೆಯೇ, ದೇವರಿಗೆ ಅವಿಧೇಯರಾದಾಗ ಅಥವಾ ಶಾರೀರಿಕವಾಗಿ ಯೋಚಿಸಿದಾಗ ಮತ್ತು ಪರಸ್ಪರ ಕೆಟ್ಟ ಭಾವನೆಗಳನ್ನು ಬಯಸಿದಾಗ ನಾವೂ ಸಹ ನಮ್ಮ ಪ್ರಾಣವನ್ನು ದೇವರ ರಾಜ್ಯದಿಂದ ದೂರ ತಳ್ಳುತ್ತೇವೆ. (ಆದಿ 3:23, ರೋಮ 5:12, 1ಯೋಹಾ 5:19) ನಾವು ಶಾರೀರಿಕವಾಗಿ ಯೋಚಿಸುವಾಗ ದೇವರನ್ನು ನಮ್ಮ ವೈರಿಯನ್ನಾಗಿ ಮಾಡಿಕೊಳ್ಳುತ್ತೇವೆ ಎಂದು ಸತ್ಯವೇದವು ನಮಗೆ ಹೇಳುತ್ತದೆ.

"ಯಾಕಂದರೆ **ಶರೀರಭಾವದವುಗಳ ಮೇಲೆ ಮನಸ್ಸಿಡುವುದು** ದೇವರಿಗೆ ಶತ್ರುತ್ವವು." (ರೋಮ 8:7)

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಶಾರೀರಿಕ ಯೋಚನೆಗಳು ನಮ್ಮನ್ನು ದೇವರ ರಾಜ್ಯದಿಂದ ಹಿಮ್ಮೆಟ್ಟಿಸುತ್ತವೆ ಮತ್ತು ಅವುಗಳು ಸೈತಾನನ ರಾಜ್ಯವನ್ನು ನಮಗೆ ಆಕರ್ಷಿಸುತ್ತವೆ. ನಾವು ಶಾರೀರಿಕವಾಗಿ ಯೋಚಿಸಿದಾಗ ನಮ್ಮ ಪ್ರಾಣವನ್ನು ನಾವು ದುಷ್ಟ ರಾಜ್ಯದಲ್ಲಿ ಇರಿಸುತ್ತೇವೆ ಮತ್ತು ಇದರ ಪ್ರತಿಬಿಂಬವು ನಮ್ಮ ದೇಹದಲ್ಲಿ ಅನೇಕ ರೋಗಗಳ ರೀತಿಯಲ್ಲಿ ಗೋಚರಿಸುತ್ತವೆ. ಅಂತಿಮ ಫಲಿತಾಂಶವು ನಿತ್ಯಮರಣವಾಗಿರುತ್ತದೆ. (ಇದು ರೋಗಗಳಿಗೆ ಅನೇಕ ಕಾರಣಗಳಲ್ಲೊಂದಾಗಿದೆ).

**"ಕ್ರೋಧವು ಎಲುಬಿಗೆ ಕ್ಷಯವು." ( ಜ್ಞಾನೋ 14:30)**

**"ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣ." (ರೋಮ 8:6)**

ಇನ್ನೊಂದು ಬದಿಯಲ್ಲಿ ನಮ್ಮ ಐದು ಇಂದ್ರಿಯಗಳ ಸಹಾಯದಿಂದ ನಮ್ಮ ಸ್ವಾಭಾವಿಕ ಅಥವಾ ಸಾಮಾನ್ಯ ಆಲೋಚನೆಗಳಿಂದ ಲೋಕದಲ್ಲಿ ಮುಂದುವರೆದರೆ, ನಾವು ನೋಟದಿಂದ ನಡೆಯುವವರಾಗಿದ್ದೇವೆ. ಈ ಸ್ಥಿತಿಯಲ್ಲಿ ನಾವು "ದೃಷ್ಟಿ" ರಹಿತ ಸ್ವಾಭಾವಿಕ ಜೀವಿತವನ್ನು ಹೊಂದಿರುತ್ತೇವೆ, ಮತ್ತು ಮೇಲೆ ಸೂಚಿಸಿರುವಂತೆ, ಅದರ ಫಲಿತಾಂಶವು ನಾಶನವಾಗಿದೆ .

"ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆ ಮೀರುವರು." (ಜ್ಞಾನೋ 29:18)

## ಖ) ಹೊಸ ದ್ರಾಕ್ಷಾರಸ ಮತ್ತು ಹಳೆಯ ಬುದ್ದಲಿ

ಪ್ರಿಯ ದೇವರ ಮಗುವೇ, ಯೋಚಿಸು, ಹೇಗೆ ನಾವು ಮುಂದುವರೆಯಬೇಕು ಮತ್ತು ಯಾವ ರಾಜ್ಯದ ನಿಯಮವನ್ನು ನಾವು ಪಾಲಿಸಬೇಕು? ಕಾಣುವ ಲೋಕದಲ್ಲಿ ಕಾರ್ಯಮಾಡಲು ಮತ್ತು ಕಾಣದ ನಂಬಿಕೆಯಲ್ಲಿ ಇದ್ದುಕೊಂಡು ಅದನ್ನು ಸೋಲಿಸಲು ನೀವು ಬಯಸುತ್ತೀರಾ ಅಥವಾ ಕಾಣುವ ಭೌತಿಕ ಲೋಕದಲ್ಲಿ ಇರುವುದರ ಮೂಲಕ ನಿಮ್ಮ "ಹಳೆಯ ಮಾರ್ಗ"ದಲ್ಲಿ ಮುಂದುವರೆಯಲು ಬಯಸುತ್ತೀರಾ? ಈ ಪ್ರಶ್ನೆಗಳನ್ನು ಉತ್ತರಿಸಲು ನಮಗೆ ಸಹಾಯವಾಗುವಂತೆ, ಯೇಸು ಮಾರ್ಕ 2:22ರಲ್ಲಿ ಹೇಳುತ್ತಾರೆ, "ನಿಮ್ಮ ಹಳೆಯ ಲೌಕಿಕ ಮನಸ್ಥಿತಿಯಲ್ಲಿ (ಹಳೆಯ ಬುದ್ದಲಿ) ದೇವರ ರಾಜ್ಯದ (ಹೊಸ ದ್ರಾಕ್ಷಾರಸ) ವಾಕ್ಯದ ಯೋಚನೆಯನ್ನು ಸೇರಿಸಲು ಪ್ರಯತ್ನಿಸಬೇಡಿ." ನಮ್ಮ ಹಳೆಯ ಲೌಕಿಕ ಮನಸ್ಥಿತಿಯು ನಾವು ಕ್ರಿಸ್ತನೊಂದಿಗೆ ಶಿಲುಬೆಗೇರಿಸಲ್ಪಟ್ಟಿರುವ ನಮ್ಮ ಹಳೆಯ ಮಾರ್ಗಗಳಾಗಿವೆ. ನಾವು ಇನ್ನು "ಹಳೆಯ ವ್ಯಕ್ತಿಗಳಲ್ಲ" ಬದಲಿಗೆ ನೂತನವಾಗಿ ಮಾಡಲ್ಪಟ್ಟಿದ್ದೇವೆ. ದೇವರ ವಾಕ್ಯ 2ಕೊರಿ 5:17ರಲ್ಲಿ ಹೇಳುತ್ತದೆ, ನಾವು ಹಳೆಯ ಮನುಷ್ಯರಲ್ಲ, ನಾನು (ದೇವರು) ನಿನ್ನನ್ನು ಹೊಸ ಮನುಷ್ಯನನ್ನಾಗಿ ಮಾಡಿದ್ದೇನೆ. ಹಳೇದನ್ನು ಬದಲಾಯಿಸುವ ಸಲುವಾಗಿ, ನಾನು ಹೊಸದನ್ನು ತಂದಿದ್ದೇನೆ. ಹಳೇಯದು ನಿಮ್ಮಿಂದ ತೆಗೆಯಲ್ಪಟ್ಟಿದೆ. ಅಂದರೆ, ನಾನು (ದೇವರು) ನಿನಗೆ ನೀಡಿರುವ, ಹೊಸ ರಾಜ್ಯದ ಹೊಸ ದ್ರಾಕ್ಷಾರಸವನ್ನು ಹಳೆಯ ಬುದ್ದಲಿಯಲ್ಲಿ ತೆಗೆದುಕೊಳ್ಳಬಾರದು ಮತ್ತು ಇರಿಸಬಾರದು. ನೀವು ಹಾಗೆ ಮಾಡಿದರೆ, ದ್ರಾಕ್ಷಾರಸವು ಹುದುಗಿದಂತೆ, ಅದು ಹಳೆಯ ಬುದ್ದಲಿಯಿಂದ ಒಡೆದುಹೋಗುತ್ತದೆ. ದ್ರಾಕ್ಷಾರಸ ಮತ್ತು ಬುದ್ದಲಿ ಜೊತೆಯಾಗಿ ನಾಶವಾಗುತ್ತವೆ.

"ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ [ಹಾಕಿಡತಕ್ಕದ್ದು]." (ಮಾರ್ಕ 2:22)

ದೇವರ ರಾಜ್ಯದ ಅಸಾಮಾನ್ಯ ಮಂಡಲದಿಂದ ನಮ್ಮ ಕಾರ್ಯವನ್ನು ನಾವು ಪ್ರಾರಂಭಿಸಬೇಕಾದರೆ, ಯಾಕೋಬ 4:4ರಲ್ಲಿನ ವಾಕ್ಯವನ್ನು ಪರಿಗಣಿಸಿ, ದೇವರ ರಾಜ್ಯದ ಆಲೋಚನೆಗಳ ವೈರಿಗಳಾಗಿರುವ, ಹಳೆಯ ಲೌಕಿಕ ಆಲೋಚನೆಗಳನ್ನು ನಮ್ಮ ಮನಸ್ಸಿನಿಂದ ತೆಗೆದು ಅಲ್ಲಿ ಸ್ಥಳವನ್ನು ನಿರ್ಮಲ ಮಾಡಲೇಬೇಕು.

**"ವ್ಯಭಿಚಾರಿಗಳು ನೀವು; ಇಹಲೋಕಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ**

**ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ." (ಯಾಕೋಬ 4:4)**

**"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳಿದುಕೊಳ್ಳುವಿರಿ." (ರೋಮ 12:2)**

ಪ್ರಿಯ ಮಗುವೇ, ನಾವು ಯಾವ ಹಂತಕ್ಕೆ ಹೋಗುತ್ತಿದ್ದೇವೆ, ಎಂದು ನಮ್ಮನ್ನು ನಾವು ಅವಲೋಕಿಸಬೇಕು. ನಾವು ಕೇಳಿದ ದೇವರ ಮಾತಿನೊಂದಿಗೆ (ರೇಮಾ) ನಾವು ಕಾರ್ಯ ಮಾಡಲು ತಯಾರಾದ ಕ್ಷಣದ ನಂತರ ಲೋಕದ ನಿಯಮವು ನಮಗೆ ಅಧೀನವಾಗುತ್ತದೆ ಎಂದು ಇಲ್ಲಿ ದೇವರು ನಮಗೆ ಕಲಿಸುತ್ತಾರೆ.

## ಎರಡು ಮುಖ್ಯ ಪಾಠಗಳು

ದೇವರ ರಾಜ್ಯದ ನಿಯಮದ ಆಲೋಚನೆಗಳನ್ನು (ಹೊಸ ದ್ರಾಕ್ಷಾರಸ) ನಮ್ಮ ಹಿಂದಿನ ಲೌಕಿಕ ಆಲೋಚನೆಗಳೊಂದಿಗೆ (ಹಳೆಯ ಬುದ್ದಲಿ) ಹೋಲಿಸಲು ಮತ್ತು ಕಾರ್ಯಮಾಡಲು ನಾವು ಪ್ರಾರಂಭಿಸಿದರೆ, ಅದು ದೊಡ್ಡ ವೈಫಲ್ಯವಾಗಿ ಕೊನೆಗೊಳ್ಳುತ್ತದೆ.

ಪೇತ್ರನನ್ನು ನೋಡಿ ನಾವು ಕಲಿಯುವ ಪ್ರಥಮ ಪಾಠವೆಂದರೆ, ದೇವರ ರಾಜ್ಯದ ನಿಯಮದಲ್ಲಿ ಇದ್ದುಕೊಂಡು ನಾವು ಕಾರ್ಯಮಾಡಿದರೆ ಕೆಳಗಿನ ಲೋಕವನ್ನು ಅಥವಾ ಲೋಕದ ನಿಯಮವನ್ನು ಸೋಲಿಸಬಹುದು. ಕಲಿತಂತಹ ಎರಡನೇ ಮುಖ್ಯ ಪಾಠವೆಂದರೆ ಹೊಸ ದ್ರಾಕ್ಷಾರಸವನ್ನು, ಅಂದರೆ ದೇವರ ರಾಜ್ಯದ ನಿಯಮವನ್ನು, ಹಿಂದಿನ ಲೌಕಿಕ ಆಲೋಚನೆಗಳು ಶೇಖರಿಸಿಡಲ್ಪಟ್ಟಿರುವ ಹಳೆಯ ಬುದ್ದಲಿಯಲ್ಲಿ ಹಾಕಲು ನಾವು ಪ್ರಯತ್ನಿಸಿದ ಕ್ಷಣ, ಹೊಸ ದ್ರಾಕ್ಷಾರಸವು ಹಳೆಯ ಬುದ್ದಲಿಯಲ್ಲಿ ಒಡೆದುಹೋಗುತ್ತದೆ ಮತ್ತು ದ್ರಾಕ್ಷಾರಸವು ನಾಶವಾಗುತ್ತದೆ. ಅಂದರೆ ದೇವರ ರಾಜ್ಯದ ನಿಯಮಗಳ ಆಲೋಚನೆಗಳನ್ನು (ಹೊಸ ದ್ರಾಕ್ಷಾರಸ) ನಮ್ಮ ಹಿಂದಿನ ಲೌಕಿಕ ಆಲೋಚನೆಗಳೊಂದಿಗೆ (ಹಳೆಯ ಬುದ್ದಲಿ) ಹೋಲಿಸಲು ಮತ್ತು ಕಾರ್ಯಮಾಡಲು ನಾವು ಪ್ರಾರಂಭಿಸಿದರೆ, ಅದು ದೊಡ್ಡ ವೈಫಲ್ಯವಾಗಿ ಕೊನೆಗೊಳ್ಳುತ್ತದೆ. ನಾವು ದೇವರ ರಾಜ್ಯದ ವಾಕ್ಯದಿಂದ ಏನನ್ನೂ ಪಡೆದುಕೊಳ್ಳುವುದಿಲ್ಲ.

ಪ್ರಿಯ ದೇವ ಜನರೇ, ನಾವು ನಮ್ಮ ದೈನಂದಿನ ಜೀವನದಲ್ಲಿ ಸಾಕಷ್ಟು ಹೊಸ ದ್ರಾಕ್ಷಾರಸವನ್ನು ಪಡೆಯಬಹುದು. ನಾವು ಅದನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಿದ್ದೇವೆಯೇ ಎಂದು ಪರೀಕ್ಷಿಸಿಕೊಳ್ಳಬೇಕು.

ಜನರು ಯೇಸುವಿನ ಜೀವಿತವನ್ನು ನೋಡಿ ಆಶ್ಚರ್ಯಚಕಿತರಾದರು. ದೇವರ ವಾಕ್ಯವು ಹೇಳುತ್ತದೆ ಗಾಳಿ ಮತ್ತು ಸಮುದ್ರವೂ ಸಹ ಆತನಿಗೆ ವಿಧೇಯವಾದವು. ಆತನು ಎಂತಹ

ರೀತಿಯ ಮನುಷ್ಯನಾಗಿದ್ದಾನೆ? ಯಾವ ವರ್ಗಕ್ಕೆ ಅವನು ಸೇರುತ್ತಾನೆ? ಎಂದು ಲೋಕವೂ ಸಹ ಯೇಸುವನ್ನು ನೋಡುವುದಕ್ಕೆ ಆಶ್ಚರ್ಯಗೊಂಡಿತ್ತು. (ಮಾರ್ಕ 4:41) ಜನರು ಯೇಸುವಿನ ಶಿಷ್ಯರನ್ನೂ ಸಹ ನೋಡಿ ಮಾತನಾಡಿಕೊಳ್ಳುತ್ತಿದ್ದರು, "ಅವರು ಸಾಧಾರಣ ಮನುಷ್ಯರಲ್ಲವೇ." (ಅ.ಕೃ 4:13)

**ಪ್ರಿಯ ದೇವರ ಮಗುವೇ, ಈ ಸಂದೇಶದಿಂದ ದೇವರು ನಮ್ಮನ್ನು ಕೇಳುತ್ತಿದ್ದಾರೆ, "ನಮ್ಮ ಜೀವಿತದಲ್ಲಿ ಕ್ರಿಸ್ತನನ್ನು ಪ್ರತಿಬಿಂಬಿಸಲು ನಮಗೆ ಆಗುತ್ತಿದೆಯೇ? ನಮ್ಮ ಜೀವಿತ ಯೇಸುವನ್ನು ಪ್ರಕಟಿಸುತ್ತಿದೆಯೇ?" ಇಲ್ಲವಾದರೆ, ನಾವು ದೇವರ ಚಿತ್ತದಂತೆ ನಡೆಯುತ್ತಿಲ್ಲ ಬದಲಿಗೆ ನಮ್ಮ ಲೌಕಿಕ ಆಲೋಚನೆಗಳೊಳಗೆ ಆಳಕ್ಕೆ ಮುಳುಗುತ್ತಿದ್ದೇವೆ. ಹಾಗಿರುವುದಾದರೆ ಇಂದು ಕ್ರಿಸ್ತನಿಗೆ ಪ್ರಾರ್ಥಿಸಿರಿ, "ನಿನ್ನಂತೆಯೇ ಜಯಭರಿತ ಜೀವಿತವನ್ನು ನಡೆಸಲು ನನಗೆ ಕಲಿಸು. ನಾನು ನನ್ನ ನಂಬಿಕೆಯ ಜೀವಿತದಲ್ಲಿ ಮುಳುಗಿದಾಗೆಲ್ಲಾ, ನೀನು ನನ್ನನ್ನು ಕೈಬಿಟ್ಟಿದ್ದೀಯ ಎಂದು ನಾನು ನೆನೆಸಿದ್ದೆನು. ಆದರೆ ಇಂದು, ನನ್ನ ಮುಳುಗುವ ಪರಿಸ್ಥಿತಿಯಲ್ಲಿಯೂ (ಪೇತ್ರನಂತೆ) ನೀನು ನನ್ನನ್ನು ಕೈ ಹಿಡಿದು ಎತ್ತಿದ್ದೀ ಮತ್ತು ನಡೆಸಿದ್ದೀ ಎಂದು ತಿಳಿದಿದ್ದೇನೆ ಮತ್ತು ನಂಬುತ್ತೇನೆ. ನಾನು ಇನ್ನೂ ಇಲ್ಲಿರುವುದಕ್ಕೆ ಮತ್ತು ಜೀವಿಸುತ್ತಿರುವುದಕ್ಕೆ ಇದೇ ಕಾರಣ. ನಾನು ನನ್ನನ್ನು ಸಂಪೂರ್ಣವಾಗಿ ನಿನ್ನ ಹಸ್ತಕ್ಕೆ ಸಮರ್ಪಿಸಿಕೊಳ್ಳುತ್ತಿದ್ದೇನೆ. ನಿನ್ನ ಆತ್ಮನಿಂದ ನನ್ನನ್ನು ನಡೆಸು. ಆಮೆನ್."**

ನಾವು ಬಾಹೀರಿಕದಿಂದ ಆಂತರಿಕಕ್ಕೆ (ನೋಟದಿಂದ) ಜೀವಿಸಬಾರದು ಬದಲಿಗೆ ಆಂತರಿಕದಿಂದ ಬಾಹೀರಿಕಕ್ಕೆ (ನಂಬಿಕೆಯಿಂದ) ಜೀವಿಸಬೇಕು. ಆವಾಗಲೇ ಲೋಕವನ್ನು ಸೋಲಿಸಿ ಜಯಭರಿತ ಜೀವಿತವನ್ನು ನಡೆಸುತ್ತಾ ಮುಂದುವರೆಯಲು ನಮಗೆ ಸಾಧ್ಯ.

"ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವೂ ಲೋಕವನ್ನು ಜಯಿಸುತ್ತದೆ." (1 ಯೋಹಾ 5:4)

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಈ ಅಧ್ಯಾಯದ ಮೂಲಕ ನೀನು ನನಗೆ ದಯಪಾಲಿಸಿರುವ ಜ್ಞಾನಕ್ಕಾಗಿ ವಂದನೆಗಳು. ನಾನು ನನ್ನ ಜೀವಿತವನ್ನು ಯಾವಾಗಲೂ ನಂಬಿಕೆಯಿಂದ ನಡೆಸುವಂತೆ ನನಗೆ ಸಹಾಯಮಾಡು ಎಂದು ನಿನಗೆ ಪ್ರಾರ್ಥಿಸುತ್ತೇನೆ, ಆದರಿಂದ ಈ ಲೋಕದ ನಿಯಮಗಳು ನನಗೆ ಅಧೀನವಾಗುತ್ತವೆ. ನಿನ್ನ ರಾಜ್ಯದ ನಿಯಮಗಳನ್ನು (ಹೊಸ ದ್ರಾಕ್ಷಾರಸ) ನನ್ನ ಹಳೆಯ ಲೌಕಿಕ ಆಲೋಚನೆಗಳೊಂದಿಗೆ (ಹಳೆಯ ಬುದ್ದಲಿ) ಹೋಲಿಸದಂತೆ ನನಗೆ ಸಹಾಯ ಮಾಡು, ಆಂತರಿಕದಿಂದ ಬಾಹೀರಿಕಕ್ಕೆ ಕಾರ್ಯಮಾಡುವುದಕ್ಕೆ ಪ್ರಾರಂಭಿಸಲು ನನಗೆ ಕೃಪೆಮಾಡು... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ದೇವರ ವಾಕ್ಯದಿಂದ ಹುಟ್ಟಿ, ನಂಬಿಕೆಯಿಂದ ನಾವು ಕಾರ್ಯಮಾಡಿದಾಗಲೆಲ್ಲಾ, ಲೋಕದ ನಿಯಮಗಳು ನಮಗೆ ಅಧೀನವಾಗುತ್ತವೆ.
2. ಆಂತರಿಕ ಮನುಷ್ಯನಿಂದ ಬಾಹೀರಿಕ ಮನುಷ್ಯನನ್ನು ಉಪಯೋಗಿಸುವುದು ನಮ್ಮ ವಿಧಾನವಾಗಿದೆ.
3. ನಿಜವಾದ ದೇವರ ಮಗುವಿನ ಜೀವನವು ಹೊರಗಿನಿಂದ ಒಳಕ್ಕೆ ಕಾರ್ಯಮಾಡುವುದಲ್ಲ ಬದಲಿಗೆ ಒಳಗಿನಿಂದ ಹೊರಕ್ಕೆ ಕಾರ್ಯಮಾಡುವುದಾಗಿದೆ.
4. ದೇವರು ನೀಡಿದಂತಹ "ಹೇಳಲ್ಪಟ್ಟ ಮಾತಿನಲ್ಲಿ" (ರೇಮಾ) ನಂಬಿಕೆಯಿಂದ (ನಾವು ಯೋಚಿಸುವಂತಹ ನಂಬಿಕೆಯಲ್ಲ) ನಾವು ಮುಂದೆ ಹೆಜ್ಜೆಯಿಟ್ಟ ಕ್ಷಣ, ಲೋಕದ ಎಲ್ಲಾ ನಿಯಮಗಳು ನಮಗೆ ಅಧೀನವಾಗುತ್ತವೆ.
5. ದೇವರ ರಾಜ್ಯದ ನಿಯಮದ ಆಲೋಚನೆಗಳನ್ನು (ಹೊಸ ದ್ರಾಕ್ಷಾರಸ) ಹಿಂದಿನ ಲೌಕಿಕ ಆಲೋಚನೆಗಳೊಂದಿಗೆ (ಹಳೆಯ ಬುದ್ದಲಿ) ಹೋಲಿಸಲು ಮತ್ತು ಕಾರ್ಯಮಾಡಲು ನಾವು ಪ್ರಾರಂಭಿಸಿದರೆ, ಅದು ದೊಡ್ಡ ವೈಫಲ್ಯವಾಗಿ ಕೊನೆಗೊಳ್ಳುತ್ತದೆ. ನಾವು ದೇವರ ರಾಜ್ಯದ ವಾಕ್ಯದಿಂದ ಏನನ್ನೂ ಪಡೆದುಕೊಳ್ಳುವುದಿಲ್ಲ.
6. ಒಬ್ಬ ಲೌಕಿಕ ಮನುಷ್ಯನು ಅವನ ಕಾರ್ಯವನ್ನು ಲೋಕದಿಂದ ಪ್ರಾರಂಭಿಸುತ್ತಾನೆ ಮತ್ತು ಲೋಕದಲ್ಲಿ ಮುಗಿಸುತ್ತಾನೆ. ಆದರೆ ಒಬ್ಬ ಆತ್ಮೀಕ ವ್ಯಕ್ತಿಯು ಭೂಮಿಯ ಮೇಲೆ ಅವನ ಕಾರ್ಯವನ್ನು ದೇವರ ರಾಜ್ಯದಿಂದ ಪ್ರಾರಂಭಿಸುತ್ತಾನೆ ಮತ್ತು ಲೋಕದಲ್ಲಿ ಮುಗಿಸುತ್ತಾನೆ.



*ಅಧ್ಯಾಯ 5*

# ದೇವರ ರಾಜ್ಯದಲ್ಲಿ ಸುಂದರವಾಗಿರುವವರು

*"ಜಡೆಹೆಣೆದುಕೊಳ್ಳುವದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದು ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ." (1 ಪೇತ್ರ 3:4-5)*

## ಅ) ದೀನತೆ ಮತ್ತು ಬೆಲೆಯನ್ನು ಪಾವತಿಸುವದು

ತಗ್ಗಿಸಿಕೊಳ್ಳುವವರು ಮಾತ್ರ ಯೇಸುವಿನ ಆಳ್ವಿಕೆಯನ್ನು ಸ್ಥಾಪಿಸಲು ಸಾಧ್ಯ. ನಮ್ಮ ಜೀವಿತದಲ್ಲಿನ ದೀನತೆ ದೇವರ ಪ್ರಸನ್ನತೆಯಲ್ಲಿ ಬಹು ಪ್ರಾಮುಖ್ಯತೆಯುಳ್ಳದ್ದಾಗಿದೆ. ತನಗೆ ಎಲ್ಲಾ ಗೊತ್ತೆಂದು ಹೇಳುವ ಅಥವಾ ಸ್ವಯಂ–ತಿಳಿದಿರುವ ವರ್ತನೆಯನ್ನು ಒಬ್ಬ ವ್ಯಕ್ತಿ ಹೊಂದಿದ್ದರೆ, ಕ್ರಿಸ್ತನು ಆ ವ್ಯಕ್ತಿಯನ್ನು ಉಪಯೋಗಿಸಲು ಆಗುವುದಿಲ್ಲ. ಮತ್ತಾ 20:27ರಲ್ಲಿ ಯೇಸು ಹೇಳುತ್ತಾರೆ, "ನಿಮ್ಮಲ್ಲಿ ಮೊದಲನೇಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು (ದೌಲೋಸ್ = ದಾಸ)."

ತಮ್ಮನ್ನು ತಾವು ದಾಸರಾಗಿ ಒಪ್ಪಿಸಿಕೊಡಲು ಮತ್ತು ಕ್ರಿಸ್ತನ ಸೇವಕರಾಗಲು ಸಿದ್ಧರಿರುವವರು ಬಹಳ ಕಡಿಮೆ ಜನರಿದ್ದಾರೆ. ಇತ್ತೀಚೆಗೆ ಒಬ್ಬ ದೇವರ ಸೇವಕರು ಕೇರಳದಲ್ಲಿರುವವರಿಗೆ (ಭಾರತದಲ್ಲಿ 30 ರಾಜ್ಯಗಳಲ್ಲೊಂದು) ಎಲ್ಲಾ ತಿಳಿದಿದೆಯೆಂದೂ ಮತ್ತು ಅವರಿಗೆ ಹೆಚ್ಚಿನ ಜ್ಞಾನದ ಅಗತ್ಯವಿಲ್ಲವೆಂದೂ, ವ್ಯಂಗ್ಯವಾಗಿ ಸೂಚಿಸಿದರು. ಅಂತಹ ಸ್ಥಿತಿಗಳಲ್ಲಿ ನಮ್ಮ ಆತ್ಮೀಕ ಮಟ್ಟವು ಎಂದಿಗೂ ಹೆಚ್ಚುವುದಿಲ್ಲ ಮತ್ತು ನಮ್ಮ ಮೂಲಕ ಕ್ರಿಸ್ತನ ಆಳ್ವಿಕೆ ಜರುಗುವುದಿಲ್ಲ. ದೇವರು ದೀನತೆಯಿರುವಲ್ಲಿ ಕೃಪೆಯನ್ನು ವರ್ಗಾಯಿಸುವ ದೇವರಾಗಿದ್ದಾನೆ.

ಆದರೆ ಆತನು ನಮಗೆ ಇನ್ನೂ ಹೆಚ್ಚು ಕೃಪೆ ನೀಡುತ್ತಾನೆ. ಆದುದರಿಂದಲೇ ಶಾಸ್ತ್ರವು ಹೇಳುತ್ತದೆ; "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ." (ಯಾಕೋಬ 4:6)

ನಾವು ಎಷ್ಟೇ ಬೆಳೆದರೂ ಅಥವಾ ಬೆಳೆಸಲ್ಪಟ್ಟರೂ, ದೀನತೆಯ ಆಭರಣವನ್ನು ನಾವು ಧರಿಸಿಕೊಳ್ಳಬೇಕೆಂದು ದೇವರ ವಾಕ್ಯ ಹೇಳುತ್ತದೆ. ಅದರ ಅರ್ಥ, ನಾವು ಸೌಮ್ಯವಾದ ಮತ್ತು ತಗ್ಗಿ ನಡೆಯುವ ಹೃದಯದ ಒಡೆಯರಾಗಿರಬೇಕು. ಅದು ಆಂತರಿಕ ಮನುಷ್ಯನ "ಕೆಟ್ಟುಹೋಗಲಾರದ ಭೂಷಣ" ಅಥವಾ "ಶಾಶ್ವತ ಅಲಂಕಾರ"ವಾಗಿದೆ. ನಾವು ಯಾವಾಗಲೂ ಅದನ್ನು ಧರಿಸಬೇಕು. ನಾವು ಸೌಮ್ಯವಾದ ಮತ್ತು ತಗ್ಗಿ ನಡೆಯುವ

ಹೃದಯವನ್ನು ಹೊಂದಿರುವಾಗ, ದೇವರ ರಾಜ್ಯದಲ್ಲಿ ಸುಂದರರಾಗುತ್ತೇವೆ.

**"ಜಡೆಹೆಣೆದುಕೊಳ್ಳುವದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದು ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ." (1 ಪೇತ್ರ 3:4-5)**

ದೇವರು ಈ ಲೋಕದ ದೀನನನ್ನು ತನ್ನ ವಾಕ್ಯವನ್ನು (ಪ್ರಕಟಣೆ) ತುಂಬಿಸಲು ಉಪಯೋಗಿಸುತ್ತಾರೆ. ನಾವು ಏನನ್ನೆಲ್ಲಾ ಹೊಂದಿದ್ದೇವೋ ಅದು ನಮ್ಮಿಂದ ಉತ್ಪಾದಿಸಲ್ಪಟ್ಟಿಲ್ಲ ಅಥವಾ ಸೃಷ್ಟಿಸಲ್ಪಟ್ಟಿಲ್ಲ. ಇದೆಲ್ಲವೂ ದೇವರಿಂದ ನಮಗೆ ದೊರೆತ ಉಡುಗೊರೆಯಾಗಿದೆ ಮತ್ತು ನಾವು ಈ ಉಡುಗೊರೆಗಳನ್ನು ಸ್ವೀಕರಿಸಿದಾಗ, ಅದಕ್ಕೆ ಪ್ರತಿಯಾಗಿ ಅವುಗಳನ್ನು ಇತರರಿಗೆ ನೀಡಬೇಕು. ನಾವು ಬಾವಿಯಿಂದ ನೀರನ್ನು ಹೆಚ್ಚು ತೆಗೆದಷ್ಟು, ಬಾವಿಯೊಳಗಿಂದ ಹೆಚ್ಚು ನೀರು ಉಕ್ಕುತ್ತದೆ.

## ಆ) ಬೆಲೆಯನ್ನು ಪಾವತಿಸುವುದರ ಪ್ರಾಮುಖ್ಯತೆ

ದೀನತೆ ಹೊಂದಿದವರು ಮಾತ್ರ ದೇವರ ವಾಕ್ಯದ ಮುಂದೆ ತಗ್ಗಿಸಿಕೊಳ್ಳಲು ಮತ್ತು ಬೆಲೆಯನ್ನು ಪಾವತಿಸಲು ಸಾಧ್ಯ ಮತ್ತು ಬೆಲೆಯನ್ನು ಪಾವತಿಸುವವರು ಮಾತ್ರ ಏನಾದರೂ ಸಾಧಿಸಬಹುದು. ದೇವರ ರಾಜ್ಯಕ್ಕಾಗಿ ಕ್ರಿಸ್ತನಿಗಾಗಿ ಈ ಲೋಕದ ಅನೇಕ ಸಂಗತಿಗಳನ್ನು ತ್ಯಾಗಮಾಡಲು ನಾವು ಸಿದ್ಧರಿರಬೇಕು. ಇಂದು ಲೋಕದಲ್ಲಿನ ಜನರು ಅವರಿಗೆ ಯಾವರೀತಿಯಲ್ಲೂ ಪ್ರಯೋಜನವಿಲ್ಲದ ಅನೇಕ ಸಂದೇಶಗಳನ್ನು ಕೇಳುತ್ತಾರೆ. ಕ್ರಿಸ್ತನನ್ನು ಕೇಳಿರಿ, ಇದು ಯಾಕೆ ಹೀಗಿದೆ? ಒಂದು ಉದಾಹರಣೆಯ ಮುಖಾಂತರ ಇದನ್ನು ಅರ್ಥಮಾಡಿಕೊಳ್ಳಲು ದೇವರು ನಮಗೆ ಸಹಾಯಮಾಡುತ್ತಾರೆ. ನಾವು ಒಂದು ಮಳಿಗೆಗೆ (ಸೂಪರ್ ಮಾರ್ಕೆಟ್) ಹೋದಾಗ, ಅಲ್ಲಿರುವುದೆಲ್ಲವನ್ನೂ ನಾವು ನೋಡಬಹುದು; ಟ್ರಾಲಿಯೊಂದಿಗೆ ನಾವು ಆ ಸ್ಥಳದಲ್ಲೆಲ್ಲಾ ನಡೆದಾಡಬಹುದು. ಆದರೆ, ನಾವು ಏನನ್ನಾದರೂ ಬಳಸಬೇಕೆಂದರೆ ನಗದು ಕೌಂಟರ್ನಲ್ಲಿ ಅದಕ್ಕೆ ಹಣವನ್ನು ಪಾವತಿಸಬೇಕು ಮತ್ತು ನಂತರವೇ ಅದನ್ನು ಬಳಕೆಗೆ ಮನೆಗೆ ತೆಗೆದುಕೊಂಡುಹೋಗಲು ನಮಗೆ ಸಾಧ್ಯ. ದೇವರ ರಾಜ್ಯದ ಸಂಗತಿಗಳೂ ಅದೇರೀತಿಯಾಗಿದೆ. ನಾವು ವಾಕ್ಯವನ್ನು ಕೇಳಬಹುದು, ಸಂತೋಷಗೊಳ್ಳಬಹುದು, ಆನಂದಪಡಬಹುದು ಆದರೆ ವಾಕ್ಯವು ಇಲ್ಲಿಯೂ ಮತ್ತು ನಿತ್ಯತ್ವದಲ್ಲಿಯೂ ಪ್ರಯೋಜನಕಾರಿಯಾಗಿರಲು, ನಾವು ಬೆಲೆಯನ್ನು ಪಾವತಿಸಲು ಸಿದ್ಧರಾಗಿರಬೇಕು; ಇದು ಲೋಕದ ಹಣದಿಂದಲ್ಲ, ಬದಲಿಗೆ ವಾಕ್ಯವನ್ನು ಅನುಸರಿಸುವುದರಿಂದಲೇ. ನಮ್ಮಲ್ಲಿ ಅನೇಕರು ಆಶೀರ್ವದಿಸಲ್ಪಟ್ಟಿಲ್ಲ ಯಾಕೆಂದರೆ ನಾವು ನಮ್ಮ ಬಯಕೆಗಳಿಗೆ ಪ್ರಾಮುಖ್ಯತೆ ನೀಡುತ್ತೇವೆ ಮತ್ತು ನಂತರ ನಮ್ಮ ಸಮಯವನ್ನು ದೇವರಿಗೆ ಕೊಡುತ್ತೇವೆ. ನಾವು ಪ್ರಥಮ ಫಲವನ್ನು ದೇವರಿಗೆ ಕೊಡಬೇಕು, ಕೊನೆಯ ಫಲವನ್ನಲ್ಲ.

ಒಂದು ದಿನ ನಾನು ಒಬ್ಬ ವ್ಯಕಿಯನ್ನು ಯಾಕೆ ನೀವು ನಿಯಮಿತವಾಗಿ ಪ್ರಾರ್ಥನಾ ಕೂಟಗಳಲ್ಲಿ ಕಾಣುವುದಿಲ್ಲ ಎಂದು ಕೇಳಿದಾಗ ನನಗೆ ಸಮಯವಿರಲಿಲ್ಲ ಎಂದು ಅವರು ಉತ್ತರಿಸಿದರು. ನೀವು ಎಲ್ಲಿ ಹೋಗಿದ್ದಿರಿ ಎಂದು ನಾನು ಅವರನ್ನು ಕೇಳಿದಾಗ, "ಇಂದು ಹೆಚ್ಚುವರಿ ಕೆಲಸವಿತ್ತು ಎಂದು ಹೇಳಿದರು." ಬಹುತೇಕ ಜನರು ಅವರಿಗೆ ಮಾಡಲು ಏನೂ ಇಲ್ಲದಿರುವಾಗ ಅವರ ಸಮಯವನ್ನು ದೇವರಿಗೆ ನೀಡುತ್ತಾರೆ. ಸಾಮಾನ್ಯವಾಗಿ ನಾವು ಏನನ್ನು ಮಾಡಬೇಕೋ ಅದನ್ನು ಪೂರ್ತಿಮಾಡಿ, ಕೊನೆಯಲ್ಲಿ ದೇವರನ್ನು ಎಳೆತರಲು ಪ್ರಯತ್ನಿಸುತ್ತೇವೆ. ಮನೆಯಲ್ಲಿ ಅಳಿದುಳಿದದ್ದನ್ನು ಸಾಮಾನ್ಯವಾಗಿ ಜನರು ಯಾರಿಗೆ ನೀಡುತ್ತಾರೆ? ಈ ಪ್ರಶ್ನೆಗೆ ಉತ್ತರವು ನಿಮ್ಮ ಮನಸ್ಸಿನ ಮೂಲಕ ಧಾವಿಸಿರಬಹುದು ಮತ್ತು ನಿಮ್ಮ ನಾಲಿಗೆಯ ತುದಿಯನ್ನು ತಲುಪಿರಬಹುದು. ಅದೇ ರೀತಿ ಅಲ್ಲವೇ ನಾವು ಕ್ರಿಸ್ತನಿಗೆ ಸಮಯ ಕೊಡುವುದು ಮತ್ತು ಪದೇ ಪದೇ ಆತನಿಂದ ಹೆಚ್ಚನ್ನು ಬಯಸುತ್ತಿರುವದು? ಕ್ರಿಸ್ತನ ವಾಕ್ಯವು ಹೇಳುತ್ತದೆ, "ಎಲ್ಲಾದರ ಪ್ರಥಮ ಫಲದಿಂದ ನಾವು ದೇವರನ್ನು ಸನ್ಮಾನಿಸಬೇಕು."

**"ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮಫಲದಿಂದಲೂ ಯೆಹೋವನನ್ನು ಸನ್ಮಾನಿಸು." (ಜ್ಞಾನೋ 3:9)**

ಒಂದು ದಿನ ನಾನು ನನ್ನ ಮಗನನ್ನು ದಂಡಿಸಬೇಕಾಯಿತು, ಕಾರಣ ಅವನು ದೇವರನ್ನು ಮೊದಲು ಮತ್ತು ಅಗ್ರವಾಗಿ ಸನ್ಮಾನಿಸುವುದನ್ನು ಮರೆತುಹೋದನು. ಅವನು ಬೆಳಗ್ಗೆ ಎದ್ದು, ಪ್ರಾರ್ಥಿಸಿ, ದೇವರ ವಾಕ್ಯ ಓದಿ, ದೇವರನ್ನು ಸ್ತುತಿಸಲು ಒಂದು ಹಾಡನ್ನು ಹಾಡಿ ಮತ್ತು ನಂತರ ದಿನದ ಇತರ ಚಟುವಟಿಕೆಗಳನ್ನು ಮಾಡಲು ತರಬೇತಿಸಲ್ಪಟ್ಟಿದ್ದ. ಅವನು ಇದನ್ನು ಮಾಡುತ್ತಿದ್ದ, ಆದರೆ ಆ ನಿರ್ದಿಷ್ಟ ದಿನದಂದು ಮರೆತುಬಿಟ್ಟನು.

ಮಗುವನ್ನು ಅವನು ನಡೆಯಬೇಕಾದ ರೀತಿಯಲ್ಲಿ ನೆಡೆಯಲು ಮಗುವಾಗಿದ್ದಾಗಲೇ ಅವನಿಗೆ ಕಲಿಸಿರಿ. ಹಾಗಾದರೆ ಅವನು ವಯಸ್ಕನಾದಾಗ ಅದರಿಂದ ದೂರ ಚಲಿಸುವುದಿಲ್ಲ. ಇಂದು, ನಮ್ಮ ದೇವರೂ ಸಹ ನಮಗೆ ಈ ರೀತಿ ಕಲಿಸುತ್ತಿದ್ದಾರೆ. ನಮ್ಮ ಭೂಮಿಯ ತಂದೆಯು ನಮ್ಮನ್ನು ಬೆಳೆಸುತ್ತಿರುವಂತಹ ರೀತಿಯಲ್ಲಿ ನಮ್ಮ ಪರಲೋಕದ ತಂದೆಯೂ ನಿತ್ಯತ್ವದ ಭವಿಷ್ಯಕ್ಕೆ ನಮ್ಮನ್ನು ಬೆಳೆಸುತ್ತಿದ್ದಾರೆ.

ನಾವು ಬೆಲೆಯನ್ನು ಕಟ್ಟಲು ಸಿದ್ಧರಾಗಿರಬೇಕು. **ನಮ್ಮನ್ನು ಸೈತಾನನ ಲೋಕದಿಂದ ದೇವರ ರಾಜ್ಯಕ್ಕೆ ಸೇರಿಸಲು ಯೇಸು ಬೆಲೆಯನ್ನು ಪಾವತಿಸಿದರು ಮತ್ತು ನಾವು ಬೆಲೆಯನ್ನು ಪಾವತಿಸಿದರೆ ನಮಗೆ ಸೈತಾನನು ಬಂಧಿಸಿರುವಂತದನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.**

## ಇ) ದೇವರು ಕಾರ್ಯಮಾಡಬೇಕಾ ಅಥವಾ ಸೈತಾನ ಕಾರ್ಯಮಾಡಬೇಕಾ?

ಓರ್ವ ಸಹೋದರಿ ಒಮ್ಮೆ ನನ್ನನ್ನು ಕೇಳಿದರು, "ವಿಮೋಚಿಸಲ್ಪಟ್ಟಿರುವ ದೇವರ ಮಗುವಿನ ಮೇಲೆ ಸೈತಾನನು ಯಾವ ಅಧಿಕಾರವನ್ನೂ ಹೊಂದಿಲ್ಲ ಎಂದು ನಾವು ಹೇಳುವುದಾದರೆ, ಯಾಕೆ ನಾವು ಪದೇ ಪದೇ ಬಳಲುತ್ತಿದ್ದೇವೆ?" ನಾವು ಅನುಮತಿಸುವ ಸಮಯವನ್ನು ಹೊರತುಪಡಿಸಿ, ವಿಮೋಚಿಸಲ್ಪಟ್ಟ ದೇವರ ಮಗುವಿನ ಮೇಲೆ ಸೈತಾನನು

ಯಾವ ಅಧಿಕಾರವನ್ನೂ ಹೊಂದಿಲ್ಲ ಎಂದು ನಾವು ಅರ್ಥಮಾಡಿಕೊಳ್ಳಬೇಕು. ನಾವು ಅನುಮತಿಸಿದಾಗ, ಸೈತಾನನು ನಮ್ಮ ಮೇಲೆ ಆಳ್ವಿಕೆಮಾಡುತ್ತಾನೆ. ಅನೇಕ ಜನರು ಯೋಚಿಸುವುದಕ್ಕೆ ಪ್ರತಿಯಾಗಿ ಸೈತಾನನು ಯಾರ ಮೇಲೆಯೂ ಜಿಗಿಯುವುದಿಲ್ಲ. 1 ಪೇತ್ರ 5:8ರಲ್ಲಿ ಅವನು ಘರ್ಜಿಸುವ ಸಿಂಹದಂತೆ ನಮ್ಮ ಮೇಲೆ ಜಿಗಿಯುತ್ತಾನೆ ಎಂದು ಹೇಳಿಲ್ಲ, ಬದಲಿಗೆ ಅವನು ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ ಎಂದು ಹೇಳಿದೆ. ಸೈತಾನನು ನಮ್ಮ ಸುತ್ತ ತಿರುಗುತ್ತಾನೆ.

ಅವನು ಏನನ್ನು ಹುಡುಕುತ್ತಾನೆ? ಸೈತಾನನು ಒಬ್ಬ ವ್ಯಕ್ತಿ ತನ್ನ ಸಂಪತ್ತಿನಲ್ಲಿ (ಶರೀರದ ಆಲೋಚನೆಗಳು, ಲೋಕದ ಪ್ರೀತಿ) ನಡೆಯುತ್ತಿದ್ದಾನೋ ಅಥವಾ ಇಲ್ಲವೋ ಎಂದು ಹುಡುಕುತ್ತಿದ್ದಾನೆ. ಒಬ್ಬ ವಿಮೋಚಿಸಲ್ಪಡದ ವ್ಯಕ್ತಿಯು ಅವನೊಳಗೆ ಸೈತಾನನ ಸಂಪತ್ತನ್ನು ಹೊಂದಿರುತ್ತಾನೆ, ಆದರೆ ಒಬ್ಬ ವಿಮೋಚಿಸಲ್ಪಟ್ಟ ವ್ಯಕ್ತಿಯು ಮನಸ್ಸಿನಲ್ಲಿ ಸೈತಾನನ ಸಂಪತ್ತನ್ನು (ಶರೀರದ ಆಲೋಚನೆಗಳು – ರೋಮಾ 8:7) ಮತ್ತು ದೇವರ ಸಂಪತ್ತನ್ನು (ಪರಿಶುದ್ಧಾತ್ಮನ ಫಲ – ಗಲಾ 5:22-23, ರೋಮಾ 5:5) ಹೊಂದಿರುತ್ತಾನೆ. ಅಂದರೆ, ವಿಮೋಚಿಸಲ್ಪಟ್ಟ ವ್ಯಕ್ತಿಯ ಆತ್ಮವು ದೈವೀಕ ಸ್ವಭಾವದಿಂದ (ದೇವರ ಸಂಪತ್ತು) ತುಂಬಿರುತ್ತದೆ ಮತ್ತು ಅವನ ಮನಸ್ಸು ಶರೀರದ ಸ್ವಭಾವದಿಂದ (ಸೈತಾನನ ಸಂಪತ್ತು) ತುಂಬಿರುತ್ತದೆ. ದೇವರ ಸಂಪತ್ತಿನಲ್ಲಿ ಕಾರ್ಯಮಾಡಬೇಕಾ ಅಥವಾ ಸೈತಾನನ ಸಂಪತ್ತಿನಲ್ಲಿ ಕಾರ್ಯಮಾಡಬೇಕಾ ಎಂದು ನಾವು ನಿರ್ಧರಿಸಬೇಕು. ನಾವು ಆಂತರಿಕದಿಂದ ಬಾಹೀರಿಕಕ್ಕೆ ಕಾರ್ಯಮಾಡಿದರೆ ದೇವರ ರಾಜ್ಯದ ನಿರ್ದೇಶಕನಾಗಿರುವ, ಯೇಸು ಕ್ರಿಸ್ತನು ನಮ್ಮ ಜೀವಿತದಲ್ಲಿ ಕಾರ್ಯಮಾಡಲು ನಾವು ಅನುಮತಿಸುತ್ತೇವೆ. ನಾವು ಬಾಹೀರಿಕದಿಂದ ಆಂತರಿಕಕ್ಕೆ ಕಾರ್ಯಮಾಡಿದರೆ ಈ ಲೋಕದ ದೇವರಾಗಿರುವ ಸೈತಾನನು ನಮ್ಮ ಜೀವಿತದಲ್ಲಿ ಕಾರ್ಯಮಾಡಲು ನಾವು ಅನುಮತಿಸುತ್ತೇವೆ. ಸೈತಾನನು ನಮ್ಮಲ್ಲಿ ಅನೇಕರ ಮೇಲೆ ಅಧಿಕಾರವನ್ನು ತೆಗೆದುಕೊಳ್ಳಲು ಇದೇ ಕಾರಣ. ನಾವು ಕಾರ್ಯಮಾಡುವ ವಿಧಾನದ ಆಧಾರದ ಮೇಲೆ, ದೇವರು ಅಥವಾ ಸೈತಾನ ನಮ್ಮ ಮೂಲಕ ಕಾರ್ಯಮಾಡುತ್ತಾನೆ.

ನಾವು ಯಾವಾಗಲೂ ತಗ್ಗಿಸಿಕೊಳ್ಳಬೇಕು ಮತ್ತು ಆತ್ಮನ ಫಲವಾಗಿರುವ ದೇವರ ಪ್ರೀತಿಯಲ್ಲಿ ಕಾರ್ಯಮಾಡಬೇಕು. ನಂತರವೇ ದೇವರ ರಾಜ್ಯದ ಆಭರಣದೊಂದಿಗೆ ಅಲಂಕಾರಿತ ಆಂತರಿಕ ಮನುಷ್ಯನನ್ನು ಧರಿಸಿ, ಸುಂದರರಾಗುತ್ತೇವೆ (1 ಪೇತ್ರ 3:4-5). ಅದು ಮಾತ್ರವೇ ಅಲ್ಲ, ನಮ್ಮ ಮೂಲಕ ದೇವರ ರಾಜ್ಯವು ಲೋಕದಲ್ಲಿ ಕಾರ್ಯಮಾಡುತ್ತದೆ.

### ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನಾನು ಯಾವಾಗಲೂ ಸೌಮ್ಯ ಮತ್ತು ದೀನ ಹೃದಯವನ್ನು ಧರಿಸಿಕೊಳ್ಳುವಂತೆ ನನಗೆ ಸಹಾಯ ಮಾಡು. ತಂದೆಯೇ, ನನ್ನ ಪ್ರಥಮ ಫಲವನ್ನು ನಿನಗೆ ಕೊಡುವಂತೆ ನನಗೆ ಸಹಾಯಮಾಡು ಮತ್ತು ನಿನ್ನ ಆಶೀರ್ವಾದಗಳನ್ನು ಸ್ವೀಕರಿಸುವ ಸಲುವಾಗಿ ನಿನ್ನ ವಾಕ್ಯಕ್ಕೆ ವಿಧೇಯತೆಯೆಂಬ ಬೆಲೆಯನ್ನು ಪಾವತಿಸಲು ನನ್ನನ್ನು ಸಿದ್ಧನಾಗಿರುವಂತೆ ಮಾಡು. ನೀನು ನನ್ನ ಮೂಲಕ ಕಾರ್ಯಮಾಡಲು ಸಾಧ್ಯವಾಗುವಂತೆ ಆತ್ಮನ ಫಲದಿಂದ ಕಾರ್ಯಮಾಡಲು ನನಗೆ ಕೃಪೆಮಾಡು. ತಂದೆಯೇ, ನನ್ನ ಜೀವಿತದಲ್ಲಿ ಸೈತಾನನನ್ನು ಅನುಮತಿಸುವವರೆಗೆ ಮತ್ತು ಅನುಮತಿಸದೇ ಅವನು ನನ್ನ ಮೇಲೆ ಯಾವುದೇ ಅಧಿಕಾರವನ್ನು ಹೊಂದಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಮತ್ತೊಮ್ಮೆ ನನ್ನ ಜೀವಿತವನ್ನು ನಾನು ನಿನ್ನ ಮುಂದೆ ಸಮರ್ಪಿಸುತ್ತಿದ್ದೇನೆ...... ಯೇಸುವಿನ ನಾಮದಲ್ಲಿ, ಆಮೆನ್.*

### ಮುಖ್ಯ ತತ್ವಗಳು

1. ನಾವೆಲ್ಲರೂ ಸೌಮ್ಯ ಮತ್ತು ದೀನ ಹೃದಯವನ್ನು ಹೊಂದಿರಬೇಕು. ಅದನ್ನು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಧರಿಸಿರಬೇಕು. ದೇವರ ವಾಕ್ಯದಲ್ಲಿ ಸೂಚಿಸಲಾಗಿರುವ ಶಾಶ್ವತ ಆಭರಣವು ಇದೇ.
2. ನಾವು ನಮ್ಮ ಕೊನೆಯ ಫಲದ ಬದಲಿಗೆ, ಪ್ರಥಮ ಫಲವನ್ನು ದೇವರಿಗೆ ನೀಡಿದರೆ ಆತನು ನಮ್ಮನ್ನು ಆಶೀರ್ವದಿಸುತ್ತಾನೆ.
3. ದೇವರಿಂದ ಆಶೀರ್ವಾದವನ್ನು ಪಡೆಯುವ ಸಲುವಾಗಿ, ನಾವು ಬೆಲೆಯನ್ನು ಪಾವತಿಸಲು ಸಿದ್ಧರಾಗಿರಬೇಕು. ಸೈತಾನನ ಲೋಕದಿಂದ ದೇವರ ರಾಜ್ಯಕ್ಕೆ ನಮ್ಮನ್ನು ಸೇರಿಸಲು ಯೇಸು ಬೆಲೆಯನ್ನು ಕಟ್ಟಿದನು. ನಾವು ಬೆಲೆಯನ್ನು ಪಾವತಿಸಿದರೆ, ಸೈತಾನನು ಬಂಧಿಸಿರುವುದನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಸಾಧ್ಯವಾಗುತ್ತದೆ.
4. ದೇವರ ವಾಕ್ಯಕ್ಕೆ ವಿಧೇಯತೆಯನ್ನು ತೋರಿಸುವುದರಿಂದ ನಾವು ಬೆಲೆಯನ್ನು ಪಾವತಿಸಬಹುದು.
5. ನಾವು ಶರೀರದ ಆಲೋಚನೆಗಳ ಮೇಲೆ ನೆಲೆಗೊಂಡರೆ ಮತ್ತು ಕಾರ್ಯಮಾಡಿದರೆ, ನಾವು ನಮ್ಮಲ್ಲಿ ಸೈತಾನನು ಕಾರ್ಯಮಾಡುವಂತೆ ಅಧಿಕಾರವನ್ನು ನೀಡುತ್ತೇವೆ. ಆದರೆ, ನಾವು ಆತ್ಮದ ಫಲದಲ್ಲಿ ಕಾರ್ಯಮಾಡಿದರೆ, ನಮ್ಮಲ್ಲಿ ಕಾರ್ಯಮಾಡುವಂತೆ ದೇವರನ್ನು ನಾವು ಅನುಮತಿಸುತ್ತೇವೆ.
6. ಒಬ್ಬ ವಿಮೋಚಿಸಲ್ಪಟ್ಟಂತಹ ದೇವರ ಮಗುವಿನ ಮೇಲೆ ಸೈತಾನನು ಯಾವ ಅಧಿಕಾರವನ್ನೂ ಹೊಂದಿಲ್ಲ. ಆದರೆ ನಾವು ಅವನನ್ನು ಅನುಮತಿಸಿದಾಗ, ಸೈತಾನನು ನಮ್ಮ ಮೇಲೆ ಆಳ್ವಿಕೆಮಾಡಬಹುದು.



*ಅಧ್ಯಾಯ 6*

# ಆತ್ಮೀಕ ಬೆಳವಣಿಗೆ ಎಂದರೇನು?

*"ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುಬೋ೯ಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು."*
*(ಎಫೆಸ 4:14-15)*

ನಾವೆಲ್ಲರೂ ನಾವಿರುವ ಯಾವ ಕ್ಷೇತ್ರದಲ್ಲಿ ಅಥವಾ ಸ್ಥಾನದಲ್ಲಾದರೂ ಉನ್ನತಕ್ಕೇರಲು ಲಕ್ಷ್ಯವಿಡುತ್ತೇವೆ – ಅದು ನಮ್ಮ ಶಾಲೆಯಾಗಿರಲಿ, ಕಛೇರಿಯಾಗಿರಲಿ, ಕುಟುಂಬವಾಗಿರಲಿ ಅಥವಾ ಸಮಾಜವಾಗಿರಲಿ. ಮನುಷ್ಯನು ಯಾವಾಗಲೂ ಆಕಾಶಕ್ಕೆ ಲಕ್ಷ್ಯವಿಡುತ್ತಾನೆ. ಆದರೆ ದೇವರು ನಾವು ಯಾವ ಸ್ಥಾನವನ್ನು ಪಡೆಯಬೇಕೆಂದು ಬಯಸುತ್ತಾರೆ ಎಂದು ನಾವು ಎಂದಾದರೂ ಯೋಚಿಸಿದ್ದೇವಾ? ಹೌದು, ಪರಲೋಕದಲ್ಲಿರುವ ನಮ್ಮ ತಂದೆಯು ನಾವು ತಲುಪಬೇಕಾದ ಸ್ಥಾನದ ಕುರಿತು ಬಯಕೆಯನ್ನು ಹೊಂದಿದ್ದಾರೆ, ಆದರೆ ನಾವು ಇದರ ಕುರಿತು ಎಲ್ಲಾ ಸಮಯದಲ್ಲೂ ನಿರ್ಲಕ್ಷ್ಯವುಳ್ಳವರಾಗಿದ್ದೇವೆ. ದೇವರ ಕೃಪೆಯಿಂದ ದೇವರು ಬಯಸುವಂತಹ ಮತ್ತು ನಾವು ತಲುಪಬೇಕಾದ ಹಂತವನ್ನು ಈ ಅಧ್ಯಾಯದಲ್ಲಿ ಅರ್ಥಮಾಡಿಕೊಳ್ಳೋಣ.

## ಅ) ಆತ್ಮೀಕ ಬೆಳವಣಿಗೆ ಮತ್ತು ಅದರ ವಿವಿಧ ಬದಿಗಳು

ಯಾವುದೇ ವಿಶ್ವಾಸಿಗೆ ಆತ್ಮೀಕ ಬೆಳವಣಿಗೆಯಲ್ಲಿ ಅವರು ತಲುಪಬಹುದಾದ ಅತ್ಯಧಿಕ ಮಟ್ಟವು ತಲೆಯಾಗಿರುವ ಕ್ರಿಸ್ತನವರೆಗೆ ಬೆಳೆಯುವುದು. ಈ ಸ್ಥಿತಿಯನ್ನು ತಲುಪುವ ವ್ಯಕ್ತಿಗೆ ಸ್ವಯಂ ಎನ್ನುವುದು ಇಲ್ಲವಾಗುತ್ತದೆ ಮತ್ತು ಅವನು "ಸ್ವಯಂ-ಕೇಂದ್ರೀಕೃತದ ಜೀವನ"ದಿಂದ "ಕ್ರಿಸ್ತ–ಕೇಂದ್ರೀಕೃತ ಜೀವನ"ಕ್ಕೆ ರೂಪಾಂತರವಾಗುತ್ತಾನೆ. ದೇವರು ಈ ವ್ಯಕ್ತಿಯ ಮೂಲಕ ಲೋಕದಲ್ಲಿ ಆಳ್ವಿಕೆಮಾಡುತ್ತಾರೆ.

**"ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುಬೋ೯ಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು." (ಎಫೆಸ 4:14-15)**

ದೇವರು ಸೃಷ್ಟಿಸುವ ಯಾವುದೇ ಆಗಿದ್ದರು ಪರಿಪೂರ್ಣವಾಗಿಯೇ ಇರುತ್ತದೆ. ದೇವರು ಸೃಷ್ಟಿಸಿರುವಂಥದನ್ನು ಯಾರೊಬ್ಬರೂ ಪೂರ್ಣವಾಗಿಸಬೇಕಿಲ್ಲ.

ಸೃಷ್ಟಿಸಲ್ಪಟ್ಟಿರುವಂಥದು ಪೂರ್ಣವಾಗಿಲ್ಲವಾದರೆ ಅದನ್ನು ಸೃಷ್ಟಿಸಿದ ವ್ಯಕ್ತಿಯೂ ಸಹ ಪರಿಪೂರ್ಣವಾಗಿಲ್ಲ. ದೇವರು ಏನನ್ನೆಲ್ಲಾ ಸೃಷಿಸಿದನೋ, ಅದನ್ನು ಆತನು ಒಳ್ಳೇದೆಂದು ಕಂಡನು. **"ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು." (ಆದಿ 1:31)**

ಮೊದಲು ಹುಟ್ಟಿದ ಆದಾಮನು ಹೇಗೆ ದೇವರ ಸೃಷ್ಟಿಯಾಗಿದ್ದಾನೋ ಹಾಗೆಯೇ ಯಜ್ಞದ ಕುರಿಯ ರಕ್ತದಿಂದ ಹೊಸದಾಗಿ ಹುಟ್ಟಿದ ವ್ಯಕ್ತಿಯೂ ದೇವರ ನೂತನ ಸೃಷ್ಟಿಯಾಗಿದ್ದಾನೆ. ಸ್ವಭಾವವು ಬಿದ್ದುಹೋದ ಮನುಷ್ಯನದ್ದಲ್ಲ (ಆದಾಮ) ಬದಲಿಗೆ ದೇವರ ಸ್ವಾರೂಪ್ಯದ್ದು. ದೇವರು ಆ ವ್ಯಕ್ತಿಯನ್ನು ಸೃಷ್ಟಿಸಿರುವುದರಿಂದ, ಅವನು ಪರಿಪೂರ್ಣ ಮನುಷ್ಯನಾಗಿದ್ದಾನೆ. ಆ ಪ್ರಕರಣದಲ್ಲಿ, ಆ ನೂತನ ಸೃಷ್ಟಿಗೆ ಯಾವ ಬೆಳವಣಿಗೆಯೂ ಅವಶ್ಯವಿಲ್ಲ. "ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ **ನೂತನ ಸ್ವಭಾವವನ್ನು** ಧರಿಸಿಕೊಳ್ಳಿರಿ. **ಆ ಸ್ವಭಾವವು ದೇವರ ಹೋಲಿಕೆಯ** ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ." (ಎಫೆ 4:23-24)

"ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು **ನೂತನ ಸ್ವಭಾವವನ್ನು** ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ." (ಕೊಲೊ 3:9-10)

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು **ನೂತನ ಸೃಷ್ಟಿಯಾದನು,** ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು." (2 ಕೊರಿ 5:17)

ಆದರೆ ಇನ್ನೊಂದು ಭಾಗದಲ್ಲಿ ಹೇಳುತ್ತದೆ, ನಾವು ರಕ್ಷಣೆಯವರೆಗೂ ಹೊಸದಾಗಿ ಹುಟ್ಟಿದ ಮಗುವಿನಂತೆ ಬೆಳೆಯಬೇಕು.

"ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ **ಬೆಳೆಯುತ್ತಾ** ರಕ್ಷಣೆಯನ್ನು ಹೊಂದುವಿರಿ." (1 ಪೇತ್ರ 2:1-2)

ನಾವು ಕೇಳಬಹುದು, ಯಾಕೆ ಒಂದು ಭಾಗದಲ್ಲಿ ನಾವು ನೂತನ ಸೃಷ್ಟಿಗಳು ಎಂದು ಮತ್ತು ಇನ್ನೊಂದು ಭಾಗದಲ್ಲಿ ನಾವು ಹೊಸದಾಗಿ ಹುಟ್ಟಿದ ಮಗುವಿನಂತೆ ಬೆಳೆಯಬೇಕೆಂದು ಸೂಚಿಸಲಾಗಿದೆ? ಇದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ನಾವು ವಾಕ್ಯವನ್ನು ಆಳವಾಗಿ ಚಿಂತಿಸೋಣ.


ಒಬ್ಬ ವ್ಯಕ್ತಿಯ ರಚನೆಯು ಮೂರು ಭಾಗಗಳನ್ನು ಒಳಗೊಂಡಿದೆ: ಆತ್ಮ, ಪ್ರಾಣ ಮತ್ತು ಶರೀರ.

"ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ." (1 ಥೆಸ 5:23)

ದೇವರ ವಾಕ್ಯವು ಇದನ್ನು ಎರಡು ಭಾಗವಾಗಿ ವಿಂಗಡಿಸುತ್ತದೆ: ಬಾಹೀರಿಕ ಅಥವಾ ಹೊರಗಿನ ಮನುಷ್ಯ ಮತ್ತು ಆಂತರಿಕ ಅಥವಾ ಒಳಗಿನ ಮನುಷ್ಯ.

1. **ಬಾಹೀರಿಕ ಮನುಷ್ಯ:** ಕಾಣುವ ಮರ್ತ್ಯ ಅಥವಾ ಭೌತಿಕ ಶರೀರದೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿ.

2. **ಆಂತರಿಕ ಮನುಷ್ಯ:** ಕಾಣದ ನಿತ್ಯ ಅಥವಾ ಸ್ವರ್ಗೀಯ ಶರೀರದೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿ.




*ಆಂತರಿಕ ಆತ್ಮಶರೀರ ಮತ್ತು ಬಾಹೀರಿಕ ಭೌತಿಕಶರೀರದೊಂದಿಗೆ ಸಂಬಂಧದಲ್ಲಿನ "ಪ್ರಾಣ ಮನುಷ್ಯ"*


**ಚಿತ್ರ–10**

ಆದಿಕಾಂಡ 2:7ರಿಂದ ನಮಗೆ ತಿಳಿದಿರುವಂತೆ, ಮನುಷ್ಯನು ಬದುಕಿರುವ ಪ್ರಾಣಿ. ಈ ಪ್ರಾಣವು ಆತ್ಮದೊಂದಿಗೆ ಸಂಬಂಧಹೊಂದಿರುವುದನ್ನು "ಆಂತರಿಕ ಮನುಷ್ಯ" ಎಂದು ಕರೆಯಲಾಗುತ್ತದೆ ಮತ್ತು ಶರೀರದೊಂದಿಗೆ ಸಂಬಂಧಹೊಂದಿರುವುದನ್ನು "ಬಾಹೀರಿಕ ಮನುಷ್ಯ" ಎಂದು ಕರೆಯಲಾಗುತ್ತದೆ.

ನಿಜವಾದ ದೇವರ ಮಗುವಿನ ಜೀವಿತದಲ್ಲಿ, ಹೊರಗಿನ ಶರೀರ ನಶಿಸುತ್ತಿರುವಂತೆ, ಅವನ ಪ್ರಾಣದ ಲೌಕಿಕ ಅಥವಾ ಶಾರೀರಿಕ ಸ್ವಭಾವವೂ ಸಹ ನಶಿಸುತ್ತಿರುತ್ತದೆ. ವಯಸ್ಸಾಗುವಿಕೆಯ ಕಾರಣದಿಂದ ಹೊರಗಿನ ಶರೀರವು ನಶಿಸುತ್ತಿದೆ. ಮನಸ್ಸು ಅಥವಾ ಪ್ರಾಣವು ದೇವರ ವಾಕ್ಯಕ್ಕೆ ತಗ್ಗುವುದರಿಂದ ನವೀಕರಣವಾಗುತ್ತದೆ. ಒಳಗಿನ ಮನುಷ್ಯನು ಬಲಿಷ್ಠನಾಗುತ್ತಿರುವಂತೆ ಹೊರಗಿನ ಮನುಷ್ಯನು ನಶಿಸುತ್ತಾನೆ. ಮನಸ್ಸಿನ ನವೀಕರಣದಿಂದ ಆತ್ಮವು ಪ್ರಾಣವನ್ನು ಬದಲಾಯಿಸುತ್ತದೆ. ಇದು ಹೊಸ ಸ್ವಭಾವವನ್ನು ಉತ್ಪಾದಿಸುವ ಹೊಸ ಸೃಷ್ಟಿಯ ಪರಿಶುದ್ಧಾತ್ಮನ ತುಂಬುವಿಕೆ.


ಇಂದು ಒಳಗಿನ ಮತ್ತು ಹೊರಗಿನ ಮನುಷ್ಯನಿಗೆ ಸಂಬಂಧಿಸಿದಂತೆ ಜನರು ಅಲ್ಪ ಜ್ಞಾನವನ್ನು ಹೊಂದಿದ್ದಾರೆ. ಹೊಸದಾಗಿ ಸೃಷ್ಟಿಸಲ್ಪಟ್ಟ ಒಳಗಿನ ಆತ್ಮ ಮತ್ತು ನಮ್ಮ ಹಳೆಯ ಪ್ರಾಣವು ಜೊತೆಯಾಗಿರುವುದು ಒಳಗಿನ ಮನುಷ್ಯನಾಗಿದೆ,

**"ಆದದರಿಂದ ನಾವು ಧೈರ್ಯಗೆಡುವುದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ." (2 ಕೊರಿ 4:16)**




*ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮ ಮತ್ತು ಪ್ರಾಣ ಜೊತೆಯಾಗಿ ಆಂತರಿಕ ಮನುಷ್ಯ ಎಂದು ಕರೆಯಲ್ಪಡುತ್ತವೆ*

**ಚಿತ್ರ–11**




*ಭೌತಿಕ ಶರೀರ ಮತ್ತು ಪ್ರಾಣ ಜೊತೆಯಾಗಿ ಬಾಹೀರಿಕ ಮನುಷ್ಯ ಎಂದು ಕರೆಯಲ್ಪಡುತ್ತವೆ*

**ಚಿತ್ರ–12**

ಇಲ್ಲಿ, ಹೊರಗಿನ ಮನುಷ್ಯನಿಗೆ ಮತ್ತು ಒಳಗಿನ ಮನುಷ್ಯನಿಗೆ ಹಂಚಿಕೊಳ್ಳಲು ಒಂದೇ ಪ್ರಾಣವಿದೆ. ಎರಡೂ ಪ್ರಾಣಕ್ಕಾಗಿ ಪರಸ್ಪರ ಎಳೆದಾಡುತ್ತಿವೆ. ಅಂದರೆ ಈ ಶರೀರ ಮತ್ತು ಆತ್ಮ ತಮ್ಮ ಇಷ್ಟದ ಪ್ರಕಾರ ಮಾಡುವಂತೆ ಪ್ರಾಣವನ್ನು ಒತ್ತಾಯಿಸುತ್ತವೆ. ಮೇಲಿನ ಚಿತ್ರದಲ್ಲಿ ಮನುಷ್ಯನು ಹೇಗೆ ಎರಡು ಭಾಗವಾಗಿ ವಿಭಾಗವಾಗಿದ್ದಾನೆಂದು ನಾವು ನೋಡಬಹುದು (ಆಂತರಿಕ ಮನುಷ್ಯ ಮತ್ತು ಬಾಹೀರಿಕ ಮನುಷ್ಯ) ಮತ್ತು ಈ ಎರಡು ಭಾಗಗಳು ಪ್ರಾಣಕ್ಕಾಗಿ ಹೋರಾಡುತ್ತವೆ. ಈಗ ಈ ಪ್ರಾಣವನ್ನು ಪಡೆಯಲು, ಈ ಲೋಕದ ರಾಜನಾಗಿರುವ ಸೈತಾನನು, ಇನ್ನೂ ವಿಮೋಚಿಸಲ್ಪಡದ (ಹೊರಗಿನಿಂದ ಒಳಕ್ಕೆ) ಶರೀರದ ಮೂಲಕ ಹೆಚ್ಚುವರಿ – ಸಮಯ ಕೆಲಸಮಾಡುತ್ತಿದ್ದಾನೆ. **"ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದಾಗಿದೆ." (ರೋಮಾ 7:22-23)**

ಆದಾಗ್ಯೂ, ದೇವರು, ಹೊಸದಾಗಿ ಸೃಷ್ಟಿಸಲ್ಪಟ್ಟ ಮನುಷ್ಯನ ಆತ್ಮದಲ್ಲಿ ನೆಲೆಸಿರುವ ಪರಿಶುದ್ಧಾತ್ಮನ ಮೂಲಕ, ಒಳಗಿನಿಂದ ಹೊರಕ್ಕೆ ಕಾರ್ಯಮಾಡುತ್ತಾರೆ. **"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ." (ರೋಮಾ 8:13)**

"ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು." (ರೋಮಾ 8:14)

## ಆ) ಜ್ಞಾನದ ಕೊರತೆಯಿಂದ ದೇವರ ಜನರು ನಾಶವಾಗುತ್ತಿದ್ದಾರೆ

ಬೆಳೆಯಲು ಬಯಸುವ ಮಗುವಿನಂತೆಯೇ, ನಂಬಿಕೆಯ ವಲಯದಲ್ಲಿ, ಬೆಳೆಯಲು ಬಯಸುವ ಜನರ ಗುಂಪಿದೆ. ಆದರೆ ಅವರ ಬೆಳವಣಿಗೆಗೆ ತಡೆಯಾಗಿರುವುದು ಅವರ ಶರೀರದ ಹಳೆಯ ಸ್ವಭಾವವಾಗಿದೆ (ಲೋಕದ ಪ್ರೀತಿ). "ನಾನು" ಎಂಬುದರ ಅಭಿವ್ಯಕ್ತಗಳು: ನಾನು ಏನೆಲ್ಲಾ ಮಾಡುತ್ತೇನೋ ಅದು ಸರಿ, ನನಗೆ ಎಲ್ಲಾ ಗೊತ್ತು, ನಾನು ಎಲ್ಲಾರಿಗಿಂತಲೂ ಬುದ್ಧಿವಂತ, ಇತರೆ ಎಲ್ಲರೂ ತಪ್ಪು – ಈ ಎಲ್ಲವೂ ಶಾರೀರಿಕ ಸ್ವಭಾವದ ವಿಧಗಳು. ಅವನ/ಅವಳ ಬೆಳವಣಿಗೆಗೆ ತಡೆಯೇನೆಂದರೆ ಅವರ ಹೃದಯವು ದೀನವಾಗಿಲ್ಲದಿರುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವರ ಸ್ವ-ಹೆಮ್ಮೆ ಅಥವಾ ಪ್ರಾಣ ಹೊಸ ಮನುಷ್ಯನನ್ನು ಪ್ರಕಟಪಡಿಸದೇ ಮರೆಮಾಡುತ್ತದೆ.




*ಮಗು ಆತ್ಮೀಕವಾಗಿ ಬೆಳೆಯಲು ಬಯಸುತ್ತದೆ, ಆದರೆ ತನ್ನ ಸ್ವಂತ ಚಿತ್ತದಲ್ಲಿ ಜ್ಞಾನದ ಕೊರತೆಯ ಕಾರಣದಿಂದಾಗಿ ಶೈಶಾವಸ್ಥೆಯ ಸ್ಥಿತಿಯಲ್ಲಿ ಮುಂದುವರೆಯುತ್ತದೆ*

**(ಚಿತ್ರ–13)**

ನಾವು ಇಲ್ಲಿ ಚಿತ್ರದಲ್ಲಿ ನೋಡಬಹುದು ಏನೆಂದರೆ ಮಗುವು ಬೆಳೆಯಲು ಬಯಸುತ್ತದೆ, ಆದರೆ ಮಗು ಬಕೆಟಿನೊಳಗೆ ಕೂತುಕೊಂಡು ಕೇವಲ ಅಳಲು ಮಾತ್ರ ಸಾಧ್ಯ.

ಕಾರಣವೇನೆಂದರೆ ದೇವರು ದೀನರಿಗೆ ಕೃಪೆಯನ್ನು ನೀಡುತ್ತಾನೆ. ದೇವರು ಅಹಂಕಾರಿಗಳನ್ನು ವಿರೋಧಿಸುತ್ತಾನೆ. ಬೆಳವಣಿಗೆಗೆ ತಡೆಯಾಗಿ ಬಕೆಟ್ ಇದೆ. ಬೆಳೆಯುವ ಸಲುವಾಗಿ, ಮಗುವು ಬಕೆಟಿನಿಂದ ಹೊರಗೆ ಬರಬೇಕು. ನಮ್ಮ ಜ್ಞಾನದ ಮೇಲೆ ಅವಲಂಬಿತರಾಗಿ, ದೇವರ ಜ್ಞಾನವಿಲ್ಲದೇ ನಾವು ಬೆಳೆಯಲು ಪ್ರಯತ್ನಿಸುವ ಯಾವುದೇ

ಸ್ಥಿತಿಯನ್ನು ಬಕೆಟ್ ಸೂಚಿಸುತ್ತದೆ. **"ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ." (ಹೋಶೇ 4:6)**

ಇಂದು ಆರಾಧಿಸುವಂತಹ, ಚಪ್ಪಾಳೆ ತಟ್ಟುವಂತಹ, ಉಪವಾಸ ಮಾಡುವಂತಹ, ದೇವರ ವಾಕ್ಯವನ್ನು ಕೇಳುವಂತಹ ಮತ್ತು ದೇವರನ್ನು ಮೆಚ್ಚಿಸಲು ತಮಗೆ ತಿಳಿದಿರುವಂತಹ ಎಲ್ಲಾ ಸಂಗತಿಗಳನ್ನು ಮಾಡುವಂತಹ ಅನೇಕ ವಿಶ್ವಾಸಿಗಳನ್ನು ನೀವು ನೋಡುವಿರಿ; ಆದರೆ ಅವರು ತುಂಬಾ ಮಹತ್ವವುಳ್ಳ "ಜ್ಞಾನದಲ್ಲಿ" ಕೊರತೆಯುಳ್ಳವರಾಗಿದ್ದಾರೆ ಮತ್ತು ಅವರು ಬೆಳೆಯುತ್ತಿಲ್ಲ. ಜ್ಞಾನವನ್ನು ಹೊಂದದೆ, ನನ್ನ ಜನರು ನಾಶವಾಗುತ್ತಿದ್ದಾರೆ ಎಂದು ದೇವರು ಹೇಳುತ್ತಾರೆ. ತನ್ನ ಮಕ್ಕಳ ಕುರಿತು ದೇವರ ಬಯಕೆಯು ಈ ರೀತಿಯಾಗಿ ಬಕೆಟಿನೊಳಗೆ ಕೂರುವಂಥದಲ್ಲ ಬದಲಿಗೆ ಹೊರಗೆ ಬರುವುದು ಮತ್ತು ದೇವರ ರಾಜ್ಯದಲ್ಲಿ ಪ್ರಜೆಯಾಗುವುದಕ್ಕೆ ಬೆಳೆಯುವುದಾಗಿದೆ. ಬೆಳೆಯುವ ಸಲುವಾಗಿ ಈ ಮಗುವು ತನ್ನ ಪ್ರಸ್ತುತ ಸ್ಥಿತಿಯನ್ನು ಬಿಡಬೇಕು ಮತ್ತು ಬಕೆಟಿನಿಂದ (ಸ್ವಯಂ–ಜ್ಞಾನ) ಹೊರಬರಬೇಕು. ಬಕೆಟ್ ಎನ್ನುವುದು ವ್ಯಕ್ತಿ ತನ್ನ ಸ್ವಯಂ–ಜ್ಞಾನ ಅಥವಾ ಸ್ವಂತ ಜ್ಞಾನದೊಳಗೆ ನೆಲೆಸಿರುವ ಸ್ಥಿತಿಯಾಗಿದೆ. ಮೇಲಿನ ಚಿತ್ರದಲ್ಲಿ ದುಷ್ಟ ಸೈತಾನನಿಂದ ಕಾವಲಿರಿಸಲ್ಪಟ್ಟಿರುವ ಸರಪಣಿಯನ್ನೂ ನೋಡಬಹುದು. ದೇವರ ಮಗು ನಿಜವಾದ ದೇವರ ಜ್ಞಾನವನ್ನು ಪಡೆಯದಿರಲು ಎಲ್ಲಾ ದಾರಿಗಳನ್ನೂ ನಿರ್ಬಂಧಿಸಿರುವ ಸೈತಾನನ ಕಾರ್ಯಗಳನ್ನೂ ಇದು ಪ್ರತಿನಿಧಿಸುತ್ತದೆ. ನಾವು ಈ ಸ್ಥಿತಿಯನ್ನು ನಮ್ಮ ಜೀವಿತದಲ್ಲಿ ಮುಂದುವರೆಸಿದರೆ ದೇವರಿಂದ ತಿದ್ದಲ್ಪಡುತ್ತೇವೆ, ಆದರೆ ನಾವು ಅದನ್ನು ನಿರ್ಲಕ್ಷಿಸಿದರೆ ನಾಶವಾಗುತ್ತೇವೆ ಮತ್ತು ಮೇಲಿನ ವಾಕ್ಯವನ್ನು ಪೂರ್ತೀಕರಿಸುವುದರಿಂದ ಸೈತಾನನು ನಮ್ಮ ಜೀವಿತದ ಮೇಲೆ ಜಯ ಸಾಧಿಸುತ್ತಾನೆ.

ಈ ಸ್ಥಿತಿಯನ್ನು ಜಯಿಸಲು ನಾವು ಎರಡು ಸಂಗತಿಗಳನ್ನು ಮಾಡಬೇಕು. ಒಂದು, ನಮ್ಮನ್ನು ನಿರಾಕರಿಸಬೇಕು, ನಮ್ಮನ್ನು ತಗ್ಗಿಸಿಕೊಳ್ಳಬೇಕು ಮತ್ತು ಬಕೆಟಿನಿಂದ ಹೊರಬರಬೇಕು. ಎರಡನೇಯದು, ನಾವು ಹೊಸದಾಗಿ ಹುಟ್ಟಿದ್ದರೂ, ನಮ್ಮ ಶಾರೀರಿಕ ಸ್ವಭಾವವು ಇನ್ನೂ ನಮ್ಮಲ್ಲಿ ನೆಲೆಗೊಂಡಿದೆ ಎಂದು ಅರ್ಥಮಾಡಿಕೊಳ್ಳಬೇಕು. ನಾವು ಈ ಸ್ವಭಾವವನ್ನು ದೇವರ ವಾಕ್ಯದಿಂದ ಮತ್ತು ಪರಿಶುದ್ಧಾತ್ಮನ ದೈವೀಕ ಸ್ವಭಾವದೊಂದಿಗೆ ಅಥವಾ ಪ್ರಾರ್ಥನೆ ಮತ್ತು ದೇವರ ವ್ಯವಸ್ಥೆಯ ಮೇಲೆ ಸಂಪೂರ್ಣ ಅವಲಂಬನೆಯೊಂದಿಗೆ ಬದಲಾಯಿಸಿಕೊಳ್ಳಬೇಕು. ಇಲ್ಲವಾದರೆ ನಾವು ನಮ್ಮ ಶಾರೀರಿಕ ಸ್ವಭಾವದಿಂದ ಕಾರ್ಯಮಾಡಿದಾಗ, ಸೈತಾನನು ಶರೀರದ ಭಾವನೆಗಳನ್ನು ಪ್ರಚೋದಿಸುತ್ತಾನೆ ಮತ್ತು ದೇವರನ್ನು ನಮ್ಮ ವೈರಿಯನ್ನಾಗಿ ಮಾಡುತ್ತಾನೆ. ಶರೀರಭಾವ ಮತ್ತು ಸೈತಾನನ ಪ್ರಭಾವ ಜನರನ್ನು ದೈವೀಕ ಆಲೋಚನೆಗಳಿಂದ ದೂರವಿಡುತ್ತವೆ. **"ಯಾಕಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು." (ರೋಮಾ 8:7)**

ಈ ಪುಸ್ತಕದ ಮೂಲಕ, ದೇವರ ಜನರನ್ನು ದೇವರು ಬಯಸುವ ಆತ್ಮೀಕ ಮಟ್ಟಕ್ಕೆ ತರುವುದು ದೇವರಾತ್ಮನ ಬಯಕೆಯಾಗಿದೆ.

**"ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು." (ಎಫೆಸ 4:14-15)**

**ಇದೇ ದೇವರ ಬಯಕೆ.** "ದೇವರ ಚಿತ್ತವನ್ನು ನೆರವೇರಿಸುವ ಸಲುವಾಗಿ, ದೇವರ ರಾಜ್ಯದ ಎಲ್ಲಾ ಪ್ರಜೆಗಳೂ ತಿಳಿದಿರಬೇಕಾದ ಮೂಲಭೂತ ಸಂಗತಿಗಳನ್ನು ಉಲ್ಲೇಖಿಸಲಾಗಿದೆ."

## ಇ) ಆಳವಾದ ಆತ್ಮೀಕ ಬೆಳವಣಿಗೆಯಲ್ಲಿ

ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿರುವಂತೆ, ಒಬ್ಬ ಮನುಷ್ಯನು ಮೂರು ಭಾಗಗಳಾಗಿ ವಿಭಾಗಿಸಲ್ಪಟ್ಟಿದ್ದಾನೆ – ಆತ್ಮ, ಮನಸ್ಸು (ಪ್ರಾಣ) ಮತ್ತು ಶರೀರ. ಮನುಷ್ಯನು ಪಾಪ ಮಾಡಿದಾಗ, ಮಹಿಮೆಯನ್ನು ಕಳೆದುಕೊಂಡನು. (ರೋಮಾ 3:23) ಪರಿಶುದ್ಧಾತ್ಮನು ಅವನ ಆತ್ಮವನ್ನು ತೊರೆದನು ಮತ್ತು ಅದರ ಸ್ಥಳದಲ್ಲಿ ಕತ್ತಲೆಯು ತುಂಬಿತು; ಅಂದರೆ ಸೈತಾನನು ಅವನನ್ನು ಪ್ರಭಾವಿಸಿದನು. **"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ." (ರೋಮಾ 3:23)**

ಇಲ್ಲಿಂದ ಮನುಷ್ಯನು ಆತ್ಮೀಕ ಪ್ರಪಂಚದೊಂದಿಗೆ ಸಂವಹಿನಿಸಲು ಸಾಧ್ಯವಾಗಲಿಲ್ಲ ಆದಕಾರಣ ದೇವರೊಂದಿಗೆ ಸಂವಹಿನಿಸಲು ಸಾಧ್ಯವಾಗಲಿಲ್ಲ. ಸೈತಾನನು ಮೂರು ಭಾಗಗಳನ್ನು ಸಂಪೂರ್ಣವಾಗಿ ಪ್ರಭಾವಿಸಿದನು: ಆತ್ಮ, ಪ್ರಾಣ ಮತ್ತು ಶರೀರ. ನಂತರದಲ್ಲಿ ಮನುಷ್ಯನು ಅವನು ಹೊಸದಾಗಿ ಹುಟ್ಟಿದ ಹಂತವನ್ನು ತಲುಪಿದಾಗ, ಅವನ ಆತ್ಮದಲ್ಲಿ ದೇವರ ಸ್ವಭಾವದೊಂದಿಗೆ ಒಬ್ಬ ಹೊಸ ವ್ಯಕ್ತಿ ಸೃಷ್ಟಿಸಲ್ಪಟ್ಟನು (ಚಿತ್ರ ಸಂಖ್ಯೆ 8). ಎಫೆಸದವರಿಗೆ 4:23-24ರಲ್ಲಿ ಸತ್ಯವೇದವು ಹೇಳುತ್ತದೆ: **"ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ."** 1 ಪೇತ್ರ 2:1-3 ಮತ್ತು ರೋಮಾ 12:2 ರಲ್ಲಿ ಅದನ್ನೇ ಹೇಳಲಾಗಿದೆ, "ದೇವರ ಹೋಲಿಕೆಯಲ್ಲಿ ಆತ್ಮದಲ್ಲಿ ಸೃಷ್ಟಿಸಲ್ಪಟ್ಟಿರುವ, ಹೊಸ ಮನುಷ್ಯನನ್ನು ಧರಿಸಿಕೊಳ್ಳಿರಿ." ದೇವರ ಸ್ವಾರೂಪ್ಯದಲ್ಲಿ ಹೊಸದಾಗಿ ಸೃಷ್ಟಿಸಲ್ಪಟ್ಟಿರುವ (ಆತ್ಮದಲ್ಲಿ) ಮನುಷ್ಯನನ್ನು ಮಾನುಷಿಕ ಪ್ರಾಣದಲ್ಲಿ ಸ್ವೀಕರಿಸುವುದು ಮತ್ತು ಧರಿಸಿಕೊಳ್ಳುವುದು ಆತ್ಮೀಕ ಬೆಳವಣಿಗೆಯಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಾಣದ ನಶಿಸುವ ಸ್ವಭಾವವನ್ನು ಬದಲಾಯಿಸುವುದು ಮತ್ತು ದೇವರ ಸ್ವಾರೂಪ್ಯದಲ್ಲಿರುವ ಹೊಸದಾಗಿ ಸೃಷ್ಟಿಸಲ್ಪಟ್ಟ ಆತ್ಮದ ಸ್ವಭಾವವನ್ನು, ಮನುಷ್ಯನ ಪ್ರಾಣಕ್ಕೆ ತರುವುದಾಗಿದೆ ಆತ್ಮೀಕ ಬೆಳವಣಿಗೆ. ಆದಾಮನ ಬೀಳುವಿಕೆಯ ನಂತರ, ಮನುಷ್ಯನ ಪ್ರಾಣದಲ್ಲಿನ (ಮನಸ್ಸು) ಆಲೋಚನೆಗಳು ಪೂರ್ಣವಾಗಿ ಭ್ರಷ್ಟವಾದವು ಎಂದು ಹಿಂದಿನ ಅಧ್ಯಾಯಗಳಿಂದ ನಾವು

ತಿಳಿದುಕೊಂಡಿದ್ದೇವೆ. ಈಗ ಒಬ್ಬ ವ್ಯಕ್ತಿ ಹೊಸದಾಗಿ ಹುಟ್ಟಿದ ನಂತರ, ಕ್ರಿಸ್ತನ ಸ್ವಭಾವದಲ್ಲಿರುವ ಹೊಸದಾಗಿ ಸೃಷ್ಟಿಸಲ್ಪಟ್ಟಿರುವ ಆತ್ಮವು ಬದಲಾಗುತ್ತದೆ ಅಥವಾ ಆತ್ಮದಲ್ಲಿ ಭ್ರಷ್ಟ ಆದಾಮಿಕ ಸ್ವಭಾವವನ್ನು ವಶಮಾಡಿಕೊಳ್ಳುತ್ತದೆ ಮತ್ತು ಕ್ರಮೇಣವಾಗಿ ಕ್ರಿಸ್ತನ ಸ್ವಭಾವಕ್ಕೆ ಬದಲಾಗುತ್ತದೆ ಅಥವಾ ಆತ್ಮನ ಫಲಗಳೊಂದಿಗೆ ತುಂಬಿ ಸಲ್ಪಡುತ್ತದೆ. ಈ ಪ್ರಕ್ರಿಯೆಯನ್ನು ಆತ್ಮೀಕ ಬೆಳವಣಿಗೆ ಎಂದು ಕರೆಯಲಾಗು ತ್ತದೆ. "ಆತ್ಮದ ಸ್ವಭಾವವು ಪ್ರಾಣ ದೊಳಗೆ ಬೆಳೆಯುತ್ತದೆ." ಈ ಪ್ರಕ್ರಿಯೆಯ ವೇಗವು ಒಬ್ಬ ವ್ಯಕ್ತಿ ಅವನ ಜೀವಿತದಲ್ಲಿ ಪರಿಶುದ್ಧಾತ್ಮನ ಕಾರ್ಯಗಳಿಗೆ ಹೇಗೆ ಒಪ್ಪಿಸಿಕೊಡುತ್ತಾನೆ ಎನ್ನುವ ಆಧಾರದ ಮೇಲೆ ಪ್ರತೀ ವ್ಯಕ್ತಿಯಲ್ಲಿಯೂ ವ್ಯತ್ಯಾಸಕರವಾಗಿರುತ್ತದೆ. ಈ ಪರಿಶುದ್ಧಾತ್ಮನ ಕಾರ್ಯಗಳನ್ನು ಪುಸ್ತಕದ 2ನೇ ಭಾಗದಲ್ಲಿ ವಿವರಿಸಲಾಗಿದೆ. ಹೊಸದಾಗಿ ಹುಟ್ಟಲ್ಪಟ್ಟಿರುವ ಕೆಲವು ಜನರು ಆತ್ಮನ ಫಲಗಳನ್ನು ಪ್ರಕಟಗೊಳಿಸಲು ಸಾಧ್ಯವಾಗದಿರುವುದಕ್ಕೆ ಕಾರಣ ಅವರು ಸರಿಯಾಗಿ ಹೊಸದಾಗಿ ಹುಟ್ಟಲ್ಪಡದೇ ಇರುವುದಲ್ಲ, ಬದಲಿಗೆ ಅವರು ಈ ಪ್ರಕ್ರಿಯೆಯ ಕುರಿತು ಜಾಗೃತರಾಗಿಲ್ಲದಿರುವುದು. ಅದನ್ನು ತಿಳಿಯದೇ, ಅದಕ್ಕೆ ಅವರು ಒಪ್ಪಿಸಿಕೊಡುವುದು ಹೇಗೆ? ಭೂಮಿಯ ಮೇಲೆ ಉತ್ತಮನಾಗಿ ಜೀವಿಸಲು ಕ್ರೈಸ್ತತ್ವವು ಒಂದು ಧರ್ಮ ಮಾತ್ರ ಎಂದು ಅವರಲ್ಲಿ ಅನೇಕರು ಯೋಚಿಸುತ್ತಾರೆ.

> ದೇವರ ಸ್ವಾರೂಪ್ಯದಲ್ಲಿ ಹೊಸದಾಗಿ ಸೃಷ್ಟಿಸಲ್ಪಟ್ಟಿರುವ (ಆತ್ಮದಲ್ಲಿ) ಮನುಷ್ಯನನ್ನು ಮಾನುಷಿಕ ಪ್ರಾಣದಲ್ಲಿ ಸ್ವೀಕರಿಸುವುದು ಮತ್ತು ಧರಿಸಿಕೊಳ್ಳುವುದು ಆತ್ಮೀಕ ಬೆಳವಣಿಗೆಯಾಗಿದೆ.

ಕ್ರಿಸ್ತನಲ್ಲಿ ಒಬ್ಬ ವ್ಯಕ್ತಿಯು ನೂತನ ಸೃಷ್ಟಿಯಾಗಿದ್ದಾನೆ. ಪ್ರಕಟಣೆ 1:6 ಮತ್ತು 5:10ರಲ್ಲಿ ಹೇಳುವಂತೆ ಅವನು ದೊರೆತನ ಮಾಡಲು ಸೃಷ್ಟಿಸಲ್ಪಟ್ಟಿದ್ದಾನೆ.

**"ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು." (ಪ್ರಕ 5:10)**

**"ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ." (1 ಯೋಹಾ 5:4)**

## ಈ) ಹೊಸದಾಗಿ ಹುಟ್ಟಿದ್ದಾನೆ ಆದರೆ ಕಾರ್ಯಗಳು ಒಳ್ಳೆಯದಾಗಿಲ್ಲ! ಯಾಕೆ?

ಕೊಲೊಸ್ಸೆಯವರಿಗೆ 3:9-10ರಲ್ಲಿ ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿರುವ ನೂತನ ಮನುಷ್ಯನು ನಮ್ಮೊಳಗೆ (ನಮ್ಮ ಆತ್ಮದಲ್ಲಿ) ಇರಿಸಲ್ಪಟ್ಟಿರುವುದನ್ನು ನಾವು ನೋಡುತ್ತೇವೆ. ನಾವು ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿದ್ದರೆ, ಯಾಕೆ ನಾವು ಸುಳ್ಳು ಹೇಳುವುದನ್ನು ಮುಂದುವರೆಸುತ್ತೇವೆ? ನಾವು ಯಾಕೆ ಕೋಪಗೊಳ್ಳುತ್ತೇವೆ? ಯಾಕೆ ನಾವು ಹಳೆಯ ಸ್ವಭಾವದಲ್ಲಿ ಕಾರ್ಯಮಾಡುತ್ತಿದ್ದೇವೆ?

> ಯೇಸು ಕ್ರಿಸ್ತನು ತನ್ನ ರಕ್ತದಿಂದ ನಮ್ಮನ್ನು ಬಿಡಿಸಿ ನೂತನ ಮನುಷ್ಯರಾಗಿ ಸೃಷ್ಟಿಸಿದಾಗ ನಮ್ಮಲ್ಲಿ ಹೊಸದಾಗಿ ಸೃಷ್ಟಿಸಲ್ಪಟ್ಟದ್ದು ಆತ್ಮ ಮಾತ್ರ. ಪ್ರಾಣಕ್ಕೆ ಮತ್ತು ಶರೀರಕ್ಕೆ ಯಾವುದೇ ನೂತನ ಸೃಷ್ಟಿ ಜರುಗಲಿಲ್ಲ.

ನೀವು ಚಿತ್ರ 5ರಲ್ಲಿ ನೋಡುವಂತೆ, ಹಳೆಯ ಮನುಷ್ಯನು (ಆದಾಮ) ಸೈತಾನನಿಗೆ ವಿಧೇಯನಾಗಿ ನಡೆದನು, ಅವನು ಸೈತಾನ ನೊಂದಿಗೆ ಸೇರಿಕೊಂಡನು ಮತ್ತು ಸೈತಾನನು ಅವನ ಮೇಲೆ ಮತ್ತು ಅವನ ಎಲ್ಲಾ ವಂಶದವರ ಮೇಲೆ ಆಳ್ವಿಕೆ ತೆಗೆದುಕೊಂಡನು. ಯೇಸು ಕ್ರಿಸ್ತನು ತನ್ನ ರಕ್ತದಿಂದ ನಮ್ಮನ್ನು ಬಿಡಿಸಿ ನೂತನ ಮನುಷ್ಯರಾಗಿ ಸೃಷ್ಟಿಸಿದಾಗ ನಮ್ಮಲ್ಲಿ ಹೊಸದಾಗಿ ಸೃಷ್ಟಿಸಲ್ಪಟ್ಟದ್ದು ಆತ್ಮ ಮಾತ್ರ. ಪ್ರಾಣಕ್ಕೆ ಮತ್ತು ಶರೀರಕ್ಕೆ ಯಾವುದೇ ನೂತನ ಸೃಷ್ಟಿ ಜರುಗಲಿಲ್ಲ. ಯಾರಾದರೂ ಸುವಾರ್ತೆಯನ್ನು ಹೇಳಿದಾಗ, ಪ್ರಾಣವು ಅದನ್ನು ಸ್ವೀಕರಿಸಿತು ಮತ್ತು ಹೃದಯದಲ್ಲಿ ಯೇಸುವನ್ನು ರಕ್ಷಕನಾಗಿ ಸ್ವೀಕರಿಸಿತು. ಅದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ನಾನು ಒಂದು ಘಟನೆಯ ಬಗ್ಗೆ ಹೇಳುತ್ತೇನೆ.

ಕೆಲವು ವರ್ಷಗಳ ಹಿಂದೆ, ಕುವಾಯಿತ್ ಇರಾಕ್ ನಿಂದ ಆಕ್ರಮಣಿಸಲ್ಪಟ್ಟಿತ್ತು. ಕುವಾಯಿತ್ ಸ್ವತಃ ಬಿಡಿಸಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲದ್ದರಿಂದ, ಆ ದೇಶವು ಅಮೇರಿಕಾದ ಸಹಾಯವನ್ನು ಪಡೆಯಿತು. ಅದರಂತೆಯೇ ಸೈತಾನನು ನಮ್ಮ ಆತ್ಮ, ಪ್ರಾಣ ಮತ್ತು ಶರೀರವನ್ನು ಆಕ್ರಮಿಸಿದ ಆದರೆ ನಾವು ಸುವಾರ್ತೆಯನ್ನು ಕೇಳಿದಾಗ ಮತ್ತು ಯೇಸುವನ್ನು ಸ್ವೀಕರಿಸಿದಾಗ, ನಾವು ಹೇಳಿದೆವು, "ಯೇಸುವೇ ನನ್ನ ಜೀವನದಲ್ಲಿ ಬಾ ಮತ್ತು ನನ್ನ ರಾಜ ಹಾಗೂ ರಕ್ಷಕನಾಗು." ಕುವಾಯಿತ್ ಅಮೇರಿಕಾದಿಂದ ಸಹಾಯವನ್ನು ಕೋರಿದಾಗ, ಅಮೇರಿಕಾ ಸೌದಿ ಅರೇಬಿಯಾಗೆ ಬಂದಿತು ಮತ್ತು ಕುವಾಯಿತ್ ಅನ್ನು ಮರುವಶಮಾಡಿಕೊಂಡಿತು. ಅದೇ ರೀತಿಯಲ್ಲಿ ನಾವು ಯೇಸುವನ್ನು ಅಂಗೀಕರಿಸಿದಾಗ, ದೇವರಾತ್ಮನು ನಮ್ಮ ಆತ್ಮಕ್ಕೆ ಬಂದನು ಮತ್ತು ಅವನ ಕಾರ್ಯವನ್ನು ಮನುಷ್ಯನ ಆತ್ಮದಲ್ಲಿ ಪ್ರಾರಂಭಿಸಿದನು ಹಾಗೂ ಸೈತಾನನಿಂದ ಪ್ರಭಾವಿಸಲ್ಪಟ್ಟಿದ್ದ ಪ್ರಾಣವನ್ನು ಮರುವಶಮಾಡಿಕೊಂಡನು.

ಕ್ರಿಸ್ತನನ್ನು ನಮ್ಮ ರಕ್ಷಕನನ್ನಾಗಿ ನಾವು ಅಂಗೀಕರಿಸಿದಾಗ, ಮೊದಲು ದೇವರು ನಮ್ಮ ಆತ್ಮವನ್ನು ಹೊಸ ಸೃಷ್ಟಿಯಾಗಿ ಮಾಡುತ್ತಾರೆ. ಇದು ದೇವರ **ನೀತಿಕರಣ**. **"ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವದೇ ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ." (ರೋಮಾ 6:22)**

ದೇವರಾತ್ಮನಿಗೆ ವಿಧೇಯರಾಗಿ ನಾವು ಜೀವಿಸುವಾಗ, ಸೈತಾನನು ಇಟ್ಟಿದ್ದಂತಹ, ಶರೀರದ ಲೌಕಿಕ ಆಲೋಚನೆಗಳಿಂದ ನಾವು ವಿಮೋಚಿಸಲ್ಪಡುತ್ತೇವೆ, ಇದು **ಪವಿತ್ರೀಕರಣ**.

ಯೇಸುವನ್ನು ನಮ್ಮ ರಕ್ಷಕನನ್ನಾಗಿ ಅಂಗೀಕರಿಸಿದ ತಕ್ಷಣವೇ ನೀತಿಕರಣ ಜರುಗಿದರೆ,

ಪವಿತ್ರೀಕರಣವು ನಮ್ಮ ಜೀವಿತ ಈ ಲೋಕದಲ್ಲಿ ಮುಗಿಯುವವರೆಗೆ, ಪರಿಶುದ್ಧಾತ್ಮನು ನಮ್ಮ ಹೃದಯದಲ್ಲಿ ಬಂದ ನಂತರ ನಮ್ಮ ಸಹಕಾರದೊಂದಿಗೆ ಮಾಡುವಂತಹ **ನಿರಂತರ ಪ್ರಕ್ರಿಯೆಯಾಗಿದೆ.** "ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು." (ಎಫೆ 5:27)

ನಂತರದಲ್ಲಿ ಕ್ರಿಸ್ತನು ಮಧ್ಯ ಆಕಾಶದಲ್ಲಿ ಬಂದಾಗ, ನಮ್ಮ ಭೌತಿಕ ಶರೀರ ಸ್ವರ್ಗೀಯ ಶರೀರದಂತೆ ಪುನರುತ್ಥಾನಗೊಳ್ಳುತ್ತದೆ. ಅದರಂತೆಯೇ ನಮ್ಮಲ್ಲಿ ಪ್ರತಿಯೊಬ್ಬರೂ **ಮಹಿಮೀಕರಣವನ್ನು** ಪಡೆಯುತ್ತೇವೆ. (1 ಥೆಸ 4:16-17) ನಮಗೆ ಸಂಭವಿಸುವ ಈ ಮೂರೂ ಘಟನೆಗಳನ್ನು ದೇವರ ರಾಜ್ಯದ ಎಲ್ಲಾ ಪ್ರಜೆಗಳು ಅರ್ಥಮಾಡಿಕೊಳ್ಳಬೇಕು.

ಒಬ್ಬ ವ್ಯಕ್ತಿ ದೇವರಿಂದ ಹೊಸದಾಗಿ ಸೃಷ್ಟಿಸಲ್ಪಟ್ಟ ಪರಿಪೂರ್ಣ ಆತ್ಮವನ್ನು ಹೊಂದಿಕೊಂಡು, ಹೊಸದಾಗಿ ಹುಟ್ಟಬಹುದು, ಆದರೂ ಅವನ ಪ್ರಾಣದಲ್ಲಿ "ಶಾರೀರಿಕ ಆಲೋಚನೆಗಳ" ರೀತಿಯಾಗಿ ಸೈತಾನನ ಶೇಖರಣೆ ಇನ್ನೂ ಉಳಿದಿರುತ್ತದೆ. ಹೊಸದಾಗಿ ಹುಟ್ಟಿದ ವ್ಯಕ್ತಿಯು ಈ ಆಲೋಚನೆಗಳ ಮೇಲೆ ಕೇಂದ್ರೀಕರಿಸಿದಾಗ, ಅವನ ಜೀವಿತದಲ್ಲಿ ಕೆಟ್ಟ ಫಲಿತಾಂಶಗಳು ಬರುತ್ತವೆ. ಇದಕ್ಕಾಗಿಯೇ, ದೇವರ ಮಕ್ಕಳ ಕುರಿತು ಅನೇಕ ಟೀಕೆಗಳನ್ನು ನಾವು ಕೇಳಿದ್ದೇವೆ. ಉದಾಹರಣೆಗೆ, "ಅವನನ್ನು ನೋಡಿ, ಅವನ ತೋಳುಗಳ ಕೆಳಗೆ ಸತ್ಯವೇದವನ್ನು ಹಿಡಿದಿದ್ದಾನೆ ಮತ್ತು ನಡೆಯುತ್ತಿದ್ದಾನೆ ಆದರೆ ಅವನ ಕೆಟ್ಟ ಕೆಲಸಗಳನ್ನು ನೋಡಿ?" ಅಥವಾ "ಅವಳು ಹೋಗುವುದನ್ನು ನೋಡಿದರೆ, ಒಂದು ಪರಿಶುದ್ಧ ತೋರಿಕೆ ಇದೆ ಆದರೆ ...!" ಈ ಎರಡು ಉದಾಹರಣೆಗಳನ್ನು ಹೊರಗಿನ ರೀತಿಯಿಂದ ನೋಡುವುದಾದರೆ, ಅವರನ್ನು ಪರಿಶುದ್ಧರಂತೆ ನಾವು ಭಾವಿಸುತ್ತೇವೆ ಆದರೆ ಅವರು ಬಾಯಿಯನ್ನು ತೆರೆದರೆ, ಅದು ಸಮಾಧಿಯಂತಿದೆ!

ಹಾಗಾದರೆ ಅವರು ನಿಜವಾಗಿಯೂ ಹೊಸದಾಗಿ ಹುಟ್ಟಿದ್ದಾರಾ? ಹೌದು, ಅವರು ಹುಟ್ಟಿದ್ದಾರೆ; ಆದರೆ ಅವರು ಇನ್ನೂ ಹಳೆಯ ಶೇಖರಣೆಯನ್ನು ಉಪಯೋಗಿಸುತ್ತಿದ್ದಾರೆ, ಅಂದರೆ ಸೈತಾನನು ಹಿಂದೆ ಇಟ್ಟಿದ್ದಂತಹ ಶರೀರದ ಭಾವನೆಗಳು.

ಇತರರು ಇದನ್ನು ನೋಡಿದಾಗ, ಕ್ರಿಸ್ತನ ಹೆಸರು ಅಪಹಾಸ್ಯಕ್ಕೊಳಗಾಗುತ್ತದೆ. ಅಂತಹ ವ್ಯಕ್ತಿಗಳಿಗೆ ಶಿಕ್ಷೆಯಿದೆ. ಪ್ರಕಟಣೆ 3:15-16 ಹೇಳುತ್ತದೆ,

**"ನಿನ್ನ ಕೃತ್ಯಗಳನ್ನು ಬಲ್ಲೆನು; ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ, ನೀನು ತಣ್ಣಗಾಗಲೀ ಬೆಚ್ಚಗಾಗಲೀ ಇದ್ದರೆ ಒಳ್ಳೇದಾಗಿತ್ತು. ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವುದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು."**

## ಉ) ಪಾಪಮಾಡಲು ಸಾಧ್ಯವಾಗದಂತಹ ವ್ಯಕ್ತಿ

**ದೇವರಿಂದ ಹುಟ್ಟಿದವನು ಪಾಪಮಾಡನು (1 ಯೋಹಾ 3:9).** ಬಹುತೇಕ ವಿಶ್ವಾಸಿಗಳು ಈ ವಾಕ್ಯವನ್ನು ಹೇಳಲು ಭಯವುಳ್ಳವರಾಗಿದ್ದಾರೆ, ಅದರಿಂದ ಯಾರೊಬ್ಬರೂ ಇದನ್ನು ಪ್ರಸಂಗಿಸುವುದಿಲ್ಲ. ಕಾರಣವೇನೆಂದರೆ, ಅವರು ಜೀವಿಸುತ್ತಿರುವ ಲೋಕವನ್ನು ನೋಡಿ, ಸ್ವಯಂ ಅವಲೋಕನ ಮಾಡಿಕೊಂಡಾಗ, ತಮ್ಮನ್ನು ತಾವು ಪಾಪಮಾಡುವವರಾಗಿ ಕಾಣುತ್ತಾರೆ. ಅವರು ಅನುಸರಿಸುತ್ತಿಲ್ಲದಿರುವ ಸಂಗತಿಗಳ ವಿರುದ್ಧವಾಗಿ ಹೇಗೆ ತಾನೇ ಪ್ರಸಂಗಿಸಲು ಅಥವಾ ಮಾತನಾಡಲು ಸಾಧ್ಯ? ಇದಕ್ಕೆ ಕಾರಣ ಆತ್ಮ ಮಂಡಲದ ಕುರಿತು ಮತ್ತು ಆ ಮಂಡಲದಲ್ಲಿ ದೇವರಿಂದ ಹುಟ್ಟಿದಂತಹ ನೂತನವಾಗಿ ಸೃಷ್ಟಿಸಲ್ಪಟ್ಟ ವ್ಯಕ್ತಿಯ ಕುರಿತು ನಮ್ಮಲ್ಲಿ ಬಹುತೇಕರಿಗೆ ತಿಳಿಯದೆ ಇರುವುದಾಗಿದೆ. ಒಮ್ಮೆ ನಾವು ಅದನ್ನು ತಿಳಿದುಕೊಂಡಾಗ, ನಮ್ಮ ಆಲೋಚನೆಗಳು ಬದಲಾಗುತ್ತವೆ ಮತ್ತು ಫಲಿತಾಂಶಗಳೂ ಸಹ.

ಪ್ರಿಯ ದೇವರ ಜನರೇ, ಒಬ್ಬ ಸಹೋದರ ಅಥವಾ ಸಹೋದರಿ ಏನನ್ನಾದರೂ ತಪ್ಪನ್ನು ಮಾಡಿದಾಗ ನಾವು ಅವರಿಗೆ ಶರೀರದಲ್ಲಿ ಪ್ರತಿಕ್ರಿಯಿಸಬಾರದು, ಬದಲಿಗೆ ದೈವೀಕ ಸ್ವಭಾವದೊಂದಿಗೆ ಪ್ರತಿಕ್ರಿಯಿಸಬೇಕು ಮತ್ತು ಅವರು ನೈಜತೆಯನ್ನು ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ಆದರೆ, ನಾವು ಸಾಮಾನ್ಯವಾಗಿ ಮಾಡುವುದೇನೆಂದರೆ –

*"ಏನು? ಇದನ್ನೆಲ್ಲಾ ಕೇಳಿದ ಮೇಲೂ ನೀನು ಅರ್ಥಮಾಡಿಕೊಳ್ಳುವುದಿಲ್ಲವಾ ? ಎಂತಹ ರೀತಿಯ ವ್ಯಕ್ತಿ ನೀನಾಗಿದ್ದೀಯ?"* ನಾವು ಈ ರೀತಿಯಾಗಿ ಸರಿಪಡಿಸಬಾರದು, ಬದಲಿಗೆ ಸೌಮ್ಯವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯಮಾಡಬೇಕು.

*"ಪ್ರಿಯ ಸಹೋದರ, ಸಹೋದರಿ; ನಮಗೆ ಗೊತ್ತು, ನೀನು* (ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮೀಕ ಮನುಷ್ಯ) *ಇದನ್ನು ಮಾಡಿಲ್ಲ, ನೀನು ಇದನ್ನು ಮಾಡಲು ಸಾಧ್ಯವಿಲ್ಲ – ಆದರೆ ಹಳೆಯ ಮನುಷ್ಯ* (ಶಾರೀರಿಕ ಮನಸ್ಸಿನೊಂದಿಗಿನ ಪ್ರಾಣ) *ಇದನ್ನು ಮಾಡಿದ್ದಾನೆ. ನಾವು ಅವನನ್ನು ಆತ್ಮ ಮತ್ತು ದೇವರ ವಾಕ್ಯದಿಂದ ಸೋಲಿಸಬೇಕು."*

**"ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡಿದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು." (1 ಯೋಹಾ 3:9)**

ಮೇಲಿನ ವಾಕ್ಯದಲ್ಲಿ ಸೂಚಿಸಲಾಗಿರುವ "ಅವನು" ಯಾರು? ನೂತನವಾಗಿ ಸೃಷ್ಟಿ ಸಲ್ಪಟ್ಟಿರುವ ಹೊಸದಾಗಿ ಹುಟ್ಟಿದ ಆತ್ಮವೇ, ಆ ವ್ಯಕ್ತಿಯಾಗಿದೆ.

ನಾವು ನಮ್ಮೊಳಗಿರುವ ಹಳೇ ಮನುಷ್ಯನನ್ನು ಸೋಲಿಸಬೇಕು. ಈ ವಿಧಾನವನ್ನು ನಾವು ಹೊಂದಿದ್ದರೆ ನಮ್ಮನ್ನು ವಿರೋಧಿಸುವ ವ್ಯಕ್ತಿಯ ವಿರುದ್ಧ ನಾವು ದ್ವೇಷವನ್ನು ಇಟ್ಟುಕೊಳ್ಳುವುದಿಲ್ಲ. ನಮ್ಮ ವಿರುದ್ಧ ಯಾರೇ ಬಂದರೂ, ಅದು ಸಹೋದರ, ಸಹೋದರಿ, ಸಭಾಪಾಲಕ ಅಥವಾ ಅದು ಯಾರೇ ಆಗಿದ್ದರೂ, ನೂತನವಾಗಿ ಹುಟ್ಟಲ್ಪಟ್ಟಂತಹ

ವ್ಯಕ್ತಿಯಾದ ಅವರಿಗೆ ಈ ವಾಕ್ಯವನ್ನು (1ಯೋಹಾ 3:9) ಅರ್ಥಮಾಡಿಕೊಳ್ಳುವಂತೆ ದಯವಿಟ್ಟು ಸಹಾಯಮಾಡಿ.

ರಕ್ಷಣೆಯ ಅನುಭವಕ್ಕೆ ಬಂದಿರುವಂತಹ ನಿಮ್ಮ ಜೀವನ ಸಂಗಾತಿಯೂ ಸಹ ನಿಮ್ಮನ್ನು ವಿರೋಧಿಸಿದರೆ, ಆ ವ್ಯಕ್ತಿ ಇನ್ನೂ ಹಳೆಯ ವ್ಯಕ್ತಿಯ ಸ್ವಭಾವದೊಂದಿಗೆ ಕಾರ್ಯ ಮಾಡುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಿ. ಇಲ್ಲಿಯೂ ಸಹ ನಾವು ವಾಕ್ಯವನ್ನು ಸೌಮ್ಯವಾಗಿ ಹೇಳಬೇಕು ಮತ್ತು ಅವರು ಅರ್ಥಮಾಡಿಕೊಳ್ಳಲು ಸಹಾಯಿಸಬೇಕು.

## ಊ) ದೇವರ ಆತ್ಮ, ಮನುಷ್ಯನ ಆತ್ಮ, ಪ್ರಾಣ, ಶರೀರ ಮತ್ತು ಲೋಕ ಹಾಗೂ ಸೇವೆಯಲ್ಲಿ ಅವುಗಳೊಂದಿಗಿನ ಸಂಬಂಧಗಳು


ಆತ್ಮವು ಮನುಷ್ಯನ ರಚನೆಯ ಅತ್ಯಂತ ಒಳಗಿನ ಭಾಗವಾಗಿದೆ. ಪರಿಶುದ್ಧಾತ್ಮನು ನಮ್ಮ ಮನುಷ್ಯ ಆತ್ಮದಲ್ಲಿ ವಾಸಿಸುತ್ತಾನೆ. ನಮ್ಮ ಮೂಲಕ ಲೋಕದೊಳಕ್ಕೆ ಪರಿಶುದ್ಧಾತ್ಮನ ಕಾರ್ಯವನ್ನು ಪ್ರಕಟಿಸುವ ಸಲುವಾಗಿ, ಲೋಕದೊಳಕ್ಕೆ ಪರಿಶುದ್ಧಾತ್ಮನು ಬಿಡುಗಡೆಮಾಡಲ್ಪಡಬೇಕು. ನಮ್ಮಲ್ಲಿ ಕಾರ್ಯಮಾಡಲು ಪರಿಶುದ್ಧಾತ್ಮನಿಗೆ ಮನುಷ್ಯ ಆತ್ಮದ ಸಹಕಾರ ಬೇಕು. ಹೊಸದಾಗಿ ಹುಟ್ಟಿದ ಸಮಯದಲ್ಲಿ ಇದು ಜರುಗಿತು. ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿದವನಾದಾಗ, ಅವನು/ಅವಳು ಕರ್ತನೊಂದಿಗೆ ಆತ್ಮದಲ್ಲಿ ಒಂದೇ ಆಗಿದ್ದಾರೆ. ಆ ಸಮಯದಿಂದ, ನಮ್ಮೊಂದಿಗೆ ಒಂದೇ ಆತ್ಮದಂತೆ ನಮ್ಮ ಆತ್ಮದಲ್ಲಿ ಪರಿಶುದ್ಧಾತ್ಮನು ವಾಸಿಸುತ್ತಾರೆ. "ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ." (1 ಕೊರಿ 6:17)

**ನಮ್ಮ ಹೊಸದಾಗಿ ಹುಟ್ಟಿರುವ ಆತ್ಮವು (ಕರ್ತನೊಂದಿಗೆ ಒಂದೇ ಆತ್ಮ)** ಶಾರೀರಿಕ ಸ್ವಭಾವದೊಂದಿಗೆ ತುಂಬಿರುವ ನಮ್ಮ ಪ್ರಾಣದ ಅನುಮತಿಯಿಲ್ಲದೇ ಲೋಕಕ್ಕೆ ಬರಲು ಸಾಧ್ಯವಿಲ್ಲ. ಅದೇ ರೀತಿಯಾಗಿ, ದೇಹವಿಲ್ಲದೇ, ಪ್ರಾಣವು ಜಗತ್ತಿನೊಳಗೆ ಬರಲು ಅಥವಾ ಅದರ ಆಲೋಚನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಲೋಕದೊಳಗೆ ಆತ್ಮವು ಬಂದರೆ ಮಾತ್ರ, ಆತ್ಮೀಕ ಕಾರ್ಯಗಳು ಪ್ರಕಟಗೊಳ್ಳುತ್ತದೆ. ಇಲ್ಲವಾದರೆ ಮಾನುಷಿಕ ಅರ್ಥೈಸುವಿಕೆಯೊಂದಿಗೆ ನೈಪುಣ್ಯವಾಗಿ ಹೆಣೆದ, ಉಪಯೋಗಕ್ಕೆ ಬಾರದ ಶಬ್ದಗಳನ್ನು ನಾವು ಉಚ್ಛರಿಸುತ್ತಿರುತ್ತೇವೆ.

**ತತ್ವವೇನೆಂದರೆ, "ಮನುಷ್ಯನ ಆತ್ಮವಿಲ್ಲದೇ ದೇವರ ಆತ್ಮ, ಪ್ರಾಣವಿಲ್ಲದೇ ಮನುಷ್ಯನ ಆತ್ಮ, ದೇಹವಿಲ್ಲದೇ ಪ್ರಾಣ ಮನುಷ್ಯನ ಮೂಲಕ ಈ ಲೋಕದಲ್ಲಿ ಪ್ರಕಟವಾಗಲು ಅಥವಾ ಕಾರ್ಯಮಾಡಲು ಸಾಧ್ಯವಿಲ್ಲ."** ಎಲ್ಲವೂ ಪರಸ್ಪರ ಸಂಬಂಧಿಸಿವೆ.

ಪರಿಶುದ್ಧಾತ್ಮ ⟹ ಮನುಷ್ಯ ಆತ್ಮ ⟹ ಪ್ರಾಣ ⟹ ಶರೀರ ⟹ ಲೋಕ

> ಲೋಕದೊಳಗೆ ಆತ್ಮವು ಬಂದರೆ ಮಾತ್ರ, ಆತ್ಮೀಕ ಕಾರ್ಯಗಳು ಪ್ರಕಟಗೊಳ್ಳುತ್ತದೆ. ಇಲ್ಲವಾದರೆ ಮಾನುಷಿಕ ಅರ್ಥೈಸುವಿಕೆಯೊಂದಿಗೆ ನೈಪುಣ್ಯವಾಗಿ ಹೆಣೆದ, ಉಪಯೋಗಕ್ಕೆ ಬಾರದ ಶಬ್ದಗಳನ್ನು ನಾವು ಉಚ್ಛರಿಸುತ್ತಿರುತ್ತೇವೆ.




*ಮನುಷ್ಯನಲ್ಲಿ ಅವನ 1ನೇ ಹಂತದ ಕಾರ್ಯದ ಪ್ರಗತಿಗೆ ಅನುಗುಣವಾಗಿ ಪವಿತ್ರಾತ್ಮನು ಅವನ ಎರಡನೇ ಹಂತದ ಕಾರ್ಯಕ್ಕಾಗಿ ಮನುಷ್ಯನ ಆತ್ಮದಿಂದ ಲೋಕಕ್ಕೆ ಬಿಡುಗಡೆಯಾಗುತ್ತಿದೆ*

**ಚಿತ್ರ–14**

ಉದಾಹರಣೆಗೆ ಒಂದು ಲೋಟ ನೀರನ್ನು ತೆಗೆದುಕೊಳ್ಳಿರಿ. ನೀವು ಕುಡಿಯಬೇಕೆಂದರೆ, ಲೋಟವನ್ನು ಹಿಡಿದುಕೊಳ್ಳಲು ನಿಮ್ಮ ಕೈಯನ್ನು ನೀವು ಚಾಚಬೇಕು. ಆದರೆ ನಿಮ್ಮ ಕೈ ಚಲಿಸದಿದ್ದರೆ, ನೀವು ನೀರನ್ನು ಕುಡಿಯಬಹುದೇ? ಇಲ್ಲ, ನಿಮಗೆ ಆಗುವುದಿಲ್ಲ. ಹಾಗಾದರೆ ದೇಹವಿಲ್ಲದೇ, ಪ್ರಾಣವು ಬಯಸಬಹುದು ಆದರೆ ಕಾರ್ಯಮಾಡಲು ಆಗುವುದಿಲ್ಲ. ಅದೇ ರೀತಿಯಾಗಿ, ಪ್ರಾಣ ಮತ್ತು ದೇಹವಿಲ್ಲದೆಯೇ, ಆತ್ಮವು ಬಯಸಬಹುದು ಆದರೆ ಭೌತಿಕ ಮಂಡಲದಲ್ಲಿ ಕಾರ್ಯಮಾಡಲು ಆಗುವುದಿಲ್ಲ. ಅನೇಕ ಬಯಕೆಗಳು ಬೆಳೆಯುವುದಕ್ಕಾಗಿ ಮತ್ತು ಬಲಗೊಳ್ಳುವುದಕ್ಕಾಗಿ ಆತ್ಮೀಕವಾಗಿ ಬಲಪಡಿಸಲ್ಪಡಬೇಕು, ಆದರೆ ದುರದೃಷ್ಟಕರವಾಗಿ ಜನರು ಹಾಗೆ ಮಾಡುವುದಿಲ್ಲ. ಈ ಉದಾಹರಣೆಯನ್ನು ಪರೀಕ್ಷಿಸಿ; ನೀವು ಒಂದು ಕಾಗದವನ್ನು ತೆಗೆದುಕೊಳ್ಳಲು ಮತ್ತು ಪತ್ರವನ್ನು ಬರೆಯಲು ಆಸೆಯನ್ನು ಹೊಂದಿದ್ದೀರಿ. ನೀವು ಲೇಖನಿ ಮತ್ತು ಕಾಗದವನ್ನು

> ಶಾರೀರಿಕ ಸ್ವಭಾವದೊಂದಿಗೆ ತುಂಬಲ್ಪಟ್ಟಿರುವ ನಮ್ಮ ಪ್ರಾಣದ ಅನುಮತಿಯಿಲ್ಲದೇ ಆತ್ಮವು ಹೊರಬರಲು ಸಾಧ್ಯವಿಲ್ಲ. ಅದೇ ರೀತಿಯಾಗಿ ದೇಹವಿಲ್ಲದೇ ಪ್ರಾಣವು ಹೊರಬರಲು ಆಗುವುದಿಲ್ಲ.

ಹೊಂದಿದ್ದೀರಿ, ಆದರೆ ನಿಮ್ಮ ಕೈ ಚಲಿಸುತ್ತಿಲ್ಲ. ನೀವು ಬರೆಯುವ ಆಸೆ ಹೊಂದಿದ್ದೀರ; ಆದರೆ ನಿಮ್ಮ ಕೈ ಸಹಕರಿಸುತ್ತಿಲ್ಲವಾದರೆ, ನಿಮಗೆ ಬರೆಯಲು ಸಾಧ್ಯವಿಲ್ಲ. ನಿಮಗೆ ಬೇರೊಬ್ಬರು ಬರೆದುಕೊಡಬೇಕು. ಅದೇ ರೀತಿಯಾಗಿ, ನಮ್ಮಲ್ಲಿನ ಆತ್ಮ ಮನುಷ್ಯ ಅಥವಾ ನೂತನ ಸೃಷ್ಟಿ ಎಲ್ಲಾ ಒಳ್ಳೆಯ ಸಂಗತಿಗಳನ್ನು ಮಾಡಲು ಬಯಸುತ್ತಾನೆ ಆದರೆ ಇದಕ್ಕೆ ಪ್ರಾಣವು ಮುಂಚಿತವಾಗಿ ಒಪ್ಪಬೇಕು. ವರ್ಷಗಳ ಹಿಂದೆ ಪ್ರಸಂಗಿಸುವಂತೆ ಅಥವಾ ಏನನ್ನಾದರೂ ಬರೆಯುವಂತೆ ನನಗೆ ಕೇಳಿದಾಗ, ನನ್ನಿಂದ ಆಗುತ್ತಿರಲಿಲ್ಲ. ನಾನು ರಕ್ಷಣೆಯ ಅನುಭವವನ್ನು ಹೊಂದಿದ್ದರೂ, ನನ್ನ ಪ್ರಾಣವು ಅದಕ್ಕೆ ಒಪ್ಪುತ್ತಿರಲಿಲ್ಲ. ಪರಿಶುದ್ಧಾತ್ಮನ ಸೇವೆಯನ್ನು ಬಳಸಿಕೊಂಡು, ಕ್ರಿಸ್ತನು ಅವನ ವಾಕ್ಯ ಮತ್ತು ಆತ್ಮನಿಂದ ನನ್ನ ಮನಸ್ಸನ್ನು ಹೊಸದು ಮಾಡಿ, ನನ್ನ ಪ್ರಾಣವು ಒಪ್ಪುವಂತೆ ಮಾಡಿದನು. ನನ್ನ ಪ್ರಾಣವು ಒಪ್ಪಿದ ನಂತರ, ಆ ಸಮಯದಲ್ಲಿ ಹೇಗೆ ಪ್ರಾರ್ಥಿಸಬೇಕೆಂದು ಒಂದು ಪದವನ್ನೂ ತಿಳಿಯದ, ಈ ದೇಹವನ್ನು ದೇವರು ಉಪಯೋಗಿಸಲು ಪ್ರಾರಂಭಿಸಿದನು.

ಅರ್ಥಮಾಡಿಕೊಳ್ಳಿರಿ, ದೇವರು ಎರಡು ಪ್ರಮುಖ ಸೇವೆಗಳನ್ನು ಹೊಂದಿದ್ದಾರೆ: ಮನುಷ್ಯನೊಳಗೆ ಮತ್ತು ಮನುಷ್ಯನ ಮೂಲಕ. ಮೊದಲು, ದೇವರಾತ್ಮನು ನಮ್ಮ ಜೀವಿತದಲ್ಲಿ ಸೇವೆಯನ್ನು ಮಾಡುತ್ತಾರೆ ಮತ್ತು ನಂತರ ನಮ್ಮ ಮೂಲಕ ಈ ಲೋಕದಲ್ಲಿ ದೇವರು ಸೇವೆಯನ್ನು ಮಾಡುತ್ತಾರೆ. ನಮ್ಮೊಳಗೇ ಮಾಡಲಾಗುವ ಈ ಸೇವೆಯ ಗುರಿಯು ನಮ್ಮ ಪ್ರಾಣದಲ್ಲಿನ ಶರೀರದ ಭಾವನೆಗಳನ್ನು ತೆಗೆಯುವುದು ಮತ್ತು ದೇವರ ಆಲೋಚನೆಗಳಿಂದ ಅದನ್ನು ತುಂಬುವುದು. ನಮ್ಮ ಮೂಲಕ ಮಾಡಲಾಗುವ ಸೇವೆಯ ಗುರಿ ಈ ಲೋಕದಲ್ಲಿ ದೇವರ ಚಿತ್ತವನ್ನು ಸ್ಥಾಪಿಸುವುದಾಗಿದೆ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನನ್ನ ಹಳೆಯ ಸ್ವಭಾವವನ್ನು ಸಂಪೂರ್ಣವಾಗಿ ತ್ಯಜಿಸಲು ನನಗೆ ಸಹಾಯಮಾಡು ಮತ್ತು ಕರ್ತನೇ ನಿನ್ನ ರಾಜ್ಯದ ಪ್ರಜೆಯಾಗಿ ಬೆಳೆಯುವಂತೆ ನನಗೆ ಸಾಧ್ಯಮಾಡು. ಪಾಪದಲ್ಲಿರುವ ನನ್ನ ಸಹೋದರರ ಸಂಗಡ ನಿನ್ನ ಸ್ವಭಾವದೊಂದಿಗೆ ಕಾರ್ಯಮಾಡುವಂತೆ ನನಗೆ ಸಹಾಯಮಾಡು ಮತ್ತು ಎಲ್ಲಾ ಮನುಕುಲಕ್ಕೆ ಒಳ್ಳೇದನ್ನು ಮಾಡುವುದಕ್ಕೆ ನನಗೆ ಕೃಪೆಮಾಡು. ಕರ್ತನೇ ಹೊಸದಾಗಿ ಸೃಷ್ಟಿಸಲ್ಪಟ್ಟ ಮನುಷ್ಯನನ್ನು ನನ್ನ ಪ್ರಾಣದಲ್ಲಿ ಧರಿಸಲು ಪ್ರಾರಂಭಿಸಿದಾಗ ಮಾತ್ರ ನಾನು ಆತ್ಮೀಕವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಅರ್ಥಮಾಡಿಕೊಳ್ಳಲು ನನಗೆ ಸಹಾಯಮಾಡು. ನನ್ನ ಜೀವಿತದಲ್ಲಿ ಮತ್ತು ನನ್ನ ಮೂಲಕ ಈ ಲೋಕದಲ್ಲಿ ಪರಿಶುದ್ಧಾತ್ಮನು ಕಾರ್ಯಮಾಡಲು ನನ್ನನ್ನು ನಾನು ಒಪ್ಪಿಸಿಕೊಡುತ್ತೇನೆ. ಯೇಸುವಿನ ನಾಮದಲ್ಲಿ... ಆಮೆನ್.*

## ಮುಖ್ಯ ತತ್ವಗಳು

1. ದೇವರ ಮಗುವು ಬೆಳೆಯುವುದಕ್ಕೆ ತಡೆಯೇನೆಂದರೆ ಅವನು ಅವನ ಹಳೆಯ ಸ್ವಭಾವವನ್ನು ಪೂರ್ಣವಾಗಿ ಬಿಡಲು ಸಿದ್ಧನಿಲ್ಲದಿರುವುದಾಗಿದೆ.
2. ದೇವರು ತನ್ನ ಮಗುವಿಗೆ ಬಯಸುವ ಒಂದು ಸಂಗತಿಯೇನೆಂದರೆ ಅವನು ದೇವರ ರಾಜ್ಯದಲ್ಲಿ ಪ್ರಜೆಯಾಗಿ ಬೆಳೆಯಬೇಕು ಮತ್ತು ಅವನ ಚಿತ್ತವನ್ನು ಈ ಲೋಕದಲ್ಲಿ ಮಾಡಬೇಕು.
3. ಇನ್ನೊಬ್ಬ ವ್ಯಕ್ತಿ ಪಾಪದಲ್ಲಿದ್ದರೆ ಅಥವಾ ಅವನು ಏನಾದರೂ ತಪ್ಪನ್ನು ಮಾಡಿದರೆ, ನಾವು ನಮ್ಮ ಶರೀರದ ಸ್ವಭಾವದೊಂದಿಗೆ ಪ್ರತಿಕ್ರಿಯಿಸಬಾರದು, ಬದಲಿಗೆ ಆ ವ್ಯಕ್ತಿಯ ಸಂಗಡ ದೇವರ ಸ್ವಭಾವದೊಂದಿಗೆ ಕಾರ್ಯಮಾಡಬೇಕು.
4. ನಮ್ಮಲ್ಲಿನ ಆತ್ಮ, ದೇವರ ಹೊಸ ಸೃಷ್ಟಿ, ಮನುಷ್ಯನಿಗೆ ಒಳ್ಳೆಯದನ್ನು ಮಾಡಲು ಬಯಸುತ್ತದೆ ಆದರೆ ಇದಕ್ಕೆ ನಮ್ಮ ಪ್ರಾಣವು ಒಪ್ಪಬೇಕು ಮತ್ತು ಅದರ ನಂತರವೇ ಇದನ್ನು ಮಾಡಬಹುದು. ಪ್ರಾಣವು ಒಪ್ಪದಿರುವ ಕಾರಣವೇನೆಂದರೆ ಪ್ರಾಣದಲ್ಲಿರುವ ಶರೀರದ ಹಳೆಯ ಭಾವನೆಗಳಾಗಿದೆ.
5. ಆತ್ಮೀಕ ಬೆಳವಣಿಗೆಯು "ಹೊಸದಾಗಿ ಸೃಷ್ಟಿಸಲ್ಪಟ್ಟ ಆತ್ಮ ಮನುಷ್ಯ"ನನ್ನು ಪ್ರಾಣದಲ್ಲಿ ಸ್ವೀಕರಿಸುವುದು ಮತ್ತು ಧರಿಸಿಕೊಳ್ಳುವುದಾಗಿದೆ.
6. ಯೇಸು ಕ್ರಿಸ್ತನು ತನ್ನ ರಕ್ತದೊಂದಿಗೆ ನಮ್ಮನ್ನು ಹೊಸ ಮನುಷ್ಯರಾಗಿ ಸೃಷ್ಟಿಸಿದಾಗ, ನಮ್ಮಲ್ಲಿ ಸೃಷ್ಟಿಸಲ್ಪಟ್ಟದ್ದು, ಆತ್ಮ ಮಾತ್ರ. ಪ್ರಾಣಕ್ಕೆ ಅಥವಾ ದೇಹಕ್ಕೆ ಯಾವುದೇ ಹೊಸ ಸೃಷ್ಟಿ ಜರುಗಿಲ್ಲ.
7. ಮನುಷ್ಯನ ದೇಹವಿಲ್ಲದೇ ದೇವರ ಆತ್ಮ, ಪ್ರಾಣವಿಲ್ಲದೇ ಮನುಷ್ಯನ ಆತ್ಮ, ದೇಹವಿಲ್ಲದೇ ಪ್ರಾಣ ಮನುಷ್ಯನ ಮೂಲಕ ಈ ಲೋಕದಲ್ಲಿ ಪ್ರಕಟವಾಗಲು ಅಥವಾ ಕಾರ್ಯಮಾಡಲು ಸಾಧ್ಯವಿಲ್ಲ. ಎಲ್ಲವೂ ಪರಸ್ಪರ ಸಂಬಂಧಿಸಿವೆ.
8. ದೇವರು ಎರಡು ಪ್ರಮುಖ ಸೇವೆಗಳನ್ನು ಹೊಂದಿದ್ದಾರೆ: ಮನುಷ್ಯನೊಳಗೆ ಮತ್ತು ಮನುಷ್ಯನ ಮೂಲಕ. ಮೊದಲು, ದೇವರಾತ್ಮನು ನಮ್ಮ ಜೀವಿತದಲ್ಲಿ ಸೇವೆಯನ್ನು ಮಾಡುತ್ತಾರೆ ಮತ್ತು ನಂತರ ನಮ್ಮ ಮೂಲಕ ಈ ಲೋಕದಲ್ಲಿ ಒಂದು ಸೇವೆಯನ್ನು ಮಾಡುತ್ತಾರೆ.



*ಅಧ್ಯಾಯ 7*

# ಆತ್ಮ, ಪ್ರಾಣ ಮತ್ತು ದೇಹದ ಕಾರ್ಯ

*"ಬದುಕಿಸುವಂಥದು ಆತ್ಮವೇ; ಮಾಂಸವು ಯಾವುದಕ್ಕೂ ಬರುವದಿಲ್ಲ, ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ." (ಯೋಹಾ 6:63)*

## ಅ) ಒಂದರಷ್ಟು ಹಿಂಬಡ್ತಿ ಮತ್ತು ಎರಡರಷ್ಟು ಮುಂಬಡ್ತಿ

ಅವಿಧೇಯತೆಯಿಂದ ಮನುಷ್ಯನು ಪ್ರಾಣದಿಂದ ಶರೀರಕ್ಕೆ ಬಿದ್ದನು. ಅವನು ದೇವರ ಪ್ರಸನ್ನತೆಯಿಂದ ಹೊರದೂಡಲ್ಪಟ್ಟನು ಮತ್ತು 'ಪ್ರಾಣ ನಿಯಂತ್ರಿತ ಮಟ್ಟ'ದಿಂದ 'ದೇಹ ನಿಯಂತ್ರಿತ ಮಟ್ಟಕ್ಕೆ' ಹಿಂಬಡ್ತಿಸಲ್ಪಟ್ಟನು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮನುಷ್ಯನ ಪಾಪದಿಂದ, ಮೊದಲ ಸ್ಥಾನದಲ್ಲಿದ್ದಂತದ್ದು (ಆತ್ಮ ಮಟ್ಟ) ಮೂರನೇ ಸ್ಥಾನಕ್ಕೆ (ಶರೀರದ ಮಟ್ಟ) ತಳ್ಳಲ್ಪಟ್ಟಿತು. ಮನುಷ್ಯನ ಕುರಿತು ದೇವರ ಪ್ರೀತಿಯ ಕಾರಣದಿಂದ, ಮೂರನೇ ಸ್ಥಾನದಲ್ಲಿ ಅಂದರೆ ಶರೀರದ ಸ್ಥಾನದಲ್ಲಿ ಇರಿಸಲ್ಪಟ್ಟಿದ್ದ ಮನುಷ್ಯನನ್ನು ದೇವರು ತನ್ನ ಕಾರ್ಯದ ಮೂಲಕ ಎರಡರಷ್ಟು ಮುಂಬಡ್ತಿಯನ್ನು ನೀಡಿ, ಪ್ರಥಮ ಸ್ಥಾನಕ್ಕೆ ಅಂದರೆ ಆತ್ಮ ಸ್ಥಾನಕ್ಕೆ ತಂದನು. ಇದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ನಾವು ಕಲಿತಂತಹ ಅಡಿಪಾಯವನ್ನು ನೆನಪಿಸಿಕೊಳ್ಳೋಣ.


1 ಥೆಸಲೋನಿಕದವರಿಗೆ 5:23ರಲ್ಲಿ ಒಬ್ಬ ಮನುಷ್ಯನು ಮೂರು ಭಾಗಗಳನ್ನು ಹೊಂದಿದ್ದಾನೆ ಎಂದು ನಾವು ನೋಡಬಹುದು. ಅದು ಆತ್ಮ, ಪ್ರಾಣ ಮತ್ತು ಶರೀರ. ನಮಗೆ ತಿಳಿದಿರುವ ಮುಖ್ಯ ಭಾಗವಾಗಿರುವ ಶರೀರ ಲೋಕದಲ್ಲಿದೆ. ಅದರ ಜೊತೆಗೆ ಆತ್ಮೀಕ ಭಾಗವೂ ಸಹ ಇದೆ, ಅದು ಆತ್ಮ. ಇವೆರಡನ್ನೂ ಒಟ್ಟಿಗೆ ಸೇರಿಸಿದಾಗ, ಹೊಸದಾಗಿ ಸೃಷ್ಟಿಸಲ್ಪಟ್ಟ ಭಾಗ ಪ್ರಾಣವಾಗಿದೆ. ಈ ಮೂರರ ಮಧ್ಯೆಯೂ ಒಂದು ಸಂಬಂಧವಿದೆ ಆದರೆ ಈ ಮೂರರ ಉದ್ದೇಶಗಳು ವ್ಯತ್ಯಸ್ಥವಾಗಿದೆ.

**"ಹೀಗಿರಲು ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು." (ಆದಿ 2:7)**

ಶರೀರವು ಪ್ರಪಂಚ ಪ್ರಜ್ಞೆಯನ್ನು ನೀಡುತ್ತದೆ (ಉದಾ. ಸ್ಪರ್ಶ). ಪ್ರಾಣವು ಸ್ವಯಂ ಪ್ರಜ್ಞೆಯನ್ನು ನೀಡುತ್ತದೆ (ಉದಾ. ಸ್ವಯಂವರ್ತನೆ). ಆತ್ಮವು ದೇವರ ಪ್ರಜ್ಞೆಯನ್ನು ತರುತ್ತದೆ (ಉದಾ. ದೇವರ ಪ್ರಸನ್ನತೆ).

ದೇವರು ಮನುಷ್ಯನನ್ನು, ಅವನಿಗಿಂತ ಸ್ವಲ್ಪವೇ ಕಡಿಮೆಯಾಗಿ ಸೃಷ್ಟಿಸಿದಾಗ (ಕೀರ್ತನೆ 8:5), ಅವನು ಭೌತಿಕ ಪ್ರಪಂಚ ಮತ್ತು ಆತ್ಮೀಕ ಪ್ರಪಂಚವೆರಡರೊಂದಿಗೂ ಸಂವಹಿನಿಸಲು

ಅವನಿಗೆ ಸಾಧ್ಯವಾಗುತ್ತಿತ್ತು. ಚಿತ್ರದಲ್ಲಿ (ಚಿತ್ರ 15) ಆದಾಮನು (ಪ್ರಾಣ) ಭೌತಿಕ ಪ್ರಪಂಚ ಮತ್ತು ಆತ್ಮ ಪ್ರಪಂಚವೆರಡರೊಂದಿಗೂ ಸಂವಹಿನಿಸುತ್ತಿರುವನು ಎಂದು ನಾವು ನೋಡುತ್ತೇವೆ.




*ಆತ್ಮ ಲೋಕ ಮತ್ತು ಭೌತಿಕ ಲೋಕದಲ್ಲಿ ಜೀವಿಸಲು ಸಾಧ್ಯವಾಗುತ್ತಿದ್ದ ಆದಾಮ*
**(ಚಿತ್ರ 15)**

ದೇವರು ಮನುಷ್ಯನನ್ನು ಅವನ ಸ್ವಾರೂಪ್ಯದಲ್ಲಿ ಉಂಟುಮಾಡಿದರೂ, ಅವನು ಮನುಷ್ಯನನ್ನು ದೇವರಿಗಿಂತ ಸ್ವಲ್ಪ ಕಡಿಮೆಯಾಗಿ ಉಂಟುಮಾಡಿದನು.

**"ಅವನನ್ನು ದೇವರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; (ಎಲೋಹೀಮ್; Strong's Number 430) ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ."**

ಆದಿಕಾಂಡ 3:22ರಲ್ಲಿ ನಾವು ನೋಡುತ್ತೇವೆ, **"ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ."**

ಮನುಷ್ಯನು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿದ್ದರೂ ಅವನು ದೇವರೊಂದಿಗೆ ಸಮಾನವಾಗಿ ಉಂಟುಮಾಡಲ್ಪಡಲಿಲ್ಲ. ದೇವರು ಆತ್ಮಸ್ವರೂಪಿಯಾಗಿದ್ದಾನೆ. ಮನುಷ್ಯನು ಆತ್ಮವನ್ನು ಹೊಂದಿದ್ದರೂ, ರಚನೆಯಲ್ಲಿ ಅವನು ಪ್ರಾಣ ಜೀವಿಯಾಗಿ ಇಡಲ್ಪಟ್ಟನು. (ಆದಿ 2:7; 1 ಕೊರಿ 15:45) ಅದು, ಎರಡನೇ ಸ್ಥಾನದಲ್ಲಾಗಿದೆ. ನಾವು ಮುಂದೆ ಓದಿದರೆ, ಆತ್ಮವು ಪ್ರಥಮ ಸ್ಥಾನದಲ್ಲಿ ; ಪ್ರಾಣವು ಎರಡನೇ ಸ್ಥಾನದಲ್ಲಿದೆ; ಮತ್ತು ಶರೀರ ಅಥವಾ ಮಾಂಸ ಮೂರನೇ ಸ್ಥಾನದಲ್ಲಿದೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ದೇವರ ಬಯಕೆಯು ಎರಡನೇ ಸ್ಥಾನದಲ್ಲಿ ಇಡಲ್ಪಟ್ಟಿದ್ದ ಮನುಷ್ಯನನ್ನು

ಕೆಳಗಿಳಿಸುವುದಲ್ಲ, ಅಂದರೆ ಪ್ರಾಣ ಜೀವಿಯಿಂದ ಮಾಂಸ ಜೀವಿಯಾಗುವುದಲ್ಲ (ಮೂರನೇ ಸ್ಥಾನ) ; ಬದಲಿಗೆ ದೇವರ ಬಯಕೆಯು ಅವನಂತೆಯೇ ಆತ್ಮಕ್ಕೆ, ಮೊದಲ ಸ್ಥಾನಕ್ಕೆ ನಾವು ಬೆಳೆಯುವದಾಗಿದೆ.

ದೇವರು ನಾವು ಆತ್ಮಕ್ಕೆ, ಅಂದರೆ ಮೊದಲ ಭಾಗಕ್ಕೆ ಬರುತ್ತೇವೆಂದು ಬಯಸಿದರು. ಆದರೆ ನಾವು ಅಂತಿಮವಾಗಿ ಯಾವ ಭಾಗಕ್ಕೆ ಹೋಗಿದ್ದು? ಮೂರನೇ ಸ್ಥಾನಕ್ಕೆ, ಶರೀರಕ್ಕೆ. ಆದಿಕಾಂಡ 2:7ರಲ್ಲಿ, ದೇವರು ಹೇಳುತ್ತಾರೆ ಮನುಷ್ಯನು "ಬದುಕುವ ಪ್ರಾಣಿ" ಎಂದು ಆದರೆ ಆದಿಕಾಂಡ 6:3ರಲ್ಲಿ, ಮನುಷ್ಯನು ಪಾಪಮಾಡಿದ ನಂತರ "ಮರ್ತ್ಯ" ಎಂದು ಹೇಳುತ್ತಾರೆ.

"ಹೀಗಿರಲು ಯೆಹೋವದೇವರು ನೆಲೆದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು **ಬದುಕುವ ಪ್ರಾಣಿಯಾದನು."** (ಆದಿ 2:7)

"ಆಗ ಯೆಹೋವನು – ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವುದಿಲ್ಲ. ಅವರು ಭ್ರಷ್ಟರಾದದರಿಂದ **ಮರ್ತ್ಯರೇ."** (ಆದಿ 6:3)

ದೇವರ ವಾಕ್ಯಗಳಿಂದ ಪ್ರಾಣಜೀವಿಯಾಗಿ ಸೃಷ್ಟಿಸಲ್ಪಟ್ಟಿದ್ದ ಮನುಷ್ಯನು ಈಗ ಮರ್ತ್ಯಜೀವಿಯಾಗಿದ್ದಾನೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ಅಂದರೆ, ಶರೀರವು ಮನುಷ್ಯನ ನಿಯಂತ್ರಿಸುವ ಭಾಗವಾಗಲು ಪ್ರಾರಂಭಿಸಿತು. ಅದರ ನಂತರ, ಯೇಸು ಕ್ರಿಸ್ತನನ್ನು ಲೋಕಕ್ಕೆ ಕಳುಹಿಸುವುದು ಮತ್ತು ನಮ್ಮನ್ನು ಮೊದಲ ಸ್ಥಾನ, ಆತ್ಮ ಸ್ಥಾನಕ್ಕೆ ಬದಲಾಯಿಸುವುದು ದೇವರ ಯೋಜನೆಯಾಗಿತ್ತು ಮತ್ತು ಇದನ್ನು ದೇವರು ಮಾಡಿದ್ದಾರೆ.

ದೇವರು ಅವರನ್ನು ಉಂಟುಮಾಡಿದ ಸಮಯದಲ್ಲಿ, ಮುಖ್ಯವಾಗಿ ಅವರ ಮುಂದೆ ಜೀವ ಮತ್ತು ಮರಣವನ್ನು ಪ್ರತಿನಿಧಿಸುವ ಎರಡು ಮರಗಳನ್ನಿಟ್ಟನು. ಮರಣವನ್ನು ಪ್ರತಿನಿಧಿಸುವ, ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರ ಮತ್ತು ಜೀವವನ್ನು ಪ್ರತಿನಿಧಿಸುವ ಜೀವದಾಯಕ ಮರ. ದೇವರು ಅವರು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಫಲವನ್ನು ತಿನ್ನಬಾರದು ಮತ್ತು ಅದರಿಂದ ತಿಂದ ದಿನವೇ ನಿಜವಾಗಿಯೂ ಸಾಯುವಿರಿ ಎಂದು ಆದೇಶಿಸಿದರು. ಈ ರೀತಿಯಲ್ಲಿ ದೇವರು ಆದಾಮನ ಮುಂದೆ ಜೀವ ಮತ್ತು ಮರಣವನ್ನಿಟ್ಟರು. ಅವನು ತಾನು ಇಚ್ಛಿಸಿದಂತದನ್ನು ಆರಿಸಬಹುದಾಗಿತ್ತು ಆದರೆ ಅವನು ಮರಣವನ್ನು ಆರಿಸಿಕೊಂಡನು.

ಆತ್ಮ, ಪ್ರಾಣ ಮತ್ತು ಶರೀರಗಳು ಮನುಷ್ಯನ ಮೂರು ಭಾಗಗಳಾಗಿದೆ ಹಾಗೆಯೇ ಮನುಷ್ಯನ ಮೂರು ಪ್ರದೇಶಗಳೂ ಆಗಿದೆ. ದೇವರು ಆತ್ಮದ ಮಟ್ಟದಲ್ಲಿದ್ದಾರೆ ಮತ್ತು ಮನುಷ್ಯನು ಪ್ರಾಣ ಮಟ್ಟದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ. ಮನುಷ್ಯನು ಆತ್ಮ ಮತ್ತು ಶರೀರವನ್ನು ಹೊಂದಿದ್ದಾನೆ ಆದರೆ ಅವನನ್ನು ನಿಯಂತ್ರಿಸುವ ಭಾಗವು ಪ್ರಾಣವಾಗಿದೆ. ಪ್ರಾಣಿಗಳು ಶರೀರದ ಮಟ್ಟದಲ್ಲಿ ಸೃಷ್ಟಿಸಲ್ಪಟ್ಟಿವೆ. ದೇವರ ವಾಕ್ಯ ಹೇಳುತ್ತದೆ; **"ವಿವೇಕಹೀನ ಮನುಷ್ಯನು ಎಷ್ಟು ಘನವಾದ ಪದವಿಯಲ್ಲಿದ್ದರೂ ಪಶುಗಳಂತೆಯೇ**

ಇಲ್ಲವಾಗುತ್ತಾನೆ." **(ಕೀರ್ತನೆ 49:20)** ಈ ವಾಕ್ಯದಿಂದ ಮನುಷ್ಯನು ಅವನ ವಿವೇಕವನ್ನು ಕಳೆದುಕೊಂಡಾಗ, ಅವನು ಪ್ರಾಣಿಯಾಗುತ್ತಾನೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ.

ಆದಿಕಾಂಡ 2:7ರಲ್ಲಿ, ಮನುಷ್ಯನು ಬದುಕುವ ಪ್ರಾಣಿ ಎಂದು ನಾವು ನೋಡುತ್ತೇವೆ. ಸೈತಾನನಿಂದ ದ್ರೋಹಕ್ಕೊಳಗಾದ ಮನುಷ್ಯನು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಕಡೆಗೆ ಆಕರ್ಷಣೆಯನ್ನು ಹೊಂದಿದ್ದನು. ಅವನು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಫಲವನ್ನು ತಿಂದನು ಮತ್ತು ಅದರಿಂದ ಮಹಿಮೆಯನ್ನು ಕಳೆದುಕೊಂಡನು. ದೇವರು ಹೇಳಿದಂತೆಯೇ, ಅವನು ಸತ್ತನು (ಆತ್ಮದಲ್ಲಿ), ಪರಲೋಕದೊಂದಿಗಿನ ಅವನ ಸಂಬಂಧವು ಮುರಿದುಹೋಯಿತು. ಇದರಿಂದ, ಅವನಿಗೆ ಆತ್ಮೀಕ ಮಂಡಲದ ಕುರಿತು ಅರ್ಥಮಾಡಿಕೊಳ್ಳಲು ಆಗಲಿಲ್ಲ. ಅವನು ದೇವರೊಂದಿಗಿನ ಸಂಬಂಧವನ್ನು ಕಳೆದುಕೊಂಡನು; ದೇವರು ಅವನನ್ನು ಏದೇನ್ ತೋಟದಿಂದ ಹೊರಕ್ಕೆ ಹೊರಡಿಸಿಬಿಟ್ಟನು (ಆದಿ 3:23,24). ನಂತರ ಅವನ ಪ್ರಜ್ಞೆಯು ಪೂರ್ಣವಾಗಿ ಲೋಕದ ಕಡೆಗಾಯಿತು ಮತ್ತು ಅದೇ ರೀತಿಯಾಗಿ ಭೂಮಿಯು ಅವನ ಏಕೈಕ ಪ್ರಪಂಚವಾಯಿತು.

ಮನುಷ್ಯನ ಪ್ರಪಂಚವು ದೇವರೊಂದಿಗಿನ ಪ್ರಪಂಚವಾಗುವಂತೆ ದೇವರು ಬಯಸಿದನು. ಅಂದರೆ, ಕಾಣದ ದೇವರ ರಾಜ್ಯದಿಂದ ಕಾಣುವ ಈ ರಾಜ್ಯದಲ್ಲಿ (ಲೋಕ), ಮನುಷ್ಯನ ಮೂಲಕ ತನ್ನ ಚಿತ್ತವನ್ನು ನೆರವೇರಿಸುವುದು ದೇವರ ಬಯಕೆಯಾಗಿತ್ತು. ಆದರೆ ಈ ಸಂಬಂಧವು ಮುರಿಯಲ್ಪಟ್ಟಿತು. ಹಾಗಾಗಿ ಇಂದು ರಕ್ಷಣಾ ಅನುಭವಕ್ಕೆ ಬಂದಿರುವ ಜನರು ಮೊದಲು ದೇವರ ಪ್ರಸನ್ನತೆಯ ಜಾಗೃತಿಯನ್ನು ಹೊಂದಿರಲಿಲ್ಲ. ನಾವು ಯೇಸುವನ್ನು ತಿಳಿದುಕೊಂಡ ಸಮಯ ಈ ಸಂಬಂಧವು ಮರುಸ್ಥಾಪಿಸಲ್ಪಟ್ಟಿತ್ತು ಆದರೆ ಈ ಸಂಬಂಧವು ಮೊದಲದಕ್ಕಿಂತ ವ್ಯತ್ಯಸ್ಥವಾಗಿದೆ. ಮೊದಲು ಆದಾಮನು ದೇವರೊಂದಿಗೆ ಮಾತನಾಡಿದಂತೆ ಇಂದು ನಾವು ದೇವರೊಂದಿಗೆ ಮಾತನಾಡಲು ಆಗುವುದಿಲ್ಲ. ನಾವು ಅದರ ವ್ಯತ್ಯಾಸದ ಬಗ್ಗೆ ಹೆಚ್ಚು ಕಲಿಯೋಣ.

> ಕಾಣದ ರಾಜ್ಯದಲ್ಲಿರುವ ಮನುಷ್ಯನ ಮೂಲಕ ಕಾಣುವ ಈ ರಾಜ್ಯದಲ್ಲಿ (ಲೋಕ) ದೇವರ ಚಿತ್ತವನ್ನು ನೆರವೇರಿಸುವುದು ದೇವರ ಬಯಕೆಯಾಗಿತ್ತು.


## ಆ) ಆದಾಮನ ಪತನ ಮತ್ತು ಮನುಕುಲದ ಮಹಾ ನಷ್ಟ

ನಮ್ಮನ್ನು ನಾವು ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳೋಣ. ಯಾರ ಸ್ವಾರೂಪ್ಯದಲ್ಲಿ ನಾವು ಸೃಷ್ಟಿಸಲ್ಪಟ್ಟಿದ್ದೇವೆ? ನಾವು ಯಾರಂತೆ ಕಾಣುತ್ತೇವೆ? ಸರಿ, ಆದಿಕಾಂಡ 1ನೇ ಅಧ್ಯಾಯ 27ನೇ ವಾಕ್ಯ ಹೇಳುತ್ತದೆ, **"ನಾವು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿದ್ದೇವೆ."** ಹಾಗಾದರೆ ನಮ್ಮಂತೆಯೇ ದೇವರು ಬಟ್ಟೆಯನ್ನು ಧರಿಸುತ್ತಾರೆಯೇ? ನಾವು ಹೇಳುತ್ತೇವೆ, "ಇಲ್ಲ." ಆದರೆ ವಾಕ್ಯವು ಹೇಳುತ್ತದೆ, "ಹೌದು, ಅವರು ಧರಿಸುತ್ತಾರೆ." ನಾವು ಸ್ವಾಭಾವಿಕ/ಸಿಂಥೆಟಿಕ್ ವಸ್ತುಗಳಿಂದ ಮಾಡಲ್ಪಟ್ಟ ಬಟ್ಟೆಗಳನ್ನು ಧರಿಸಿದಾಗ, ನಮ್ಮ ದೇವರು ಸ್ವತಃ ಮಹಿಮೆಯಿಂದ ಬಟ್ಟೆಯನ್ನು ಧರಿಸುತ್ತಾರೆ. ದೇವರ ಉಡುಪು ಅವರ ಮಹಿಮೆಯಾಗಿದೆ (1 ತಿಮೋ 6:16), ಮತ್ತು ದೇವರು ಆದಾಮನನ್ನು ಅವರ ಸ್ವಂತ

ಸ್ವಾರೂಪ್ಯದಲ್ಲಿ ಉಂಟುಮಾಡಿದಾಗ, ಅವರು ಆದಾಮನಿಗೂ ಅದೇ ಉಡುಪು ಅಥವಾ ಮಹಿಮೆಯ ವಸ್ತ್ರವನ್ನು ನೀಡಿದರು.

ಆದಾಮನು ಮಹಿಮೆಯೊಳಗೆ ವಾಸಿಸುತ್ತಿದ್ದನು, ಆದರೆ ಆದಾಮನು ಪಾಪ ಮಾಡಿದಾಗ, ಅವನು ಮಹಿಮೆಯನ್ನು ಕಳೆದುಕೊಂಡನು ಮತ್ತು ಆ ಸಮಯದ ನಂತರದಿಂದ ಆದಾಮನು ಎಲೆಗಳಿಗಾಗಿ ಹುಡುಕುತ್ತಾ ಹೋಗಬೇಕಾಯಿತು. ಆದಾಮನು ಪಾಪಮಾಡದಿದ್ದರೆ, ನಮಗೆ ಉಡುಪಿನ ಅಥವಾ ಉಡುಪಿನ ಮಳಿಗೆಗಳು ನಮಗೆ ಬೇಕಿರಲಿಲ್ಲ. **"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ." (ರೋಮಾ 3:23)**

ದೇವರು ನಮಗೆ ಆಶೀರ್ವಾದಿತ ಉಡುಪನ್ನು ನೀಡಿದರು ಆದರೆ ನಮ್ಮ ಪೂರ್ವಜರು ಅದನ್ನು ಕಳೆದುಕೊಂಡರು.




*ಮನುಷ್ಯನ ಮಹಿಮೆ, ಬಿದ್ದುಹೋಗುವ ಮೊದಲು ಮತ್ತು ನಂತರ*

**(ಚಿತ್ರ–16)**

ದೇವರು ಆದಾಮನನ್ನು ಅಂದರೆ ದೇವರ ಸ್ವಂತ ಸ್ವಾರೂಪ್ಯವನ್ನು, ಉಂಟುಮಾಡಿದಾಗ ಆದಾಮನ ಸುತ್ತಲೂ ಬೆಳಕಿತ್ತು. ಒಂದು ಚಿಮಣಿ ದೀಪವನ್ನು ಹೊತ್ತಿಸಿದಾಗ, ನಾವು ಭತ್ತಿಯನ್ನು ನೋಡಲು ಆಗುವುದಿಲ್ಲ ಆದರೆ ನಾವು ಒಂದು ಬೆಳಕಿನ ವೃತ್ತವನ್ನು ನೋಡುತ್ತೇವೆ, ಅದರಂತೆಯೇ ನಮ್ಮ ದೇವರೂ ಸಹ ಬೆಳಕಿನಲ್ಲಿ ವಾಸಿಸುತ್ತಾರೆ. ಸೂರ್ಯನಿಗೆ ಬಟ್ಟೆಯನ್ನು ಧರಿಸುವ ಅಗತ್ಯವಿದೆಯೇ? ಇಲ್ಲ, ಕಾರಣ ಅದರ ಮಹಿಮೆಯುಳ್ಳ ಬೆಳಕು. ಆದರೆ ಸೂರ್ಯನು ಬೆಳಕು ಕೊಡುವದರಲ್ಲಿ ವಿಫಲವಾದರೆ, ಬೆಳಕುಹೀನ ಚಂದ್ರನಲ್ಲಿ ನಾವು ನೋಡುವಂತೆ ಸೂರ್ಯನಲ್ಲಿ ಗುಂಡಿಗಳನ್ನು ಮತ್ತು ಕಲೆಗಳನ್ನು ನೋಡಲು ನಮಗೆ ಸಾಧ್ಯವಾಗುತ್ತದೆ. ಅದರಂತೆಯೇ ಅವನ ಸುತ್ತಲೂ ಬೆಳಕಿನೊಂದಿಗೆ ದೇವರ ಮಹಿಮೆಯಲ್ಲಿ

ಉಂಟುಮಾಡಲ್ಪಟ್ಟ ಆದಾಮನಾಗಿದ್ದಾನೆ. ಆದರೆ ಆದಾಮನು ಪಾಪಮಾಡಿದಾಗ, ದೇವರೊಂದಿಗಿನ ಸಂಬಂಧವು ಮುರಿಯಲ್ಪಟ್ಟಿತು ಮತ್ತು ಅದರೊಂದಿಗೆ ಆದಾಮನ ಮಹಿಮೆ ಕಳೆದುಹೋಯಿತು. ಅವನು ದೇವರ ರಾಜ್ಯವನ್ನು ಕಳೆದುಕೊಂಡನು. ಅವನು ದೇವರ ಮಹಿಮೆಯನ್ನು ಕಳೆದುಕೊಂಡ ಕೇವಲ ಮನುಷ್ಯ ಶರೀರವಾದನು.

ವಿದ್ಯುತ್ ಬಲ್ಬ್ ಆರಿಸಿದ್ದರೆ, ನಾವು ಏನನ್ನು ನೋಡುತ್ತೇವೆ? ನಾವು ಅದರ ಭತ್ತಿಯನ್ನು ಮಾತ್ರ ನೋಡುತ್ತೇವೆ. ಅದರಂತೆಯೇ ಇಂದು, ದೇವರು ಮೂಲತಃ ಉಂಟುಮಾಡಿದಂತ ಅದೇ ಮಟ್ಟದಲ್ಲಿ ಮನುಷ್ಯನ ಸ್ವಾರೂಪ್ಯವಿಲ್ಲ. ಸೋಲೋಮೋನನು ಈ ಲೋಕಕ್ಕೆ ಬಂದಾಗ ನಮ್ಮ ಕರ್ತನು ಸೋಲೋಮೋನನ ಬಗ್ಗೆ ಸೂಚಿಸಿದಂತಹ ಒಂದು ಸಂಗತಿಯಿದೆ. ಸೋಲೋಮೋನನು ಈ ಲೋಕದಲ್ಲಿ ಎಲ್ಲರಿಗಿಂತಲೂ ಜ್ಞಾನವಂತನಾಗಿದ್ದನು ಮತ್ತು ಈ ಲೋಕದಲ್ಲಿ ಅವನ ಜ್ಞಾನದೊಂದಿಗೆ ಹೋಲಿಸಲು ಯಾರೊಬ್ಬರೂ ಇರಲಿಲ್ಲ. ಆದರೆ ಕ್ರಿಸ್ತನು ಸೋಲೋಮೋನನನ್ನು ಮೇಲೆತ್ತಿದರೂ, ಅವನು ಒಂದು ಸಂಗತಿಯನ್ನು ಸೂಚಿಸಿದ್ದಾನೆ. ಅದನ್ನು ನಾವು ಧ್ಯಾನಿಸಿದರೆ, ಆದಾಮನ ಆತ್ಮೀಕ ಮರಣದ ಕಾರಣದಿಂದ ಮನುಕುಲವು ಎದುರಿಸಬೇಕಾದ ನಷ್ಟವನ್ನು ನಾವು ಅರ್ಥಮಾಡಿಕೊಳ್ಳಬಹುದು. 'ಸೋಲೋಮೋನನ' ಶ್ರೇಷ್ಟತೆಯನ್ನು 'ಒಂದು ಹೂವಿನೊಂದಿಗೆ' ನಾವು ಹೋಲಿಸಿದರೆ ಅದರಲ್ಲಿ ಯಾರು ಗೆಲ್ಲುತ್ತಾರೆಂದು ನಾವು ಕೇಳಿದರೆ, ಉತ್ತರವು 'ಹೂ' ಆಗಿರುತ್ತದೆ. ನೀವು ಗೊಂದಲಕ್ಕೊಳಗಾಗಿದ್ದೀರೇ? ಇದನ್ನು ನಾವು ಯೇಸುವಿನ ಮಾತುಗಳೊಂದಿಗೆ ಅರ್ಥಮಾಡಿಕೊಳ್ಳೋಣ. ಮತ್ತಾಯ 6:29ರಲ್ಲಿ ಹೇಳುತ್ತದೆ, **"ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೋಲೋಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ."**

ಸೋಲೋಮೋನನಿಗಿಂತಲೂ ಎತ್ತರವಾಗಿ ಹುಲ್ಲು ಅಥವಾ ಹೂವು ಏಕೆ ಏರಿಸಲ್ಪಟ್ಟಿದೆ ಎಂದು ನಾವು ಚಿಂತಿಸಿದರೆ, ಉತ್ತರವು ಮಾನವನು ಅವನು ಉಂಟುಮಾಡಲ್ಪಟ್ಟಿದ್ದ ದೇವರ ಮಹಿಮೆಯನ್ನು ಕಳೆದುಕೊಂಡಿದ್ದಾನೆ ಎಂಬುದಾಗಿದೆ. ಇಂದು ಮನುಷ್ಯನು ದೇವರು ಅವನನ್ನು ಉಂಟುಮಾಡಿದ ಅದೇ ಮಟ್ಟದಲ್ಲಿಲ್ಲ, ಬದಲಿಗೆ ಬಿದ್ದುಹೋಗಿದ್ದಾನೆ ಮತ್ತು ಮಹಿಮೆಯನ್ನು ಕಳೆದುಕೊಂಡಿದ್ದಾನೆ. ಮನುಷ್ಯನ ಪ್ರಸ್ತುತ ಪರಿಸ್ಥಿತಿಯನ್ನು ಹೂವಿನೊಂದಿಗೆ ನಾವು ಹೋಲಿಸಿದರೆ, ಹೂವಿನ ಪರಿಸ್ಥಿತಿಯು ಅದ್ಭುತವಾಗಿದೆ. ಮನುಷ್ಯನು ಪಾಪಮಾಡಿದ ನಂತರ ಅವನ ಮಹಿಮೆಯಿಂದ ಕೆಳಗಿಳಿದನು. ಆದರೆ ಹೂವು ದೇವರು ಅದನ್ನು ಉಂಟುಮಾಡಿದ್ದ ಅದೇ ಮಹಿಮೆಯಲ್ಲಿ ಇನ್ನೂ ಮುಂದುವರೆಯುತ್ತಿದೆ. ಪ್ರಿಯ ಓದುಗರೇ, ಆದಾಮನ ಬೀಳುವಿಕೆಯ ನಂತರದಿಂದ ಮನುಕುಲವು ಎಂಥಾ ಮಹಾ ನಷ್ಟವನ್ನು ಅನುಭವಿಸುತ್ತಿದೆಯೆಂದು ಈಗ ನೀವು ಅರ್ಥಮಾಡಿಕೊಂಡಿರಾ? ನಾವು 'ದೇವ ಪುತ್ರರ' ಮಟ್ಟವನ್ನು ಹೆಚ್ಚಿಸಿದಾಗ, ನಮ್ಮ ಸ್ಥಿತಿಯು ಮಹಿಮೆಯುಳ್ಳದ್ದಾಗಿರುತ್ತದೆ. ದೇವರು ನಮ್ಮನ್ನು ಆ ಮಹಿಮೆಯ ಹಂತಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ.

## ೯) ಮನುಷ್ಯನ ಎರಡರಷ್ಟು ಮುಂಬಡ್ತಿ

ಶರೀರದಲ್ಲಿರುವ ನಾವು, ಯಾವಾಗ ಆತ್ಮ ಜೀವಿಯಾಗಿ ಬದಲಾಗುತ್ತೇವೆ?

1 ಯೋಹಾನ 3:2ರಲ್ಲಿ ಯೇಸು ಕ್ರಿಸ್ತನು ಪ್ರತ್ಯಕ್ಷಗೊಳ್ಳುತ್ತಾನೆ ಎಂದು ನಾವು ನೋಡುತ್ತೇವೆ. 2 ಕೊರಿಂಥದವರಿಗೆ 3:17ರಲ್ಲಿ **"ಆ ಕರ್ತನು ದೇವರಾತ್ಮನೇ"** ಎಂದು ದೇವರ ವಾಕ್ಯದಲ್ಲಿ ನೋಡುತ್ತೇವೆ. **ಕರ್ತನು ಮೊದಲು ಏನಾಗಿದ್ದನು? ನಾವು ಸತ್ಯವೇದದಲ್ಲಿ ನೋಡುತ್ತೇವೆ – "ಇದಲ್ಲದೆ ಮಕ್ಕಳು ರಕ್ತಮಾಂಸಧಾರಿಗಳಾಗಿರುವುದರಿಂದ ಆತನೂ ಅವರಂತೆಯೇ ಆದನು."** (ಇಬ್ರಿಯ 2:14)

ಯಾಕೆ ನಾವು ಈಗ ಯೇಸುವನ್ನು ನೋಡಲಾಗುವುದಿಲ್ಲ? ಕಾರಣವೇನೆಂದರೆ ಕರ್ತನು ಆತ್ಮನಾಗಿದ್ದಾನೆ. ನಾವು ಶರೀರದಲ್ಲಿ ಜೀವಿಸುತ್ತಿರುವ ಆತ್ಮಗಳು. ಶರೀರದಲ್ಲಿ ಜೀವಿಸುತ್ತಿರುವವರು ಶರೀರದಲ್ಲಿ ಜೀವಿಸುತ್ತಿರುವವರನ್ನು ಮಾತ್ರ ನೋಡಲು ಸಾಧ್ಯ. ಆದರೆ, ಆತ್ಮದಲ್ಲಿ ಜೀವಿಸುತ್ತಿರುವವರು ಆತ್ಮದಲ್ಲಿನ ಹಾಗೆಯೇ ಶರೀರದಲ್ಲಿನ ಸಂಗತಿಗಳನ್ನೂ ನೋಡಬಹುದು. ಆದುದರಿಂದಲೇ ನಾವು ಪರಸ್ಪರ ನೋಡುತ್ತೇವೆ; ಆದರೆ ನಾವು ಯೇಸುವನ್ನು ಅಥವಾ ದೇವದೂತರನ್ನು ನೋಡಲು ಸಾಧ್ಯವಿಲ್ಲ ಕಾರಣ ಅವರು ಆತ್ಮ ಪ್ರಪಂಚದಲ್ಲಿದ್ದಾರೆ ಮತ್ತು ಆತ್ಮಗಳಾಗಿದ್ದಾರೆ.

ಮನುಷ್ಯ, ದೇವರಿಂದ ಎರಡನೇ ಸ್ಥಾನದಲ್ಲಿ ಅಥವಾ ಪ್ರಾಣದಲ್ಲಿ ಉಂಟುಮಾಡಲ್ಪಟ್ಟಿದ್ದವನು (ಆದಿ 2:7), ಹಿಂಬಡ್ತಿಯನ್ನು ಆರಿಸಿಕೊಂಡನು ಮತ್ತು ಶರೀರಕ್ಕೆ ಅಂದರೆ ಮೂರನೇ ಸ್ಥಾನಕ್ಕೆ ಹೋದನು; ದೇವರು ಅವನನ್ನು ಮೊದಲ ಸ್ಥಾನವಾಗಿರುವ ಆತ್ಮ ಸ್ಥಾನಕ್ಕೆ ತರುತ್ತಾರೆ. ಯಾವಾಗ ಅದು ಸಂಭವಿಸುತ್ತದೆ? ದೇವರ ವಾಕ್ಯವು ಹೇಳುತ್ತದೆ "ಕ್ರಿಸ್ತನು ಪ್ರತ್ಯಕ್ಷನಾದರೆ **ನಾವು ಆತನ ಹಾಗಿರುವೆವೆಂದು ಬಲ್ಲೆವು;** ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು." (1ಯೋಹಾನ 3:2) ಅಂದರೆ, ಶರೀರದಲ್ಲಿರುವಂತಹ ನಾವು ಆತ್ಮದಲ್ಲಿರುವ ಯೇಸುವನ್ನು ನೋಡುತ್ತೇವೆ, ಮತ್ತು ಅವನಂತೆ ಆಗುತ್ತೇವೆ. ನಾವು ಮೂರನೇ ಸ್ಥಾನದಿಂದ ಮೊದಲ ಸ್ಥಾನಕ್ಕೆ ಮುಂಬಡ್ತಿಯನ್ನು ಪಡೆಯುತ್ತೇವೆ ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಶರೀರದಿಂದ ಆತ್ಮಕ್ಕೆ ಮುಂಬಡ್ತಿ ಪಡೆಯುತ್ತೇವೆ, ಹಾಗಾಗಿ ನಾವು ಕ್ರಿಸ್ತನಿರುವಂತೆ ಆತ್ಮಕ್ಕೆ ಬದಲಾಗುತ್ತೇವೆ. 1 ಕೊರಿ 15:45-48ರಲ್ಲಿ ದೇವರ ವಾಕ್ಯವು ಇದನ್ನು ಹೇಳುತ್ತದೆ; **"ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು ಬರೆದದೆಯಲ್ಲಾ. ಕಡೇ ಆದಾಮನೋ ಬದುಕಿಸುವ ಆತ್ಮನು (ಯೇಸು)."**

ಯೇಸುವಿನಂತೆಯೇ ನಾವೆಲ್ಲರೂ ಬದುಕುವ ಅಥವಾ ಜೀವಿಸುವ ಆತ್ಮಗಳು ಎಂದು ವಾಕ್ಯದಲ್ಲಿ ಮುಂದೆ ಕಾಣುತ್ತೇವೆ. ಆದುದರಿಂದಲೇ ವಾಕ್ಯವು ಹೇಳುತ್ತದೆ "ಪರಲೋಕದಿಂದ ಬಂದಾತನು ಎಂಥವನೋ ಪರಲೋಕ ಸಂಬಂಧಪಟ್ಟವರೂ ಅಂಥವರೇ."


**"ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು ಬರೆದದೆಯಲ್ಲಾ. ಕಡೇ ಆದಾಮನೋ ಬದುಕಿಸುವ ಆತ್ಮನು. ಆತ್ಮೀಕವಾದದ್ದು ಮೊದಲನೇದಲ್ಲ, ಪ್ರಾಕೃತವಾದದ್ದು ಮೊದಲನೇದು; ಆ ಮೇಲೆ ಆತ್ಮೀಕವಾದದ್ದು. ಮೊದಲನೇಯ ಮನುಷ್ಯನು ಭೂಮಿಯೊಳಗಿಂದ ಉತ್ಪನ್ನನಾಗಿ ಮಣ್ಣಿಗೆ ಸಂಬಂಧಪಟ್ಟವನು; ಎರಡನೆಯ ಮನುಷ್ಯನು ಪರಲೋಕದಿಂದ ಬಂದವನು. ಮಣ್ಣಿನಿಂದ ಹುಟ್ಟಿದವನು ಎಂಥವನೋ ಮಣ್ಣಿಗೆ ಸಂಬಂಧಪಟ್ಟವರೂ ಅಂಥವರೇ; ಪರಲೋಕದಿಂದ ಬಂದಾತನು ಎಂಥವನೋ ಪರಲೋಕಸಂಬಂಧಪಟ್ಟವರೂ ಅಂಥವರೇ." (1 ಕೊರಿ 15:45-48)**

ಆದರೆ ಇಂದು ನಾವು ಶರೀರದ ಹೊದಿಕೆಯೊಳಗಿದ್ದೇವೆ. ಆತ್ಮ ಸ್ವಾರೂಪ್ಯದಲ್ಲಿರುವ ಕ್ರಿಸ್ತನನ್ನು ನಾವು ನೋಡಬೇಕೆಂದರೆ, ನಾವೂ ಸಹ ಆತ್ಮ ಸ್ವಾರೂಪ್ಯಕ್ಕೆ ಬದಲಾಗಬೇಕು. ಅಂದರೆ ಆತ್ಮವಾಗಿರುವ ಕ್ರಿಸ್ತನನ್ನು ನೋಡುವ ಸಲುವಾಗಿ ಅವನಿರುವ ರೀತಿಯಲ್ಲಿಯೇ ಶರೀರದಲ್ಲಿರುವ ನಾವು ಆತ್ಮ ಸ್ವಾರೂಪ್ಯಕ್ಕೆ ಬದಲಾಗಬೇಕು. ಇದು ದೇವರ ಯೋಜನೆ. ಆದರೆ ಈ ರೂಪಾಂತರವನ್ನು ಪ್ರತಿಯೊಬ್ಬರೂ ಸಾಧಿಸುವದಿಲ್ಲ, ದೇವರ ಪ್ರಕ್ರಿಯೆಯ ಮೂಲಕ ಹೋಗುವವರು ಮಾತ್ರ ಅದನ್ನು ಸಾಧಿಸುತ್ತಾರೆ. ತುಂಬಾ ಜನರು ಇದಕ್ಕಾಗಿ ಕಾಯುತ್ತಿದ್ದಾರೆ. ಕಾಯುತ್ತಿರುವ ಎಲ್ಲರೂ ಹೋಗುವುದಿಲ್ಲ ಆದರೆ ಯಾರು ದೇವರಿಗೆ ವಿಧೇಯರಾಗುತ್ತಾರೋ, ಆತನ ಮಾರ್ಗದಲ್ಲಿ ಜೀವಿಸುತ್ತಾರೋ, ಯಾರು ಆತ್ಮಕ್ಕೆ ವಿಧೇಯರಾಗಿ ಜೀವಿಸುತ್ತಾರೋ (ರೋಮಾ 8:13-14) ಮತ್ತು ದೇವರನ್ನು ಸಂತೋಷಗೊಳಿಸುತ್ತಾರೋ ಅವರು ಮಾತ್ರ ಅಲ್ಲಿಗೆ ಹೋಗುತ್ತಾರೆ; ಯಾಕಂದರೆ ನಾವು ನಮ್ಮ ಸ್ವಂತ ನೀತಿವಂತ ಕಾರ್ಯಗಳಿಂದ ಅಥವಾ ಇತರೆ ಯಾವುದರಿಂದಲೂ ದೇವರ ರಾಜ್ಯವನ್ನು ಪಡೆಯುವುದಿಲ್ಲ. ಯೇಸುವನ್ನು ಅಂಗೀಕರಿಸುವುದರಿಂದ ಮತ್ತು ಯೇಸು ಹೇಳಿದ ಪ್ರಕಾರ ಜೀವಿಸುವುದರಿಂದ ಮಾತ್ರವೇ ನಾವು ದೇವರ ರಾಜ್ಯವನ್ನು ಪಡೆಯುತ್ತೇವೆ.

## ಈ) ಆದಾಮನ ಮಹಿಮೆ ಮತ್ತು ನೂತನ ಸೃಷ್ಟಿಯ ಮಹಿಮೆಯ ನಡುವಿನ ವ್ಯತ್ಯಾಸ

ನಾವು ಹೊಸದಾಗಿ ಹುಟ್ಟಲ್ಪಟ್ಟಾಗ ನಮ್ಮ ಸ್ಥಿತಿ ಏನಾಗಿದೆ? ನಾವು ಯೇಸುವನ್ನು ನಮ್ಮ ರಕ್ಷಕನಾಗಿ ಅಂಗೀಕರಿಸಿದಾಗ ನಾವು ಪಡೆದ ಮಹಿಮೆಯ ಮತ್ತು ಆದಾಮನ ಮಹಿಮೆಯ ನಡುವೆ ವ್ಯತ್ಯಾಸವಿದೆ. ಅವೆರಡೂ ದೇವರ ಮಹಿಮೆಯಾಗಿದ್ದರೂ ಅದರ ಅಳತೆ ಮತ್ತು ಗೋಚರಿಸುವಿಕೆಯಲ್ಲಿ ವ್ಯತ್ಯಾಸವಿದೆ. ನಾವು ಹೊಸದಾಗಿ ಹುಟ್ಟಿದಾಗ, ಆದಾಮನು ಹೊಂದಿದ್ದ ಅದೇ ಮಹಿಮೆಯು ಮರಳಿ ಬರಲಿಲ್ಲ. ಅಂದರೆ, ಆದಾಮನು ಮಹಿಮೆಯೊಳಗೆ ಜೀವಿಸಿದನು ಮತ್ತು ಮಹಿಮೆಯು ಆದಾಮನ ಒಳಗೂ ಹಾಗೂ ಹೊರಗೂ ಇತ್ತು. ಆದರೆ ನಾವು ಮಹಿಮೆಯೊಳಗಡೆಯಿಲ್ಲ, ಬದಲಿಗೆ ಮಹಿಮೆಯು ನಮ್ಮೊಳಗಿದೆ. ಅದರ ಅರ್ಥ ದೇವರ ಮಹಿಮೆಯು ನಮ್ಮ ಹೊರಗಡೆಯಲ್ಲ ನಮ್ಮ ಆತ್ಮದೊಳಗಡೆ ಇದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಹೊಸದಾಗಿ ಹುಟ್ಟಿದಾಗ ದೇವರ ರಾಜ್ಯವು ಮತ್ತೊಮ್ಮೆ ನಮ್ಮೊಳಗಡೆ ಪ್ರಕಟಿಸಲ್ಪಟ್ಟಿತು. ನಾವು ಅದೇ ಹಳೆಯ ದೇಹವನ್ನು ಹೊರಗಡೆ ನೋಡುತ್ತೇವೆ ಮತ್ತು

ಮಾನವನ್ನು ಮುಚ್ಚುವ ಸಲುವಾಗಿ ನಾವು ಬಟ್ಟೆ ಅಥವಾ ಉಡುಪನ್ನು ಹೊದ್ದುಕೊಳ್ಳುತ್ತೇವೆ.




*ಬಿದ್ದುಹೋಗುವ ಮೊದಲು ಆದಾಮನ ಮಹಿಮೆ ಮತ್ತು ಹೊಸದಾಗಿ ಹುಟ್ಟಿದ ವ್ಯಕ್ತಿಯ ಮಹಿಮೆಯ ನಡುವಿನ ವ್ಯತ್ಯಾಸ*

**(ಚಿತ್ರ–17)**

ನಾವು ದೇವರ ಮಹಿಮೆಯನ್ನು ನಮ್ಮೊಳಗೆ ಹೊಂದಿರುವ ಕಾರಣದಿಂದ, ಕ್ರಿಸ್ತನು ನಾವು ಲೋಕಕ್ಕೆ ಬೆಳಕಾಗಿದ್ದೇವೆ ಎಂದು ಹೇಳಿದನು. ಅದೇ ಸಮಯದಲ್ಲಿ ನಾವು ಲೋಕಕ್ಕೆ ರುಚಿನೀಡುವಂತವರಾಗಿದ್ದೇವೆ. ಮತ್ತಾಯ 5:13ರಲ್ಲಿ **"ನೀವು ಭೂಮಿಗೆ ಉಪ್ಪಾಗಿದ್ದೀರಿ."** ದೇವರ ರಾಜ್ಯವು ನಮ್ಮೊಳಗೆ ಮರಳಿ ಬಂದಿದೆ. ಲೂಕ 17:21ರಲ್ಲಿ ಕ್ರಿಸ್ತನು ಹೇಳಿದನು –

**"ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವದಕ್ಕಾಗದು; ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ."**

ದೇವರ ರಾಜ್ಯದೊಳಗೆ ಪ್ರವೇಶಿಸಿದಂತಹ ಮನುಷ್ಯನು, ಯೇಸುವನ್ನು ಅಂಗೀಕರಿಸಿದ ನಂತರ ಮಹಿಮೆಯನ್ನು ಮರಳಿಪಡೆದರೂ, ನಾವು ಅನುಮತಿಸದ ಹೊರತು ಆ ಮಹಿಮೆಯು ಲೋಕಕ್ಕೆ ರವಾನೆಯಾಗುವುದಿಲ್ಲ. ನೂತನವಾಗಿ ಸೃಷ್ಟಿಸಲ್ಪಟ್ಟ ಮನುಷ್ಯನು (ಮಹಿಮೆಯೊಂದಿಗೆ) ಶಾರೀರಿಕ ಜೈಲಿನೊಳಗಿದ್ದಾನೆ. ನಾವು ಶಾರೀರಿಕ ಜೈಲಿನೊಳಗೆ ಇರುವಾಗ, ದೇವರ ಆತ್ಮನನ್ನು ನಮ್ಮಿಂದ ಪ್ರಕಟವಾಗಲು ನಾವು ಅನುಮತಿಸುವ ಮಟ್ಟಕ್ಕೆ ಮಾತ್ರ ಮಹಿಮೆಯು ನಮ್ಮ ಮೂಲಕ ಪ್ರಕಟವಾಗುತ್ತದೆ.

ನಾವು ಹೊಸದಾಗಿ ಹುಟ್ಟಿದಾಗ, ದೇವರು ಒಬ್ಬರಿಗೆ ಸ್ವಲ್ಪ ಜೀವ ಮತ್ತು ಇನ್ನೊಬ್ಬರಿಗೆ ಹೆಚ್ಚು ಜೀವವನ್ನು ನೀಡಲಿಲ್ಲ. ಆದರೆ ನಾವು ಅನುಮತಿಸುವ ಆತ್ಮೀಕ

ಜೀವದಷ್ಟೇ ನಮ್ಮಿಂದ ಹೊರಸೂಸುತ್ತದೆ. ನಾವು ಕೆಲವು ದೇವರ ಸೇವಕರನ್ನು ನೋಡಿದಾಗ, ತಕ್ಷಣವೇ ನಾವು ಅವರೊಳಗಿನ ಆತ್ಮದ ಪ್ರಸನ್ನತೆಯನ್ನು ಅರ್ಥಮಾಡಿಕೊಳ್ಳುತ್ತೇವೆ. ಅವರು ನಮ್ಮ ಮನೆಗೆ ಬಂದಾಗ ಮತ್ತು ಪ್ರಾರ್ಥಿಸಿದಾಗ ಅಥವಾ ಅವರು ಯಾವುದೇ ಇತರ ಸೇವೆಯಲ್ಲಿ ನಿಂತಿರುವಾಗ, ಅವರ ಅರಿವಿಲ್ಲದೆಯೇ ನಾವು ಅದನ್ನು ಗಮನಿಸುತ್ತೇವೆ. ಅವರ ಕಡೆಗೆ ಒಂದು ಆತ್ಮೀಕ ಆಕರ್ಷಣೆಯನ್ನು ನಾವು ಹೊಂದಿರುತ್ತೇವೆ. ಆತ್ಮದಲ್ಲಿ ಹುಟ್ಟಿರುವಂತಹ ಮಕ್ಕಳು ಇದನ್ನು ಅರ್ಥಮಾಡಿಕೊಳ್ಳುತ್ತಾರೆ. ಈ ಆಕರ್ಷಣೆಯು ಆ ಸೇವಕರು ಆಕರ್ಷಣೀಯ ವೈಶಿಷ್ಟ್ಯಗಳನ್ನು ಹೊಂದಿರುವ ಕಾರಣದಿಂದಲ್ಲ, ಬದಲಾಗಿ ಅವರು ಆತ್ಮದಲ್ಲಿ ಹೊಸದಾಗಿ ಹುಟ್ಟಿರುವುದರಿಂದಾಗಿದೆ. ಅವರೊಳಗೆ ದೇವರ ರಾಜ್ಯದಲ್ಲಿ ಹೊಸದಾಗಿ ಸೃಷ್ಟಿಯಾದ ಮನುಷ್ಯನಲ್ಲಿ ದೇವರ ರಾಜ್ಯ, ದೇವರ ಆತ್ಮ ಇರುವುದರಿಂದ ಆ ವ್ಯಕ್ತಿಯಿಂದ ಹೊರಹೊಮ್ಮುವ ಮಹಿಮೆಯ ಮಾತುಗಳಿಗಾಗಿ ಹಾತೊರೆಯುತ್ತಿದ್ದಾರೆ. ನಮ್ಮ ಮನೆಯಲ್ಲಿ ನಾವು ಇಷ್ಟಪಡುವ ಮಸಾಲೆ ಸಿದ್ಧಮಾಡುತ್ತಿದ್ದರೆ, ನಾವು ಅದಕ್ಕೆ ಹಂಬಲಿಸುತ್ತೇವೆ! ಅದೇ ರೀತಿಯಾಗಿ ಆಂತರಿಕ ಮನುಷ್ಯನೂ ಸಹ ಅವನು ಆಂತರಿಕ ಮನುಷ್ಯನ ಮಹಿಮೆಯನ್ನು ಎಲ್ಲಿ ಕಂಡುಕೊಳ್ಳಬಹುದೋ ಅದಕ್ಕೆ ಹತ್ತಿರಗೊಳ್ಳಲು ಹಾತೊರೆಯುತ್ತಾನೆ.

ನಮ್ಮಲ್ಲಿ ಪರಿಶುದ್ಧಾತ್ಮನು ಕಾರ್ಯಮಾಡಲು ಯಾವ ಮಟ್ಟಕ್ಕೆ ನಾವು ಒಪ್ಪಿಸಿ ಕೊಡುತ್ತೇವೋ – ಅದೇ ಮಟ್ಟಕ್ಕೆ ನಮ್ಮ ಮೂಲಕ ದೇವರ ಮಹಿಮೆಯು ಪ್ರಸರಿಸುತ್ತದೆ.

## ಉ) ನೀವು ಲೋಕಕ್ಕೆ ಬೆಳಕಾಗಿದ್ದೀರಿ

**"ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು." (ಮತ್ತಾ 5:14)**

ಮತ್ತಾಯನ ಸುವಾರ್ತೆಯಲ್ಲಿ, ಹೇಳುತ್ತದೆ "ನೀವು ಲೋಕಕ್ಕೆ ಬೆಳಕಾಗಿದ್ದೀರಿ." ನಾವು ಆತ್ಮೀಕ ಪ್ರಪಂಚದಲ್ಲಿ ಆತ್ಮೀಕ ಬೆಳಕಾಗಿದ್ದೇವೆ. ನಮ್ಮ ಒಳ್ಳೆಯ ಕೆಲಸದ ಮೂಲಕ ನಾವು ಭೌತಿಕ ಪ್ರಪಂಚದಲ್ಲಿಯೂ ಬೆಳಕಾಗಿದ್ದೇವೆ (ಮತ್ತಾ 5:14). ನಾವು ಹೋಗುವ ಸ್ಥಳಗಳಲ್ಲಿ ಕತ್ತಲೆಯು ಪಲಾಯನ ಮಾಡುತ್ತದೆ ಮತ್ತು ಬೆಳಕು ತುಂಬುತ್ತದೆ. ನಾವು ಆತ್ಮೀಕ ಪ್ರಪಂಚದಲ್ಲಿ ಬೆಳಕಾಗಿರುವಾಗ, ಅದರ ಪ್ರತಿಫಲನದೊಂದಿಗೆ, ಈ ಲೋಕದ ಕತ್ತಲೆಯು ಬೆಳಕಾಗಿ ಬದಲಾಗುವುದು. ನಾವು ಇದನ್ನು ಅರ್ಥಮಾಡಿಕೊಂಡರೆ ಮತ್ತು ಸಮಸ್ಯೆಗಳ ಮೂಲಕ ಹಾದುಹೋದರೆ, ನಾವು ಬದಲಾವಣೆಗಳನ್ನು ನೋಡುತ್ತೇವೆ ಅಥವಾ ಸಮಸ್ಯೆ ಪರಿಹರಿಸಲ್ಪಟ್ಟಿದೆ ಎಂದು ಅರ್ಥಮಾಡಿಕೊಳ್ಳುತ್ತೇವೆ. ದೇವರ ಸೇವಕರು ಹಾದು ಹೋಗುವಾಗ, ಅವರು ಬರುವಂತೆ ಮತ್ತು ನಮ್ಮ ಮನೆಗಳಲ್ಲಿ ಪ್ರಾರ್ಥಿಸುವಂತೆ ನಾವು ಅವರನ್ನು ಕೇಳಿಕೊಳ್ಳಬೇಕು. ಯಾಕಂದರೆ ಅವರ ಮೂಲಕ ಪ್ರಸರಿಸುವ ಬೆಳಕು ನಮ್ಮ ಕುಟುಂಬವನ್ನು ಪ್ರಭುದ್ಧಗೊಳಿಸುತ್ತದೆ ಮತ್ತು ಕತ್ತಲೆಯ ಆತ್ಮವು ಪಲಾಯನ ಮಾಡುತ್ತದೆ.

> "ನೀವು ಲೋಕಕ್ಕೆ ಬೆಳಕಾಗಿದ್ದೀರಿ."

ನಾವು ಎಲ್ಲಾದರೂ ಹೋದರೆ ಮತ್ತು ಶರೀರದ (ಲೋಕದ) ಆಲೋಚನೆಗಳಿಂದ ತುಂಬಿರುವ, ಪ್ರಾಣದಿಂದ ಮಾತುಗಳನ್ನಾಡಿದರೆ ನಾವು ಸೈತಾನನ ಶಕ್ತಿಯನ್ನು ಬಿಡುಗಡೆಮಾಡುತ್ತೇವೆ. ಆದರೆ ನಾವು ದೇವರ ಆತ್ಮನಿಂದ ನೀಡಲ್ಪಟ್ಟ ವಾಕ್ಯವನ್ನು ಮಾತಾಡಿದರೆ (ರೇಮಾ ಪದಗಳು ಅಥವಾ ಹೇಳಲ್ಪಟ್ಟಿರುವ ಮಾತುಗಳು), ನಾವು ಪರಿಶುದ್ಧಾತ್ಮನ ಬಲವನ್ನು ಬಿಡುಗಡೆ ಮಾಡುತ್ತೇವೆ.

ನಾವು ಮಾತುಗಳನ್ನಾಡಿದಾಗ, ಅವು ಕೇವಲ ಶಬ್ಧಗಳಲ್ಲ. ಮಾತುಗಳು ಆತ್ಮವಾಗಿದೆ ಮತ್ತು ದೇವರ ವಾಕ್ಯವು ಹೇಳುತ್ತದೆ, **"ಬದುಕಿಸುವಂಥದು ಆತ್ಮವೇ; ಮಾಂಸವು ಯಾವುದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೇ." (ಯೋಹಾನ 6:63)** ಈ ರಹಸ್ಯವು ಕ್ರಿಸ್ತನ ಸಭೆಯಲ್ಲಿ ಅನೇಕರಿಗೆ ಮರೆಯಾಗಿದೆ. ನಾವು ಮಾತುಗಳನ್ನು ಬಿಡುಗಡೆ ಮಾಡಿದಾಗ, ನಿಮಗೆ ಗೊತ್ತಾ ನಾವೇನು ಮಾಡುತ್ತಿದ್ದೇವೆಂದು? ನಾವು ಲೋಕದಲ್ಲಿ ಆತ್ಮಗಳನ್ನು ಹೊರತರಬಹುದು. ನಮ್ಮ ಮಾತುಗಳ ಮೂಲಕ ನಾವು ಪರಿಶುದ್ಧಾತ್ಮನನ್ನು ಬಿಡುಗಡೆ ಮಾಡಬಹುದು ಇಲ್ಲವೇ ನಮ್ಮ ಶಾರೀರಿಕ ಅಥವಾ ನಕಾರಾತ್ಮಕ ಮಾತುಗಳಿಂದ ದುಷ್ಟ ಆತ್ಮಗಳನ್ನು ಬಿಡುಗಡೆ ಮಾಡಬಹುದು. ಒಳ್ಳೆಯ ಮನುಷ್ಯನು ಅವನ ಹೃದಯದಲ್ಲಿ ಒಳ್ಳೆಯ ಬೊಕ್ಕಸದಿಂದ ಒಳ್ಳೆಯ ವಸ್ತುಗಳನ್ನು ಹೊರತರುತ್ತಾನೆ (ಮತ್ತಾಯ 12:35) ಮತ್ತು ಕೆಟ್ಟ ಮನುಷ್ಯನು ಕೆಟ್ಟದ್ದನ್ನು ಹೊರತರುತ್ತಾನೆ.

ಎರಡು ಲೋಕಗಳಿವೆ, ಆತ್ಮ ಲೋಕ ಮತ್ತು ಭೌತಿಕ ಲೋಕ ಮತ್ತು ಎರಡು ಬೆಳಕುಗಳಿವೆ – ಆತ್ಮೀಕ ಬೆಳಕು ಮತ್ತು ಭೌತಿಕ ಬೆಳಕು. ದೇವರು ಬೆಳಕನ್ನು ಉಂಟುಮಾಡುವ ಮೊದಲೇ, ಬೆಳಕಿತ್ತು; ಯಾಕಂದರೆ ದೇವರು ಬೆಳಕು. ನಿಜ ಆತ್ಮೀಕ ಬೆಳಕಿನ ಮೂಲವಾಗಿರುವ ದೇವರು, ಭೌತಿಕ ಲೋಕವನ್ನು ಆದೇಶಿಸಿದಾಗ, ಆತ್ಮೀಕ ಪ್ರಪಂಚದಿಂದ ಆತನ ಬೆಳಕು ಭೌತಿಕ ಪ್ರಪಂಚದಲ್ಲಿ ಬೆಳಕನ್ನುಂಟುಮಾಡಿತು. ಆದಿಕಾಂಡ 1:3 ಆತ್ಮೀಕ ಬೆಳಕಿನ ಹುಟ್ಟಿನ ಕುರಿತಲ್ಲ ಭೌತಿಕ ಬೆಳಕಿನ ಹುಟ್ಟಿನ ಕುರಿತು ಹೇಳುತ್ತದೆ. ಹೊಸದಾಗಿ ಹುಟ್ಟಿದ ವ್ಯಕ್ತಿಯು ಈ ಲೋಕದಲ್ಲಿ ಆತ್ಮೀಕ ಬೆಳಕಾಗಿದ್ದಾನೆ ಮತ್ತು ಅವನ ಒಳ್ಳೆಯ ಕೆಲಸದ ಮೂಲಕ ಅವನ ಬೆಳಕೂ ಭೌತಿಕ ಲೋಕದಲ್ಲಿ ಪ್ರಕಾಶಿಸುತ್ತದೆ.

## ಊ) ಮುಂಬಡ್ತಿಗೆ ಸಿದ್ಧರಾಗಿರಿ

ದೇವರ ರಾಜ್ಯವು **ನಮ್ಮಿಂದ** ನಮ್ಮೊಳಗೆ ಮರೆಯಾಗಿದೆ. ನಾವು ಅದನ್ನು ಅನುಮತಿಸಿದರೆ ಮಾತ್ರ, ನಮ್ಮೊಳಗಿನ ದೇವರ ರಾಜ್ಯದ ಪರಿಶುದ್ಧಾತ್ಮನು ನಮ್ಮ ಮೂಲಕ ಕಾರ್ಯಮಾಡಲು ಸಾಧ್ಯ.

ನಮ್ಮ ದೇಹವು ವಿಮೋಚಿಸಲ್ಪಡುತ್ತಿರುವ ಸ್ಥಿತಿಯನ್ನು ರೋಮಾಪುರದವರಿಗೆ 8:23 ಮತ್ತು 1 ಕೊರಿಂಥದವರಿಗೆಯಲ್ಲಿ 15:52ರಲ್ಲಿ ನಾವು ನೋಡುತ್ತೇವೆ. ಅದು ಆತ್ಮ – ನಿಯಂತ್ರಿತ, ಮಹಿಮೀಕರಿಸಲ್ಪಟ್ಟ ದೇಹ. ನಾವು ಆ ಹಂತವನ್ನು ತಲುಪಿಲ್ಲ. ಆದರೆ ನಾವು ಆ ಹಂತವನ್ನು ತಲುಪುತ್ತೇವೆ – ಆತನು ಪ್ರತ್ಯಕ್ಷನಾದಾಗ, ಆತನಿರುವ ಪ್ರಕಾರವೇ ನಾವು

ಆತನನ್ನು ನೋಡುತ್ತೇವೆ ಮತ್ತು ಆತನಂತಾಗುತ್ತೇವೆ (1 ಯೋಹಾ 3:2). ಮೂರನೇ ಸ್ಥಾನ (ಶರೀರ ಜೀವಿ) ಹೊಂದಿದ್ದವನು ಮೊದಲನೇ ಸ್ಥಾನಕ್ಕೆ (ಆತ್ಮ ಜೀವಿ) ಎತ್ತಲ್ಪಡುತ್ತಾನೆ.

❖ ಪ್ರಾರ್ಥನೆ



*ಪರಲೋಕದ ತಂದೆಯೇ, ಯೇಸು ಕ್ರಿಸ್ತನ ಮೂಲಕ ನಿನ್ನ ಚಿತ್ತವನ್ನು ನೆರವೇರಿಸುವುದರಿಂದ, ಎರಡರಷ್ಟು ಮುಂಬಡ್ತಿಯಾಗಿ ನಾನು ಆತ್ಮ ಜೀವಿಯಾಗಿ ಎತ್ತಲ್ಪಡುತ್ತೇನೆ ಎಂದು ಅರ್ಥಮಾಡಿಕೊಂಡೆ. ಅಲ್ಲದೆ ನಾನು ನನ್ನ ನೀತಿವಂತ ಕಾರ್ಯಗಳಿಂದ ದೇವರ ರಾಜ್ಯವನ್ನು ಪಡೆದುಕೊಳ್ಳಲು ಆಗುವುದಿಲ್ಲ, ಬದಲಿಗೆ ಯೇಸು ಕ್ರಿಸ್ತನನ್ನು ನನ್ನ ವೈಯಕ್ತಿಕ ರಕ್ಷಕನಾಗಿ ಅಂಗೀಕರಿಸುವುದರಿಂದ ಮತ್ತು ಆತನು ಹೇಳಿದ ಪ್ರಕಾರ ಮಾಡುವುದರಿಂದ ಪಡೆಯುತ್ತೇನೆ ಎಂದೂ ಅರ್ಥಮಾಡಿಕೊಂಡೆ. ಕರ್ತನೇ ನಮ್ಮ ಮಾತುಗಳು ದುಷ್ಟ ಆತ್ಮಗಳನ್ನಲ್ಲ, ಪರಿಶುದ್ಧಾತ್ಮನನ್ನು ಮಾತ್ರ ಬಿಡುಗಡೆಮಾಡಲಿ. ನನ್ನನ್ನು ನಾನು ನಿನ್ನ ಪರಿಶುದ್ಧ ಹಸ್ತದೊಳಗೆ ಒಪ್ಪಿಸಿಕೊಡುತ್ತೇನೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಮನುಷ್ಯನು ಪ್ರಾಣ ಜೀವಿಯಾಗಿ ಇರಿಸಲ್ಪಟ್ಟಿದ್ದರೂ (ಆದಿ 2:7, 1 ಕೊರಿ 15:45) ಅವಿಧೇಯತ್ವದ ಮೂಲಕ ಅವನು ಶರೀರ ಜೀವಿಯಾಗಿ ಕೆಳಗಿಳಿಸಲ್ಪಟ್ಟನು (ಆದಿ 6:3). ಯೇಸು ಕ್ರಿಸ್ತನ ಮೂಲಕ ಉದ್ದೇಶವನ್ನು ನೆರವೇರಿಸಿ, ಎರಡರಷ್ಟು ಮುಂಬಡ್ತಿಯನ್ನು ನೀಡುವ ಮೂಲಕ (1 ಯೋಹಾ 3:2) ದೇವರು ಬಿದ್ದು ಹೋದ ಮನುಷ್ಯನನ್ನು ಆತ್ಮ ಜೀವಿಯಾಗಿ ಮೇಲೆತ್ತುತ್ತಾನೆ.
2. ಕಾಣದ ದೇವರ ರಾಜ್ಯದಲ್ಲಿರುವ ಮನುಷ್ಯನನ್ನು ಬಳಸಿಕೊಂಡು ತನ್ನ ಚಿತ್ತವನ್ನು ಈ ಕಾಣುವ ಲೋಕದಲ್ಲಿ ನೆರವೇರಿಸುವುದು ದೇವರ ಬಯಕೆಯಾಗಿದೆ.
3. ಇಂದು, ನಮ್ಮ ಸ್ವಂತ ನೀತಿವಂತ ಕಾರ್ಯಗಳಿಂದ ಅಥವಾ ಇತರ ಯಾವುದ ರಿಂದಲೂ ನಾವು ದೇವರ ರಾಜ್ಯವನ್ನು ಪಡೆದುಕೊಳ್ಳುವುದಿಲ್ಲ, ಬದಲಿಗೆ ಯೇಸುವನ್ನು ಅಂಗೀಕರಿಸುವುದರಿಂದ ಮತ್ತು ಯೇಸು ಹೇಳಿದ ಪ್ರಕಾರ ಜೀವಿಸುವುದರಿಂದ ಮಾತ್ರವೇ ಪಡೆದುಕೊಳ್ಳುತ್ತೇವೆ.
4. ಮಾತುಗಳನ್ನಾಡಿದಾಗ, ನಾವು ಪರಿಶುದ್ಧಾತ್ಮನನ್ನು ಬಿಡುಗಡೆಮಾಡುತ್ತೇವೆ ಅಥವಾ ನಮ್ಮ ಮಾತುಗಳ ಮೂಲಕ ದುಷ್ಟ ಆತ್ಮಗಳನ್ನು ಬಿಡುಗಡೆ ಮಾಡುತ್ತೇವೆ.



*ಅಧ್ಯಾಯ 8*

# ದೇವರ ರಾಜ್ಯದಲ್ಲಿ ತಮ್ಮ ಕಣ್ಣುಗಳನ್ನು ಎಂದಿಗೂ ತೆರೆಯದ ಹಸುಮಕ್ಕಳು

*"ಎಂದಿಗೂ ಇಲ್ಲ. ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ." (ರೋಮಾಪುರದವರಿಗೆ 3:4)*

ನಮ್ಮಲ್ಲಿ ಅನೇಕರು ದೇವರ ರಾಜ್ಯದಲ್ಲಿ ಹುಟ್ಟಿದ್ದರೂ, ತಮ್ಮ ಕಣ್ಣುಗಳನ್ನು ತೆರೆಯಲು ಸಾಧ್ಯವಾಗದ ಮಕ್ಕಳಂತಯೇ ನಾವು ಉಳಿದಿದ್ದೇವೆ. ನಾವು ಇನ್ನೂ ದೇವರ ರಾಜ್ಯದ ಕುರಿತು ಅರಿವಿಲ್ಲದವರಾಗಿದ್ದೇವೆ ಮತ್ತು ಅದರ ಕಾರ್ಯದ ಕುರಿತು ಶೋಚನೀಯವಾಗಿ ನಿರ್ಲಕ್ಷಿತರಾಗಿದ್ದೇವೆ. ನಾವು ನಮ್ಮ ಪ್ರಸ್ತುತ ಆತ್ಮೀಕ ಸ್ಥಿತಿಯ ಬಗ್ಗೆಯೂ ಕೂಡ ಅರಿವಿಲ್ಲದವರಾಗಿದ್ದೇವೆ. ಕಾರ್ಯಕ್ರಿಯಾ ಕೈಪಿಡಿಯಾಗಿರುವ ನಿಜವಾದ ದೇವರ ವಾಕ್ಯವನ್ನು ಓದಲಾಗಿಲ್ಲ, ಅರ್ಥಮಾಡಿಕೊಳ್ಳಲಾಗಿಲ್ಲ ಮತ್ತು ಅನುಸರಿಸಲಾಗಿಲ್ಲ. ವಾಕ್ಯಕ್ಕೆ ಸಂಬಂಧಿಸಿದಂತೆ ನಾವು ಅನೇಕ ಸಂಗತಿಗಳನ್ನು ಕಲಿತಿರಬಹುದು, ಆದರೆ ಅದು ದೇವರ ವಾಕ್ಯದ ಪ್ರಕಾರ ಆಗಿಲ್ಲದಿರಬಹುದು. ವಾಕ್ಯಕ್ಕೆ ಸಂಬಂಧಿಸಿದಂತೆ ನಮ್ಮ ಜ್ಞಾನವು ಸಂಪ್ರದಾಯದ ಮೇಲೆ ನಿರ್ಮಿಸಲ್ಪಟ್ಟಿರಬಹುದು ಅಥವಾ ಬೇರೊಬ್ಬರಿಂದ ಕಲಿತದ್ದರ ಆಧಾರದ ಮೇಲಾಗಿರಬಹುದು. ಆದರೆ ನಮಗೆ ಕಲಿಸಿದ್ದು ಯಾರೇ ಆಗಿರಬಹುದು, ಅದು ವಾಕ್ಯದಲ್ಲಿ ಇಲ್ಲದಿದ್ದರೆ, ಅದು ತಪ್ಪು. ಇದಕ್ಕೆ ಪ್ರತಿಯಾಗಿ ಒಂದು ಚಿಕ್ಕಮಗು ವಾಕ್ಯದ ಆಧಾರದ ಮೇಲೆ ಪ್ರಸಂಗಿಸಿದರೆ, ಅದು ಸರಿಯಾಗಿದೆ. ರೋಮಾಪುರದವರಿಗೆ 3:4 ಹೇಳುತ್ತದೆ, "ಎಲ್ಲಾ ಮನುಷ್ಯರೂ ಸುಳ್ಳುಗಾರರು."

ದೇವರ ವಾಕ್ಯದ ಪ್ರಕಾರವಲ್ಲದೆ ನಾವು ಏನನ್ನಾದರೂ ಮಾತನಾಡಿದರೆ ನಾವೆಲ್ಲರೂ ಸುಳ್ಳುಗಾರರಾಗಿದ್ದೇವೆ. ದೇವರ ವಾಕ್ಯವು ಸತ್ಯವಾಗಿದೆ ಮತ್ತು ನಮ್ಮ ಅಡಿಪಾಯವಾಗಿದೆ. ಈ ವಾಕ್ಯದ ಮೂಲಕ ನಡೆದಾಗ ಮಾತ್ರ ಯಾವುದು ಸರಿ ಅಥವಾ ತಪ್ಪೆಂದು ನಾವು ಅರ್ಥಮಾಡಿಕೊಳ್ಳಬಹುದು.

ದೇವರ ವಾಕ್ಯವು ನಿಜವಾಗಿದೆ ಮತ್ತು ನಮ್ಮ ಅಡಿಪಾಯವಾಗಿದೆ. ನಾವು ಈ ವಾಕ್ಯದ ಮೂಲಕ ನಡೆದಾಗ ಮಾತ್ರ ಯಾವುದು ಸರಿ ಮತ್ತು ಯಾವುದು ತಪ್ಪೆಂದು ನಾವು ಅರ್ಥಮಾಡಿಕೊಳ್ಳಬಹುದು.

## ಅ) ಸೈತಾನನ ಸಂಪತ್ತಿನಿಂದ ಬಿಡುಗಡೆ ಬೇಕು ಬದಲಿಗೆ ಸೈತಾನನಿಂದಲ್ಲ

ಯೇಸು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ವ್ಯಕ್ತಿಯು ಸೈತಾನನ ಕೆಳಗಿಲ್ಲ ಬದಲಿಗೆ ಸೈತಾನನ ವಿರುದ್ಧವಿದ್ದಾನೆ, ಮತ್ತು ಆ ವ್ಯಕ್ತಿ ಸೈತಾನನ ವಿರುದ್ಧವಾಗಿ ಯುದ್ಧ ಮಾಡುವವನಾಗಿರಬೇಕೆಂದು ನಿರೀಕ್ಷಿಸಲಾಗಿದೆ! ದೇವರ ವಾಕ್ಯವು ಹೇಳುತ್ತದೆ, ನಾವೆಲ್ಲರೂ ರಕ್ಷಣೆಯ ಅನುಭವಕ್ಕೆ ಬಂದಾಗ, ನಾವು ಕತ್ತಲೆಯಿಂದ ಅದ್ಭುತಕರವಾದ ಬೆಳಕಿಗೆ ರೂಪಾಂತರಮಾಡಲ್ಪಟ್ಟಿದ್ದೇವೆ. ದೇವರು ನಮ್ಮ ಆತ್ಮವನ್ನು ಕತ್ತಲೆಯ ಶಕ್ತಿಯಿಂದ ಬಿಡಿಸಿದ್ದಾರೆ, (ಕೊಲೊ 1:13) ಹಾಗಾಗಿ ನಮಗೆ ಸೈತಾನನಿಂದ ಬಿಡುಗಡೆ ಬೇಕಿಲ್ಲ. ಒಮ್ಮೆ ನಾನು ಒಂದು ಸಭೆಯಲ್ಲಿ ಉಪವಾಸ ಪ್ರಾರ್ಥನಾ ಸೇವೆಗೆ ಆಹ್ವಾನಿಸಲ್ಪಟ್ಟೆನು. ಎಲ್ಲರೂ ಪ್ರಾರ್ಥಿಸಲು ಕೇಳಿಕೊಂಡಾಗ, ಅವರೆಲ್ಲರೂ ತಮ್ಮ ಬಿಡುಗಡೆಗಾಗಿ ಪ್ರಾರ್ಥಿಸಿದರು. ಕೊನೆಗೆ ಸಂದೇಶಕ್ಕೆ ಸಮಯ ಬಂದಾಗ, ನಾನು ಅವರನ್ನು ಕೇಳಿದೆ, "ಯಾವದರಿಂದ ನಿಮಗೆ ಬಿಡುಗಡೆ ಬೇಕು?" ಸೈತಾನನು ಅವರನ್ನು ಬಂಧಿಸಿದ್ದಾನೆ ಮತ್ತು ಅದರಿಂದ ಬಿಡುಗಡೆಯ ಅಗತ್ಯವಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಎಲ್ಲಿಯವರೆಗೆ ಈ ರೀತಿಯಾದ ಯೋಚನೆಯನ್ನು ನಾವು ಹೊಂದಿರುತ್ತೇವೋ ಅಲ್ಲಿಯವರೆಗೂ ಈ ಭೂಮಿಯ ಮೇಲೆ ಕ್ರಿಸ್ತನ ಆಳ್ವಿಕೆಯನ್ನು ನೆರವೇರಿಸಲು ನಮಗೆ ಆಗುವುದಿಲ್ಲ. ನಾವು ಸೈತಾನನ ಕೆಳಗಿಲ್ಲ ಎಂಬ ಸತ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಕ್ರಿಸ್ತನು ನಮ್ಮನ್ನು ಸೈತಾನನ ರಾಜ್ಯದಿಂದ ಬಿಡಿಸಿದ್ದಾನೆ. ಯೇಸು ಕ್ರಿಸ್ತನ ರಕ್ತದಿಂದ ಬಿಡಿಸಲ್ಪಟ್ಟ ವ್ಯಕ್ತಿಯು, ಸೈತಾನನ ಕೆಳಗಿಲ್ಲ ಬದಲಿಗೆ ಸೈತಾನನಿಗೆ ವಿರೋಧಿಯಾಗಿದ್ದಾನೆ ಮತ್ತು ಅವನೊಂದಿಗೆ ಯುದ್ಧದಲ್ಲಿ ತೊಡಗಿದ್ದಾನೆ. (ಎಫೆಸ 6:12) ಸೈತಾನನಿಂದ ಬಿಡುಗಡೆ ನಮಗೆ ಬೇಡ.

> ಸೈತಾನನಿಂದ ನಮಗೆ ಬಿಡುಗಡೆ ಬೇಡ ಆದರೆ ನಮ್ಮೊಳಗಿರುವ ಸೈತಾನನ ಸಂಪತ್ತಿನಿಂದ (ಶರೀರದ ಭಾವನೆಗಳು) ಬಿಡುಗಡೆ ಬೇಕು. ನಮ್ಮಲ್ಲಿ ನೆಲೆಸಿರುವ ಶರೀರದ ಆಲೋಚನೆಗಳಿಗೆ ನಾವು ಎಷ್ಟರವರೆಗೆ ಒಳಗಾಗುತ್ತೇವೆ ಎನ್ನುವುದರ ಆಧಾರದ ಮೇಲೆ, ನಮ್ಮ ಮೇಲೆ ಹಸ್ತಕ್ಷೇಪವನ್ನು ಮಾಡಲು ಸೈತಾನನು ಕಾನೂನು ಅಧಿಕಾರವನ್ನು ಹೊಂದಿದ್ದಾನೆ.

**"ದೇವರು ನಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ, ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು." (ಕೊಲೊಸ್ಸೆ 1:13)**

ಇದರ ಅರ್ಥ, ನಾವು ಕ್ರಿಸ್ತನನ್ನು ನಮ್ಮ ಕರ್ತನಾಗಿ ಮತ್ತು ರಕ್ಷಕನಾಗಿ ಅಂಗೀಕರಿಸಿದಾಗ, ದೇವರು ನಮ್ಮನ್ನು ಸೈತಾನನ ಆಳ್ವಿಕೆಯಿಂದ ಬಿಡಿಸಿದನು (ಮೊದಲು ಜರುಗಿರುವಂಥದಾಗಿದೆ) ಮತ್ತು ಅದು ಮಾತ್ರವಲ್ಲ, ಅವನು ನಮ್ಮನ್ನು ದೇವರ ರಾಜ್ಯಕ್ಕೆ ವರ್ಗಾಯಿಸಿದನು.

ನಿಮ್ಮ ಬಿಡುಗಡೆಯು ಮೊದಲೇ ನಡೆದಿದೆ ಹಾಗಾಗಿ ಅದಕ್ಕಾಗಿ ಮತ್ತೊಮ್ಮೆ ಅಳಬೇಡಿರಿ. ನಿಮ್ಮ ಕಾಣದ ಆತ್ಮೀಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ನಮ್ಮನ್ನು ಸೈತಾನನಿಂದ ಬಿಡುಗಡೆ ಮಾಡಿದ ನಂತರ ನಾವು ಸೈತಾನನ ರಾಜ್ಯದಲ್ಲಿ

ನಿಲ್ಲಲು ಕ್ರಿಸ್ತನು ನಮ್ಮನ್ನು ಅನುಮತಿಸಿಲ್ಲ, ನಾವು ಇನ್ನೊಂದು ರಾಜ್ಯಕ್ಕೆ ಅಂದರೆ ಮಗನ ರಾಜ್ಯಕ್ಕೆ ವರ್ಗಾಯಿಸಲ್ಪಟ್ಟಿದ್ದೇವೆ. ನಾವು ಇದನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು, ಭಾರತೀಯ ಮೂಲದ ಖೈದಿ ಪಾಕಿಸ್ತಾನದಲ್ಲಿ ಬಂಧಿಯಾಗಿರುವುದನ್ನು ಕಲ್ಪಿಸಿಕೊಳ್ಳಿ. ಭಾರತೀಯ ಸರ್ಕಾರ, ಸ್ವಲ್ಪ ಪ್ರಭಾವವನ್ನು ಬಳಸಿ, ಖೈದಿಯನ್ನು ಬಿಡಿಸಲು ಸಹಾಯ ಮಾಡುತ್ತದೆ. ಆದರೆ ಪೂರ್ಣಪ್ರಕ್ರಿಯೆಯುದ್ದಕ್ಕೂ ಆ ವ್ಯಕ್ತಿ ನಿದ್ರೆಮಾಡುತ್ತಿದ್ದರೆ ಮತ್ತು ಅವನು ಬಿಡಿಸಲ್ಪಟ್ಟಿದ್ದೇನೆ ಹಾಗೂ ಭಾರತಕ್ಕೆ ವರ್ಗಾಯಿಸಲ್ಪಟ್ಟಿದ್ದೇನೆ ಎಂದು ಅರ್ಥಮಾಡಿಕೊಳ್ಳುವುದಿಲ್ಲ. ಅವನ ಬಿಡುಗಡೆಯ ನಂತರವೂ, ಅವನಿಗೆ ನೀಡಲ್ಪಟ್ಟ ಸ್ವಾತಂತ್ರ್ಯದ ಅರಿವಿಲ್ಲದೇ, ಅವನು ಪಾಕಿಸ್ತಾನದಿಂದ ರಕ್ಷಿಸುವುದಕ್ಕಾಗಿ ಅಥವಾ ಬಿಡುಗಡೆ ಮಾಡಲ್ಪಡುವುದಕ್ಕಾಗಿ ಕೂಗುತ್ತಿರುತ್ತಾನೆ. ಆ ವ್ಯಕ್ತಿ ಕನಿಷ್ಠ ಒಮ್ಮೆಯಾದರೂ ಅವನ ಕಣ್ಣನ್ನು ತೆರೆದಿದ್ದರೆ, ತಾನು ಪಾಕಿಸ್ತಾನದಲ್ಲಿ ಬಂಧಿಯಾಗಿಲ್ಲ ಬದಲಿಗೆ ಭಾರತದಲ್ಲಿದ್ದೇನೆ ಎಂದು ಅರ್ಥಮಾಡಿಕೊಳ್ಳುತಿದ್ದ.

ದೇವರು ನಮ್ಮನ್ನು ಸೈತಾನನ ಬಂಧನದಿಂದ ಬಿಡಿಸಿದ್ದಾನೆ ಎಂಬ ವಾಸ್ತವವನ್ನು ಅರ್ಥಮಾಡಿಕೊಂಡರೆ, ಸೈತಾನನಿಂದ ಬಿಡಿಸಲ್ಪಡುವುದಕ್ಕೆ ನಾವು ಪ್ರಾರ್ಥಿಸುವುದರ ಬದಲಾಗಿ ನಾವು ಈ ರೀತಿಯಾಗಿ ಪ್ರಾರ್ಥಿಸುವುದಕ್ಕೆ ಪ್ರಾರಂಭಿಸುತ್ತೇವೆ, "ದೇವರೇ, ನೀನು ನನ್ನನ್ನು ಸೈತಾನನ ರಾಜ್ಯದಿಂದ ದೇವರ ರಾಜ್ಯಕ್ಕೆ ಸೇರಿಸಿದ್ದರೂ ಯಾಕೆ ಸೈತಾನನು ನನ್ನ ಜೀವಿತದಲ್ಲಿ ಪುನಃ ಹಸ್ತಕ್ಷೇಪ ಮಾಡುತ್ತಾನೆ ಎಂದು ಅರ್ಥಮಾಡಿಕೊಳ್ಳುವುದಕ್ಕೆ ನನಗೆ ಸಹಾಯ ಮಾಡು." ಯೇಸು ಕ್ರಿಸ್ತನನ್ನು ನಮ್ಮ ರಕ್ಷಕನಾಗಿ ಸ್ವೀಕರಿಸಿಕೊಂಡಾಗ,

"ಸೈತಾನನ ಅಧಿಕಾರದಿಂದ ದೇವರ ಅಧಿಕಾರಕ್ಕೆ ನಾವು ವರ್ಗಾಯಿಸಲ್ಪಟ್ಟಿದ್ದೇವೆ." (ಅಪೋ 26:18)

**"ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರಿಗಿಕೊಂಡು ನನ್ನಲ್ಲಿ ನಂಬಿಕೆಯಿಡುವುದರಿಂದ ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ." (ಅ.ಕೃ 26:18)**

ನಾವು ಅರ್ಥಮಾಡಿಕೊಳ್ಳಬೇಕಾದ ಒಂದು ಸಂಗತಿಯಿದೆ, ಸೈತಾನನ ಹಿಡಿತದಲ್ಲಿರುವಂಥ ವ್ಯಕ್ತಿ ಸೈತಾನನ ಬಂಧನದಿಂದ ಇನ್ನೊಬ್ಬ ವ್ಯಕ್ತಿಯನ್ನು ಬಿಡಿಸಲು ಸಾಧ್ಯವಿಲ್ಲ. ಈಗ ಒಂದು ಪ್ರಶ್ನೆ ಉದ್ಭವಿಸಬಹುದು, ಹಾಗಾದರೆ ಯಾಕೆ ಸೈತಾನನು ಈ ತಡೆಗಳನ್ನು ತರುತ್ತಿದ್ದಾನೆ? ಪ್ರಿಯ ಸಹೋದರ ಸಹೋದರಿ, ನಮಗೆ ಸೈತಾನನಿಂದ ಬಿಡುಗಡೆ ಬೇಡ ಆದರೆ ಸೈತಾನನು ನಮ್ಮೊಳಗೆ ಇಟ್ಟಿರುವ ಸಂಪತ್ತಿನಿಂದ ನಮಗೆ ಬಿಡುಗಡೆ ಬೇಕು. ನಮ್ಮೊಳಗೆ ಸೈತಾನನ ಸಂಪತ್ತನ್ನು ಬಳಸಿಕೊಂಡು ನಾವು ಎಷ್ಟು ಕಾರ್ಯಮಾಡುತ್ತೇವೆ ಎನ್ನುವುದರ ಆಧಾರದ ಮೇಲೆ, ನಮ್ಮಲ್ಲಿ ಹಸ್ತಕ್ಷೇಪವನ್ನು ಮಾಡಲು ಸೈತಾನನು ಕಾನೂನು ಅಧಿಕಾರವನ್ನು ಹೊಂದಿದ್ದಾನೆ. ಹಾಗಾದರೆ, ನಮಗೆ ಬಿಡುಗಡೆ ಬೇಕಾಗಿರುವುದು ಸೈತಾನನಿಂದಲ್ಲ ಬದಲಿಗೆ ಅವನು ನಮ್ಮೊಳಗೆ ಇಟ್ಟಿರುವ, ಅವನ ಸಂಪತ್ತಿನಿಂದಾಗಿದೆ. (ನಮ್ಮ ಜೀವಿತದಲ್ಲಿ ಶೋಧನೆಯನ್ನುಂಟುಮಾಡುವ ಶರೀರದ ಆಲೋಚನೆಗಳಿಂದ).

ಪ್ರಿಯ ದೇವರ ಮಗುವೇ, ಕೊಕಾ ಕೋಲಾ ಕಂಪನಿಯು ನಮ್ಮ ಮೇಲೆ ಯಾವುದೇ ಅಧಿಕಾರವನ್ನು ಹೊಂದಿಲ್ಲ. ಆದರೆ ಅವರು ಕೊಕಾ ಕೋಲಾವನ್ನು ಸಿದ್ಧಮಾಡಲು ಹಕ್ಕುಪತ್ರ ಹೊಂದಿರುವಾಗ ಅವರ ಸೂತ್ರವನ್ನು ನಾವು ತೆಗೆದುಕೊಂಡು ಮತ್ತು ಬಳಸಿಕೊಂಡು ಕೋಕಾ ಕೋಲಾವನ್ನು ಮಾಡಿದರೆ, ಅವರು (ಕಂಪನಿ) ನಮ್ಮ ಮೇಲೆ ಕಾನೂನು ಅಧಿಕಾರವನ್ನು ಹೊಂದುತ್ತಾರೆ. ಅದರಂತೆಯೇ, ಸೈತಾನನಿಂದ ತುಂಬಿಸಲ್ಪಟ್ಟಿರುವ ಶರೀರ ಭಾವನೆಗಳನ್ನು ಬಳಸಲು ನಾವು ಪ್ರಾರಂಭಿಸಿದಾಗ, ನಮ್ಮ ತಲೆಯು ಅವನ ತೋಳುಗಳ ಕೆಳಗಿರುತ್ತದೆ. ಆಗ ನಮಗೆ ಬಿಡುಗಡೆಯು ಅಗತ್ಯವಿದೆ.

**"ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವುದು ದೇವರಿಗೆ ಶತ್ರುತ್ವವು." (ರೋಮ 8:7)**

**"ವ್ಯಭಿಚಾರಿಗಳು ನೀವು; ಇಹಲೋಕ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ." (ಯಾಕೋಬ 4:4)**

ನಾವು ದೇವರ ವೈರಿಗಳಾದರೆ, ಅದರ ಅರ್ಥ ನಾವು ಸೈತಾನನೊಂದಿಗೆ ಸ್ನೇಹಿತರು ಮತ್ತು ದೇವರು ಅಂತಹ ವ್ಯಕ್ತಿಗಳನ್ನು ವ್ಯಭಿಚಾರಿಗಳು ಎಂದು ಕರೆಯುತ್ತಾನೆ. ಈಗ ನೀವು ಈ ಸತ್ಯವನ್ನು ಅರ್ಥಮಾಡಿಕೊಂಡಾಗ ಮಹಾ ಬಿಡುಗಡೆಯನ್ನು ಅನುಭವಿಸಲು ನೀವು ಪ್ರಾರಂಬಿಸಿರಬಹುದು. (ಯೋಹಾನ 8:32) "ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವುದು." ವಿಶ್ವಾಸಿಗಳು ತಮ್ಮನ್ನು ಆಶೀರ್ವದಿಸುವಂತೆ ದೇವರನ್ನು ಕೇಳುವ ಯಾವ ಅಗತ್ಯವಿಲ್ಲ.

**"ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ." (ಎಫೆ 1:3)** ಅದೇ ದೇವರು ನಮ್ಮನ್ನು ಈಗಾಗಲೇ ಆಶೀರ್ವದಿಸಿದ್ದಾನೆ. ಅವನು ನಮ್ಮನ್ನು ಆಶೀರ್ವದಿಸಿದ್ದರೆ, ಈ ಆತ್ಮೀಕ ಆಶೀರ್ವಾದವನ್ನು ಲೋಕಕ್ಕೆ ಬಿಡುಗಡೆ ಮಾಡುವ ಜ್ಞಾನವನ್ನು ಪಡೆಯಲು ನಾವು ಪ್ರಾರ್ಥಿಸಬೇಕು.

## ಆ) ದೇವರ ರಾಜ್ಯದ ಸಂಪತ್ತು ಮತ್ತು ವಿಮೋಚಿಸಲ್ಪಟ್ಟ ವ್ಯಕ್ತಿಯ ಒಳಗೆ ಸೈತಾನನ ರಾಜ್ಯ

ಭೌತಿಕ ಪ್ರಪಂಚಕ್ಕಿಂತ ಆತ್ಮೀಕ ಪ್ರಪಂಚವು ಹೆಚ್ಚು ನೈಜವಾಗಿದೆ. ಭೌತಿಕ ಪ್ರಪಂಚದಲ್ಲಿ ಎಲ್ಲ ನಿಯಮಗಳು ಆತ್ಮೀಕ ಪ್ರಪಂಚದ ನೆರಳು ಮಾತ್ರವಾಗಿದೆ. ಭೂಮಿಯು ಪರಲೋಕದ ನೆರಳು ಮಾತ್ರ ಎಂದು ನಾವು ಹೇಳಬಹುದು. ಲೋಕದಲ್ಲಿನ ಗುಡಾರವು ಪರಲೋಕದಲ್ಲಿನ ನೈಜ ಆಲಯದ ಪ್ರತಿರೂಪ ಎಂದು ಹೇಳಲಾಗಿದೆ. ನಾವು ಇಬ್ರಿಯ 9:24ನ್ನು ಓದಿದಾಗ ಇದನ್ನು ಅರ್ಥಮಾಡಿಕೊಳ್ಳುತ್ತೇವೆ. **"ಯಾಕಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟಿದ್ದಾಗಿಯೂ ಇರುವ**

**ಆಲಯದಲ್ಲಿ ಪ್ರವೇಶಿಸದೆ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವುದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು." (ಇಬ್ರಿ 9:24)**

ಪ್ರಿಯರೇ, ಆಶೀರ್ವಾದವು ನಮ್ಮ ಮೂಲಕ ಬಹಿರಂಗವಾಗಬೇಕೆಂದು ನಾವು ಬಯಸಿದರೆ, ನಾವು ಬೆಲೆಯನ್ನು ಪಾವತಿಸಬೇಕು. ಆತ್ಮೀಕ ಲೋಕದಲ್ಲಿ ಮತ್ತು ಭೌತಿಕ ಲೋಕದಲ್ಲಿ ಬೆಲೆಯನ್ನು ಪಾವತಿಸದೇ ನಾವು ಏನನ್ನೂ ಪಡೆಯುವುದಿಲ್ಲ. ನಾವು ಯೋಚಿಸಬೇಕು, ಈ ರಕ್ಷಣೆಯನ್ನು ಪಡೆಯುವುದಕ್ಕೆ ನಾವು ಏನನ್ನು ಪಾವತಿಸಿದ್ದೇವೆ? ದೇವರ ವಾಕ್ಯವು ಹೇಳುತ್ತದೆ, ನಾವು ರಕ್ಷಣೆಯನ್ನು ಉಚಿತವಾಗಿ ಪಡೆದಿದ್ದೇವೆ ಆದರೆ ನಾವು ಯೋಚಿಸುವಂತೆ, ರಕ್ಷಣೆಯು ಉಚಿತವಲ್ಲ, ಬೆಲೆಯನ್ನು ಪಾವತಿಸಿ ಅದನ್ನು ಕೊಂಡುಕೊಳ್ಳಲಾಗಿದೆ. ಕ್ರಿಸ್ತನು ಅದರ ಬೆಲೆಯನ್ನು ಎರಡು ಸಾವಿರ ವರ್ಷಗಳ ಹಿಂದೆಯೇ ಪಾವತಿಸಿದನು ಆದಕಾರಣ ನಾವು ಈ ರಕ್ಷಣೆಯನ್ನು ಉಚಿತವಾಗಿ ಪಡೆಯುತ್ತೇವೆ.

ಕ್ರಿಸ್ತನು ಹೇಳುತ್ತಾನೆ, ನೀವು ಕೇಳುವುದಕ್ಕಿಂತಲೂ ಅಥವಾ ಊಹಿಸುವುದಕ್ಕಿಂತಲೂ ಹೆಚ್ಚಾಗಿ ನಾನು ನಿಮಗೆ ಕೊಡುತ್ತೇನೆ. ಆದರೆ, ಇದನ್ನು ನಾವು ನಮ್ಮ ಪ್ರಾಣದಲ್ಲಿರುವ ದೇವರ ಸಂಪತ್ತಿಗೆ ತಕ್ಕಂತೆ ಪಡೆಯುತ್ತೇವೆ. ದೇವರ ಸಂಪತ್ತು ನಮ್ಮಲ್ಲಿ ಎಷ್ಟಿದೆ ಮತ್ತು ನಾವು ಎಷ್ಟು ಕಾರ್ಯಮಾಡುತ್ತೇವೆ ಎನ್ನುವುದರ ಮೇಲೆ, ದೇವರು ನಮ್ಮಲ್ಲಿ ಕಾರ್ಯಮಾಡಲು ಸಾಧ್ಯ. ದೇವರ ಸಂಪತ್ತನ್ನು ನಮ್ಮ ಪ್ರಾಣದಲ್ಲಿ ತುಂಬಿಸುವ ಸಲುವಾಗಿ, ನಾವು ಪ್ರಾರ್ಥಿಸುವುದು ಮಾತ್ರವಲ್ಲ ಬದಲಿಗೆ ದೇವರ ಸಂಪತ್ತಿನಿಂದ ತುಂಬಿಸಲ್ಪಡಲು, ನಮ್ಮೊಳಗೆ ತುಂಬಿರುವಂಥದ್ದನ್ನು (ಲೋಕದ ಪ್ರೀತಿ ಮತ್ತು ಶರೀರದ ಭಾವನೆಗಳು) ನಾವು ಖಾಲಿಮಾಡಬೇಕು. ಉದಾಹರಣೆಗೆ, ನಾವು ಒಂದು ಮಡಿಕೆಯನ್ನು ಮಣ್ಣು ಮತ್ತು ಕಲ್ಲಿನಿಂದ ತುಂಬಿಸಿಟ್ಟಿದ್ದರೆ ಮತ್ತು ಅದನ್ನು ಇನ್ನೊಬ್ಬ ವ್ಯಕ್ತಿಗೆ ತುಂಬಿಸಲು ಹೇಳಿದರೆ, ಅವನು ಜಾಣ ವ್ಯಕ್ತಿಯಾಗಿದ್ದರೆ ಮೊದಲು ಆ ಮಡಿಕೆಯನ್ನು ಖಾಲಿಮಾಡುವಂತೆ ಹೇಳುತ್ತಾನೆ. ಎಷ್ಟರ ಮಟ್ಟಿಗೆ ಮಡಿಕೆ ಖಾಲಿಯಾಗುತ್ತದೋ ಅಷ್ಟರವರೆಗೆ ಅದನ್ನು ತುಂಬಿಸಲು ಸಾಧ್ಯ.

ಗಲಾತ್ಯದವರಿಗೆ 5:22-23ರಲ್ಲಿ ದೇವರ ಮಕ್ಕಳಾಗಿರುವ ನಮ್ಮೊಳಗಿರುವ ದೇವರ ಸಂಪತ್ತಿನ ಕುರಿತು ಸೂಚಿಸಲಾಗಿದೆ. ಪರಿಶುದ್ಧಾತ್ಮನ ಫಲ, ನಮ್ಮೊಳಗಿರುವಂತಹ ಪ್ರೀತಿ, ಮತ್ತು ಇತರೆ ಫಲಗಳಾದ - ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ (ಅಂದರೆ ಆತ್ಮದ ಭಾವನೆಗಳು) ಇದಕ್ಕೆ ವಿರುದ್ಧವಾಗಿ, ಸೈತಾನನ ಸಂಪತ್ತು ಶರೀರದಲ್ಲಿರುವ ದುಷ್ಟತ್ವವಾಗಿದೆ. (ರೋಮ 7:18-20)

**"ನನ್ನಲ್ಲಿ ಅಂದರೆ ನನ್ನ ಶರೀರಾಧೀನಸ್ವಭಾವದಲ್ಲಿ ಒಳ್ಳೇದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ. ಒಳ್ಳೇದನ್ನು ಮಾಡುವುದಕ್ಕೆ ನನಗೇನೋ ಮನಸ್ಸುಂಟು; ಆದರೆ ಅದನ್ನು ಮಾಡುವದು ನನ್ನಿಂದಾಗದು. ನಾನು ಮೆಚ್ಚುವ ಒಳ್ಳೇ ಕಾರ್ಯವನ್ನು ಮಾಡದೆ ಮೆಚ್ಚ ದಿರುವ ಕೆಟ್ಟ ಕಾರ್ಯವನ್ನೇ ಮಾಡುವವನಾಗಿದ್ದೇನೆ. ಮಾಡಬಾರದೆನ್ನುವ ಕೆಲಸವನ್ನು ನಾನು ಮಾಡಿದರೆ ಅದನ್ನು ಮಾಡಿದವನು ಇನ್ನು ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡಿತು." (ರೋಮ 7:18-20)**

ಅಪೋಸ್ತಲ ಪೌಲನು ತಾನು ತನ್ನ ಶರೀರದಲ್ಲಿ ಯಾವುದೇ ಒಳ್ಳೇದು ನೆಲೆಸಿರುವುದನ್ನು ಕಾಣಲಿಲ್ಲ ಎಂದು ಹೇಳುತ್ತಾನೆ. ನಾವು ಆತ್ಮದ ಫಲದಲ್ಲಿ ಕಾರ್ಯ ಮಾಡಿದರೆ, ದೇವರು ನಮ್ಮ ಮೂಲಕ ಕಾರ್ಯಮಾಡಬಹುದು. ನಾವು ಶರೀರದ ಭಾವನೆ ಗಳನ್ನು ಬಳಸಿ ಕಾರ್ಯಮಾಡಿದರೆ, ಸೈತಾನನು ನಮ್ಮ ಮೂಲಕ ಕಾರ್ಯಮಾಡುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರ ರಾಜ್ಯವು ನಮ್ಮ ಮೂಲಕ ಕಾರ್ಯಮಾಡಬೇಕಾ? ಅಥವಾ ಸೈತಾನನ ರಾಜ್ಯ ನಮ್ಮ ಮೂಲಕ ಕಾರ್ಯಮಾಡಬೇಕಾ? ಎಂದು ನಾವು ನಿರ್ಧರಿಸಬೇಕು.

ವಿಮೋಚಿಸಲ್ಪಟ್ಟಂತಹ ವ್ಯಕ್ತಿಯು ಅವನೊಳಗೆ ಎರಡು ರೀತಿಯ ಸಂಪತ್ತನ್ನು ಹೊಂದಿರುತ್ತಾನೆ – ಒಂದು ದೇವರ ರಾಜ್ಯದಿಂದ, ಮತ್ತೊಂದು ಸೈತಾನನ ರಾಜ್ಯದಿಂದ. ಬಳಕೆಯಲ್ಲಿ ನಮ್ಮೊಳಗೆ ಹೆಚ್ಚಿರುವ ಸಂಪತ್ತಿನ ಅಥವಾ ಕಾರ್ಯಮಾಡಲು ನಾವು ಹೆಚ್ಚು ಬಳಸುವ ಸಂಪತ್ತಿನ ಆಧಾರದ ಮೇಲೆ, ನಮ್ಮ ಮೂಲಕ ದೇವರ ರಾಜ್ಯ ಅಥವಾ ಸೈತಾನನ ರಾಜ್ಯ ಕಾರ್ಯಮಾಡುತ್ತವೆ.

ನಾವು ಆತ್ಮದ ಫಲಗಳನ್ನು ಉಪಯೋಗಿಸಿಕೊಂಡು ಕಾರ್ಯಮಾಡಿದರೆ, ದೇವರಿಗೆ ನಮ್ಮ ಮೂಲಕ ಕಾರ್ಯ ಮಾಡಲು ಆಗುತ್ತದೆ. ಆದರೆ ಶರೀರದ ಭಾವನೆಗಳ ಮೂಲಕ ನಾವು ಕಾರ್ಯಮಾಡಿದರೆ, ಸೈತಾನನು ನಮ್ಮ ಮೂಲಕ ಕಾರ್ಯಮಾಡಲು ನಾವು ಅನುಮತಿಸುತ್ತೇವೆ.

## ೯) ಹೇಗೆ ದೇವರು ನಮ್ಮ ಮೂಲಕ ದೇವರ ರಾಜ್ಯದ ಆಶೀರ್ವಾದವನ್ನು ಬಿಡುಗಡೆ ಮಾಡುತ್ತಾರೆ?

**“ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ.” (ಎಫೆ 3:20)**

**“ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು.” (ಫಿಲಿ 4:19)**

ದೇವರ ವಾಕ್ಯವು ಹೇಳುತ್ತದೆ, ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಹೆಚ್ಚಾಗಿ ಮಾಡಲು ಕ್ರಿಸ್ತನಿಗೆ ಸಾಧ್ಯ (ಎಫೆ 3:20), ಆದರೆ ದೇವರು ತನ್ನ ಐಶ್ವರ್ಯಕ್ಕೆ ತಕ್ಕಹಾಗೆ ನಮ್ಮನ್ನು ತುಂಬಿಸಲು ನಾವು ಪ್ರಾರ್ಥಿಸಿದರೆ, ಅದನ್ನು ತಕ್ಷಣವೇ ತುಂಬಲಾಗುವುದಿಲ್ಲ. ಬದಲಿಗೆ ದೇವರು ಹೇಳುತ್ತಾನೆ, “ಮಗನೇ, ನಾನು ನಿನ್ನನ್ನು ತುಂಬಿಸಬೇಕಾದರೆ ನೀನು ನಿನ್ನೊಳಗಿರುವುದನ್ನು ಮೊದಲು ಖಾಲಿಮಾಡಬೇಕು.” ದೇವರು ನಮ್ಮೊಳಗೆ ದೊಡ್ಡ ನಿಧಿಯನ್ನು ಇಟ್ಟಿದ್ದಾರೆ ಆದರೆ ಅದನ್ನು ಹೇಗೆ ಬಿಡುಗಡೆ ಮಾಡಬೇಕೆಂದು ನಮಗೆ ಗೊತ್ತಿಲ್ಲ, ಸೈತಾನನು ನಮ್ಮೊಳಗೆ ಇಟ್ಟಿರುವಂಥದ್ದು ನಮ್ಮನ್ನು ಬಂಧಿಸಿದೆ ಮತ್ತು ನಿಯಂತ್ರಿಸುತ್ತಿದೆ ಎಂಬ ವಾಸ್ತವವನ್ನು ನಾವು ಅರಿತಿಲ್ಲ ಹಾಗಾಗಿ ಈ ನಿಧಿಯನ್ನು ಹೊರತರಲಾಗುತ್ತಿಲ್ಲ. ದೇವರ ವಾಕ್ಯದ ಪ್ರಕಾರ, ಈ ಮಣ್ಣಿನ ಪಾತ್ರೆಗಳಿಗೆ

ನೀಡಲಾಗಿರುವ ದೊಡ್ಡ ನಿಧಿಯನ್ನು ಮೊದಲು ನಾವು ಗುರುತಿಸಬೇಕು, ನಂತರವೇ ನಾವು ವೈರಿಯನ್ನು ಜಯಿಸಬಹುದು !

"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು." (2 ಕೊರಿ 4:7)

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನಾನು ನಿನ್ನ ವಾಕ್ಯದ ಮೂಲಕ ನಡೆಯುವಂತೆ ಮತ್ತು ಯಾವುದು ಸರಿ ಹಾಗೂ ಯಾವುದು ತಪ್ಪು ಎಂದು ತಿಳಿದುಕೊಳ್ಳುವಂತೆ ಸಹಾಯಮಾಡು. ನನ್ನ ಮೇಲೆ ಸೈತಾನನು ಯಾವುದೇ ಕಾನೂನೂ ಅಧಿಕಾರವನ್ನು ಹೊಂದಿರದ ರೀತಿಯಲ್ಲಿ, ನನ್ನೊಳಗಿರುವ ಸೈತಾನನ ಸಂಪತ್ತನ್ನು ತೆಗೆದುಹಾಕಲು ನನಗೆ ಕೃಪೆಮಾಡು. ಇದರಿಂದ ನನ್ನ ಮೂಲಕ ನೀನು ಕಾರ್ಯಮಾಡುವಂತೆ ನನ್ನನ್ನು ಒಪ್ಪಿಸುತ್ತೇನೆ. ಕರ್ತನೇ, ನೀನು ನನ್ನ ರಕ್ಷಣೆಗೆ ಬೆಲೆಯನ್ನು ಕಟ್ಟಿದ್ದೀ ಮತ್ತು ಅದು ಉಚಿತವಾಗಿಲ್ಲ ಎಂದು ನಾನು ಅರಿತುಕೊಂಡಿದ್ದೇನೆ. ಮತ್ತೊಮ್ಮೆ ನನ್ನನ್ನು ನಾನು ನಿನಗೆ ಒಪ್ಪಿಸಿಕೊಡುತ್ತೇನೆ. ಬೆಳೆಯಲು ಸಹಾಯ ಮಾಡು... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ದೇವರ ವಾಕ್ಯವು ಸತ್ಯವಾಗಿದೆ ಮತ್ತು ನಮ್ಮ ಅಡಿಪಾಯವಾಗಿದೆ. ಈ ವಾಕ್ಯದ ಮೂಲಕ ನಡೆದಾಗ ಮಾತ್ರ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ನಾವು ಅರ್ಥಮಾಡಿಕೊಳ್ಳಬಹುದು.
2. ಸೈತಾನನಿಂದ ನಮಗೆ ಬಿಡುಗಡೆ ಬೇಡ ಆದರೆ ನಮ್ಮೊಳಗಿರುವ ಸೈತಾನನ ಸಂಪತ್ತಿನಿಂದ (ಶೋಧನೆಯನ್ನುಂಟುಮಾಡುವ ಶರೀರದ ಭಾವನೆಗಳು) ಬಿಡುಗಡೆ ಬೇಕು. ನಮ್ಮಲ್ಲಿ ನೆಲೆಸಿರುವ ಶರೀರದ ಆಲೋಚನೆಗಳಿಗೆ ನಾವು ಎಷ್ಟರವರೆಗೆ ಒಳಗಾಗುತ್ತೇವೆ ಎನ್ನುವುದರ ಆಧಾರದ ಮೇಲೆ, ನಮ್ಮ ಮೇಲೆ ಹಸ್ತಕ್ಷೇಪವನ್ನು ಮಾಡಲು ಸೈತಾನನು ಕಾನೂನು ಅಧಿಕಾರವನ್ನು ಹೊಂದಿದ್ದಾನೆ.
3. ಆತ್ಮೀಕ ಪ್ರಪಂಚವು ಭೌತಿಕ ಪ್ರಪಂಚಕ್ಕಿಂತ ಹೆಚ್ಚು ವಾಸ್ತವವಾಗಿದೆ. ಭೌತಿಕ ಪ್ರಪಂಚದ ಎಲ್ಲ ನಿಯಮಗಳು ಆತ್ಮೀಕ ಪ್ರಪಂಚದ ಪ್ರತಿಬಿಂಬ ಅಥವಾ ನೆರಳು ಮಾತ್ರವಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಭೂಮಿಯು ಪರಲೋಕದ ನೆರಳು ಮಾತ್ರವಾಗಿದೆ.
4. ಆತ್ಮದ ಫಲವನ್ನು ಉಪಯೋಗಿಸಿಕೊಂಡು ನಾವು ಕಾರ್ಯಮಾಡಿದರೆ, ನಮ್ಮ ಮೂಲಕ ಕಾರ್ಯಮಾಡಲು ದೇವರಿಗೆ ಸಾಧ್ಯವಾಗುತ್ತದೆ. ಆದರೆ ಶರೀರದ ಭಾವನೆಗಳ ಮೂಲಕ ನಾವು ಕಾರ್ಯಮಾಡಿದರೆ ನಮ್ಮ ಮೂಲಕ ಕಾರ್ಯಮಾಡಲು ಸೈತಾನನಿಗೆ ಅನುಮತಿಸುತ್ತೇವೆ.

5. ನಾವು ದೇವರ ಸಂಪತ್ತಿನಿಂದ ತುಂಬಿಸಲ್ಪಡಬೇಕಾದರೆ, ಮೊದಲು ನಾವು ನಮ್ಮೊಳಗಿರುವಂಥದ್ದನ್ನು ಹೊರತೆಗೆಯಬೇಕು. ದೇವರು ನಮ್ಮೊಳಗೇ ದೊಡ್ಡ ನಿಧಿಯನ್ನು ಇಟ್ಟಿದ್ದಾರೆ ಆದರೆ ಅದನ್ನು ಹೇಗೆ ಬಿಡುಗಡೆ ಮಾಡಬೇಕೆಂದು ನಮಗೆ ಗೊತ್ತಿಲ್ಲ.
6. ರಕ್ಷಣೆಯು ನಮಗೆ ಉಚಿತವಾಗಿ ನೀಡಲ್ಪಟ್ಟಿದೆ ಆದರೆ ನಾವು ಯೋಚಿಸುವಂತೆ, ರಕ್ಷಣೆಯು ಉಚಿತವಲ್ಲ; ಅದನ್ನು ಯೇಸು ಕ್ರಿಸ್ತನು ಬೆಲೆ ಪಾವತಿಸಿ ಕೊಂಡುಕೊಂಡಿದ್ದಾನೆ.



*ಅಧ್ಯಾಯ 9*

# ವಿಶ್ವಾಸಿಗಳಲ್ಲಿ ಸೈತಾನನ ಸಿಡಿಮದ್ದು

*"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವುದಾದರೆ ಜೀವಿಸುವಿರಿ."*
*(ರೋಮ 8:13)*

ಒಂದು ನಿರ್ದಿಷ್ಟ ಸ್ಥಳದಲ್ಲಿ ಒಂದು ಸಿಡಿಮದ್ದು ಸಿಡಿದಾಗ, ಅದು ಸಿಡಿದ ವ್ಯಾಪ್ತಿಯಲ್ಲಿ ತಕ್ಷಣವೇ ಜೀವಕ್ಕೆ ಮತ್ತು ಸ್ವತ್ತಿಗೆ ಅಪಾರ ಹಾಗೂ ಬದಲಾಯಿಸಲಾಗದ ಹಾನಿಯನ್ನುಂಟುಮಾಡುತ್ತದೆ. ಒಂದು ಸಿಡಿಮದ್ದು ಉಂಟುಮಾಡುವ ಪರಿಣಾಮದ ಬಗ್ಗೆ ನಾವೆಲ್ಲರೂ ಅರಿತಿದ್ದೇವೆ, ಆದರೆ ವಿಶ್ವಾಸಿಗಳಾಗಿ ನಮ್ಮೊಳಗೆ ಸಿಡಿಯಲು ಕಾಯುತ್ತಿರುವ ಒಂದು ಸಿಡಿಮದ್ದನ್ನು ಹೊಂದಿದ್ದೇವೆ ಎಂದು ನಾವು ಅರಿತಿಲ್ಲ. ಹೌದು, ಇದು ನಿಜ ಮತ್ತು ಈ ಸಿಡಿಮದ್ದು ನಮ್ಮ ಬದ್ದ ವೈರಿ ಸೈತಾನನಿಗೆ ಹೊರತು ಬೇರೆಯಾರಿಗೂ ಸಂಬಂಧಿಸಿದ್ದಲ್ಲ. ಆ ಸಿಡಿಮದ್ದು ಯಾವುದು ಎಂದು ನಾವು ಆಶ್ಚರ್ಯಗೊಂಡಿರಬಹುದು. ಅದು ಪ್ರತಿಯೊಬ್ಬ ವಿಶ್ವಾಸಿಯೊಳಗಿರುವ ಮತ್ತು ಮರೆಯಾಗಿರುವ ಬಲಹೀನತೆ ಹಾಗೂ ಅದನ್ನು ಗುರುತಿಸದೆ ಉಪಯೋಗಿಸಿದರೆ, ಅದು ಆತ್ಮೀಕ ಸಾವನ್ನು ಉಂಟುಮಾಡುತ್ತಾ ಸ್ಫೋಟಗೊಳ್ಳುತ್ತದೆ. ಪ್ರತೀ ವಿಶ್ವಾಸಿ, ವಿಶೇಷವಾಗಿ ದೇವರ ಸೇವಕರು ಈ ಮುಖ್ಯವಾದ ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ಈ ಬಲಹೀನತೆ ಅಥವಾ ಸ್ಪಷ್ಟವಾಗಿ ಹೇಳುವುದಾದರೆ, ನಮ್ಮ ಶಾರೀರಿಕ ಭಾವನೆಗಳು ಮತ್ತು ಬಯಕೆಗಳು ಸೈತಾನನು ವಿಶ್ವಾಸಿಗಳಲ್ಲಿ ಇಟ್ಟಿರುವ ಸಿಡಿಮದ್ದುಗಳಾಗಿದೆ. ಮತ್ತು ಅವನು (ಸೈತಾನ) ಅದನ್ನು ತನ್ನ ಇಷ್ಟದಂತೆ ಪ್ರಚೋದಿಸಲು ಸಾಧ್ಯ.

**"ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧಮಾಡುವವರಲ್ಲ, ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂತವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು." (2 ಕೊರಿ 10:3-5)**

## ಅ) ಹೇಗೆ ಶರೀರದ ಭಾವನೆಗಳು ಬಂದವು?

ಶರೀರಕ್ಕೆ ಎರಡು ವ್ಯಾಖ್ಯಾನಗಳಿವೆ.

1. ಶರೀರ – ಭೌತಿಕ ವ್ಯಾಖ್ಯಾನ – ಮಾಂಸ ಮತ್ತು ರಕ್ತ.

2. ಶರೀರ – ಆತ್ಮೀಕ ವ್ಯಾಖ್ಯಾನ – ದೇವರ ವಾಕ್ಯದ ವಿರುದ್ಧವಾಗಿ ಕಾರ್ಯಮಾಡುವ, ನಮ್ಮಲ್ಲಿನ ಭಾವನೆಗಳ ಗುಂಪು.

ಶರೀರದ ಭಾವನೆಯು ಮನುಷ್ಯರಾಗಿರುವ ನಮ್ಮೊಳಗೆ ನಮ್ಮ ಯಾವುದೇ ಪ್ರಸ್ತುತ ಕಾರ್ಯದಿಂದ ಬರಲಿಲ್ಲ ಅಥವಾ ಅದನ್ನು ದೇವರು ನೆಡಲಿಲ್ಲ. ಹಾಗಾದರೆ ಈ ಶರೀರದ ಭಾವನೆಗಳು ಮನುಷ್ಯನೊಳಗೆ ಹೇಗೆ ಬಂದವು?

ಉತ್ತರವು, 'ಸೈತಾನನ ಮೂಲಕವಾಗಿದೆ.' ಆದಾಮನು ಪಾಪಮಾಡಿದಾಗ ಅವನು ಪಡೆದುಕೊಂಡ ಅದೇ ಅಧಿಕಾರವನ್ನು ಉಪಯೋಗಿಸಿ, ಸೈತಾನನು ಮನುಷ್ಯನ ಮನಸ್ಸನ್ನು ಕತ್ತಲುಗೊಳಿಸಿದ್ದಾನೆ ಮತ್ತು ಮನುಷ್ಯನ ಆತ್ಮ ಹಾಗು ಶರೀರವನ್ನು ಆಕ್ರಮಿಸಿಕೊಂಡಿದ್ದಾನೆ.

## ಆ) ಮನಸ್ಸನ್ನು ಕುರುಡುಮಾಡುವ ಭಾವನೆಗಳು

ಸಣ್ಣ ಮಕ್ಕಳು ಕಣ್ಣಾಮುಚ್ಚಾಲೆಯನ್ನು ಆಡುವಾಗ ಅವರ ಕಣ್ಣುಗಳನ್ನು ಮುಚ್ಚಲು ಒಂದು ಬಟ್ಟೆಯನ್ನು ಬಳಸುವುದನ್ನು ನೀವು ನೋಡಿರಬಹುದು, ಪದೇಪದೇ ಅವರು ತಮ್ಮ ದಾರಿಯನ್ನು ಕಳೆದುಕೊಳ್ಳುತ್ತಾರೆ ಮತ್ತು ಬೀಳುತ್ತಾರೆ. ಅದೇ ರೀತಿಯಲ್ಲಿ ಮನುಷ್ಯನನ್ನು ಬೀಳಿಸುವ ಸಲುವಾಗಿ, ಸೈತಾನನು ಶರೀರದ ಭಾವನೆಗಳಿಂದ ಮನುಷ್ಯನ ಮನಸ್ಸಿನ ಕಣ್ಣುಗಳನ್ನು ಮುಚ್ಚಿದ್ದಾನೆ.

**"ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು." (2 ಕೊರಿ 4:4)**

ಮನುಷ್ಯನ ಮನಸ್ಸನ್ನು ಕುರುಡುಮಾಡಲು ಮತ್ತು ಮನುಕುಲವನ್ನು ಎಂದೆಂದಿಗೂ ನಾಶಮಾಡುವ ಸಲುವಾಗಿ ಆದಾಮನೊಳಗೆ ಸೈತಾನನು ಇಟ್ಟದ್ದು ಶರೀರದ ಭಾವಗಳ ಆಲೋಚನೆಗಳಾಗಿದೆ. ಇದು ನಮಗೆ ಹರಡಿದೆ (ಆದಾಮನ ಸಂತತಿ). ಶರೀರಭಾವವು ದೇವರ ವಾಕ್ಯಕ್ಕೆ ವಿರುದ್ಧವಾಗಿ, ಇಡೀ ಮನುಕುಲವನ್ನು ನಾಶಮಾಡುವ ಸಲುವಾಗಿ ಆದಾಮನೊಳಗೆ ಇಡಲ್ಪಟ್ಟ ಭಾವನೆಗಳ (ಪರಿವಿಡಿ ಅಥವಾ ವಿಷ) ಗುಂಪು. ಶರೀರಭಾವವು ಮನುಕುಲಕ್ಕೆ ಒಂದು ದೌರ್ಬಲ್ಯವಾಗಿದೆ. ಆದುದರಿಂದಲೇ ದೇವರ ವಾಕ್ಯವು ಹೇಳುತ್ತದೆ; "ಶರೀರಾಧೀನ ಸ್ವಭಾವದ ನಿಮಿತ್ತ, ಧರ್ಮಶಾಸ್ತ್ರವು ಮಾಡಲಾಗದ್ದನ್ನು ಮಾಡುವ ಸಲುವಾಗಿ ಯೇಸು ಕ್ರಿಸ್ತನು ಬಂದನು."

> ಶರೀರಭಾವವು ದೇವರ ವಾಕ್ಯಕ್ಕೆ ವಿರುದ್ಧವಾಗಿರುವ ಆಲೋಚನೆಗಳ ಗುಂಪು ಮತ್ತು ಈ ಆಲೋಚನೆಗಳು ನಾವು ಹೊಸದಾಗಿ ಹುಟ್ಟಿದ್ದರೂ ಈಗಲೂ ನಮ್ಮೊಳಗಿವೆ.

**"ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು." (ರೋಮಾ 8:3)**

## ೯) ಮೊದಲು ಬರುವ ಆಲೋಚನೆಯನ್ನು ಸ್ವೀಕರಿಸುವಲ್ಲಿ ಎಚ್ಚರವಾಗಿರಿ!

ಈಗ ಶರೀರಭಾವದ ಅರ್ಥ ಮತ್ತು ಹೇಗೆ ಅದು ನಮ್ಮಲ್ಲಿ ಇಡಲ್ಪಟ್ಟಿದೆ ಎಂದು ಅರ್ಥಮಾಡಿಕೊಳ್ಳುತ್ತೇವೆ. ನಾವು ಹೊಸದಾಗಿ ಹುಟ್ಟಿದ್ದರೂ ಮತ್ತು ಶರೀರಭಾವವು ನಮ್ಮ ದೌರ್ಬಲ್ಯವಾಗಿದ್ದರೂ, ನಾವು ನಮ್ಮ ಮನಸ್ಸಿಗೆ ಬರುವ ಮೊದಲ ಆಲೋಚನೆಗಳಿಗೆ ಮಹತ್ವನೀಡಬಾರದು. ಈ ಆಲೋಚನೆಗಳು ದೇವರ ವಾಕ್ಯದ ಪ್ರಕಾರವಿದೆಯೇ ಇಲ್ಲವೇ ಎಂದು ಪರಿಶೀಲಿಸಿದ ಬಳಿಕ ಮಾತ್ರವೇ ನಾವು ಮುಂದಕ್ಕೆ ಅನುಮತಿಸಬೇಕು.

**"ಆತ್ಮೀಕವಾದದ್ದು ಮೊದಲನೇದಲ್ಲ, ಪ್ರಾಕೃತವಾದದ್ದು ಮೊದಲನೇದು; ಆ ಮೇಲೆ ಆತ್ಮೀಕವಾದದ್ದು." (1 ಕೊರಿ 15:46)**

ನಮ್ಮ ಶರೀರದಲ್ಲಿ ಕೆಟ್ಟದ್ದಿದೆ ಮತ್ತು ಅದರಿಂದಲೇ ಪೌಲನು ಹೇಳಿದನು, "ಆ ಪಾಪವು ನನ್ನ ಶರೀರದಲ್ಲಿದೆ."

**"ಹೀಗಿರಲಾಗಿ ಆ ಅಸಹ್ಯವಾದದ್ದನ್ನು ಮಾಡುವವನು ಇನ್ನು ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡುತ್ತದೆ. ನನ್ನಲ್ಲಿ ಅಂದರೆ ನನ್ನ ಶರೀರಾಧೀನಸ್ವಭಾವದಲ್ಲಿ ಒಳ್ಳೇದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ. ಒಳ್ಳೇದನ್ನು ಮಾಡುವುದಕ್ಕೆ ನನಗೇನೋ ಮನಸ್ಸುಂಟು; ಆದರೆ ಅದನ್ನು ಮಾಡುವುದು ನನ್ನಿಂದಾಗದು." (ರೋಮಾ 7:17-18)**

ಮುಂದುವರೆಸುತ್ತ ಪೌಲನು ಹೇಳುತ್ತಾನೆ **"ಅಯ್ಯೋ ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?" (ರೋಮಾ 7:24)**

ನಮ್ಮ ಶರೀರದಲ್ಲಿನ ದೌರ್ಬಲ್ಯತೆಯನ್ನು ಅರ್ಥಮಾಡಿಕೊಂಡದ್ದು ಪೌಲನು ಹೀಗೆ ಹೇಳುವಂತೆ ಪ್ರೇರಿಸಿತು, "ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು!" ಅದನ್ನೇ ನಮಗೂ ಯೋಚಿಸಲು ಮತ್ತು ಒಪ್ಪಿಕೊಳ್ಳಲು ಆಗುತ್ತಿದೆಯೇ? ಹೌದಾದರೆ, ಅದು ಜಯಕ್ಕೆ ಒಂದು ಮುಖ್ಯವಾದ ಮೆಟ್ಟಿಲಾಗುತ್ತದೆ.

> ಹೇಗೆ ಪ್ರತೀ ಮನೆಯೂ ಅಥವಾ ಕಟ್ಟಡ ಅದರ ಅಡಿಪಾಯವನ್ನು ಹೊಂದಿವೆಯೋ ಅದರಂತೆಯೇ ಪ್ರತೀ ಕೆಲಸವೂ ಅದರ ಅಡಿಪಾಯವನ್ನು ಹೊಂದಿದೆ. ಆಲೋಚನೆಗಳು ಯಾವುದೇ ಕಾರ್ಯದ ಅಡಿಪಾಯವಾಗಿದೆ.

ಪ್ರತೀ ಕೆಲಸವೂ ಅದರ ಅಡಿಪಾಯವನ್ನು ಹೊಂದಿದೆ. ಅದ ರಂತೆಯೇ, ಪ್ರತೀ ಮನೆ ಅಥವಾ ಕಟ್ಟಡಗಳು ಅದರ ಅಡಿಪಾಯವನ್ನು ಹೊಂದಿವೆ. ಯಾವುದೇ ಕಾರ್ಯಕ್ಕೂ ಆಲೋಚನೆಗಳು ಅಡಿಪಾಯವಾಗಿದೆ. ನಾವು ಒಂದು ಸಂಗತಿಯನ್ನು ನೋಡಿದಾಗ ಅಥವಾ ಕೇಳಿದಾಗ ಮತ್ತು ಅದಕ್ಕೆ ಪ್ರತಿಕ್ರಿಯಿಸಬೇಕಾದಾಗ, ನಮ್ಮೊಳಗೆ ಬರುವ ಮೊದಲ

ಆಲೋಚನೆಗಳು ಶರೀರದ ಆಲೋಚನೆಗಳು (ಸೈತಾನನ ಕಾರ್ಯಕ್ರಮ). ಆದರೆ ನಾವು ಈ ಆಲೋಚನೆಗಳನ್ನು ಜಯಿಸಬೇಕು ಮತ್ತು ದೇವರ ವಾಕ್ಯದ ಪ್ರಕಾರವಿರುವ ಆತ್ಮನ ಆಲೋಚನೆಗಳನ್ನು ಮಾತ್ರ ಸ್ವೀಕರಿಸಬೇಕು.

## ಈ) ಗಲಾತ್ಯ ಸಭೆಯ ರಕ್ಷಣೆಹೊಂದಿದ ಜನರು ದೇವರ ರಾಜ್ಯವನ್ನು ಪಡೆಯುತ್ತಾರೆಯೇ?

ಆತ್ಮದ ಆಲೋಚನೆಗಳು ಆತ್ಮನ ಕಾರ್ಯಗಳಾಗಿವೆ ಮತ್ತು ಶರೀರದ ಆಲೋಚನೆಗಳು ಶರೀರದ ಕಾರ್ಯಗಳಾಗಿವೆ. ಸೈತಾನನು ಇಟ್ಟಿರುವ ಶರೀರದ ಆಲೋಚನೆಗಳಿಂದ ಉದ್ಭವಿಸುವ ಶರೀರದ ಕೆಲವು ಕಾರ್ಯಗಳನ್ನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಸೂಚಿಸಲಾಗಿದೆ.

**"ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವೆಂದರೆ – ಜಾರತ್ವ, ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಕಕ್ಷಬೇಧ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂತವುಗಳೇ. ಇವುಗಳ ವಿಷಯದಲ್ಲಿ – ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ." (ಗಲಾತ್ಯ 5:19-21)**

ವಿಶ್ವಾಸಿಗಳೇ ದೇವರ ವಾಕ್ಯವು ಹೇಳುತ್ತದೆ, ನಾವು ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟಿದ್ದರೂ, ನಾವು ಶರೀರದಲ್ಲಿ ಜೀವಿಸುವುದಕ್ಕೆ ಮುಂದುವರೆಸಿದರೆ, ನಾವು ಎಂದಿಗೂ ದೇವರ ರಾಜ್ಯವನ್ನು ಪಡೆಯುವುದಿಲ್ಲ.

ದೇವರ ವಾಕ್ಯದ ಪ್ರಕಾರ ಸಭೆಯು ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟು ರಕ್ಷಿಸಲ್ಪಟ್ಟ ಜನರ ಗುಂಪಾಗಿದೆ.

**"ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲೂ ಅವರ ಮಂಡಳಿಗೆ ಸೇರಿಸುತ್ತಿದ್ದನು." (ಅ.ಕೃ 2:47)**

ಗಲಾತ್ಯ ಸಭೆಯಲ್ಲಿನ ಎಲ್ಲರೂ ರಕ್ಷಣೆ ಹೊಂದಿರಬಹುದು ಮತ್ತು ಕರ್ತನ ಭೋಜನವನ್ನು ತೆಗೆದುಕೊಂಡಿರಬಹುದು. ಅವರು ನಮ್ಮಂತೆಯೇ ದೇವರನ್ನು ಆರಾಧಿಸುತ್ತಿದ್ದರು ಮತ್ತು ಅವರು ಹೊಸದಾಗಿ ಹುಟ್ಟಿರಬಹುದು. ಅವರು ಹೊಸದಾಗಿ ಹುಟ್ಟಿದ್ದರೂ, ಶರೀರಭಾವವನ್ನು ಅನುಸರಿಸಿದರೆ, ದೇವರ ರಾಜ್ಯವನ್ನು ಪಡೆಯುವುದಿಲ್ಲ ಎಂದು ದೇವರ ವಾಕ್ಯವನ್ನು ಅವರಿಗೆ ಹೇಳಲಾಗಿತ್ತು.

ನಮ್ಮ ಅರಿವಿಲ್ಲದೇ, ಈ ಶರೀರದ ಕಾರ್ಯಗಳಿಗೆ ಅಡಿಪಾಯವಾದ ಆಲೋಚನೆಗಳು ನಮ್ಮೊಳಗೆ ಇದೆ ಮತ್ತು ಅವು ನಮ್ಮೊಳಗೇ ಕಾರ್ಯಮಾಡುತ್ತವೆ. ಉದಾಹರಣೆಗೆ, ನೀವು ಒಬ್ಬ ಗಾಯಕನೋ, ಪ್ರಸಂಗಿಯೋ ಅಥವಾ ಒಬ್ಬ ಪ್ರಾರ್ಥನಾ ವೀರನೆಂದು ಊಹಿಸಿಕೊಳ್ಳಿರಿ. ಒಬ್ಬ ಹೊಸ ವ್ಯಕ್ತಿ ಸಭೆಗೆ ಬಂದು, ಅವರು ನಿಮಗಿಂತ ಚೆನ್ನಾಗಿ ಹಾಡಿದಾಗ, ಪ್ರಸಂಗಿಸಿದಾಗ

ಅಥವಾ ಪ್ರಾರ್ಥಿಸಿದಾಗ, ಜನರು ಅವರನ್ನು ಹೊಗಳಿದರೆ ಶರೀರಭಾವವಾಗಿರುವ ನಿಮ್ಮೊಳಗಿನ ಹೊಟ್ಟೆಕಿಚ್ಚು ನಿಮ್ಮ ಅರಿವಿಲ್ಲದೆಯೇ ಅವರ ವಿರುದ್ಧ ಮೇಲೇಳುತ್ತದೆ. ನಮ್ಮ ಅರಿವಿಲ್ಲದೆಯೇ ಹೊಟ್ಟೆಕಿಚ್ಚು ಹೆಚ್ಚಿದಂತೆ, ದ್ವೇಷದ ಭಾವನೆಯು ಹೆಚ್ಚುತ್ತದೆ; ಮತ್ತು ಶರೀರದ ಇತರ ಭಾವಗಳು ಇದನ್ನು ಬೆಂಬಲಿಸುತ್ತದೆ. ನಂತರ ನಾವು ಅವರಲ್ಲಿ ಯಾವುದೇ ಒಳ್ಳೇತನವನ್ನು ನೋಡಲಾಗುವುದಿಲ್ಲ. ಸದ್ಯಕ್ಕೆ ನಾವು ಅವರನ್ನು "ಶರೀರಭಾವಗಳ" ಕನ್ನಡಿಯ ಮೂಲಕ ನೋಡುತ್ತೇವೆ. ನಾವು ಕಪ್ಪು ಕನ್ನಡಿಯ ಮುಖಾಂತರ ನೋಡಿದರೆ ನಾವು ನೋಡುವ ಎಲ್ಲವು ಕಪ್ಪಾಗಿರುತ್ತದೆ. ಆ ಸಭೆಯಲ್ಲಿ ನಮಗೆ ಒಂದು ಸ್ಥಾನ ಅಥವಾ ಅಧಿಕಾರ ಹೊಂದಿದ್ದ ಪಕ್ಷದಲ್ಲಿ, ಕನಿಷ್ಠ ನಮ್ಮ ಮಾತಿನಿಂದ ಅಥವಾ ನಮ್ಮ ಕೆಲಸದ ಮೂಲಕ ನಮಗಿಂತ ಹೆಚ್ಚು ಪ್ರಜ್ವಲಿಸುವ ಅಥವಾ ಜನರು ಹೊಗಳಿದವರಿಗೆ ನಾವು ಒಂದು ಬಾಣವನ್ನು ಗುರಿಯಿಡುತ್ತೇವೆ ಮತ್ತು ಅವರಿಗೆ ಯಾವುದೇ ಅವಕಾಶವನ್ನು ನೀಡದಂತೆ ಪ್ರಯತ್ನಿಸಬಹುದು. ಅಥವಾ ಅವರ ಜೀವನದಲ್ಲಿನ ಕೆಲವು ತಪ್ಪುಗಳನ್ನು ಪ್ರಸರಿಸಲು ಮತ್ತು ಅವರ ಸಾಕ್ಷಿಯನ್ನು ನಾಶಪಡಿಸಲು ನಾವು ಪ್ರಯತ್ನಿಸುತ್ತೇವೆ. ನಮ್ಮನ್ನು ನಾಶಪಡಿಸುವ ಸಲುವಾಗಿ ನಮ್ಮೊಳಗೆ ಇರಿಸಲಾಗಿರುವ ಶರೀರದ ಭಾವಗಳ ಫಲಿತಾಂಶವು ಇದೇ. ಇದನ್ನು ನಮ್ಮ ದೌರ್ಬಲ್ಯತೆಯಾಗಿ ನಾವು ಅರ್ಥಮಾಡಿಕೊಳ್ಳದಿದ್ದರೆ, ದೇವರ ವಾಕ್ಯದ ಪ್ರಕಾರ ನಮ್ಮ ಭವಿಷ್ಯವು ತೊಂದರೆಯಲ್ಲಿರಲಿದೆ. ದೇವರ ವಾಕ್ಯವು ಇದಕ್ಕೆ ಕಾರಣವನ್ನು ವಿವರಿಸುತ್ತದೆ,

> ನಮ್ಮೊಂದಿಗೆ ನಿಲ್ಲುವ ಅಥವಾ ನಮ್ಮ ಕೆಳಗಿರುವ ವ್ಯಕ್ತಿಯು ಅವನ ಕೆಲಸಗಳಲ್ಲಿ ಆಶೀರ್ವದಿಸಲ್ಪಟ್ಟಿದ್ದಾನೆಂದು ನಮಗೆ ತಿಳಿದುಬಂದರೆ ಆಗ ಅವರ ಕುರಿತು ಹೊಟ್ಟೆಕಿಚ್ಚುಪಟ್ಟರೆ, ಇದು ನಮ್ಮ ಶರೀರದ ದೌರ್ಬಲ್ಯತೆಯಾಗಿದೆ.

**"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ." (ರೋಮ 8:13)**

**"ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣ." (ರೋಮಾ 8:6)**

ಭೌತಿಕ ಲೋಕದಲ್ಲಿ ಬಾಂಬ್ ಸಿಡಿದರೆ, ನಾವೆಲ್ಲರೂ ಸಾಯುತ್ತೇವೆ. ಅದರ ಹಾಗೆಯೇ ಆತ್ಮೀಕ ಲೋಕದಲ್ಲಿ ಶರೀರದ ಭಾವಗಳ ಪ್ರಕಾರ ಜೀವಿಸಿದರೆ, ನಾವು ನಿಜವಾಗಿಯೂ ಸಾಯುತ್ತೇವೆ.

ಹಳೆಯ ಒಡಂಬಡಿಕೆಯನ್ನು ನಾವು ಓದಿದಾಗ, ಸೈತಾನನು ಸೌಲನನ್ನು ನಾಶ ಮಾಡುವ ಸಲುವಾಗಿ ಅವನೊಳಗೆ ಇರಿಸಲಾಗಿದ್ದ ಶರೀರದ ಭಾವಗಳ ಸಿಡಿಮದ್ದನ್ನು ಬಳಸಿ, ಸೌಲನು ನಾಶವಾದನು ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ಜನರು "ಸೌಲನು ಸಾವಿರಗಟ್ಟಲೆಯಾಗಿ ಕೊಂದನು ಮತ್ತು ದಾವೀದನು ಹತ್ತುಸಾವಿರಗಟ್ಟಲೆಯಾಗಿ ಕೊಂದನು" ಎಂದು ಹಾಡಿದಾಗ, ಮನುಷ್ಯನನ್ನು ನಾಶಮಾಡುವ ಸಲುವಾಗಿ ಮನುಷ್ಯನೊಳಗೆ ಸೈತಾನನಿಂದ ಇಡಲ್ಪಟ್ಟಿದ್ದ ಶರೀರದ ಭಾವಗಳು ಸೌಲನೊಳಗೆ ಮೇಲೆದ್ದವು. ಹೊಟ್ಟೆಕಿಚ್ಚು ಮತ್ತು ದ್ವೇಷ ಹುಟ್ಟಿದವು. ಸೌಲನಿಗೆ

> ಭೌತಿಕ ಲೋಕದಲ್ಲಿ ಸಿಡಿಮದ್ದು ಸಿಡಿದರೆ, ನಾವೆಲ್ಲರೂ ಸಾಯುತ್ತೇವೆ. ಅದರ ಹಾಗೆಯೇ ಆತ್ಮೀಕ ಲೋಕದಲ್ಲಿ ಶರೀರದ ಭಾವಗಳ ಪ್ರಕಾರ ಜೀವಿಸಿದರೆ, ನಾವು ನಿಜವಾಗಿಯೂ ಸಾಯುತ್ತೇವೆ.

ಎಂದಿಗೂ ಹಾನಿಮಾಡದ ಬದಲಿಗೆ ಅವನ ರಕ್ಷಣೆಯ ಸಮಯದಲ್ಲಿ ಗೋಲ್ಯಾತನನ್ನು ಕೊಲ್ಲಲು ಅವನಿಗೆ ಸಹಾಯ ಮಾಡಿದಂಥ, ಯಾವಾಗಲೂ ಅವನನ್ನು ಗೌರವಿಸಿದಂಥ ಮತ್ತು ಅವನ ಅಧಿಕಾರವನ್ನು ಗೌರವಿಸಿದಂತ ದಾವೀದನನ್ನು ಕೊಲ್ಲಲು ಸೌಲನು ಸಿದ್ಧನಾದನು. ಶರೀರದ ಭಾವಗಳು ಅವನ ಅಳಿಯನಾದ ದಾವೀದನ ಸ್ಥಾನವನ್ನೂ ಲೆಕ್ಕಿಸಲಿಲ್ಲ ಮತ್ತು ಇದು ಅಂತಿಮವಾಗಿ ಸೌಲನ ನಾಶನದಲ್ಲಿ ಕೊನೆಗೊಂಡಿತು. ಇಂದು ಕೆಲವು ಕ್ರೈಸ್ತ ಸಭೆಗಳು ವಿಭಾಗವಾಗಿರುವ ಮುಖ್ಯ ಕಾರಣವೇನೆಂದರೆ ಅವರ ಶರೀರಭಾವಗಳೆಂಬ ಸಿಡಿಮದ್ದಾಗಿದೆ.

## ಉ) ದೇವರ ಮಕ್ಕಳೇ ಎದ್ದೇಳಿ, ಇನ್ನು ಮುಂದೆ ಸ್ವಯಂ – ಮೋಸಹೋಗಬೇಡಿ !

ಅನೇಕ ದೇವರ ಸೇವಕರು ಒಳ್ಳೆಯವರಾಗಿದ್ದು ದೇವರ ವಾಕ್ಯಕ್ಕೆ ವಿಧೇಯರಾಗಿರಬಹುದು. ಅವರು ಇತರರ ಮುಂದೆ ಒಳ್ಳೆಯ ಸಾಕ್ಷಿಯನ್ನು ಹೊಂದಿದ್ದು ಈ ಸೈತಾನನ ಸಿಡಿಮದ್ದಿನ ಕುರಿತು ನಿರ್ಲಕ್ಷಿತರಾಗಿರಬಹುದು. ಆದುದರಿಂದಲೇ ಅವರಲ್ಲಿ ಕೆಲವರು ಈ ವಿಷಯದಲ್ಲಿ ವಿಫಲವಾಗುತ್ತಾರೆ. ಒಮ್ಮೆ, ದೇವರ ಸೇವಕರಾಗಿದ್ದ ಒಬ್ಬ ತಂದೆಯ ಬಗ್ಗೆ ಕೇಳಿದೆ. ಅವರು ಒಂದು ಮಾದರಿ ಜೀವನವನ್ನು ನಡೆಸುತ್ತಿದ್ದರು ಮತ್ತು ಎಲ್ಲರೂ ಅವರನ್ನು ಇಷ್ಟಪಡುತ್ತಿದ್ದರು. ಅವರಿಗೆ ಒಬ್ಬ ಅಳಿಯನಿದ್ದನು ಮತ್ತು ಅವನ ಕಡೆಗೆ ತುಂಬಾ ಆಕರ್ಷಿತರಾಗಿದ್ದರು. ಈ ಅಳಿಯನು ಸಹ ದೇವರ ಸೇವಕರಾಗಿದ್ದರು ಮತ್ತು ಮಾವನಿಗೆ ಅವರ ಸೇವೆಯಲ್ಲಿ ಸಹಾಯಮಾಡುತ್ತಿದ್ದರು.

ಸ್ವಲ್ಪ ಸಮಯದ ನಂತರ ಜನರು ಅವರ ಹೊಗಳಿಕೆಯನ್ನು ಅಳಿಯನ ಕಡೆಗೆ ವರ್ಗಾಯಿಸಲು ಪ್ರಾರಂಭಿಸಿದರು ಕಾರಣ ಅವರು ಅವರ ಸಂದೇಶ ಮತ್ತು ಪ್ರಸಂಗವನ್ನು ಒಳ್ಳೇದೆಂದು ಕಂಡರು. ನಂತರದಲ್ಲಿ, ಅನೇಕರಿಗೆ ಮಾದರಿಯಾಗಿದ್ದ ಈ ತಂದೆ ಶಾರೀರಿಕ ಭಾವಗಳ ಅಥವಾ ವಿಷದ ಅಥವಾ ಸೈತಾನನ ಸಿಡಿಮದ್ದಿನೊಂದಿಗೆ ಕಾರ್ಯಮಾಡಲು ಪ್ರಾರಂಭಿಸಿದರು. ಈ ತಂದೆ ತನ್ನ ಅಳಿಯನನ್ನು ಮುಂದಿನ ಸಾಲಿನಿಂದ ಹಿಂದಕ್ಕೆ ಎಳೆಯಲು ಪ್ರಾರಂಭಿಸಿದರು. ಮುಂದೆ ಏನಾಯಿತು ಎಂದು ನಾವೆಲ್ಲರೂ ಊಹಿಸಬಹುದು. ಒಡಕು ಪ್ರಾರಂಭವಾಯಿತು ಮತ್ತು ಸಭೆಯು ಒಂದಾಗಿರಲಿಲ್ಲ. ಅಂತಹ ಅನೇಕ ಸೇವಕರು ಅವರೊಳಗೆ ಈ ವಿಷ ಕಾರ್ಯಮಾಡಲು ಅನುಮತಿಸಿದ್ದಾರೆ. ಇಂದು ಸೈತಾನನು ಕ್ರಿಸ್ತನ ಸಭೆಯನ್ನು 33,000ಕ್ಕಿಂತಲೂ ಹೆಚ್ಚಿನ ಪಂಗಡಗಳನ್ನಾಗಿ (ಪ್ರಸ್ತುತ ಎಣಿಕೆಯ ಆಧಾರದ ಮೇಲೆ) ವಿಭಾಗಿಸಲು ಅಂತಹವರು ಸಹಾಯ ಮಾಡಿದ್ದಾರೆ. ಅವರಲ್ಲಿ ಕೆಲವರು ದೇವರ ಚಿತ್ತವನ್ನು ನೆರವೇರಿಸಲು ಪರಸ್ಪರ ಸಹಕರಿಸುವುದಿಲ್ಲ, ಮತ್ತು ಅವರಲ್ಲಿ ಕೆಲವರು ಪರಸ್ಪರ ಜಗಳವಾಡುವವರಾಗಿ ಕಂಡುಬರುತ್ತಾರೆ.

ನಾವು ಶರೀರದ ಪ್ರಕಾರ ಜೀವಿಸಿದರೆ ಸಾಯುತ್ತೇವೆ ಆದರೆ ಆತ್ಮದ ಸಹಾಯದೊಂದಿಗೆ ಶರೀರದ ಕಾರ್ಯಗಳನ್ನು ಸಾಯಿಸಿದರೆ ನಾವು ಜೀವಿಸುತ್ತೇವೆ.

ಕನಿಷ್ಠ ಈಗಲಾದರೂ ನಾವು ಮೇಲೇಳಬಾರದೋ? ನಾವು ನಮ್ಮೊಳಗೆ ಸಂಭ್ರಮಿಸಬಾರದು ಬದಲಿಗೆ ಕ್ರಿಸ್ತಯೇಸುವಿನಲ್ಲಿ ಒಂದೇ ದೇಹವಾಗಿ ಒಗ್ಗೂಡಬೇಕು ಮತ್ತು

ಕನಿಷ್ಠ ಈಗಲೂ ನಾವು ಮೇಲೇಳಬಾರದೋ? ನಾವು ನಮ್ಮೊಳಗೇ ಸಂಭ್ರಮಿಸಬಾರದು ಬದಲಿಗೆ ಕ್ರಿಸ್ತಯೇಸುವಿನಲ್ಲಿ ಒಂದೇ ದೇಹವಾಗಿ ಒಗ್ಗೂಡಬೇಕು ಮತ್ತು ಸೈತಾನನ ವಿರುದ್ಧ ಸಂಭ್ರಮಿಸಬೇಕು.

ಸೈತಾನನ ವಿರುದ್ಧ ಸಂಭ್ರಮಿಸಬೇಕು. ಶರೀರ ಅಥವಾ ಶರೀರದ ಭಾವಗಳು ಸೈತಾನನು ನಮ್ಮ ಸೊಂಟದ ಸುತ್ತಲೂ ಕಟ್ಟಿರುವ ಸಿಡಿಮದ್ದಿನಂತಿದೆ. ಪರಿಸ್ಥಿತಿಯ ಆಧಾರದ ಮೇಲೆ ಸೈತಾನನು ಬಾಂಬನ್ನು ಹೊತ್ತಿಸಿದರೂ, ಅದನ್ನು ಆನ್ ಮಾಡಲು ಅಥವಾ ಆಫ್ ಮಾಡಲು ನಾವು ಅಧಿಕಾರವನ್ನು ಹೊಂದಿದ್ದೇವೆ. ನಾವು ಅದನ್ನು ಆನ್ ಮಾಡಿದರೆ ಆತ್ಮೀಕವಾಗಿ ಸಾಯುತ್ತೇವೆ, ಆಗ ಈ ಶರೀರಭಾವಗಳು ಜಯಸಾಧಿಸಲು ಪ್ರಯತ್ನಿಸುತ್ತವೆ. ನಾವು ಅದರೊಂದಿಗೆ ಸಹಕರಿಸಲು ಪ್ರಯತ್ನಿಸಿದಾಗ, ಅದನ್ನು ಆನ್ ಮಾಡುತ್ತೇವೆ, ಅದರ ಬದಲಿಗೆ ವಾಕ್ಯದಲ್ಲಿ ಹೇಳಿರುವಂತೆ, ದೇವರಾತ್ಮನ ಸಹಾಯದೊಂದಿಗೆ ಶರೀರದ ಭಾವಗಳು ಮತ್ತು ಕಾರ್ಯಗಳನ್ನು ಸಾಯಿಸಿದರೆ ನಾವು ಜಯಿಸುತ್ತೇವೆ ಮತ್ತು ಜೀವಿಸುತ್ತೇವೆ. ಈಗಿನಿಂದ ಶರೀರದ ಭಾವಗಳಿಗೆ ನಾವು ಒಳಗಾಗದಿರೋಣ ಮತ್ತು ನಮ್ಮನ್ನು ನಾವು ವಂಚಿಸಿಕೊಳ್ಳದಿರೋಣ. ನಮಗೆ ಭರವಸೆಯನ್ನು ನೀಡುವ, ದೇವರ ವಾಕ್ಯವನ್ನು ನಾವು ದೃಷ್ಟಿಸೋಣ.

ನಾವು ಶರೀರಭಾವದ ಪ್ರಕಾರ ಜೀವಿಸಿದರೆ ಸಾಯುತ್ತೇವೆ ಆದರೆ ಆತ್ಮದ ಸಹಾಯದಿಂದ ಶರೀರಭಾವದ ಕಾರ್ಯಗಳನ್ನು ಸಾಯಿಸಿದರೆ ನಾವು ಜೀವಿಸುತ್ತೇವೆ.

**"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವುದಾದರೆ ಜೀವಿಸುವಿರಿ." (ರೋಮಾ 8:13)**

## ಊ) ನೂತನವಾಗದ ಮನಸ್ಸಿನಲ್ಲಿ ಶರೀರಭಾವವಿದೆ

ದೇವರು, ವಾಕ್ಯದ ಮೂಲಕ, ಹೊಸದಾಗಿ ಹುಟ್ಟಿದ ವ್ಯಕ್ತಿಗೆ ಅವನ ಮನಸ್ಸನ್ನು ನವೀಕರಿಸಲು ಕೇಳುತ್ತಿದ್ದಾರೆ. ಇದನ್ನು ಮಾಡದಿದ್ದರೆ ನಾವು ಗಂಭೀರ ಅಪಾಯದಲ್ಲಿದ್ದೇವೆ. ನಮ್ಮ ಮನಸ್ಸು ಸೈತಾನನು ಇಟ್ಟಿರುವ ಶರೀರದ ಭಾವಗಳಿಂದ ಮತ್ತು ಲೋಕದ ಪ್ರೀತಿಯಿಂದ ತುಂಬಿದೆ. ಹಾಗಾಗಿ ಉತ್ತಮ ಫಲಿತಾಂಶವನ್ನು ಹೊರತರಲು ನಾವು ಎಷ್ಟೇ ಪ್ರಯತ್ನಿಸಿದರೂ, ನಮ್ಮ ಕಾರ್ಯದ ಫಲವು ನಮ್ಮ ಭಾವಗಳ ಮೇಲೆ ಆಧಾರಿತವಾಗಿರುತ್ತದೆ.

**"ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವುದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ." (ಕೊಲೊ 3:1-2)**

ಹಾಗಾದರೆ ದೇವರ ವಾಕ್ಯವು ನಮ್ಮ ಮನಸ್ಸನ್ನು ನೂತನಪಡಿಸಲು ಮತ್ತು ಬದಲಾಯಿಸಲು ನಮಗೆ ಉತ್ತೇಜಿಸುತ್ತದೆ.

**"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ, ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ." (ರೋಮಾ 12:2)**

ಈ ಶರೀರದ ಭಾವಗಳು ಸಾಮಾನ್ಯವಾಗಿ ಜಗಳ, ಕುಟುಂಬಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ನಾಶ, ಸಭೆಗಳಲ್ಲಿ ಒಡಕು ಮತ್ತು ಇತರೆ ಅನೇಕ ದುಷ್ಟ ಕಾರ್ಯಗಳಿಗೆ ಕೊಂಡೊಯ್ಯುತ್ತದೆ. ಈ ಭೂಮಿಯಲ್ಲಿ ಪ್ರಥಮ ಕುಟುಂಬವು ಆದಾಮ ಮತ್ತು ಹವ್ವ ಹಾಗೂ ಅವರ ಮಕ್ಕಳು ಕಾಯಿನ ಮತ್ತು ಹೇಬೆಲನರದಾಗಿತ್ತು. ಹೇಬೆಲನು ಕಾಯಿನನ ವಿರುದ್ಧ ಏನೂ ಮಾಡಲಿಲ್ಲ, ಆದರೆ ಕಾಯಿನನು ಹೇಬೆಲನ ಕಡೆಗೆ ಹೊಟ್ಟೆಕಿಚ್ಚು ಮತ್ತು ಅಸೂಯೆಪಟ್ಟನು ಮತ್ತು ಅವನನ್ನು ಕೊಂದನು. ಕಾರಣವೇನಾಗಿತ್ತೆಂದರೆ, "ಶರೀರಭಾವ" – ಅದು ದೇವರ ಪ್ರಸನ್ನತೆಯಲ್ಲಿ ಅವನ ಸಹೋದರನ ಕಾರ್ಯವನ್ನು ಅಂಗೀಕಾರವಾಗುವಂತೆ ಮತ್ತು ಅವನದನ್ನು ಅಂಗೀಕಾರವಾಗದಂತೆ ಮಾಡಿತು.

ಹೆಮ್ಮೆಯ ಮೂಲ ಸ್ಥಳ ಸೈತಾನನು. ಅವನಿಂದ ಆದಾಮನಲ್ಲಿ ಶರೀರಭಾವವು ಜನಿಸಿತು. ಸೈತಾನನಲ್ಲಿ ಎದ್ದ ಹೆಮ್ಮೆಯ ಕಾರಣದಿಂದ ಪರಲೋಕದ ಕುಟುಂಬವು ಸಹ ನಾಶವಾಯಿತು. ಶರೀರಭಾವವು ಹೆಮ್ಮೆಯ ಉತ್ಪನ್ನ ಎಂದು ನಾವು ಹೇಳಬಹುದು. ಸಾಮರ್ಥ್ಯದಂತಹ ಅನೇಕ ಕಾರ್ಯಗಳು ಸಹ ಶರೀರಭಾವದಿಂದ ಉದ್ಭವಿಸುತ್ತದೆ. ದೇವರ ವಾಕ್ಯವು ಹೀಗೆ ಹೇಳುತ್ತದೆ,

"ಮತ್ತು ಸಮಸ್ತಪ್ರಯಾಸವನ್ನೂ ಕೈಗೂಡುವ ಸಕಲ ಕಾರ್ಯವನ್ನೂ ನೋಡಿ ಇವು ಪರಸ್ಪರ ಮತ್ಸರಕ್ಕೆ ಆಸ್ಪದವೆಂದು ಗ್ರಹಿಸಿಕೊಂಡೆನು, ಇದು ಗಾಳಿಯನ್ನು ಹಿಂದಟ್ಟಿದ ಹಾಗೆ ವ್ಯರ್ಥ." (ಪ್ರಸ 4:4)

ದೇವರ ಮಕ್ಕಳು ಎಂದಿಗೂ ಅವರ ಕಾರ್ಯವನ್ನು ಶರೀರಭಾವದಿಂದ ಪ್ರಾರಂಭಿಸಬಾರದು ಬದಲಿಗೆ ದೇವರ ಪ್ರೀತಿಯ ಮೂಲಕ ಮತ್ತು ಆತ್ಮ ನೀಡುವ ದೇವರ ವಾಕ್ಯದಿಂದ ಯಾವಾಗಲೂ ಅವರ ಕಾರ್ಯವನ್ನು ಪ್ರಾರಂಭಿಸಬೇಕು.

ದೇವರ ಮಕ್ಕಳು ಅವರ ಕಾರ್ಯವನ್ನು ಯಾವಾಗಲೂ ದೇವರ ಪ್ರೀತಿಯ ಮೂಲಕ ಮತ್ತು ಆತ್ಮ ಅವರಿಗೆ ಕೊಡುವ ವಾಕ್ಯದಿಂದ ಪ್ರಾರಂಭಿಸಬೇಕು. ಶರೀರಭಾವದಿಂದ ಎಂದಿಗೂ ಪ್ರಾರಂಭಿಸಬಾರದು. ನಾವು ಯೇಸುವಿನ ಜೀವಿತವನ್ನು ಅಧ್ಯಯನ ಮಾಡುವುದಾದರೆ, ಆತನ ಕಾರ್ಯಗಳು ಶರೀರಭಾವದಿಂದ ಎಂದಿಗೂ ಪ್ರಾರಂಭವಾಗಲಿಲ್ಲ ಎಂದು ನಾವು ನೋಡಬಹುದು. ಎಲ್ಲವೂ ದೇವರ ವಾಕ್ಯದ ಪ್ರಕಾರ, ದೇವರ ಚಿತ್ತದ ಪ್ರಕಾರ ಮತ್ತು ದೇವರ ಪ್ರೀತಿಯೊಂದಿಗೆ ಮಾಡಲಾಯಿತು. ಆತನಿಗೆ ಚುಚ್ಚಿದವರನ್ನು, ಆತನ ಮೇಲೆ ಉಗಿದವರನ್ನು ಮತ್ತು ಆತನ ದೇಹಕ್ಕೆ ಮೊಳೆಹೊಡೆದವರಿಗೆ ವಿರುದ್ಧವಾಗಿ ಆತನು ಗುಣುಗುಟ್ಟದೆ ಮತ್ತು ಬೈಯದೆ ನಮಗೆ ಒಂದು ಒಳ್ಳೆ ಮಾದರಿಯನ್ನು ಯೇಸು ತೋರಿಸಿದ್ದಾರೆ. ಯೇಸು ದೇವರನ್ನು ಬೇಡಿಕೊಂಡದ್ದೇನೆಂದರೆ, "ತಂದೆಯೇ, ಅವರಿಗೆ ಕ್ಷಮಿಸು;

ತಾವು ಏನು ಮಾಡುತ್ತೇವೆಂಬದನ್ನು ಅರಿಯರು."

ಆತನಿಗೆ ಚುಚ್ಚಿದವರನ್ನು, ಆತನ ಮೇಲೆ ಉಗಿದವರನ್ನು ಮತ್ತು ಆತನ ದೇಹಕ್ಕೆ ಮೊಳೆಹೊಡೆದವರಿಗೆ ವಿರುದ್ಧವಾಗಿ ಆತನು ಗುಣುಗುಟ್ಟದೆ ಮತ್ತು ಬೈಯದೆ ನಮಗೆ ಒಂದು ಒಳ್ಳೆಯ ಮಾದರಿಯನ್ನು ಯೇಸು ತೋರಿಸಿದ್ದಾರೆ. ಯೇಸು ದೇವರನ್ನು ಬೇಡಿಕೊಂಡದ್ದೇನೆಂದರೆ, "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು."

ಹಾಗಾಗಿ, ನಾವು ಕೆಟ್ಟ ಕಾರ್ಯಗಳನ್ನು ಮಾಡುವ ಸಲುವಾಗಿ ಮತ್ತು ನಮ್ಮನ್ನು ನಾಶಮಾಡುವ ಸಲುವಾಗಿ ಆದಾಮನ ಮೂಲಕ ಸೈತಾನನು ಇಟ್ಟಿರುವ ಕಾರ್ಯ ಕ್ರಮ (ಸಿಡಿಮದ್ದು) ಶರೀರಭಾವವೆಂದು ಎಲ್ಲಾ ವಿಶ್ವಾಸಿಗಳು ಅರ್ಥಮಾಡಿಕೊಳ್ಳಬೇಕು.

ಆದರೆ ದೇವರಾತ್ಮನ ಸಹಾಯದಿಂದ ಆ ಕಾರ್ಯಗಳಿಗೆ ಅಂತ್ಯಹಾಕಬೇಕು ಮತ್ತು ಹೊಸದಾಗಿ ಸೃಷ್ಟಿಸಲ್ಪಟ್ಟ ಮನುಷ್ಯನಲ್ಲಿ ಇಡಲಾದ, ಆತ್ಮನ ಫಲವಾದ ಪ್ರೀತಿ ಮತ್ತು ಇತರ ಫಲಗಳಲ್ಲಿ ಹೇಗೆ ಕಾರ್ಯಮಾಡಬೇಕೆಂದು ವಾಕ್ಯದಿಂದ ಅರ್ಥಮಾಡಿಕೊಳ್ಳಬೇಕು. ನಾವು ಅದರ ಪ್ರಕಾರ ಮಾಡಿದರೆ, ಈ ಭೂಮಿಯಲ್ಲಿ ಕ್ರಿಸ್ತನ ಮಾದರಿಯಾಗಿರುತ್ತೇವೆ ಮತ್ತು ದೇವರ ಚಿತ್ತವನ್ನು ಮಾಡುತ್ತೇವೆ ಹಾಗೂ ಕ್ರಿಸ್ತನೊಂದಿಗೆ ನಿತ್ಯಜೀವದೊಳಗೆ ಪ್ರವೇಶಿಸುತ್ತೇವೆ.

**ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ನಿತ್ಯಜೀವಕ್ಕೆ ನಡೆಸುತ್ತದೆ. ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣಕ್ಕೆ ನಡೆಸುತ್ತದೆ. "ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ ಮನಶ್ಶಾಂತಿಯೂ ಆಗಿದೆ." (ರೋಮಾ 8:6)**

ಮುಂದುವರಿಕೆಯಲ್ಲಿ, ಪರಿಶುದ್ಧಾತ್ಮನ ತರಬೇತಿಯೊಂದಿಗೆ ದೇವರ ಶಾಲೆಯಲ್ಲಿ ಈ ಶರೀರ ಭಾವಗಳನ್ನು ಹೇಗೆ ನಾಶಮಾಡುವುದು ಎಂದು ನಾವು ಕಲಿಯುತ್ತೇವೆ.

## ❖ ಪ್ರಾರ್ಥನೆ



*ಪರಲೋಕದಲ್ಲಿರುವ ತಂದೆಯೇ, ನೀನು ನನಗೆ ನೀಡಿದ ತಿಳುವಳಿಕೆಗಾಗಿ ವಂದನೆಗಳು. ನನ್ನೊಳಗಿರುವ ಸೈತಾನನ ಸಿಡಿಮದ್ದನ್ನು ಉಪಯೋಗಿಸಿದರೆ, ನಾನು ಆತ್ಮೀಕವಾಗಿ ಸಾಯುತ್ತೇನೆ ಎಂದು ಅರ್ಥಮಾಡಿಕೊಂಡೆ. ಕರ್ತನೇ, ಶರೀರಭಾವವು ನಿನ್ನ ವಾಕ್ಯಕ್ಕೆ ವಿರುದ್ಧವಾಗಿರುವ ಆಲೋಚನೆಗಳ ಗುಂಪು ಮಾತ್ರವೆಂದು ನಾನು ಅರಿತುಕೊಂಡೆ. ನನ್ನ ಯಾವುದೇ ಕಾರ್ಯಗಳನ್ನು ಶರೀರದಿಂದ ಎಂದಿಗೂ ನಾನು ಪ್ರಾರಂಭಿಸದಂತೆ ಬದಲಿಗೆ ನಿನ್ನ ವಾಕ್ಯದಿಂದ ಮಾತ್ರವೇ ಪ್ರಾರಂಭಿಸುವಂತೆ ನನಗೆ ಸಹಾಯಮಾಡು. ಕರ್ತನೇ, ನನ್ನ ಸಹೋದರರ ವಿರುದ್ಧವಾಗಿ ನಾನು ತಿರುಗಿಬೀಳದಂತೆ ಬದಲಿಗೆ ಸೈತಾನನ ವಿರುದ್ಧವಾಗಿ ಕ್ರಿಸ್ತ ಯೇಸುವಿನಲ್ಲಿ ಒಂದೇ ದೇಹವಾಗಿ ಒಟ್ಟಾಗಿರುವಂತೆ ನನಗೆ ಸಹಾಯ ಮಾಡು ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಸೈತಾನನಿಂದ ಪ್ರತಿಯೊಬ್ಬ ವಿಶ್ವಾಸಿಯೊಳಗೆ ಒಂದು ಸಿಡಿಮದ್ದನ್ನು ಪ್ರತಿಷ್ಠಿಸಲಾಗಿದೆ. ಅದು ಶರೀರಭಾವವಾಗಿದೆ. ಆ ವ್ಯಕ್ತಿ ಅದನ್ನು ಗುರುತಿಸದೇ ಉಪಯೋಗಿಸಿದರೆ, ಅವನು ಅತ್ಮೀಕವಾಗಿ ಸಾಯಬಹುದು.
2. ಶರೀರಭಾವವು ಮನುಷ್ಯಕುಲವನ್ನು ನಾಶಮಾಡುವ ಸಲುವಾಗಿ ಸೈತಾನನಿಂದ ಆದಾಮನೊಳಗೆ ಇರಿಸಲಾದ ಮತ್ತು ದೇವರ ವಾಕ್ಯದ ವಿರುದ್ಧವಾಗಿರುವ ಭಾವಗಳ ಅಥವಾ ಕಾರ್ಯಗಳ ಗುಂಪು. ಶರೀರಭಾವವು ಮನುಕುಲದ ದೌರ್ಬಲ್ಯತೆಯಾಗಿದೆ.
3. ಶರೀರಭಾವವು ದೇವರ ವಾಕ್ಯದ ವಿರುದ್ಧವಾಗಿರುವ ಮತ್ತು ನಮ್ಮೊಳಗಡೆ ಇನ್ನೂ ಇರುವ ಭಾವಗಳ ಗುಂಪು ಎಂದು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ನಾವು ಹೊಸದಾಗಿ ಹುಟ್ಟಿದ ನಂತರವೂ ಶರೀರಭಾವವು ನಮ್ಮ ದೌರ್ಬಲ್ಯತೆ ಯಾಗಿರುವುದರಿಂದ, ನಾವು ನಮ್ಮ ಮನಸ್ಸಿಗೆ ಬರುವ ಮೊದಲ ಆಲೋಚನೆಗಳಿಗೆ ಮಹತ್ವವನ್ನು ನೀಡಬಾರದು. ಬದಲಿಗೆ ನಾವು ಈ ಆಲೋಚನೆಗಳನ್ನು ದೇವರ ವಾಕ್ಯದ ಪ್ರಕಾರ ಇದೆಯೇ ಅಥವಾ ಇಲ್ಲವೇ? ಎಂದು ಪರೀಕ್ಷಿಸಿ ಮುಂದಕ್ಕೆ ಅನುಮತಿಸಬೇಕು.
4. ನಮ್ಮೊಂದಿಗೆ ನಿಲ್ಲುವಂತಹ ವ್ಯಕ್ತಿ ಅಥವಾ ನಮ್ಮ ಕೈ ಕೆಳಗಿರುವ ವ್ಯಕ್ತಿ ಅವನ ಕೆಲಸದಲ್ಲಿ ಆಶೀರ್ವದಿಸಲ್ಪಡುತ್ತಿದ್ದಾನೆ ಎಂದು ನಮಗೆ ತಿಳಿದು ಬಂದರೆ ಅವನ ಕುರಿತು ಹೊಟ್ಟೆಕಿಚ್ಚು ಪಡುತ್ತೇವೆ. ಇದು ನಮ್ಮ ಶರೀರದ ದೌರ್ಬಲ್ಯತೆಯಾಗಿದೆ.
5. ಪ್ರತೀ ಮನೆ ಅಥವಾ ಕಟ್ಟಡ ಅದರ ಅಡಿಪಾಯವನ್ನು ಹೊಂದಿರುವಂತೆಯೇ, ಪ್ರತೀ ಕಾರ್ಯವೂ ಅದರ ಅಡಿಪಾಯವನ್ನು ಹೊಂದಿದೆ. ಆಲೋಚನೆಗಳು ಯಾವುದೇ ಕಾರ್ಯದ ಅಡಿಪಾಯವಾಗಿದೆ.
6. ವಿಶ್ವಾಸಿಗಳೇ, ದೇವರ ವಾಕ್ಯವು ಹೇಳುತ್ತದೆ, ನಾವು ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟಿದ್ದರೂ, ಶರೀರಭಾವದಲ್ಲಿ ಜೀವಿಸುವುದಕ್ಕೆ ಮುಂದಾದರೆ, ನಾವು ಎಂದಿಗೂ ದೇವರ ರಾಜ್ಯವನ್ನು ಪಡೆಯುವುದಿಲ್ಲ.
7. ಭೌತಿಕ ಲೋಕದಲ್ಲಿ, ಸಿಡಿಮದ್ದು ಸಿಡಿದರೆ, ನಾವು ಸಾಯಬಹುದು. ಅದರ ಹಾಗೆಯೇ ಆತ್ಮೀಕ ಲೋಕದಲ್ಲಿ, ಶರೀರಭಾವಗಳ ಪ್ರಕಾರ ಜೀವಿಸಿದರೆ, ನಾವು ನಿಜವಾಗಿಯೂ ಸಾಯುತ್ತೇವೆ.
8. ನಾವು ನಮ್ಮೊಳಗೇ ಆನಂದಿಸಬಾರದು ಬದಲಿಗೆ ಕ್ರಿಸ್ತಯೇಸುವಿನಲ್ಲಿ ಒಂದೇ ದೇಹವಾಗಿ ಒಗ್ಗೂಡಬೇಕು ಮತ್ತು ಸೈತಾನನ ವಿರುದ್ಧ ಆನಂದಿಸಬೇಕು.
9. ದೇವರ ಮಕ್ಕಳು ಎಂದಿಗೂ ಅವರ ಕಾರ್ಯವನ್ನು ಶರೀರಭಾವದಿಂದ ಪ್ರಾರಂಭಿಸಬಾರದು. ಬದಲಿಗೆ ದೇವರ ಪ್ರೀತಿಯಲ್ಲಿ ಮತ್ತು ಆತ್ಮ ಅವರಿಗೆ ನೀಡುವ ವಾಕ್ಯದಿಂದ ಪ್ರಾರಂಭಿಸಬೇಕು.

# ಭಾಗ **– 2**

# ದೇವರ ಶಾಲೆ ಮತ್ತು ಪರಿಶುದ್ಧಾತ್ಮನ ತರಬೇತಿ



*ಅಧ್ಯಾಯ 10*

# ಮನುಷ್ಯನಲ್ಲಿ ಪರಿಶುದ್ಧಾತ್ಮನ ಕಾರ್ಯ

*"ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ." (ಮತ್ತಾ 11:29)*

ಹಿಂದಿನ ಅಧ್ಯಾಯಗಳಲ್ಲಿ ಹೇಗೆ ಮನುಷ್ಯನು ಅವಿಧೇಯತೆಯ ಮೂಲಕ ಎರಡನೇ ಸ್ಥಾನದಿಂದ (ಪ್ರಾಣ) ಮೂರನೇ ಸ್ಥಾನಕ್ಕೆ (ಶರೀರ) ಬಿದ್ದನು ಎಂದು ನಾವು ನೋಡಿದೆವು. ಈ ಅಧ್ಯಾಯದಲ್ಲಿ ದೇವರು ಹೇಗೆ ತಮ್ಮ ಸ್ವಭಾವವನ್ನು ನಮ್ಮ ಪ್ರಾಣದಲ್ಲಿ ಹರಡುತ್ತಾರೆ ಮತ್ತು ಎರಡರಷ್ಟು ಮುಂಬಡ್ತಿ ನೀಡುವುದರಿಂದ ಬಿದ್ದುಹೋದ ಮನುಷ್ಯನನ್ನು ಮೊದಲ ಸ್ಥಾನಕ್ಕೆ (ಆತ್ಮ) ತರುತ್ತಾರೆ ಎಂದು ನಾವು ಕಲಿಯೋಣ.

## ಅ) ತಂದೆಯಿಂದ ನೆಡಲ್ಪಡದ ಗಿಡಗಳು

ಹಿಂದಿನ ಅಧ್ಯಾಯಗಳನ್ನು ಓದುವಾಗ, ನೀವು ಈ ಪ್ರಶ್ನೆಯನ್ನು ಕೇಳಬಹುದು, "ದೇವರು ನಮ್ಮ ಜೀವನವನ್ನು ಸಂಕಟಕರವಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆಯೇ?" ಇಲ್ಲ, ಇಲ್ಲವೇ ಇಲ್ಲ. ಇದಕ್ಕೆ ವಿರುದ್ಧವಾಗಿ, ಪ್ರಸ್ತುತವಾಗಿ ನಮ್ಮ ಲೌಕಿಕ ಆಲೋಚನೆಗಳಿಂದ ಮುಚ್ಚಿಹೋಗಿರುವ ಮುತ್ತನ್ನು (ನೂತನವಾಗಿ ಸೃಷ್ಟಿಸಲ್ಪಟ್ಟ ಕ್ರಿಸ್ತನ–ರೀತಿಯ ವ್ಯಕ್ತಿ) ನಮ್ಮ ಜೀವನದಲ್ಲಿ ಅನಾವರಣಮಾಡಲು ಪ್ರಯತ್ನಿಸುತ್ತಿದ್ದಾರೆ. ಮನುಷ್ಯನ ಪ್ರಾಣದಲ್ಲಿ ಕಂಡುಬರುವ, ಶರೀರದ ಭಾವಗಳು ತಂದೆಯಿಂದ ನೆಡಲ್ಪಟ್ಟಿಲ್ಲ ಬದಲಿಗೆ ಅವು ಸೈತಾನನಿಂದ ತುಂಬಲ್ಪಟ್ಟಿವೆ ಅಥವಾ ನೆಡಲ್ಪಟ್ಟಿವೆ. ದೇವರ ವಾಕ್ಯವು ಮತ್ತಾಯ 15:13ರಲ್ಲಿ, ತಂದೆಯು ನೆಡದಿರುವ ಗಿಡಗಳು ಎಲ್ಲೋ ಮಧ್ಯದಲ್ಲಿ ಕತ್ತರಿಸಲ್ಪಡುತ್ತವೆ ಮತ್ತು ತೆಗೆಯಲ್ಪಡುತ್ತವೆ ಎಂದು ಹೇಳುವದಿಲ್ಲ ಬದಲಿಗೆ ಬೇರು ಸಹಿತ ಕೀಳಲ್ಪಡುತ್ತವೆ ಮತ್ತು ಎಸೆಯಲ್ಪಡುತ್ತವೆ ಎಂದು ಹೇಳುತ್ತದೆ. ಇದುವೇ ದೇವರು ನಮ್ಮಲ್ಲಿ ಪ್ರಾರಂಭಿಸಿರುವ ಕಾರ್ಯ. ಇದರ ಕುರಿತು ನಿರ್ಲಕ್ಷಿತರಾಗಿರುವವರು, ಅವರ ಹಳೆಯ ಆತ್ಮೀಕ ಮಟ್ಟದಲ್ಲಿ ಮುಂದುವರೆಯುತ್ತಾರೆ. ನಮ್ಮಲ್ಲಿ ಬದಲಾವಣೆ ಉಂಟಾಗಲು ನಾವು ನಮ್ಮಲ್ಲಿ ಪರಿಶುದ್ಧಾತ್ಮನ ಕಾರ್ಯಕ್ಕೆ ಅಧೀನರಾಗಬೇಕು.

| |
|---|
| ಮನುಷ್ಯನ ಪ್ರಾಣದಲ್ಲಿ (ಮನಸ್ಸು) ಕಾಣುವ ಶರೀರದ ಭಾವಗಳು ತಂದೆಯಿಂದ ನೆಡಲ್ಪಟ್ಟಿಲ್ಲ ಬದಲಿಗೆ ಸೈತಾನನಿಂದ ನೆಡಲ್ಪಟ್ಟಿವೆ. |

"ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು." (ಮತ್ತಾ 15:13)


ಪರಿಶುದ್ಧಾತ್ಮನು ಹೊಸದಾಗಿ ಹುಟ್ಟಿದ ವಿಶ್ವಾಸಿಯ ಆತ್ಮದಲ್ಲಿ ವಾಸಿಸುತ್ತಾನೆಂದು ನಮಗೆ ತಿಳಿದಿರುವಂತೆ, ದೇವರು ಈ ಆತ್ಮವನ್ನು ಈ ಲೋಕದಲ್ಲಿ ಆತ್ಮೀಕ ಕಾರ್ಯಕ್ಕಾಗಿ ಉಪಯೋಗಿಸುವುದಕ್ಕೆ, ನಮ್ಮ ಪ್ರಾಣದ "ಮನಸ್ಸಿನಲ್ಲಿ" ಸೈತಾನನಿಂದ ನೆಡಲ್ಪಟ್ಟಿರುವ ಗಿಡಗಳನ್ನು ಮೊದಲು ಕಿತ್ತುಹಾಕಬೇಕು ಮತ್ತು ತೆಗೆದುಹಾಕಬೇಕು ಇಲ್ಲವಾದರೆ, ಪರಿಶುದ್ಧಾತ್ಮನು ಹೊಸದಾಗಿ ಹುಟ್ಟಿದ ವ್ಯಕ್ತಿಯಿಂದ ಹೊರಬರಲು ಆಗುವದಿಲ್ಲ ಮತ್ತು ಆತ್ಮದ ಕಾರ್ಯಗಳು ಲೋಕದಲ್ಲಿ ಪ್ರಕಟವಾಗುವದಿಲ್ಲ.

ದೇವರು ಒಬ್ಬ ಮನುಷ್ಯನನ್ನು ಸೇವೆಯಲ್ಲಿ ಉಪಯೋಗಿಸಬೇಕಾದರೆ, ಮೊದಲು ಪರಿಶುದ್ಧಾತ್ಮನು ಆ ವ್ಯಕ್ತಿಯ ಮನಸ್ಸಿನಲ್ಲಿ ಶಾರೀರಿಕ ಭಾವಗಳನ್ನು ಕೀಳುವ ಕಾರ್ಯವನ್ನು ಮಾಡಬೇಕು. ಈ ಕಾರ್ಯದ ಪ್ರಗತಿಯ ಪ್ರಕಾರ, ಈ ಲೋಕದಲ್ಲಿ ಪರಿಶುದ್ಧಾತ್ಮನು ಅವನ ಕಾರ್ಯವನ್ನು ಆ ವ್ಯಕ್ತಿಯ ಮೂಲಕ ಮಾಡಲು ಸಾಧ್ಯವಾಗುತ್ತದೆ. ಸಂಕ್ಷಿಪ್ತವಾಗಿ  ಹೇಳುವುದಾದರೆ, ಮೊದಲು ಪರಿಶುದ್ಧಾತ್ಮನ ಕಾರ್ಯ ಮನುಷ್ಯನೊಳಗೆ ನಡೆಯುತ್ತದೆ, ನಂತರ ಆ ವ್ಯಕ್ತಿಯ ಮೂಲಕ ಲೋಕದಲ್ಲಿ ನಡೆಯುತ್ತದೆ. ಶರೀರ ಭಾವಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಒಳಗಡೆ ಮರೆಯಾಗಿರುತ್ತವೆ. ಈ ಭಾವಗಳು ಮರೆಯಾಗಿದ್ದಾಗ, ತಂದೆ ನೆಡದಿರುವ ಈ ಭಾವಗಳನ್ನು ಅಥವಾ ಈ ಗಿಡಗಳನ್ನು ಕೀಳಲು ಮತ್ತು ಎಸೆಯಲು ಅಸಾಧ್ಯ. (ಗಲಾ 5:19-21) ನಮ್ಮೊಳಗೆ ಮರೆಯಾಗಿರುವ ಶರೀರದ ಭಾವಗಳನ್ನು ಹೊರತರುವ ಸಲುವಾಗಿ ದೇವರು ನಮ್ಮ ಮುಂದೆ ಕೆಲವು ಪರಿಸ್ಥಿತಿಯನ್ನು ಅನುಮತಿಸುತ್ತಾನೆ.

ನಾವು ಒಬ್ಬ ಸಹೋದರ ಅಥವಾ ಸಹೋದರಿಯನ್ನು ನೋಡಿದಾಗ, ಆ ವ್ಯಕ್ತಿ ಶರೀರಭಾವದಲ್ಲಿ ಕಾರ್ಯಮಾಡುತ್ತಿದ್ದಾನಾ ಅಥವಾ ಇಲ್ಲವಾ ಎಂದು ನಾವು ಖಚಿತಪಡಿಸಿಕೊಳ್ಳಲಾಗುವದಿಲ್ಲ. ದೇವರ ಮಗುವಾಗಿರುವುದರಿಂದ, ಹೊರಗಿನಿಂದ ದೈವೀಕ ಸ್ವಭಾವವನ್ನು ಹೊಂದಿ ನಾವೆಲ್ಲರೂ ಒಂದೇ ರೀತಿಯಾಗಿ ಕಾಣುತ್ತೇವೆ. ಆದರೆ ಪರಿಶುದ್ಧಾತ್ಮನು ಅಂತಹ ಶಾರೀರಿಕ ವ್ಯಕ್ತಿಗೆ ಕಾರ್ಯಮಾಡಲು ಪ್ರಯತ್ನಿಸಿದರೆ, ಕ್ರಿಸ್ತನ ಯಾವುದೇ ಯೋಜನೆಗಳೂ ಅವನಲ್ಲಿ ಕೆಲಸಮಾಡುವದಿಲ್ಲ. ಏಕೆಂದರೆ ಶರೀರದ ಸ್ವಭಾವವು ವ್ಯಕ್ತಿಯೊಳಗೆ ಮರೆಯಾಗಿದೆ. ಈ ಮರೆಯಾಗಿರುವ ಸೈನ್ಯಗಳು ಮೇಲೆದ್ದಾಗ, ನಮ್ಮೊಳಗೆ ವಾಸಿಸುತ್ತಿರುವ ಪರಿಶುದ್ಧಾತ್ಮನಿಂದ ನಾವು ಅವುಗಳನ್ನು ಸೆರೆಹಿಡಿಯಬೇಕು. ಆದ್ದರಿಂದ ಈ ಶರೀರದ ಭಾವಗಳನ್ನು ಹೊರತಂದು "ಕಿತ್ತುಹಾಕುವ" ಕಾರ್ಯಕ್ಕಾಗಿ ನಮ್ಮ ಜೀವನದಲ್ಲಿ ಕೆಲವು ಪರಿಸ್ಥಿತಿಗಳು ಜರುಗುವಂತೆ ದೇವರು ಅನುಮತಿಸುತ್ತಾರೆ.

ಕೆಳಗೆ ಚಿತ್ರದಲ್ಲಿ ತೋರಿಸಿರುವಂತೆ, ನಮ್ಮ ಶರೀರವು ಈ ಲೋಕದಲ್ಲಿದೆ.

ದೇವರ ರಾಜ್ಯದಲ್ಲಿರುವ ಆತ್ಮ, ನಮ್ಮ ಕಾರ್ಯವು ಪ್ರಕಟವಾಗುವುದರಲ್ಲಿ ನಮಗೆ ಸಹಾಯ ಮಾಡುತ್ತದೆ. ನಮ್ಮ ಪ್ರಾಣದಲ್ಲಿ ಮರೆಯಾಗಿರುವ ಸೇನೆಯನ್ನು (ಶರೀರದ ಸ್ವಭಾವ) ಹೊರತರುವ ಮತ್ತು ಪ್ರಕಟಮಾಡುವ ಸಲುವಾಗಿ ಈ ಲೋಕದ ನಮ್ಮ ಜೀವಿತದಲ್ಲಿ ಅನೇಕ ಕಷ್ಟಸ್ಥಿತಿಗಳನ್ನು ಕ್ರಿಸ್ತನು ಅನುಮತಿಸುತ್ತಾನೆ.




*ಹೊಸದಾಗಿ ಹುಟ್ಟಿದ ವ್ಯಕ್ತಿಯನ್ನು ವೈರಿ ಸಮೀಪಿಸುತ್ತಿರುವದು*

**(ಚಿತ್ರ 18)**

ಶರೀರದ ಭಾವಗಳು ಪ್ರಕಟವಾದಾಗ ಆ ಸಮಯದಲ್ಲಿ ಅವುಗಳನ್ನು ಆತ್ಮದಿಂದ ಸಾಯಿಸುವುದಕ್ಕೆ ಕ್ರಿಸ್ತನು ನಮಗೆ ಸಹಾಯಮಾಡುತ್ತಾನೆ. (ರೋಮಾ 8:13)

## ಆ) ಪರಿಶುದ್ಧಾತ್ಮನ ತರಬೇತಿ (ಮುಂಗೋಪವನ್ನು ಕಿತ್ತುಹಾಕುತ್ತದೆ)

"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶಮಾಡುವದಾದರೆ ಜೀವಿಸುವಿರಿ." (ರೋಮಾ 8:13) ಶರೀರಭಾವಗಳು ಬೇರಿನೊಂದಿಗೆ ಕಿತ್ತುಹಾಕಲ್ಪಟ್ಟಾಗ ಮತ್ತು ಎಸೆಯಲ್ಪಟ್ಟಾಗ, ನಮ್ಮ ಸ್ವಭಾವವು ಪ್ರತೀ ನಿಮಿಷವೂ ಬದಲಾಗುತ್ತಲೇ ಇರುತ್ತದೆ. ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ, ನನ್ನ ಜೀವನದ ಒಂದು ಘಟನೆಯ ಬಗ್ಗೆ ನಾನು ಬರೆಯುತ್ತೇನೆ.

ನಾನು ಶರೀರಭಾವದಲ್ಲಿ ಜೀವಿಸುತ್ತಿದ್ದ ಒಂದು ಸಮಯವಿತ್ತು ಮತ್ತು ನಾನು ತುಂಬಾ ಬೇಗನೆ ಕೋಪಗೊಳ್ಳುತ್ತಿದ್ದೆ, ಆದರೆ ದೇವರು ಕೃಪೆಯಿಂದ ಈ ಗಿಡವನ್ನು ಬೇರಿನೊಂದಿಗೆ ನನ್ನ ಜೀವಿತದಿಂದ ಕೀಳಲು ಸಹಾಯ ಮಾಡಿದರು. ಹೇಗೆ ಇದು ಕೀಳಲ್ಪಟ್ಟಿತು ಮತ್ತು ಹೊರಕ್ಕೆ ಎಸೆಯಲ್ಪಟ್ಟಿತೆಂದು ನೀವು ಕಲಿತಂತೆ, ಹೇಗೆ ದೇವರಾತ್ಮ ಕಾರ್ಯಮಾಡುತ್ತಾರೆ ಮತ್ತು ನಮ್ಮಿಂದ ಅಂತಹ "ಕಳೆಗಳನ್ನು" ಕೀಳಲು ಸಹಾಯ ಮಾಡುತ್ತಾರೆ ಎಂದು ನೀವು ಸುಲಭವಾಗಿ ಅರ್ಥಮಾಡಿಕೊಳ್ಳುವಿರಿ.

ಆ ಸಮಯದಲ್ಲಿ (ನನ್ನಿಂದ ಗಿಡವು ತೆಗೆಯಲ್ಪಡುವದಕ್ಕೂ ಮೊದಲು) ಒಬ್ಬ ವ್ಯಕ್ತಿ ನನ್ನ ಕಂಪನಿಯನ್ನು ಸೇರಿಕೊಂಡನು. ನಾನು ಅವನನ್ನು ಒಬ್ಬ ಉದ್ಯೋಗಿಯಾಗಿ ಅಲ್ಲ ಬದಲಿಗೆ ನನ್ನ ಸ್ವಂತ ಮಗನಂತೆ ನೋಡಿಕೊಂಡೆ ಹಾಗೂ ಅವನನ್ನು ದೇವರ ಸ್ವಾರೂಪ್ಯದಲ್ಲಿ ಬೆಳೆಸಲು ಪ್ರಯತ್ನಿಸಿದೆ. ನಾನು ಅವನ ಕುರಿತು ಮಹಾ ನಿರೀಕ್ಷೆ ಹೊಂದಿದ್ದೆ. ಆದರೆ ನನ್ನ ಕಡೆ ಪ್ರೀತಿ ಮತ್ತು ಗೌರವವನ್ನು ಹೊಂದುವುದರ ಬದಲಾಗಿ ಅವನು ಅಸಡ್ಡೆಯಾಗಿ ವರ್ತಿಸಲು ಪ್ರಾರಂಭಿಸಿದ. ನಾನು ಇದನ್ನೆಲ್ಲಾ ಸಹಿಸಿಕೊಂಡೆ ಮತ್ತು ಮುಂದೆ ನಡೆದೆ. ಒಂದು ದಿನ 100 ಕಿ.ಮೀ.ಗಳಿಗಿಂತಲೂ ಹೆಚ್ಚು ದೂರವಿದ್ದ ಗ್ರಾಹಕರ ಸ್ಥಳಕ್ಕೆ ಒಂದು ದೊಡ್ಡ ಯಂತ್ರವನ್ನು ತೆಗೆದುಕೊಂಡು ಹೋಗಲು ನಾನು ಅವನನ್ನು ಕೇಳಿದೆ. ಯಂತ್ರವನ್ನು ಗ್ರಾಹಕರಿಗೆ ಸುರಕ್ಷಿತವಾಗಿ ತಲುಪಿಸುವದು ಮತ್ತು ಎಲ್ಲವೂ ಸರಿಯಾಗಿದೆಯೇ ಎಂದು ನಿಯಮಿತವಾಗಿ ಪರಿಶೀಲಿಸುವುದು ನಮ್ಮ ಜವಾಬ್ದಾರಿಯಾಗಿತ್ತು. ಅವನು ತಲುಪಿದ್ದಾನಾ ಎಂದು ಪರಿಶೀಲಿಸುವ ಸಲುವಾಗಿ ನಾನು ಅವನಿಗೆ ಮಧ್ಯೆ ಕರೆಮಾಡಿದೆ. ಅವನು ದಾರಿಯಲ್ಲಿದ್ದೇನೆಂದು ಹೇಳಿದಾಗ, ಯಂತ್ರವು ಗಾಡಿಗೆ ಸರಿಯಾಗಿ ಕಟ್ಟಲಾಗಿದೆಯಾ ಎಂದು ನಾನು ಕೇಳಿದೆ. ಅವನು ಉತ್ತರಿಸಿದ, “ಇಲ್ಲ, ಅದನ್ನು ಕಟ್ಟಲಾಗಿಲ್ಲ”. ಅವನು ಯಂತ್ರವನ್ನು ವಾಹನಕ್ಕೆ ಹೇರಿದ ನಂತರ ಸರಿಯಾಗಿ ಕಟ್ಟುವುದಕ್ಕೆ ಮರೆತುಹೋಗಿದ್ದನು ಮತ್ತು ಅವನ ಪ್ರಯಾಣದಲ್ಲಿ ಮಧ್ಯ-ದಾರಿಯಲ್ಲಿದ್ದನು. ಆ ಯಂತ್ರವು ಇರಬಹುದಾಗಿದ್ದ ಸ್ಥಿತಿಯನ್ನು ಊಹಿಸಿಕೊಳ್ಳಿ. ಸುಮಾರು 300 ಕೆ.ಜಿ.ಗಳಷ್ಟು ತೂಕವಿದ್ದ ಮತ್ತು ಚಲಿಸುತ್ತಿದ್ದ ವಾಹನದಲ್ಲಿದ್ದ, ಯಂತ್ರವು ವಾಹನದಲ್ಲಿ ಪಲ್ಟಿಯಾಗಿರಬಹುದು ಮತ್ತು ಹಾನಿಗೊಳಗಾಗಿರಬಹುದು. ಹಣವನ್ನು ಖರ್ಚುಮಾಡಿದವನು ನಾನು, ಆದರೆ ಅವನ ಅವಿಧೇಯತೆ ಮತ್ತು ಅಹಂಕಾರದ ಕಾರಣದಿಂದ, ನನ್ನಲ್ಲಿ ಅಡಗಿದ್ದ ಕೋಪವು ಮೇಲೆದ್ದಿತು. ಅಣೆಕಟ್ಟು ತೆರೆದಂತೆ, ನಾನು ಅವನ ಕಡೆಗೆ ದ್ವೇಷದ ಮಾತುಗಳನ್ನು ಹೇಳಲು ಪ್ರಾರಂಭಿಸಿದೆ. ನಾನು ಏನು ಮಾಡಿದ್ದೆನೆಂದು ನಿಮಗೆ ಗೊತ್ತೇ? ನಾನು ನನ್ನ ಕೆಟ್ಟ ನಿಧಿಯಿಂದ ಮಾತುಗಳನ್ನಾಡಲು ಪ್ರಾರಂಭಿಸಿದೆ.

ನಾನು ಈ ಮಾತುಗಳನ್ನು ಹೇಳಲು ಪ್ರಾರಂಭಿಸಿದಾಗ ಸೈತಾನನು ನನ್ನ ಜೀವನದ ಮೇಲೆ ಅಧಿಕಾರವನ್ನು ತೆಗೆದುಕೊಂಡನು. ತಕ್ಷಣವೇ ನಾನು ಉಸಿರಾಡುವುದರಲ್ಲಿ ತೊಂದರೆಯನ್ನು ಅನುಭವಿಸುವುದಕ್ಕೆ ಪ್ರಾರಂಭಿಸಿದೆ. (ಸೈತಾನನು ನನ್ನ ಜೀವನದ ಮೇಲೆ ಕಾನೂನು ಬದ್ಧವಾಗಿ ಯಾವುದೇ ಅಧಿಕಾರವನ್ನು ಹೊಂದಿರಲಿಲ್ಲ ಎಂದು ನಾನು ತಿಳಿದಿದ್ದೆ, ಆದರೆ ನನ್ನ ಮಾತಿನ ಮೂಲಕ ಅದನ್ನು ನಾನು ಅನುಮತಿಸಿದೆ).

ಪ್ರಸಂಗಿ 5:6 ರಲ್ಲಿ ಹೇಳುತ್ತದೆ “ನಿನ್ನ ಬಾಯಿ ನಿನ್ನನ್ನು ಪಾಪಕ್ಕೆ ಗುರಿಮಾಡದಂತೆ ನೋಡಿಕೋ; ಇದು ಅಜಾಗ್ರತೆಯಿಂದಾಯಿತೆಂದು ದೂತನ ಮುಂದೆ ಹೇಳಬೇಡ; ದೇವರು ನಿನ್ನ ಮಾತಿಗೆ ರೋಷಗೊಂಡು ನಿನ್ನ ಕೈಗೆಲಸವನ್ನು ಏಕೆ ಹಾಳುಮಾಡಬೇಕು?”

ಮೊದಲು, ನಾನು ಇದನ್ನು ಅರ್ಥಮಾಡಿಕೊಳ್ಳಲಿಲ್ಲ ಮತ್ತು ಯಾಕೆ ಇದೆಲ್ಲಾ ಜರುಗುತ್ತಿದೆ ಎಂದು ಯಾವ ಸುಳಿವನ್ನೂ ಹೊಂದಿರಲಿಲ್ಲ. ಆದರೆ ಒಂದು ಹದ್ದು ತನ್ನ ಮರಿಗೆ ಹಾರಲು ಕಲಿಸುವಂತಹ ರೀತಿಯಲ್ಲಿಯೇ, ದೇವರು ನಮಗೆ ಕಲಿಸುತ್ತಾರೆ. ಮರಿಹದ್ದು ಅದರ ತಂದೆಯೊಂದಿಗೆ ಮೊದಲ ಹಾರಾಟದಲ್ಲಿ ಪದೇಪದೇ ಬೀಳುತ್ತಲಿರುತ್ತದೆ ಆದರೆ

ಮುಖ್ಯವಾದ ಪಾಠವೆಂದರೆ ಅದರ ತಂದೆ ತಾನು ಹಾರುವಂತೆ ಅದಕ್ಕೆ ಹಾರಲು ಕಲಿಸುತ್ತಿದೆ. ನನ್ನಲ್ಲಿ ಅಡಗಿದ್ದ ಮುಂಗೋಪವು ಗುರುತಿಸಲ್ಪಡುವ ಸಲುವಾಗಿ ಮತ್ತು ತೆಗೆದುಹಾಕಲ್ಪಡುವ ಸಲುವಾಗಿ ಈ ಸ್ಥಿತಿಯಲ್ಲಿ ಹೊರಕ್ಕೆ ಬಂತು. ನಾನು ಕರ್ತನಿಗೆ ಕಣ್ಣೀರಿಟ್ಟೆ. ನಾನು ನನ್ನ ತಪ್ಪನ್ನು ಅರಿತುಕೊಂಡೆ ಮತ್ತು ಅದನ್ನು ದೇವರ ಮುಂದೆ ಒಪ್ಪಿಕೊಂಡೆ. ಶರೀರದಲ್ಲಿ ಕಾರ್ಯಮಾಡಿದ್ದಕ್ಕೆ ನಾನು ಅವನನ್ನು ಕ್ಷಮೆಗಾಗಿ ಕೇಳಿದೆ ಮತ್ತು ತಂದೆಯು ನನ್ನ ಜೀವನದಲ್ಲಿ ನೆಡದ ಆ ಗಿಡವನ್ನು, ಅಂದರೆ ಮುಂಗೋಪವನ್ನು ತೆಗೆದುಹಾಕಲು ಆತನು ಸಹಾಯಮಾಡಿದನು. ಶರೀರದ ಸ್ವಭಾವವು ಉಗಮಿಸಿದಾಗ ಮೊದಲಬಾರಿ ನೀವು ಬೀಳಬಹುದು ಆದರೆ ಅದು ನಿಮ್ಮ ಅಂತ್ಯವಲ್ಲವೆಂದು ಅರಿತುಕೊಳ್ಳಿ. ಅದು ನಿಮ್ಮ ಜೀವನದಲ್ಲಿ ಹೊಸ ಅಧ್ಯಾಯದ ಪ್ರಾರಂಭ. ದೇವರ ಬಯಕೆಯು ನನ್ನೊಳಗೆ ಆ ಮುಂಗೋಪವನ್ನು ಕೀಳುವುದು ಮತ್ತು ಹೊರಕ್ಕೆ ಎಸೆಯುವುದಾಗಿತ್ತು.

> ಹದ್ದು ತನ್ನ ಮರಿಗೆ ಹಾರಲು ಕಲಿಸುವಂತಹ ರೀತಿಯಲ್ಲಿಯೇ, ದೇವರು ನಮಗೆ ಕಲಿಸುತ್ತಾರೆ.

ಅದೇ ವ್ಯಕ್ತಿ ನನ್ನ ಮನೆಗೆ ಬಂದನು ಮತ್ತು ಅವನ ಕೈ ನೋಯುತ್ತಿರುವದಾಗಿ ಹಾಗೂ ಅವನು ಏನನ್ನೂ ಎತ್ತಲು ಸಾಧ್ಯವಾಗುತ್ತಿಲ್ಲದಿರುವದಾಗಿ ನನಗೆ ಹೇಳಿದನು. ನಾನು ಯೇಸು ಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸಿದೆ ಆಗ ದೇವರು ಅವನಿಗೆ ನೀಡಿದ ತ್ವರಿತ ಗುಣಕ್ಕಾಗಿ ಅವನು ಆಶ್ಚರ್ಯಗೊಂಡನು.

ಇನ್ನೊಂದು ದಿನ ಅವನ ಕಾಲಿನ ಮೇಲೆ ಏನೋ ಬಿತ್ತೆಂದು ಮತ್ತು ಅವನು ಕಾಲಿನ ಮೇಲೆ ಊತವನ್ನು ಹೊಂದಿದ್ದೇನೆಂದು ಹೇಳುತ್ತಾ ಪ್ರಾರ್ಥನಾ ಕೂಟಕ್ಕೆ ಬಂದನು. ಅವನಿಗೆ ಪ್ರಾರ್ಥಿಸಲಾಯಿತು, ದೇವರಿಂದ ತ್ವರಿತ ಸೌಖ್ಯವನ್ನು ಹೊಂದಿಕೊಂಡನು ಮತ್ತು ಅದೇ ಕ್ಷಣದಲ್ಲಿ ಸಾಕ್ಷಿಯನ್ನು ಹೇಳಿದನು. ಆ ವ್ಯಕ್ತಿಯ ಇನ್ನೊಂದು ಅಗತ್ಯತೆಗೆ ನಾನು ಪ್ರಾರ್ಥಿಸಿದ ನಂತರ ಮತ್ತು ಬೇರೊಂದು ಪ್ರಾರ್ಥನಾ ಕೂಟವನ್ನು ನಡೆಸುವದಕ್ಕೆ ಹೊರಡುವ ಮೊದಲು, ನಾನು ಹಿಂತಿರುಗುವುದರೊಳಗಾಗಿ ಮುಗಿಸಲು ಒಂದು ಕಾರ್ಯವನ್ನು ಅವನಿಗೆ ನೀಡಿದೆ. ನಾನು ನನ್ನ ದಾರಿಯಲ್ಲಿರುವಾಗ ಅವನಿಂದ ಒಂದು ದೂರವಾಣಿ ಕರೆಯನ್ನು ಸ್ವೀಕರಿಸಿದೆ. "ಪ್ರಕಟಿಸಲ್ಪಟ್ಟ ಕ್ರಿಸ್ತನ ವಾಕ್ಯದಿಂದ" ನನ್ನ ಮನಸ್ಸನ್ನು ಕೆಲವು ಲೌಕಿಕ ವಿಷಯಗಳಿಗೆ ಪ್ರಭಾವಿಸಲು ಸೈತಾನನು ಅವಕಾಶಗಳನ್ನು ಹುಡುಕುವುದರಿಂದ, ನಾನು ಆರಾಧನೆ ಅಥವಾ ವಾಕ್ಯ ಸಾರುವುದಕ್ಕಾಗಿ ಹೋಗುವಾಗ ಸಾಮಾನ್ಯವಾಗಿ ಕರೆಗಳಿಗೆ ಉತ್ತರಿಸುವದಿಲ್ಲ. ನಾವು ಸೇವೆಗೆ ಹೋಗುವಾಗ ಯಾರನ್ನೂ ವಂದಿಸಬಾರದೆಂದು ವಾಕ್ಯದಿಂದ ನಾನು ಅರ್ಥ ಮಾಡಿಕೊಂಡಿದ್ದೇನೆ. ದೇವರನ್ನು ಮಹಿಮೆಪಡಿಸುವ ಸಾಕ್ಷಿಯಿರಬಹುದೆಂದು ನೆನೆಸಿ ನಾನು ಕರೆಯನ್ನು ಉತ್ತರಿಸಿದೆ ಆದರೆ ಇನ್ನೊಂದು ಬದಿಯಿಂದ ಒಂದು ಅನಿರೀಕ್ಷಿತ ಸಂಭಾಷಣೆಯನ್ನು ಕೇಳಿದೆ. ನಮ್ಮ ಸಂಭಾಷಣೆಯ ಸಮಯದಲ್ಲಿ ನಾನು ಅವನಿಗೆ ನೀಡಿದ್ದ ಕಾರ್ಯದ ಕುರಿತು ವಿಚಾರಿಸಿದೆ. ಅವನು ಅದನ್ನು ಮಾಡಿಲ್ಲವೆಂದು ಮತ್ತು ಮಾಡಲು ಆಗುವದಿಲ್ಲವೆಂದು ಉತ್ತರಿಸಿದ. ಅಗತ್ಯವಿದ್ದರೆ ಅದನ್ನು ಮಾಡಲು ಬೇರೊಬ್ಬನನ್ನು ಕಳುಹಿಸಿ ಎಂದು ಹೇಳಿ ಕರೆಯನ್ನು ಸ್ಥಗಿತಗೊಳಿಸಿದ.

ಒಬ್ಬ ಉದ್ಯೋಗದಾತನಾಗಿ, ಲೋಕದ ಪ್ರಕಾರವಾಗಿ ಜೀವಿಸುತ್ತಿರುವ ಯಾವುದೇ ವ್ಯಕ್ತಿಯಂತೆ, ದುರ್ನಡತೆಯ ಕಾರಣದಿಂದ ನಾನು ಅವನನ್ನು ಸುಲಭವಾಗಿ ಕೆಲಸದಿಂದ ತೆಗೆಯಬಹುದಿತ್ತು. ಆದರೆ ಅದನ್ನು ಮಾಡಬಾರದೆಂದು ಕ್ರಿಸ್ತನು ನನಗೆ ಹೇಳಿದನು.

ದೇವರು ನಿಮ್ಮ ಮೇಲೆ ಹೊರಿಸಿರುವ ನೊಗ ಇದೇ ಆಗಿದೆ. ಈ ನೊಗವನ್ನು ದೂರ ಒದೆಯಬೇಡಿರಿ. ಬಹಳ ನೋವಿನೊಂದಿಗೆ, ಆ ದಿನ ಪ್ರಾರ್ಥನಾ ಕೂಟದಲ್ಲಿ ಭಾಗವಹಿಸಿದೆ. ಇನ್ನೊಂದು ದಿನ, (ಇದು ಮೂರನೇ ಬಾರಿ) ನಾನು ನನ್ನ ಹೆಂಡತಿ ಮತ್ತು ಸಿಬ್ಬಂದಿಗಳೊಂದಿಗೆ ನನ್ನ ಕಚೇರಿಯಲ್ಲಿದ್ದಾಗ, ಈ ವ್ಯಕ್ತಿ ಅವರೆಲ್ಲರ ಮುಂದೆ ನನ್ನನ್ನು ಅವಮಾನಿಸಿದ. ಆ ಸಮಯದಲ್ಲಿ ಯಾರಿಗೇ ಆದರೂ ತೀವ್ರ ಕೋಪ ಹೊರಬರುತ್ತದೆ. ನಾನು ಒಬ್ಬಂಟಿಯಾಗಿರುವಾಗ ಆ ವ್ಯಕ್ತಿ ನನಗೆ ಏನನ್ನಾದರೂ ಹೇಳಿದರೆ, ನಾನು ಹೇಗಾದರೂ ಒಪ್ಪಿಕೊಳ್ಳುತ್ತಿದ್ದೆ. ಆದರೆ ನನ್ನ ಕೆಳಗೆ ಕೆಲಸ ಮಾಡುವ ಸಿಬ್ಬಂದಿಯ ಮುಂದೆ ನನಗೆ ಈ ರೀತಿ ಮಾತನಾಡಿದಾಗ ಸಹಿಸಿಕೊಳ್ಳುವುದು ಕಷ್ಟವಾಗಿತ್ತು. ಆ ಸಮಯದಲ್ಲಿ ದೇವರು ಇದನ್ನು ಹೇಳುವಂತೆ ನನಗೆ ಅನುವುಮಾಡಿದರು. "ದೇವರೇ, ನನ್ನನ್ನು ಇಷ್ಟು ಆಶೀರ್ವದಿಸುವಂತೆ ನಾನು ನಿನಗೆ ಏನು ಮಾಡಿದ್ದೇನೆ?" ಆ ಸಮಯದಲ್ಲಿ, ನನ್ನೊಳಗಿನ ಪರಿಶುದ್ಧಾತ್ಮವು ಲೋಕಕ್ಕೆ ಬಹಳವಾಗಿ ಪ್ರಸರಿಸಲ್ಪಟ್ಟಿತು.

ಇದನ್ನು ಇನ್ನೂ ಹೆಚ್ಚು ಸುಂದರವಾಗಿ ನಾನು ಹೇಳುವುದಾದರೆ, ಆ ಸಮಯದಲ್ಲಿ ಮನುಷ್ಯನ ಮೂಲಕ ದೇವರು ಲೋಕದ ಮೇಲೆ ಆಳ್ವಿಕೆಯನ್ನು ನಡೆಸುತ್ತಿರುವಂತೆ ಅನ್ನಿಸಿತು. ಅದೇ ಸಮಯದಲ್ಲಿ ಸೈತಾನನು ನನ್ನ ಪ್ರಾಣದಲ್ಲಿ ನೆಟ್ಟಿದ್ದ ಮತ್ತು ನೆಲೆಸಿದ್ದ ಕೋಪದ ಗಿಡವನ್ನು ದೇವರಾತ್ಮನು ಕಿತ್ತುಹಾಕಿದನು ಮತ್ತು ತೆಗೆದುಹಾಕಿದನು.

ಇದು ಪರಿಶುದ್ಧಾತ್ಮನ ಕ್ಷೇತ್ರವಾಗಿದೆ. ಇಲ್ಲಿ, ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿದವರಿಗೆ ಪರಿಶುದ್ಧಾತ್ಮನು ತರಬೇತಿಯನ್ನು ನೀಡುತ್ತಾನೆ. ಈ ಕಾರ್ಯದಲ್ಲಿ, ನಾವು ನಮ್ಮ ಸ್ವಂತ ಬಯಕೆಗಳನ್ನು ನಾಶಮಾಡಬೇಕು ಮತ್ತು ದೇವರ ಚಿತ್ತಕ್ಕೆ ಶರಣಾಗಬೇಕು. ನಾವು ನೋವಿನ ಮಧ್ಯೆ ಹೋಗಬೇಕಾದರೂ, ಸೈತಾನನು ನೆಟ್ಟಿರುವ ಎಲ್ಲಾ ಗಿಡಗಳನ್ನು ದೇವರು ತಕ್ಕ ಸಮಯದಲ್ಲಿ ಒಂದೊಂದಾಗಿ ತೆಗೆದುಹಾಕುತ್ತಾರೆ. ದೇವರು ವಾಕ್ಯದಲ್ಲಿ ಹೇಳಿದ್ದಾರೆ,

"ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ." (ಮತ್ತಾ 11:29)

> "ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ" ಎಂಬ ಪರಿಶುದ್ಧಾತ್ಮನ ತರಬೇತಿ ಕಾರ್ಯಕ್ರಮವು ಇಂದು ಕ್ರೈಸ್ತ ಸಭೆಗಳಲ್ಲಿ ಕಲಿಸುತ್ತಿಲ್ಲ. ಕ್ರೈಸ್ತ ಸಭೆಗಳು ದುರ್ಬಲವಾಗಿರುವುದಕ್ಕೆ ಇದೇ ಮುಖ್ಯ ಕಾರಣ.

ಈ ರೀತಿಯ ದೇವರ ತರಬೇತಿಯನ್ನು ಕ್ರೈಸ್ತ ಸಭೆಗಳಲ್ಲಿ ಇಂದು ಕಲಿಸಲಾಗುತ್ತಿಲ್ಲ. ಪರಿಶುದ್ಧಾತ್ಮನ ಶಾಲೆಯಲ್ಲಿ ಇದೇ ಕಾರ್ಯಮಾಡುವ ಶೈಲಿ. ಈ ಕಾರ್ಯಶೈಲಿಯು

ಹೊಸದಾಗಿ ಹುಟ್ಟಿದ ಮತ್ತು ದೇವರ ರಾಜ್ಯಕ್ಕೆ ಪ್ರವೇಶಿಸುತ್ತಿರುವ ವ್ಯಕ್ತಿಗೆ ಲೋಕರಾಜ್ಯದ ಸಂಸ್ಕೃತಿಯಿಂದ ದೇವರ ರಾಜ್ಯದ ಸಂಸ್ಕೃತಿಯೊಳಗೆ ಬರಲು ಅನುವುಮಾಡಿಕೊಡುತ್ತದೆ. ಇದು ಈಗ ಸಂಭವಿಸುತ್ತಿಲ್ಲದ್ದರಿಂದ, ಇಂದು ಕ್ರೈಸ್ತ ಸಭೆಗಳಲ್ಲಿ ಲೋಕದ ಸಂಸ್ಕೃತಿಯನ್ನು ನಾವು ನೋಡುತ್ತೇವೆ. ಕ್ರೈಸ್ತ ಸಭೆಗಳು ದುರ್ಬಲವಾಗಿರುವದಕ್ಕೆ ಇದೇ ಮುಖ್ಯ ಕಾರಣ.

"ಯಾಕಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ." (ಲೂಕ 16:8)

ಇದು ಒಂದು ರಹಸ್ಯ. ದೇವರ ಚಿತ್ತವಾದರೆ, ನಾವು ಇದನ್ನು ಇನ್ನೂ ಹೆಚ್ಚಾಗಿ "ದೇವರ ಕುಟುಂಬ" ಎಂಬ ಶೀರ್ಷಿಕೆಯುಳ್ಳ ನನ್ನ ಮುಂದಿನ ಪುಸ್ತಕದಲ್ಲಿ ಚರ್ಚಿಸೋಣ.

ಈ ಲೋಕದಲ್ಲಿ ನಮಗೆ ಅನುಮತಿಸಿರುವ ಸಮಯದಲ್ಲಿ ಪರಿಶುದ್ಧಾತ್ಮನ ಕಾರ್ಯದ ಮೂಲಕ ನಡೆಯುವದು ತುಂಬಾ ಮುಖ್ಯವಾಗಿದೆ. ದೇವರು ಬಯಸುವಂತಹ ಪರಿಶುದ್ಧಾತ್ಮನ ಕಾರ್ಯದ ಮೂಲಕ ನಾವು ನಡೆಯದೆ ಹೋದರೆ ನಮ್ಮ ಆತ್ಮೀಕ ಸ್ಥಿತಿಯು ಸುಧಾರಿಸುವದಿಲ್ಲ. ನಮ್ಮನ್ನು ಕ್ರಿಸ್ತನ ಪೂರ್ಣತೆಗೆ ತರುವದಕ್ಕೆ ಈ ಪ್ರತಿಯೊಂದು ಕಾರ್ಯವನ್ನು ದೇವರು ಅನುಮತಿಸುತ್ತಾರೆ.

ನಮ್ಮ ಮಕ್ಕಳು ಕಷ್ಟಪಡುವಾಗ ಮತ್ತು ರಾತ್ರಿ, ಹಗಲು ಓದುವಾಗ, ನಾವು ಅವರು ಕಷ್ಟಪಡಬೇಕೆಂದು ಬಯಸುತ್ತೇವೆಯೇ? ಇಲ್ಲ, ಆದರೆ ನಾವು ಕಷ್ಟವನ್ನು ಅನುಮತಿಸುತ್ತೇವೆ, ಕಾರಣ ನಾವು ಹೇಳುತ್ತೇವೆ, "ಮಗನೇ, ಮಗಳೇ, ಇಂದು ನೀನು ಕಷ್ಟಪಟ್ಟರೆ, ನಾಳೆ ನಿನ್ನ ಭವಿಷ್ಯ ಉತ್ತಮವಾಗಿರುತ್ತದೆ." ನಮ್ಮ ಐಹಿಕ ತಂದೆ ಮತ್ತು ತಾಯಿ ನಮ್ಮ ತಾತ್ಕಾಲಿಕ ಭವಿಷ್ಯಕ್ಕೆ ನಮ್ಮ ಪ್ರಯಾಸದ ಕುರಿತು ಇಷ್ಟು ಆತಂಕಿತರಾಗಿರುವದಾದರೆ, ನಮ್ಮ ಪರಲೋಕದ ತಂದೆಯು ನಮ್ಮ ಪರಲೋಕದ ಭವಿಷ್ಯದ ಕುರಿತು ಎಷ್ಟು ಕಾಳಜಿಯಿಂದಿರಬಹುದು.

ದೇವರು ನಮ್ಮ ಜೀವನದಲ್ಲಿ ಎರಡರಷ್ಟು ಮುಂಬಡ್ತಿಗಾಗಿ ಎದುರುನೋಡುತ್ತಿದ್ದಾರೆ. ಅದರ ಅರ್ಥ ಶರೀರದ ಸ್ಥಾನದಿಂದ ಆತ್ಮದ ಸ್ಥಾನಕ್ಕೆ ತರುವುದು. ದೇವರು ಅದಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಯನ್ನೂ ಸುಗಮಗೊಳಿಸುತ್ತಾರೆ. ಮೊದಲು ಯೇಸುವಿನ ರಕ್ತದಿಂದ ರಕ್ಷಣೆ (ಆತ್ಮದ ವಿಶ್ರಾಂತಿ) ನೀಡುತ್ತಾರೆ.

**"ಎಲೈ ಕಷ್ಟಪಡುವವರೇ ಹೊರೆಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು." (ಮತ್ತಾ 11:28)**

ಎರಡನೇದು ಕ್ರಿಸ್ತನ ಭೋದನೆಯಿಂದ ಅಥವಾ ಪರಿಶುದ್ಧಾತ್ಮನಿಂದ ತರಬೇತಿ (ಪ್ರಾಣದ ವಿಶ್ರಾಂತಿ) ನೀಡುತ್ತಾರೆ.

**"ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ." (ಮತ್ತಾ 11:29)**

ಬಿದ್ದುಹೋಗಿರುವ ಮನುಷ್ಯನಿಗೆ ಎರಡರಷ್ಟು ಮುಂಬಡ್ತಿಯನ್ನು ನೀಡುವ ಸಲುವಾಗಿ, ದೇವರ ಸ್ವಭಾವವು ನಮ್ಮ ಪ್ರಾಣಕ್ಕೆ ಹರಡಬೇಕು. ಹಾಗಾಗಿ 'ದೇವರ ಚಿತ್ತ'ವು ನಮ್ಮ ಜೀವನದಲ್ಲಿ ನೆರವೇರುವದಕ್ಕೆ ನಾವು ಪರಿಶುದ್ಧಾತ್ಮನೊಂದಿಗೆ ಜೊತೆಯಾಗಿ ಕೆಲಸ ಮಾಡೋಣ.

ನಾವು ಮಹಿಮೆಯನ್ನು ನಮ್ಮ ಪರಲೋಕದ ತಂದೆಗೆ ಕೊಡಬೇಕು, ಆತನ ಪ್ರಸನ್ನತೆಗೆ ದೀನವಾಗಿ ನಮ್ಮನ್ನು ಒಪ್ಪಿಸಿಕೊಡಬೇಕು ಮತ್ತು ಪರಿಶುದ್ಧಾತ್ಮನ ಕಾರ್ಯವು ನಮ್ಮಲ್ಲಿ ಜಯಭರಿತವಾಗಿ ನಡೆಯಲಿ ಎಂದು ಪ್ರಾರ್ಥಿಸಬೇಕು.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನನ್ನ ಪ್ರಾಣದಲ್ಲಿ ಸೈತಾನನಿಂದ ನೆಡಲ್ಪಟ್ಟಿರುವ ಎಲ್ಲದನ್ನೂ ತೆಗೆದುಹಾಕಲು ನನಗೆ ಸಹಾಯಮಾಡು. ಇದರಿಂದ ನಾನು ನಿನ್ನಿಂದ ಉಪಯೋಗಿಸಲ್ಪಡುತ್ತೇನೆ. ಕರ್ತನೇ, ನನ್ನ ಮೂಲಕ ಪರಿಶುದ್ಧಾತ್ಮನು ಈ ಲೋಕದಲ್ಲಿ ಕಾರ್ಯಮಾಡುವಂತೆ ಪರಿಶುದ್ಧಾತ್ಮನ ಕಾರ್ಯ ನನ್ನಲ್ಲಿ ನಡೆಯುವಂತೆ ನಾನು ಪ್ರಾರ್ಥಿಸುತ್ತೇನೆ. ನನ್ನ ಶರೀರದ ಎಲ್ಲಾ ಕಾರ್ಯಗಳು ಸಾಯಿಸಲ್ಪಡಲಿ ಹಾಗಾದರೆ ನಾನು ಜೀವಿಸುತ್ತೇನೆ. ಕರ್ತನೇ, ನಾನು ನಿನ್ನ ನೊಗವನ್ನು ತೆಗೆದುಕೊಳ್ಳಬೇಕು ಮತ್ತು ನಿನ್ನಿಂದ ಕಲಿಯಬೇಕು ಎಂದು ಅರ್ಥಮಾಡಿಕೊಳ್ಳುವಂತೆ ನನಗೆ ಸಹಾಯ ಮಾಡು. ಮತ್ತೊಮ್ಮೆ ನನ್ನ ಜೀವನವನ್ನು ನಿನ್ನ ಮುಂದೆ ಸಮರ್ಪಿಸುತ್ತೇನೆ, ಬೆಳೆಯಲು ನನಗೆ ಸಹಾಯಮಾಡು... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಮನುಷ್ಯನ ಪ್ರಾಣದಲ್ಲಿ (ಮನಸ್ಸು) ಕಾಣುವ ಶರೀರದಭಾವಗಳು ತಂದೆಯಿಂದ ನೆಡಲ್ಪಟ್ಟಿಲ್ಲ ಬದಲಿಗೆ ಸೈತಾನನಿಂದ ನೆಡಲ್ಪಟ್ಟಿವೆ.
2. ಪರಿಶುದ್ಧಾತ್ಮನು ವಾಸಿಸುವ ನಮ್ಮ ಆತ್ಮವನ್ನು ದೇವರು ಉಪಯೋಗಿಸಬೇಕೆಂದರೆ, ಮೊದಲು ಸೈತಾನನಿಂದ ನಮ್ಮ ಪ್ರಾಣದ "ಮನಸ್ಸಿನಲ್ಲಿ" ನೆಡಲಾಗಿರುವ ಗಿಡಗಳನ್ನು ನಮ್ಮ ಸಹಕಾರದೊಂದಿಗೆ ಆತನು ಕೀಳಬೇಕು ಮತ್ತು ತೆಗೆದುಹಾಕಬೇಕು. ಈ ಗಿಡಗಳನ್ನು ತೆಗೆದುಹಾಕದೆ ಆತ್ಮವು ಹೊರಬರುವುದಿಲ್ಲ. ಆತ್ಮವು ಹೊರಬರದ ಹೊರತು, ಆತ್ಮದ ಕಾರ್ಯವು ಪ್ರಕಟವಾಗುವದಿಲ್ಲ.
3. ದೇವರು ಒಬ್ಬ ಮನುಷ್ಯನನ್ನು ಉಪಯೋಗಿಸಲು ಆಯ್ಕೆ ಮಾಡಿದರೆ ಪರಿಶುದ್ಧಾತ್ಮನ ಕಾರ್ಯವು ಮೊದಲು ಅವನಲ್ಲಿ ನಡೆಯಬೇಕು. ಈ ಕಾರ್ಯ ನಡೆದರೆ, ಪರಿಶುದ್ಧಾತ್ಮನು ಆ ವ್ಯಕ್ತಿಯ ಮೂಲಕ ಲೋಕದಲ್ಲಿ ಕಾರ್ಯಮಾಡುತ್ತಾರೆ.
4. ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶಮಾಡುವದಾದರೆ ಜೀವಿಸುವಿರಿ.

5. "ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ" ಎಂಬ ದೇವರ ತರಬೇತಿಯು ಇಂದು ಅನೇಕ ಕ್ರೈಸ್ತ ಸಭೆಗಳಲ್ಲಿ ಕಲಿಸಲಾಗುತ್ತಿಲ್ಲ. ಆದರೆ ಪರಿಶುದ್ಧಾತ್ಮನ ಶಾಲೆಯಲ್ಲಿ ಇದೇ ಕಾರ್ಯದ ಶೈಲಿಯಾಗಿದೆ.
6. ದೇವರು ಬಯಸುವಂತಹ ಪರಿಶುದ್ಧಾತ್ಮನ ಕಾರ್ಯದ ಮೂಲಕ ನಾವು ನಡೆಯದಿದ್ದರೆ ನಮ್ಮ ಆತ್ಮೀಕ ಸ್ಥಿತಿಯು ಬೆಳೆಯುವುದಿಲ್ಲ.



# ಅಧ್ಯಾಯ 11

# ವಿಮೋಚಿಸಲ್ಪಟ್ಟ ವ್ಯಕ್ತಿಯಲ್ಲಿ ಎರಡು ಜೀವಗಳು

*"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು." (ಯೋಹಾ 10:10)*

## ಅ) ಪ್ರಾಣಕ್ಕಾಗಿ ಕಾದಾಟ

ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಮುಖ್ಯವಾದ ಸಂಗತಿಯೆಂದರೆ ನಮ್ಮೊಳಗೆ ಪರಿಶುದ್ಧಾತ್ಮನ ಕಾರ್ಯ ಹರಡಿದಾಗ, ದೇವರ ವಾಕ್ಯವು ಮನುಷ್ಯನನ್ನು ಎರಡು ಭಾಗವಾಗಿ ಪ್ರತ್ಯೇಕಿಸುತ್ತದೆ – ಆಂತರಿಕ ಮನುಷ್ಯ ಮತ್ತು ಬಾಹೀರಿಕ ಮನುಷ್ಯ.

**"ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ." (2 ಕೊರಿ 4:16)**

ಆಂತರಿಕ ಮನುಷ್ಯನು ಆತ್ಮ ಮತ್ತು ಪ್ರಾಣವನ್ನು ಒಳಗೊಂಡಿರುತ್ತಾನೆ, ಆದರೆ ಬಾಹೀರಿಕ ಮನುಷ್ಯನು ಶರೀರ ಮತ್ತು ಪ್ರಾಣವನ್ನು ಒಳಗೊಂಡಿರುತ್ತಾನೆ. ಆದಿಕಾಂಡ 2:7 ರಿಂದ ಮನುಷ್ಯನು ಬದುಕುವ ಪ್ರಾಣಿ ಎಂದು ನಾವು ಅರ್ಥಮಾಡಿಕೊಂಡೆವು ಮತ್ತು ಇದನ್ನು 1 ಕೊರಿಂಥದವರಿಗೆ 15:45ರಲ್ಲಿ ದೃಢಪಡಿಸಲಾಗಿದೆ. ನಾವು ಈ ಪ್ರಾಣವನ್ನು ಭೌತಿಕ ಶರೀರದೊಂದಿಗೆ ಸಂಬಂಧಿಸಿದರೆ, ನಾವು ಅದನ್ನು ಬಾಹೀರಿಕ ಮನುಷ್ಯ ಎಂದು ಹೇಳುತ್ತೇವೆ ಮತ್ತು ಅದನ್ನು ಆತ್ಮದೊಂದಿಗೆ ಸಂಬಂಧಿಸಿದಾಗ, ನಾವು ಅದನ್ನು ಆಂತರಿಕ ಮನುಷ್ಯ ಎಂದು ಹೇಳುತ್ತೇವೆ. ನಾವು ಬಾಹೀರಿಕ ಮನುಷ್ಯನು ಹಾಳಾಗುತ್ತಿದ್ದಾನೆ ಎಂದು ಹೇಳಿದಾಗ, ಅದರ ಅರ್ಥ ಭೌತಿಕ ಶರೀರ ಹಾಳಾಗುತ್ತಿದೆ, ಅದರೊಂದಿಗೆ ಪ್ರಾಣದಲ್ಲಿನ ಶರೀರದ ಸ್ವಭಾವವು ವಾಕ್ಯ ಮತ್ತು ದೇವರಾತ್ಮನ ಮೂಲಕ ಸಾಯುತ್ತದೆ ಎಂದು. ನಾವು ಆಂತರಿಕ ಮನುಷ್ಯನು ದಿನೇ ದಿನೇ ನೂತನವಾಗುತ್ತಾ ಇದ್ದಾನೆ ಎಂದು ಹೇಳಿದಾಗ ಅದರ ಅರ್ಥ ಮನಸ್ಸು ಹೊಸದಾಗುತ್ತಿದೆ, ಆತ್ಮದ ಸ್ವಭಾವಗಳು ಪ್ರತೀ ನಿಮಿಷ ಪ್ರಾಣಕ್ಕೆ ಸೇರುತ್ತಿದೆ ಮತ್ತು ಆತ್ಮವು ಪ್ರಾಣದಲ್ಲಿ ಬಲಗೊಳ್ಳುತ್ತಿದೆ ಎಂದು.

> ಆಂತರಿಕ ಮನುಷ್ಯನು ಆತ್ಮ ಮತ್ತು ಪ್ರಾಣವನ್ನು ಒಳಗೊಂಡಿರುತ್ತಾನೆ. ಬಾಹೀರಿಕ ಮನುಷ್ಯನು ಶರೀರ ಮತ್ತು ಪ್ರಾಣವನ್ನು ಒಳಗೊಂಡಿರುತ್ತಾನೆ.

ಸೂಚನೆ: ಇದರ ಕು ರಿತು ಹೆಚ್ಚಾಗಿ ಅರ್ಥಮಾಡಿಕೊಳ್ಳಲು 6 & 7ನೇ ಅಧ್ಯಾಯಗಳನ್ನು ಓದಿರಿ.

ಆಂತರಿಕ ಮನುಷ್ಯ ಮತ್ತು ಬಾಹೀರಿಕ ಮನುಷ್ಯನ ಮಧ್ಯೆ ಹಂಚಿಕೊಳ್ಳಲು ಒಂದೇ

ಒಂದು ಪ್ರಾಣವಿದೆ. ಈ ಪ್ರಾಣಕ್ಕಾಗಿ ಎರಡರ ಮಧ್ಯೆ ಕಾದಾಟವಿದೆ. ಇದನ್ನು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವುದರಿಂದ ಮತ್ತಷ್ಟು ಅರ್ಥಮಾಡಿಕೊಳ್ಳಬಹುದು.

ಪ್ರಶ್ನೆ : ಈ ಲೋಕದಲ್ಲಿ ಮನುಷ್ಯನ ರಚನೆಗೆ ಯಾರು ಜವಾಬ್ದಾರರು?

ಉತ್ತರ : ಪ್ರಾಣವು ಜವಾಬ್ದಾರನಾಗಿದೆ.

ಪ್ರಶ್ನೆ : ಯಾಕೆ ಆತ್ಮ ಮತ್ತು ಶರೀರ ಜವಾಬ್ದಾರರಾಗಿಲ್ಲ?

ಉತ್ತರ : ನಾವು ವಾಕ್ಯದಲ್ಲಿ ನೋಡುವಂತೆ ಮನುಷ್ಯನು ಬದುಕುವ ಪ್ರಾಣಿಯಾಗಿದ್ದಾನೆ. (ಆದಿ 2:7)

ಪ್ರಶ್ನೆ : ವಾಕ್ಯದ ಪ್ರಕಾರ, ಎಷ್ಟು ಶರೀರವನ್ನು ಮನುಷ್ಯ ಹೊಂದಿದ್ದಾನೆ? ಅವು ಯಾವುವು?

ಉತ್ತರ : ಆಂತರಿಕ ಮನುಷ್ಯ ಮತ್ತು ಬಾಹೀರಿಕ ಮನುಷ್ಯ. ನಾವು ಕಾಣಲಾಗದ ಆತ್ಮೀಕ ಶರೀರ ಮತ್ತು ನಾವು ಕಾಣುವ ಭೌತಿಕ ಶರೀರ.

> ಭೌತಿಕ ಶರೀರಕ್ಕೆ ನಾವು ಅಂಗಿ, ಪ್ಯಾಂಟ್ ಮತ್ತು ಚೂಡಿದಾರಗಳನ್ನೂ ಧರಿಸಬೇಕು ಆದರೆ ನಮ್ಮ ಆತ್ಮೀಕ ಶರೀರಕ್ಕೆ ದೇವರು ಆಜ್ಞಾಪಿಸಿರುವಂತೆ ದೇವರ ಸರ್ವಾಯುಧಗಳನ್ನು ಧರಿಸಬೇಕು.

ಭೌತಿಕ ಶರೀರಕ್ಕೆ ನಾವು ಅಂಗಿ, ಪ್ಯಾಂಟ್ ಮತ್ತು ಚೂಡಿದಾರಗಳನ್ನು (ಹೆಂಗಸರಿಂದ ಧರಿಸಲ್ಪಡುವ ಭಾರತೀಯ ಉಡುಪು) ಧರಿಸಬೇಕು ಆದರೆ ನಮ್ಮ ಆತ್ಮೀಕ ಶರೀರಕ್ಕೆ, ದೇವರು ಆಜ್ಞಾಪಿಸಿರುವಂತೆ, ದೇವರ ಸರ್ವಾಯುಧಗಳನ್ನು ನಾವು ಧರಿಸಬೇಕು (ಎಫೆ 6:13-17).

ನಾವು ಯೋಹಾನ 6:63 ನ್ನು ಓದಿದಾಗ, ಯೇಸು ಹಳೆಯ ಒಡಂಬಡಿಕೆಯಲ್ಲಿನ ದೇವರ ವಾಕ್ಯಕ್ಕೆ ವಿರುದ್ಧವಾಗಿ ಮಾತಾಡಿದರು ಎಂದು ನಾವು ಅಂದುಕೊಳ್ಳಬಹುದು. ಆದರೆ ನಾವು ಯೇಸುವಿನ ಮಾತುಗಳಲ್ಲಿನ ಜ್ಞಾನವನ್ನು ಅರ್ಥಮಾಡಿಕೊಂಡಾಗ, ನಿಜವಾಗಿಯೂ ಅದು ನಮ್ಮ ಕಣ್ಣುಗಳನ್ನು ತೆರೆಯುತ್ತದೆ. ಯಾಜಕಕಾಂಡ 17:11ರಲ್ಲಿ ದೇವರ ವಾಕ್ಯವು ಹೇಳುತ್ತದೆ, ಶರೀರದ ಜೀವವು ರಕ್ತದಲ್ಲಿದೆ ಎಂದು ಆದರೆ ಕ್ರಿಸ್ತನು ಇದಕ್ಕೆ ವಿರುದ್ಧವಾಗಿ ಮಾತನಾಡಿದ್ದೇನೆಂದರೆ, ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. (ಯೋಹಾ 6:63)

## ಆ) ಹಾಗಾದರೆ ರಕ್ತ ಅಥವಾ ಆತ್ಮ, ಇದರಲ್ಲಿ ಯಾವುದು ಜೀವ ನೀಡುತ್ತದೆ?

ನಾವು ತಕ್ಷಣವೇ ಸತ್ಯವೇದವು ತಪ್ಪಾಗಿದೆ ಎಂದು ನೆನೆಸಬಹುದು. ಸತ್ಯವೇದವು ಎಂದಿಗೂ ತಪ್ಪಾಗಿಲ್ಲ. ಸತ್ಯವೇದವು ಯಾವಾಗಲೂ ಸರಿಯಾಗಿದೆ. ಈ ಎರಡು ವಾಕ್ಯಗಳನ್ನು

ಬೇರ್ಪಡಿಸಿದಾಗ ಮತ್ತು ಕಲಿತಾಗ ಮಾತ್ರವೇ, ಕ್ರಿಸ್ತನು ಹೇಳಿದ್ದೇನೆಂದು ನಮಗೆ ಅರ್ಥಮಾಡಿಕೊಳ್ಳಲು ಮತ್ತು ಅದರ ಪ್ರಕಾರ ಜೀವಿಸಲು ನಮಗೆ ಸಾಧ್ಯವಾಗುತ್ತದೆ.

ದೇವರ ರಾಜ್ಯಕ್ಕೆ ಸಂಬಂಧಿಸಿದಂತೆ ಕ್ರಿಸ್ತನು ಹೇಳಿದ ಬಹುತೇಕ ನಿಯಮಗಳು ಗುಪ್ತವಾಗಿವೆ. ಇದನ್ನು ತಿಳಿಯದೇ, ವಿಶ್ವಾಸಿಗಳು ಕೇವಲ ಸಾಮಾನ್ಯ ವಿಶ್ವಾಸಿ ಗಳಾಗುತ್ತಿದ್ದಾರೆ.

ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುತ್ತವೆ, ಅವರು ರೋಗಿಗಳನ್ನು ಸ್ವಸ್ಥಮಾಡುವರು ಮತ್ತು ಅವರು ವಿಷಪದಾರ್ಥವನ್ನು ಕುಡಿದರೂ ಅವರಿಗೆ ಏನೂ ಆಗುವದಿಲ್ಲ ಎಂದು ಕ್ರಿಸ್ತನು ಹೇಳಿದನು. (ಮಾರ್ಕ 16:17-18)

ಇದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ಮೊದಲು ನಾವು ಎರಡು ಜೀವಗಳ ಕುರಿತು ಅರ್ಥಮಾಡಿಕೊಳ್ಳಬೇಕು, ರಕ್ತದಲ್ಲಿರುವ ಜೀವ ಮತ್ತು ಕ್ರಿಸ್ತನು ಹೇಳಿದಂತೆ ಆತ್ಮವು ನೀಡುವ ಜೀವ.

## ಇ) ಎರಡು ಜೀವಗಳು (ಸೂಖೆ [Psuche] ಮತ್ತು ಝೋಯೆ [Zoe] )

ರಕ್ತದಿಂದ ಜೀವ ಎಂದು ನಾವು ಹೇಳಿದಾಗ, ಅದರ ಅರ್ಥ ಶರೀರದ ಜೀವ ಅಥವಾ ಬಾಹೀರಿಕ ಮನುಷ್ಯನ ಜೀವ. ಆದರೆ ನಾವು ಆತ್ಮದಿಂದ ಜೀವ ಎಂದು ಹೇಳಿದಾಗ, ಅದರ ಅರ್ಥ ಬಾಹೀರಿಕ ಮನುಷ್ಯನ ಜೀವ ಎಂದಲ್ಲ ಬದಲಿಗೆ ಆಂತರಿಕ ಮನುಷ್ಯನ ಜೀವ ಎಂದಾಗಿದೆ. ನಾವು ಇವೆರಡರ ಕುರಿತು  ಸರಿಯಾಗಿ ಅರಿತಿಲ್ಲ. ಇಂಗ್ಲೀಷ್ ಸತ್ಯವೇದದಲ್ಲೂ "ಜೀವ" ಎಂದು ಹೇಳಿದಾಗ, ಅದು ಯಾವ ಜೀವವನ್ನು ಸೂಚಿಸುತ್ತದೆ ಎಂದು ನಮಗೆ ತಿಳಿದಿಲ್ಲ. ನಾವು ಮೂಲ ಗ್ರೀಕ್ ಭಾಷಾಂತರವನ್ನು ತೆಗೆದುಕೊಂಡಾಗ, ಈ ಜೀವಗಳು ಪ್ರತ್ಯೇಕವಾಗಿ ಸೂಚಿಸಲ್ಪಟ್ಟಿವೆ ಎಂದು ನಾವು ನೋಡಬಹುದು. ಅದರಲ್ಲಿ, ರಕ್ತದಲ್ಲಿನ ಜೀವವನ್ನು "ಸೂಖೆ" ಜೀವ ಎಂದು ಕರೆಯಲಾಗುತ್ತದೆ ಮತ್ತು ಇದು ಶರೀರದಲ್ಲಿನ ಜೀವ. ಯೇಸು ನಮಗಾಗಿ ಶಿಲುಬೆಯ ಮೇಲೆ "ಸೂಖೆ"ಯನ್ನು ಕೊಟ್ಟರು ಅದು ಈ ದೇಹದಲ್ಲಿರುವ ಜೀವ ಆದರೆ ಯೇಸು ನಮಗೆ ನೀಡಿದ್ದು "ಝೋಯೆ". ಅದು ಆಂತರಿಕ ಮನುಷ್ಯನಲ್ಲಿ ಆತ್ಮೀಕ ಜೀವ ಅಥವಾ ದೇವರ ಜೀವವಾಗಿದೆ. ಅದರಂತೆಯೇ, ಒಬ್ಬ ಹೊಸದಾಗಿ ಹುಟ್ಟಿದ ವ್ಯಕ್ತಿಯು ಎರಡು ಜೀವವನ್ನು ಹೊಂದಿದ್ದಾನೆ.

ಸೂಖೆ = ರಕ್ತದಲ್ಲಿ "ಮನುಷ್ಯನ ಜೀವ."

ಝೋಯೆ = ಆತ್ಮದಲ್ಲಿ "ದೇವರ ಜೀವ."

ನಾನು ನಿಮಗೆ ಸೂಖೆಯನ್ನು ನೀಡಲು ಬಂದಿಲ್ಲ. ನಾನು ನಿಮಗೆ ಝೋಯೆಯನ್ನು (ದೇವರ ಜೀವ) ನೀಡಲು ಮತ್ತು ಝೋಯೆಯನ್ನು ಹೇರಳವಾಗಿ ನೀಡಲು ಬಂದಿದ್ದೇನೆ. (ಯೋಹಾ 10:10)

ಸೂಖೆ ಎಂದರೆ ರಕ್ತದಲ್ಲಿ ಮನುಷ್ಯನ ಜೀವ ಎಂದು ಇಲ್ಲಿ ನಾವು ನೋಡುತ್ತೇವೆ. ಝೋಯೆ ದೇವರಲ್ಲಿರುವ ಅದೇ ಜೀವವಾಗಿದೆ. ಭೌತಿಕವಾಗಿ ಸಂವಹನಿಸುವ ಸಲುವಾಗಿ, ನಮಗೆ ಭೌತಿಕ ಶರೀರ ಬೇಕು, ಅದರ ಹಾಗೆಯೇ ಆತ್ಮ ಪ್ರಪಂಚದೊಂದಿಗೆ ಸಂವಹನಿಸಲು ನಮಗೆ ಆತ್ಮೀಕ ಶರೀರ ಬೇಕು.

1 ಕೊರಿಂಥದವರಿಗೆ 15:40-44 ರಲ್ಲಿ ಆತ್ಮೀಕ ಶರೀರಗಳು ಮತ್ತು ಭೌತಿಕ ಶರೀರಗಳ ಬಗ್ಗೆ ಹೇಳುತ್ತದೆ. ಆತ್ಮೀಕ ಶರೀರದ ಮಹಿಮೆ ವಿಭಿನ್ನ ಮತ್ತು ಭೌತಿಕ ಶರೀರದ ಮಹಿಮೆ ವಿಭಿನ್ನ. ಸೂರ್ಯನಿಗೊಂದು ಮಹಿಮೆಯಿದೆ, ಮತ್ತು ಚಂದ್ರನಿಗೆ ಇನ್ನೊಂದು ಮಹಿಮೆಯಿದೆ, ಹಾಗೂ ನಕ್ಷತ್ರಗಳಿಗೆ ಮತ್ತೊಂದು ಮಹಿಮೆಯಿದೆ; ಮಹಿಮೆಯಲ್ಲಿ ಒಂದು ನಕ್ಷತ್ರ ಇನ್ನೊಂದಕ್ಕಿಂತ ವ್ಯತ್ಯಾಸವುಳ್ಳದ್ದಾಗಿದೆ. 44ನೇ ವಾಕ್ಯ ಹೇಳುತ್ತದೆ ರಕ್ತದಿಂದ ಜೀವವನ್ನು ಪಡೆಯುವ ಸ್ವಾಭಾವಿಕ ಶರೀರ ಬಿತ್ತಲ್ಪಡುತ್ತದೆ ಮತ್ತು ಆತ್ಮದಿಂದ ಜೀವವನ್ನು ಪಡೆಯುವ ಆತ್ಮೀಕ ಶರೀರ (ಆತ್ಮದಿಂದ ನಡೆಸಲ್ಪಡುವುದು) ಬೆಳೆಸಲ್ಪಡುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಸೂಖೆ (ಮನುಷ್ಯನ ಜೀವ) ಬಿತ್ತಲ್ಪಡುತ್ತದೆ ಮತ್ತು ಝೋಯೆ (ದೇವರ ಜೀವ) ಬೆಳೆಸಲ್ಪಡುತ್ತದೆ.

ಆದ್ದರಿಂದ ಕ್ರಿಸ್ತನು ಮಾರ್ಥಳಿಗೆ ಹೇಳಿದನು, "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು." (ಯೋಹಾ 11:25)

ಹಾಗಾದರೆ ಸಾವಿನ ನಂತರ ಆ ಮನುಷ್ಯನಿಗೆ ಏನಾಗುತ್ತದೆ? ಅವನು ಪರಲೋಕ ಮಂಡಲದಲ್ಲಿ ದೇವರೊಂದಿಗೆ ಝೋಯೆ ಜೀವದಲ್ಲಿ ಜೀವಿಸಲು ಮುಂದುವರೆಸುತ್ತಾನೆ.

ಒಬ್ಬ ನಿಜವಾದ ದೇವರ ಮಗುವಿಗೆ, ಈ ಲೋಕದಲ್ಲಿ ಭೌತಿಕ ಸಾವು ಕೆಳಗಿನ ಲೋಕದಿಂದ ಮೇಲಿನ ಲೋಕಕ್ಕೆ ಮತ್ತು ಕೆಳಗಿನ ಜೀವದಿಂದ (ಸೂಖೆ) ಮೇಲಿನ ಜೀವದ ಪೂರ್ಣತೆಗೆ (ಝೋಯೆ) ಮುಂಬಡ್ತಿಯಾಗಿದೆ. ಆತ್ಮೀಕ ಮನುಷ್ಯನ ಜೀವವು ಆತ್ಮದಲ್ಲಿದೆ.


> ಒಬ್ಬ ನಿಜವಾದ ದೇವರ ಮಗುವಿಗೆ ಈ ಲೋಕದಲ್ಲಿ ಭೌತಿಕ ಸಾವು ಕೆಳಗಿನ ಲೋಕದಿಂದ ಮೇಲಿನ ಲೋಕಕ್ಕೆ ಮುಂಬಡ್ತಿಯಾಗಿದೆ.

## ಈ) ಸೂಖೆ ಮತ್ತು ಝೋಯೆ ನಡುವಿನ ವ್ಯತ್ಯಾಸ

ಗ್ರೀಕ್ ಅನ್ನು ತಿಳಿಯದ ಆದರೆ ಇಂಗ್ಲೀಷ್ ಅನ್ನು ಅರ್ಥಮಾಡಿಕೊಳ್ಳುವಂತಹವರಿಗೆ ಗ್ರೀಕ್ ಅರ್ಥಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ಇಂಟರ್ಲೀನಿಯರ್ ಬೈಬಲ್ (Interlinear Bible) ಎಂದು ಕರೆಯಲ್ಪಡುವ ಸತ್ಯವೇದವಿದೆ. ಇಲ್ಲಿ ಸೂಚಿಸಲಾಗಿರುವ ಸೂಖೆ ಮತ್ತು ಝೋಯೆ ಈ ಸತ್ಯವೇದದಿಂದ ಉಲ್ಲೇಖಿಸಲಾಗಿದೆ.

## ಸೂಖೆ

ಸೂಖೆ, ರಕ್ತದಲ್ಲಿ ಭೌತಿಕ ಮನುಷ್ಯನ ಜೀವ. ಇದಕ್ಕೆ ಸಂಬಂಧಿಸಿದಂತೆ, ನಾವು ವಾಕ್ಯ 1 ಯೋಹಾನ 3:16ರನ್ನು ಉಲ್ಲೇಖಿಸಬಹುದು:




*ದೇವರ ಜೀವ ಅಥವಾ ಝೋಯೆ ಆತ್ಮದಲ್ಲಿ ವಾಸಿಸುತ್ತಿರುವದು, ಮನುಷ್ಯನ ಜೀವ ಅಥವಾ ಸೂಖೆ ಪ್ರಾಣದಲ್ಲಿ ವಾಸಿಸುತ್ತಿರುವದು*

**(ಚಿತ್ರ 19)**

"ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು (ಸೂಖೆ) ಕೊಟ್ಟದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದುಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು (ಸೂಖೆ) ಕೊಡುವ ಹಂಗಿನಲ್ಲಿದ್ದೇವೆ." (1 ಯೋಹಾನ 3:16)

ಮೇಲಿನ ವಾಕ್ಯದಲ್ಲಿ, 'ಪ್ರಾಣ' ಎಂಬ ಪದವನ್ನು ಎರಡು ಬಾರಿ ಸೂಚಿಸಲಾಗಿದೆ. ಅವು ಎರಡೂ ಸೂಖೆಗಳು. 'ಅವನು ನಮಗೆ ಸೂಖೆಯನ್ನು ನೀಡಿದ ಹಾಗೆ' ಇದರ ಅರ್ಥ ದೇಹದಲ್ಲಿರುವ ಜೀವ, ಈಗ ನಾವೇನು ಮಾಡಬೇಕು? ನಾವೂ ಸಹ ನಮ್ಮ ಸಹೋದರರಿಗಾಗಿ ನಮ್ಮ ಜೀವವನ್ನು (ಸೂಖೆ) ಕೊಡಬೇಕು.

"ತನ್ನ ಪ್ರಾಣವನ್ನು (ಸೂಖೆ) ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು (ಸೂಖೆ) ಕಳಕೊಂಡವನು ಅದನ್ನು ಕಂಡುಕೊಳ್ಳುವನು." (ಮತ್ತಾ 10:39)

"ಈಗಲಾದರೂ ನೀವು ಧೈರ್ಯದಿಂದಿರಬೇಕೆಂದು ನಿಮಗೆ ಬುದ್ಧಿಹೇಳುತ್ತೇನೆ; ಹಡಗು

ನಷ್ಟವಾಗುವದೇ ಹೊರತು ನಿಮ್ಮಲ್ಲಿ ಒಬ್ಬರಿಗೂ ಪ್ರಾಣನಷ್ಟವಾಗುವದಿಲ್ಲ (ಸೂಖೆ)." (ಅ. ಕೃ 27:22)

ಲೂಕ 12:22ರಲ್ಲಿ, "ಇದಲ್ಲದೆ ಆತನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ – ಈ ಕಾರಣದಿಂದ ಪ್ರಾಣಾಧಾರಣೆಗೆ (ಸೂಖೆ) ಏನು ಊಟ ಮಾಡಬೇಕು? ದೇಹ ರಕ್ಷಣೆಗೆ ಏನು ಹೊದ್ದು ಕೊಳ್ಳಬೇಕು ಎಂದು ಚಿಂತೆಮಾಡಬೇಡಿರಿ ಎಂಬುದಾಗಿ ನಿಮಗೆ ಹೇಳುತ್ತೇನೆ."

> ಸೂಖೆ, ಮನುಷ್ಯನ ಪ್ರಾಣದಲ್ಲಿನ ಮನುಷ್ಯ ಜೀವವಾಗಿದೆ (ಹಳೆಯ ತಾನು).

ಇನ್ನೂ ಹೆಚ್ಚು ವಾಕ್ಯಗಳಿವೆ. ನಾವು ಈ ಎಲ್ಲವನ್ನು ಗಮನಿಸಿದರೆ, ದೇಹದಲ್ಲಿನ ಜೀವವನ್ನು (ಸೂಖೆ) ನಾವು ನೋಡಬಹುದು.

## ಝೋೕಯೆ

ಯೋಹಾನ 1:4ರಲ್ಲಿ "ಆತನಲ್ಲಿ ಜೀವವಿತ್ತು (ಝೋೕಯೆ); ಆ ಜೀವವು (ಝೋೕಯೆ) ಮನುಷ್ಯರಿಗೆ ಬೆಳಕಾಗಿತ್ತು."

ಯೋಹಾನ 10:10ರಲ್ಲಿ "ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು (ಝೋೕಯೆ) ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು."

ನಾವು ಈ ವಾಕ್ಯಗಳನ್ನೆಲ್ಲಾ ಗಮನಿಸಿದಾಗ, ನಾವು ಸೂಖೆಯನ್ನು ನೋಡುವದಿಲ್ಲ ಆದರೆ ಝೋೕಯೆಯನ್ನು (ದೇವರ ಜೀವ) ನೊಡುತ್ತೇವೆ. ಸೂಖೆ ಅಂದರೆ ದೇಹದಲ್ಲಿ ಜೀವ (ಮನುಷ್ಯನ ಪ್ರಾಣ) ಮತ್ತು ಝೋೕಯೆ ಅಂದರೆ ದೇವರಲ್ಲಿರುವ ಅದೇ ಜೀವವಾಗಿದೆ.

> ಝೋೕಯೆ – ಹೊಸದಾಗಿ ಸೃಷ್ಟಿಸಲ್ಪಟ್ಟ ಆತ್ಮದಲ್ಲಿ ದೇವರ ಜೀವ (ಹೊಸ ತಾನು).

ಆತನಲ್ಲಿ (ಯೇಸು) ಜೀವವಿತ್ತು (ಝೋೕಯೆ). ಯೋಹಾನ 1:4ರಲ್ಲಿ ಹೇಳಿರುವ ಜೀವ ಝೋೕಯೆ ಕುರಿತು. ಕ್ರಿಸ್ತನು ಹೇಳುತ್ತಾನೆ, "ನಾನು ನಿಮಗೆ ಜೀವವನ್ನು ನೀಡಲು ಮತ್ತು ಜೀವವನ್ನು ಹೇರಳವಾಗಿ ನೀಡಲು ಬಂದಿದ್ದೇನೆ." ಯೋಹಾನ 10:10ರಲ್ಲಿ ಇದು ಸೂಖೆಯಲ್ಲ ಬದಲಿಗೆ ಝೋೕಯೆಯಾಗಿದೆ. ಮುಂದುವರಿಕೆಯಲ್ಲಿ, ನಾವು ಸತ್ಯವೇದವನ್ನು ಓದುವಾಗ ಎಲ್ಲೆಲ್ಲಿ ದೇವರ ಜೀವವೆಂದು ಸೂಚಿಸಲಾಗಿದೆಯೋ, ಅಲ್ಲಿ ನಾವು ಝೋೕಯೆಯನ್ನು ನೋಡಬಹುದು ಮತ್ತು ಎಲ್ಲೆಲ್ಲಿ ಮನುಷ್ಯನ ಪ್ರಾಣದ ಕುರಿತು ಹೇಳಿದೆಯೋ ಅಲ್ಲಿ ನಾವು ಸೂಖೆಯನ್ನು ನೋಡಬಹುದು ಎಂದು ಅರ್ಥಮಾಡಿಕೊಳ್ಳುತ್ತೇವೆ

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಈ ಅಧ್ಯಾಯದ ಮೂಲಕ ನೀನು ನನಗೆ ನೀಡಿರುವ ತಿಳುವಳಿಕೆಗಾಗಿ ವಂದನೆಗಳು. ಒಬ್ಬ ನಿಜವಾದ ದೇವರ ಮಗುವಿಗೆ ಭೌತಿಕ ಮರಣವು ಈ ಕೆಳಗಿನ ಲೋಕದಿಂದ ಮೇಲಿನ ಲೋಕಕ್ಕೆ ಮುಂಬಡ್ತಿ ಎಂದು ನಾನು ಅರಿತುಕೊಂಡೆ. ನನ್ನ ಆಂತರಿಕ ಮನುಷ್ಯನ ಮೇಲೆ ನಿನ್ನ ಸರ್ವಾಯುಧಗಳನ್ನು ಧರಿಸುವಂತೆ ಮತ್ತು ಒಬ್ಬ ಆತ್ಮೀಕ ವ್ಯಕ್ತಿಯ ಜೀವವು ಅವನ ಆತ್ಮದಲ್ಲಿದೆ ಎಂದು ಅರ್ಥಮಾಡಿಕೊಳ್ಳುವದಕ್ಕೆ ನನಗೆ ಸಹಾಯಮಾಡು. ಕರ್ತನೇ, ನಾನು ಹೆಚ್ಚಾಗಿ ಬೆಳೆಯುವಂತೆ ಸಹಾಯಮಾಡಿದ್ದಕ್ಕೆ ವಂದನೆಗಳು... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಸೂಖೆ = ರಕ್ತದಲ್ಲಿ ಅಥವಾ ಹಳೆಯ ಸ್ವಯಂನಲ್ಲಿ "ಮನುಷ್ಯನ ಪ್ರಾಣ."

   ಝೋಯೆ = ಆತ್ಮದಲ್ಲಿ ಅಥವಾ ಹೊಸ ಸ್ವಯಂನಲ್ಲಿ "ದೇವರ ಜೀವ."

2. ಭೌತಿಕವಾಗಿ ಸಂವಹನಿಸುವ ಸಲುವಾಗಿ, ನಮಗೆ ಭೌತಿಕ ಶರೀರ ಬೇಕು. ಅದರ ಹಾಗೆ ಆತ್ಮ ಪ್ರಪಂಚದೊಂದಿಗೆ ಸಂವಹನಿಸಲು ನಮಗೆ ಆತ್ಮೀಕ ಶರೀರ ಬೇಕು.
3. ರಕ್ತದಿಂದ ಜೀವ ಅಂದರೆ ಶರೀರದ ಜೀವ ಅಥವಾ ಬಾಹೀರಿಕ ಮನುಷ್ಯನ ಜೀವ ಆದರೆ ಆತ್ಮದಿಂದ ಜೀವ ಎಂದು ನಾವು ಹೇಳಿದಾಗ, ಅದು ಬಾಹೀರಿಕ ಮನುಷ್ಯನ ಜೀವವನ್ನು ಅರ್ಥೈಸುವುದಿಲ್ಲ ಬದಲಿಗೆ ಆಂತರಿಕ ಮನುಷ್ಯನ ಜೀವವನ್ನು ಅರ್ಥೈಸುತ್ತದೆ.
4. ಒಬ್ಬ ನಿಜವಾದ ದೇವರ ಮಗುವಿಗೆ, ಈ ಲೋಕದಲ್ಲಿ ಭೌತಿಕ ಮರಣವು ಕೆಳಗಿನ ಲೋಕದಿಂದ ಮೇಲಿನ ಲೋಕಕ್ಕೆ ಮತ್ತು ಕೆಳಗಿನ ಜೀವದಿಂದ (ಸೂಖೆ) ಮೇಲಿನ ಜೀವದ (ಝೋಯೆ) ಪೂರ್ಣತೆಗೆ ಮುಂಬಡ್ತಿ ಮಾತ್ರವಾಗಿದೆ.
5. ಭೌತಿಕ ಮನುಷ್ಯನ ಜೀವವು ರಕ್ತದಲ್ಲಿದೆ ಆದರೆ ಆತ್ಮೀಕ ಮನುಷ್ಯನ ಜೀವವು ಆತ್ಮದಲ್ಲಿದೆ.
6. ಭೌತಿಕ ಶರೀರಕ್ಕೆ ನಾವು ಅಂಗಿ, ಪ್ಯಾಂಟ್ ಮತ್ತು ಚೂಡಿದಾರಗಳನ್ನು ಧರಿಸಬೇಕು ಆದರೆ ವೈರಿಯನ್ನು ಸೋಲಿಸಲು, ನಮ್ಮ ಆತ್ಮೀಕ ಶರೀರಕ್ಕೆ, ದೇವರು ಆಜ್ಞಾಪಿಸಿದಂತೆ ನಾವು ದೇವರ ಸರ್ವಾಯುಧಗಳನ್ನು ಧರಿಸಬೇಕು. (ಎಫೆ 6:13-17)



# ಅಧ್ಯಾಯ 12

# ನಾನು ಪರಿವರ್ತನೆಯ ಪ್ರಕ್ರಿಯೆಯಲ್ಲಿದ್ದೇನೆ

*"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲ ಕೊಡುವದು. ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು."*

*(ಯೋಹಾನ 12:24-25)*

| ಝೋಯೆ – ದೇವರ ಜೀವ | ಸೂಖೆ – ಮನುಷ್ಯ ಜೀವ |
|---|---|

## ಅ) ಗೋಧಿಯ ಕಾಳು ಸಾಯಬೇಕು (ಶರೀರದ ಭಾವಗಳು ನಾಶವಾಗಬೇಕು)

ವಿಮೋಚಿಸಲ್ಪಟ್ಟಿರುವಂಥ ನಾವು, ಈ ಲೋಕದಲ್ಲಿ ಜೀವಿಸುವಾಗ ಸೂಖೆ ಮತ್ತು ಝೋಯೆ ಎರಡೂ ನಮ್ಮಲ್ಲಿದೆ. ಸೂಖೆಯಲ್ಲಿ ಜೀವನ ಶೈಲಿಯು ಹೊರಗಿನಿಂದ ಒಳಕ್ಕೆ ಅಥವಾ ನೋಟದಿಂದಾಗಿದೆ. ಇನ್ನೊಂದು ಬದಿಯಲ್ಲಿ, ಝೋಯೆಯ ಜೀವನ ಶೈಲಿ, ದೇವರ ವಾಕ್ಯದಿಂದ ಉಗಮಿಸುವ ನಂಬಿಕೆಯ ಪ್ರಕಾರವಾಗಿದೆ ಮತ್ತು ಒಳಗಿನಿಂದ ಹೊರಕ್ಕೆ ಕಾರ್ಯಮಾಡುತ್ತದೆ. ಹೊರಗಿನ ಮನುಷ್ಯನ ಜೀವವನ್ನು ಈ ಲೋಕಕ್ಕಾಗಿ ಇಡಲಾಗಿದೆ.

ಯೇಸು ಕ್ರಿಸ್ತನು ಅವನ ಸೂಖೆಯನ್ನು ಕೊಟ್ಟಂತೆಯೇ ನಾವೂ ಸಹ ನಮ್ಮ ಸೂಖೆ ಜೀವವನ್ನು ಕೊಡಬೇಕು. ಒಬ್ಬ ವಿಶ್ವಾಸಿಯ ಪ್ರಕಾರ  ಗೋಧಿಯ ಕಾಳಿನ ಹೊರಭಾಗವು ಸೂಖೆಯಾದರೆ, ಗೋಧಿಯ ಕಾಳಿನ ಒಳಭಾಗವು ಝೋಯೆಯಾಗಿದೆ.

ನಮ್ಮ ಹಳೆಯ ಗುಣ ಅಥವಾ ಸ್ವಭಾವ ಸತ್ತಾಗ ಮಾತ್ರ, ಒಳಗಿಂದ ಜೀವವು (ಝೋಯೆ) ಹೊರಬರುತ್ತದೆ. ಅದರಂತೆಯೇ ಶರೀರದ ಸ್ವಭಾವವು ನಾಶವಾದಾಗ ಮಾತ್ರ, ಅಂದರೆ ನಮ್ಮ "ಸ್ವಯಂ" ಶರೀರದ ಸ್ವಭಾವದೊಂದಿಗೆ ತುಂಬಲ್ಪಡುತ್ತಿರುವ ಸೂಖೆ ನಾಶವಾದಾಗ, ಝೋಯೆ (ದೇವರ ಜೀವ) ನಮ್ಮೊಳಗಿಂದ ಹೊರಬರುತ್ತದೆ. ಈ ಕಾರಣಕ್ಕಾಗಿ, ಕ್ರಿಸ್ತನು ನಮ್ಮಲ್ಲಿ ಪರಿಶುದ್ಧಾತ್ಮನ ಕಾರ್ಯವನ್ನು ಪ್ರಾರಂಭಿಸಿದ್ದಾನೆ. (ರೋಮಾ 8:13)

ವಿಮೋಚಿಸಲ್ಪಟ್ಟಿರುವ ಎಲ್ಲರೂ ತಾವು ಪರಿವರ್ತನಾ ಕಾರ್ಯದಲ್ಲಿದ್ದೇವೆ ಎಂದು ಅರ್ಥಮಾಡಿಕೊಳ್ಳಬೇಕು.

ಒಬ್ಬ ವ್ಯಕ್ತಿ ರಕ್ಷಿಸಲ್ಪಟ್ಟ ಸಮಯದಿಂದ ಈ ಭೌತಿಕ ಪ್ರಪಂಚದಿಂದ ಅವನು ತೆಗೆಯಲ್ಪಡುವ ಸಮಯದವರೆಗೂ, ಪ್ರತೀ ವಿಶ್ವಾಸಿ ಪರಿವರ್ತನಾ ಕಾರ್ಯದಲ್ಲಿದ್ದಾನೆ.

ಒಬ್ಬ ವ್ಯಕ್ತಿ ರಕ್ಷಿಸಲ್ಪಟ್ಟ ಸಮಯದಿಂದ ಈ ಭೌತಿಕ ಪ್ರಪಂಚದಿಂದ ತೆಗೆಯಲ್ಪಡುವ ಸಮಯದವರೆಗೂ, ಪ್ರತೀ ವಿಶ್ವಾಸಿ ಪರಿವರ್ತನಾ ಕಾರ್ಯದಲ್ಲಿದ್ದಾನೆ.

ಯಾರು ನಿಮ್ಮನ್ನು ಮತ್ತು ನನ್ನನ್ನು ಪರಿವರ್ತಿಸುತ್ತಿದ್ದಾರೆ?

ದೇವರು ಮತ್ತು ಆತನು ಇದನ್ನು ತನ್ನ ಆತ್ಮನ ಮೂಲಕ ಮಾಡುತ್ತಿದ್ದಾನೆ. ಪರಿಶುದ್ಧಾತ್ಮನು ನಮ್ಮ ಆತ್ಮದೊಳಗೆ ಬಂದಿದ್ದಾನೆ (2 ಕೊರಿ 5:5, ರೋಮಾ 8:23) ಮತ್ತು ನಮ್ಮನ್ನು ಪ್ರತೀ ನಿಮಿಷ ಸಿದ್ಧಮಾಡುತ್ತಿದ್ದಾನೆ.

ನೀವು ಪರಿವರ್ತನಾ ಪ್ರಕ್ರಿಯೆಯಲ್ಲಿದ್ದೀರೆಂದು ನಿಮ್ಮ ಹೃದಯದಲ್ಲಿ ಬರೆದುಕೊಳ್ಳಿರಿ.

ಇದು ಶರೀರದ ಭಾವಗಳಿಂದ ಆತ್ಮದ ಭಾವಗಳಿಗೆ ಬದಲಾವಣೆಯಾಗಿದೆ. (ಸೂಖಿ ಭಾವಗಳಿಂದ ಝೋೕಯೆ ಭಾವಗಳಿಗೆ)

## ಆ) ಬದಲಾವಣೆಯ ಪ್ರಕ್ರಿಯೆ

ನಮ್ಮೊಳಗಿನ ಶರೀರ ಭಾವಗಳಿಗೆ ಸಂಬಂಧಿಸಿದ ಕಡತಗಳನ್ನು[ಫೈಲುಗಳನ್ನು] ತೆಗೆದುಹಾಕಿ ಮತ್ತು ಆತ್ಮದ (ವಾಕ್ಯ) ಕಡತಗಳೊಂದಿಗೆ ಬದಲಾಯಿಸುವ ಪ್ರಕ್ರಿಯೆಯಲ್ಲಿ ನಾವಿದ್ದೇವೆ.

ದೇವರು ನಮಗೆ ಮಾಡುತ್ತಿರುವ ಕೆಲವು ಸಿದ್ಧತೆಗಳನ್ನು ನಾವು ನೋಡಲಿದ್ದೇವೆ – ನಮ್ಮಲ್ಲಿ ಕೆಲವರು ಈ ರೀತಿ ಯೋಚಿಸಬಹುದು, ರಕ್ಷಣೆಯ ಅನುಭವಕ್ಕೆ ಬರುವ ಮೊದಲು ನಾವು ಯಾವ ಸಮಸ್ಯೆಗಳನ್ನೂ ಹೊಂದಿರಲಿಲ್ಲ; ಆದರೆ ರಕ್ಷಣೆಯ ಅನುಭವಕ್ಕೆ ಬಂದ ನಂತರ, ಬರೀ ಸಮಸ್ಯೆಗಳೇ ಇದೆ. ಯಾಕೆ ಇದು ಹೀಗೆ? ರಕ್ಷಣೆಯ ಅನುಭವದೊಳಗೆ ಬರುವ ಮೊದಲು, ಯಾವುದಕ್ಕೂ ಹೆದರದೆ ನಾವು ಹೊರಗೆ ಅಲೆಯುತ್ತಿದ್ದೆವು. ನಮ್ಮನ್ನು ಸರಿಮಾಡಲು ಅಥವಾ ನಮ್ಮನ್ನು ಶಿಕ್ಷಿಸಲು ಯಾರೂ ಇರಲಿಲ್ಲ, ಆದರೆ ಈಗ ನಾವು ತಂದೆಯನ್ನು ಹೊಂದಿದ್ದೇವೆ.

ಪೋಲಿಹೋದ ಮಗನ ದೃಷ್ಟಾಂತದಲ್ಲಿ, ಕಿರಿಯ ಮಗನು ಅವನ ಸ್ವಂತ ಮನೆಗೆ ಹಿಂತಿರುಗಿ ಬಂದಾಗ, ಅವನಿಗೆ ಸ್ನಾನ ಮಾಡಿಸಲಾಯಿತು ಮತ್ತು ಹೊಸ ಬಟ್ಟೆಗಳನ್ನು ಉಡಿಸಲಾಯಿತು. ಅದೇ ರೀತಿಯಲ್ಲಿ ಕ್ರಿಸ್ತನು ನಮ್ಮನ್ನು ಕರೆದಿದ್ದಾನೆ ಮತ್ತು ದೇವರ ಕುಟುಂಬದೊಳಗೆ ತಂದಿದ್ದಾನೆ. ಕ್ರಿಸ್ತನ ಕಾರ್ಯವು ಈಗ ನಮ್ಮಲ್ಲಿ ನಡೆಯುತ್ತಿದೆ.

ಪರಿಶುದ್ಧಾತ್ಮನು ನಮ್ಮ ಆತ್ಮ ದೊಳಗೆ ಬಂದಿದ್ದಾನೆ ಮತ್ತು ಪ್ರತೀ ನಿಮಿಷ ನಮ್ಮನ್ನು ಸಿದ್ಧ ಮಾಡುತ್ತಿದ್ದಾನೆ.

ನಮ್ಮನ್ನು ಕರೆದು, ಒಳಗೆ ಕರೆತಂದ ನಂತರ ಕ್ರಿಸ್ತನ ಕಾರ್ಯದ ಬಗ್ಗೆ ನಮಗೆ ತಿಳಿದಿಲ್ಲ

ವಾದ್ದರಿಂದ, ಮೊದಲು ನಮಗೆ ಯಾವುದೇ ಸಮಸ್ಯೆಗಳಿರಲಿಲ್ಲ ಆದರೆ ಈಗ ನಾವು ಸಮಸ್ಯೆಗಳಿಂದ ತುಂಬಿದ್ದೇವೆ ಎಂದು ಹೇಳುತ್ತೇವೆ. ಆದ್ದರಿಂದ ನಾವು ದೇವರ ಪರಿವರ್ತನೆಯ ಪ್ರಕ್ರಿಯೆಯಲ್ಲಿದ್ದೇವೆ  ಮತ್ತು ಸಿದ್ಧತೆಗಳು ನಮ್ಮೊಳಗೆ ನಡೆಯುತ್ತಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು.

## ಇ) ಹೇಗೆ ಕ್ರಿಸ್ತನು ನಮ್ಮನ್ನು ಸಿದ್ಧಗೊಳಿಸುತ್ತಿದ್ದಾನೆ? (ಎರಡು ರೀತಿಯ ತೋಟಗಳು)

**"ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು." (ಮತ್ತಾ 15:13)**

ಈ ಕಾರ್ಯಕ್ಕೆ ದೇವರ ರಾಜ್ಯದ ನಿಯಮವನ್ನು ದೇವರು ಉಪಯೋಗಿಸುತ್ತಾರೆ. ಇದನ್ನು ಪರಿಶುದ್ಧ ವಾಕ್ಯದಲ್ಲಿ ಸೂಚಿಸಲಾಗಿದೆ. ಸಭಾ ಕೂಟಗಳಲ್ಲಿ, ದೇವರ ರಾಜ್ಯದ ನಿಯಮಕ್ಕೆ ಸಂಬಂಧಿಸಿದಂತೆ ದೇವರ ಸೇವಕರು ಮತ್ತಾ 5,6 ಮತ್ತು 7ನ್ನು ಬೋಧಿಸುವುದನ್ನು ನೀವು ಕೇಳಿರಬಹುದು. ಈ ಭಾಗವು ಅನೇಕರಿಂದ ಬೋಧಿಸಲ್ಪಟ್ಟಿಲ್ಲ. ಆದರೆ ಇದನ್ನು ಬೋಧಿಸುವಾಗ, ನಿಮ್ಮ ವೈರಿಗಳನ್ನು ಪ್ರೀತಿಸಬೇಕು ಮತ್ತು ಯಾರಾದರೂ ನಿಮ್ಮ ಒಂದು ಕೆನ್ನೆಗೆ ಹೊಡೆದರೆ ನೀವು ಅವರಿಗೆ ಇನ್ನೊಂದು ಕೆನ್ನೆಯನ್ನು ತೋರಿಸಬೇಕು (ಮತ್ತಾ 5:39,44) ಎಂದು ನೀವು ಕಲಿತಿರಬಹುದು. ಈ ಸಂಗತಿಗಳನ್ನು ಸೂಖೆಯಲ್ಲಿರುವವರಿಂದ (ಶರೀರದಲ್ಲಿ ಕಾರ್ಯಮಾಡುವವದು) ಅರಗಿಸಿಕೊಳ್ಳಲಾಗುವದಿಲ್ಲ ಮತ್ತು ಅವರು ಇದನ್ನು ತಿಳಿದಿಲ್ಲ. ಅವರಿಗೆ ಏನು ಗೊತ್ತೆಂದರೆ ಯಾರಾದರೂ ಅವರ ಕೆನ್ನೆಯ ಮೇಲೆ ಹೊಡೆದರೆ ಅವರೂ ಸಹ ಆ ವ್ಯಕ್ತಿಗೆ ಅದನ್ನೇ ಮಾಡಬೇಕು ಮತ್ತು ಹೆಚ್ಚು ನೋವನ್ನುಂಟುಮಾಡಲು ಪ್ರಯತ್ನಿಸಬೇಕು. ಇದು ಈ ಲೋಕದ ನಿಯಮ. ಈಗ ಊಹಿಸಿಕೊಳ್ಳಿ, ಒಬ್ಬ ವ್ಯಕ್ತಿ, ಈ ಲೋಕದ ನಿಯಮದಲ್ಲಿ ಕಾರ್ಯಮಾಡುತ್ತಾ, ದೇವರ ರಾಜ್ಯದ ವಾಕ್ಯಗಳನ್ನು ಕೇಳಲು ಬಂದಿದ್ದಾನೆ. ಈ ವ್ಯಕ್ತಿ ಬಂದಿದ್ದಾನೆಂದು ಯಜಮಾನನು (ದೇವರು) ತಿಳಿದು, ಸಭಾಪಾಲಕರ ಅಥವಾ ವಾಕ್ಯ ಸಾರುವವರ ಮನಸ್ಸಿನಲ್ಲಿ ಕಾರ್ಯಮಾಡುತ್ತಾರೆ ಮತ್ತು ಅದೇ ವಾಕ್ಯವನ್ನು (ದೇವರ ರಾಜ್ಯದ ಕಾರ್ಯದ ನಿಯಮಗಳು) ಪ್ರಸಂಗಿಸಲಾಗುತ್ತದೆ.

**"ಆದರೆ, ನಾನು ನಿಮಗೆ ಹೇಳುವದೇನೆಂದರೆ – ಕೆಡುಕನನ್ನು ಎದುರಿಸಬೇಡ, ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು." (ಮತ್ತಾ 5:39)**

**"ನಾನು ನಿಮಗೆ ಹೇಳುವದೇನೆಂದರೆ – ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ." (ಮತ್ತಾ 5:44)**

> ಸೈತಾನನಿಂದ ಬಿತ್ತಲ್ಪಟ್ಟ ಶಾರೀರಿಕ ಭಾವಗಳನ್ನು ಬೇರುಸಹಿತ ಕೀಳುವುದರಿಂದ ಮತ್ತು ನಮ್ಮ ಪ್ರಾಣದ ಮನಸ್ಸಿನಲ್ಲಿ ಆತ್ಮದ ಹೊಸ ಭಾವಗಳನ್ನು ಬಿತ್ತುವದರಿಂದ ದೇವರು ನಮ್ಮನ್ನು ಸಿದ್ಧಗೊಳಿಸುತ್ತಿದ್ದಾನೆ.

ಈ ವಾಕ್ಯಗಳನ್ನು ಕೇಳಿ, ಮೊದಲಿಗೆ ಅವನು ಇದನ್ನು ಗ್ರಹಿಸಿಕೊಳ್ಳಲು **ಸಾಧ್ಯವಾಗಲಿಲ್ಲ** ಆದರೆ ನಂತರ ಮರುಪರಿಶೀಲಿಸಿದ ಮತ್ತು ಅವನಲ್ಲಿ ನೆಲೆಸಿದ್ದ ಪರಿಶುದ್ಧಾತ್ಮನ ಪ್ರೇರಣೆಯಿಂದ ಅಭ್ಯಾಸಮಾಡಲು ನಿರ್ಧರಿಸಿದ. ಕೂಟದಿಂದ ಹೊರಬಂದು ಒಬ್ಬ ವೈರಿಯನ್ನು ಕಾಣಲು ಅವನು ಸುತ್ತಲೂ ನೋಡಿದ. ಅವನು ಬಹಳ ಕಾದ, ಆದರೆ ಒಬ್ಬನನ್ನೂ ಹುಡುಕಲು ಸಾಧ್ಯವಾಗಲಿಲ್ಲ. ಹಾಗಾದರೆ ಅವನು ಕೇಳಿದ ವಾಕ್ಯವನ್ನು ಹೇಗೆ ಅವನು ಅಭ್ಯಾಸಮಾಡುತ್ತಾನೆ. ಯಾವ ವೈರಿಯೂ ಸಿಗದಿದ್ದರೆ ಹೇಗೆ ಅವನು ತನ್ನ ವೈರಿಗಳನ್ನು ಪ್ರೀತಿಸಬೇಕು? ತೊಂದರೆ ಅಥವಾ ಕಿರುಕುಳವನ್ನು ಅನುಮತಿಸುವುದು ದೇವರ ಯೋಜನೆಯಲ್ಲಿದೆ. ದೇವರ ವಾಕ್ಯದಿಂದ ಉದ್ಭವಿಸುವ ಕಿರುಕುಳದ ಕುರಿತು ಮತ್ತಾಯ 13:21ರಲ್ಲಿ ಹೇಳಲಾಗಿದೆ. ಇದೇ ಕಾರ್ಯವು ಧರ್ಮೋಪದೇಶಕಾಂಡ 8:2-3ರಲ್ಲಿ ಕಾಣುತ್ತೇವೆ. ದೇವರು ಇದನ್ನು ಅನುಮತಿಸುತ್ತಾರೆ ಮತ್ತು ಇದು ನಮ್ಮ ನಾಶನಕ್ಕಾಗಿ ಅಲ್ಲ ಬದಲಿಗೆ ನಮ್ಮ ಒಳ್ಳೆಯದಕ್ಕಾಗಿದೆ.

**“ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗನೆ ಎಡವಿಬೀಳುತ್ತಾನೆ.” (ಮತ್ತಾ 13:21)**

ಒಂದು ಕೆನ್ನೆಗೆ ಹೊಡೆಸಿಕೊಂಡರೆ ಇನ್ನೊಂದು ಕೆನ್ನೆಯನ್ನೂ ತೋರಿಸು ಎಂದು ಹೇಳುವುದು ಪ್ರಸಂಗಿಸುವದಕ್ಕೆ ಸುಲಭ ಮತ್ತು ಸರಳವಾದ ವಿಷಯ, ಆದರೆ ಅಭ್ಯಾಸ ಮಾಡುವದಕ್ಕೆ ತುಂಬಾ ಕಷ್ಟ. ಅದನ್ನು ನಮ್ಮ ತಂದೆ ಅರ್ಥಮಾಡಿಕೊಳ್ಳುತ್ತಾರೆ ಹಾಗಾಗಿ ಆತನು ನಿಮ್ಮನ್ನು ಸಿದ್ಧಪಡಿಸುತ್ತಾರೆ, ನಿಮ್ಮನ್ನು ಸಜ್ಜುಗೊಳಿಸುತ್ತಾರೆ ಮತ್ತು ನಿಮ್ಮನ್ನು ಪರಿವರ್ತಿಸುತ್ತಾರೆ. ಈ ಅಧ್ಯಾಯದಲ್ಲಿ ಮತ್ತಷ್ಟು ಓದಿದಂತೆ ನಾವು ಇದನ್ನು ಹೆಚ್ಚು ಅರ್ಥಮಾಡಿಕೊಳ್ಳೋಣ.

## ಈ) ಪ್ರಾಣವನ್ನು ಬಂಧಿಸಿರಿ

ದೇವರ ವಾಕ್ಯವನ್ನು ಕೇಳಿದಂತಹ ವ್ಯಕ್ತಿ, ಎದುರಿಗಿರುವ ವ್ಯಕ್ತಿಯನ್ನು ಹಿಂತಿರುಗಿ ಹೊಡೆಯದಿರಲು ಮತ್ತು ಅವನೆದುರಿಗೆ ಇನ್ನೊಂದು ಕೆನ್ನೆಯನ್ನು ತೋರಿಸಲು **ಆತ್ಮೀಕ ಬಲ** ಬೇಕು. ಈ ಬಲವು ಒಂದು ದಿನದಲ್ಲಿ ಬೆಳೆಯುವದಿಲ್ಲ, ಆದರೆ ನಮ್ಮಲ್ಲಿ ವಾಸಿಸುತ್ತಿರುವ ಪರಿಶುದ್ಧಾತ್ಮನ ಮಾತಿನೊಂದಿಗೆ ನಾವು ಸಹಕರಿಸಿದರೆ ಅದು ಕ್ರಮೇಣವಾಗಿ ನಮ್ಮಲ್ಲಿ ಬೆಳೆಯುತ್ತದೆ. ಪ್ರಾಣದ ಶಕ್ತಿಯನ್ನು ಜಯಿಸಲು ಆತ್ಮೀಕ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ಜಯಿಸಲು ಬೇಕಾದ ಶಕ್ತಿ ಎಂದು ನಾವು ಹೇಳುವಾಗ, ಅದು ಭೌತಿಕ ಶರೀರದ ಶಕ್ತಿಯಲ್ಲ ಬದಲಿಗೆ ಶರೀರದಿಂದ ಬಲಹೊಂದಲ್ಪಟ್ಟಿರುವ ಪ್ರಾಣದ ಶಕ್ತಿ.

ಶರೀರದ ಶಕ್ತಿ ಏನೂ ಇಲ್ಲ. "ನನಗೆ ಏನನ್ನೂ ಮಾಡಲು ಸಾಧ್ಯವಾಗದಿದ್ದರೆ, ಕಣ್ಣುಗಳಲ್ಲಿ ಮಣ್ಣನ್ನು ಎಸೆದ ನಂತರ ನಾನು ಓಡಿಹೋಗುತ್ತೇನೆ" ಎಂಬ ಹೇಳಿಕೆಯನ್ನು ಜಗಳವಾಡುವಾಗ ನೀವು ಕೇಳಿರಬಹುದು. ಕಾರಣವೇನೆಂದರೆ ಶರೀರವು ಕಾದಾಡಲು ಶಕ್ತಿಹೊಂದಿಲ್ಲದಿದ್ದರೂ, ಅವನ ಪ್ರಾಣವು ಕಾದಾಡುವ ಶಕ್ತಿಯನ್ನು ಹೊಂದಿದೆ ಹಾಗಾಗಿ ಅವನಿಗೆ ಹೀಗೆ ಹೇಳಲು ಸಾಧ್ಯವಾಯಿತು. ಈ 'ಪ್ರಾಣದ ಶಕ್ತಿಯನ್ನು' ಆತ್ಮನು ನೀಡುವ ವಾಕ್ಯದ ಭಾವಗಳಿಂದ ಕಟ್ಟಬೇಕು ಅಥವಾ ಜಯಿಸಬೇಕು.

> ನಮಗೆ ಹೊಡೆದಿರುವ ವ್ಯಕ್ತಿಗೆ ಹೊಡೆಯುವ ಸಲುವಾಗಿ ನಮಗೆ ಹೆಚ್ಚು ಶಕ್ತಿ ಬೇಡ. ನಮ್ಮ ಅರಿವಿಲ್ಲದೆಯೇ ನಮ್ಮ ಕೈಗಳು ಮೇಲೆ ಹೋಗುತ್ತವೆ, ಆದರೆ ನಮಗೆ ಹೊಡೆದಿರುವ ವ್ಯಕ್ತಿಗೆ ಹೊಡೆಯದಿರಲು ನಾವು ಹೆಚ್ಚು ಶಕ್ತಿಯನ್ನು ಹೊಂದಿರಬೇಕು.

ನಮಗೆ ಹೊಡೆದಿರುವ ವ್ಯಕ್ತಿಯನ್ನು ಹೊಡೆಯಲು ನಮಗೆ ಹೆಚ್ಚು ಶಕ್ತಿ ಬೇಕಾಗಿಲ್ಲ. ಆ ಶಕ್ತಿಯು "ಶರೀರದ ಭಾವಗಳಿಂದ" ನಮ್ಮ ಪ್ರಾಣದಲ್ಲಿ ಈಗಾಗಲೇ ತುಂಬಲ್ಪಟ್ಟಿರುವುದರಿಂದ, ಅದು ಯಾಂತ್ರಿಕವಾಗಿ ಜರುಗುತ್ತದೆ. ಈಗ ದೇವರ ವಾಕ್ಯವನ್ನು ಅಭ್ಯಸಿಸುವುದರಿಂದ ಜಯಶಾಲಿಯಾಗಲು ನಮ್ಮನ್ನು ಸಿದ್ಧಗೊಳಿಸುವ ಸಲುವಾಗಿ, ನಾವು ದೇವರ ವಾಕ್ಯವನ್ನು ಕೇಳಿದ ನಂತರ ದೇವರು ನಮ್ಮ ಜೀವನದಲ್ಲಿ ಪ್ರಾಯೋಗಿಕ ಪರೀಕ್ಷೆಯನ್ನು ಅನುಮತಿಸುತ್ತಾರೆ. ಇದು ಪಠ್ಯಕ್ರಮವನ್ನು ಕಲಿಸಿದ ನಂತರ, ಪ್ರತೀ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಾಲೆಯಲ್ಲಿ ಸರ್ಕಾರದ ವಾರ್ಷಿಕ ಪರೀಕ್ಷೆಯಂತೆಯೇ ಆಗಿದೆ. ಈ ಪರೀಕ್ಷೆಯಲ್ಲಿ ನಾವು ಯಶಸ್ವಿಯಾಗಿ ಉತ್ತೀರ್ಣರಾದರೆ ನಾವು ಮುಂಬಡ್ತಿ ಹೊಂದುತ್ತೇವೆ. ದೇವರ ವಾಕ್ಯ ಹೇಳುತ್ತದೆ,

**"ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು; ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು; ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನಮಾಡಿದ್ದಾನೆ." (ಯಾಕೋಬನು 1:12)**

ಈ ವಾಕ್ಯವನ್ನು ಕೇಳುವುದಕ್ಕೆ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಅನೇಕರು ಹೇಳಿದಾಗ, ಗಂಡನು ಕೋಪಗೊಳ್ಳುತ್ತಾನೆ ಅಥವಾ ಹೆಂಡತಿಯು ಸೈತಾನನಂತೆ ನಿಂತುಕೊಳ್ಳುತ್ತಾಳೆ. ಯಾಕೆ ಹೆಂಡತಿ ಅಥವಾ ಗಂಡ ಈ ರೀತಿ ವರ್ತಿಸುತ್ತಿದ್ದಾರೆ? ಆರಾಧನಾ ಸೇವೆಯ ನಂತರ ಹಿಂದಿರುಗಿ ಬಂದಾಗ ಅವರ ಹೆಂಡತಿ ಅವರೊಂದಿಗೆ ಕೋಪದಿಂದಿರುತ್ತಾರೆ ಅಥವಾ ಬೇರೆ ಇತರ ರೀತಿಯ ಸಮಸ್ಯೆಗಳನ್ನು ಜನರು ಹೇಳುವುದನ್ನು ನೀವು ಆಗಾಗ ಕೇಳಿರಬಹುದು. ಬಹುತೇಕ ಬಾರಿ ಇದು ಮತ್ತಾಯ 13:21 ಅಥವಾ ಧರ್ಮೋಪದೇಶಕಾಂಡ 8:2-3ರ ಸಂದೇಶಕ್ಕೆ ಸಂಬಂಧಿಸಿರುತ್ತದೆ.

**"ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಈ ನಾಲ್ವತ್ತು ವರುಷ ಅರಣ್ಯದಲ್ಲಿ ನಡೆಸಿದ್ದನ್ನೂ ನೀವು ತನ್ನ ಆಜ್ಞೆಗಳನ್ನು ಕೈಕೊಳ್ಳುವವರೋ ಅಲ್ಲವೋ ಎಂದು ತಿಳಿದುಕೊಳ್ಳುವುದಕ್ಕೆ ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ನಿಮ್ಮ ಮನೋಭಾವವನ್ನು ಪರೀಕ್ಷಿಸಿದ್ದನ್ನೂ ನೆನೆಪಿಗೆ ತಂದುಕೊಳ್ಳಿರಿ. ಮನುಷ್ಯರು ಆಹಾರಮಾತ್ರದಿಂದಲ್ಲ, ಯೆಹೋವನ**

**ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬದು ನಿಮಗೆ ತಿಳಿಯುವಂತೆ ಆತನು ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ಹಸಿವೆಯಿಂದ ಬಳಲಿಸಿ ನಿಮಗೂ ನಿಮ್ಮ ಪೂರ್ವಿಕರಿಗೂ ಗೊತ್ತಿಲ್ಲದ ಮನ್ನವನ್ನು ಕೊಟ್ಟು ಪೋಷಿಸಿದನು." (ಧರ್ಮೋ 8:2-3)**

ಅವನು ಅಥವಾ ಅವಳು ಅಲ್ಲಿ ಕೋಪದಿಂದ ನಿಂತಿದ್ದದ್ದು ಕಾಕತಾಳೀಯವಲ್ಲ, ಬದಲಿಗೆ ನಾವು ಕೇಳಿದ ದೇವರ ವಾಕ್ಯವನ್ನು ಅಭ್ಯಾಸಮಾಡುವ ಸಲುವಾಗಿ ಅನುಮತಿಸಲಾಗಿತ್ತು. ಬಹುತೇಕ ಜನರು ಇದನ್ನು ಗುರುತಿಸಲು ವಿಫಲರಾಗುತ್ತಾರೆ, ಕಾರಣ ದೇವರ ದೃಷ್ಟಿಯಲ್ಲಿ ಮೂರ್ಖತನವಾಗಿರುವ, ಲೌಕಿಕ ಮಟ್ಟ ಅಥವಾ ಜ್ಞಾನದ ಪ್ರಕಾರ ಅವರು ಯೋಚಿಸುತ್ತಾರೆ.



*ವಾಕ್ಯದ ಕಾರಣದಿಂದ ತೊಂದರೆಗಳು ಅಥವಾ ಉಪದ್ರವಗಳು ಬರುವವು (ಮತ್ತಾ13:21)*

**(ಚಿತ್ರ–20)**

**"ಯಾಕಂದರೆ ಇಹಲೋಕ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ. ಆತನು ಜ್ಞಾನಿಗಳನ್ನು ಅವರ ತಂತ್ರಗಳಲ್ಲಿಯೇ ಹಿಡುಕೊಳ್ಳುತ್ತಾನೆಂತಲೂ..." (1 ಕೊರಿ 3:19)**

ಪ್ರಿಯ ಓದುಗರೇ, ದೇವರು ನಮ್ಮನ್ನು ನಾಶಮಾಡುವ ಯಾವ ಉದ್ದೇಶವನ್ನೂ ಹೊಂದಿಲ್ಲ ಬದಲಿಗೆ ನಮ್ಮನ್ನು ಆತನ ಸ್ವಭಾವದೊಳಕ್ಕೆ ಬೆಳೆಸುವ ಅಥವಾ ಕ್ರಿಸ್ತನ ಪೂರ್ಣತೆಗೆ ಬೆಳೆಸುವ ಉದ್ದೇಶವನ್ನು ಹೊಂದಿದ್ದಾನೆ. ಈ ಪರೀಕ್ಷೆಯನ್ನು ಜಯಿಸಲು ನಮ್ಮ ಮನೆಯಲ್ಲಿ, ಕೆಲಸದ ಸ್ಥಳದಲ್ಲಿ ಅಥವಾ ನಮ್ಮ ಅಕ್ಕಪಕ್ಕದಲ್ಲಿ ವಿರೋಧಿಯನ್ನು ಅನುಮತಿಸಬಹುದು. ಇದನ್ನು ತೊಡೆದುಹಾಕಲು ನಮ್ಮ ಹಳೆಯ ಲೌಕಿಕ ಪರಿಕಲ್ಪನೆಗಳನ್ನು ಉಪಯೋಗಿಸುವ ಬದಲಾಗಿ, ದೇವರ ಈ ಉದ್ದೇಶವನ್ನು ಜಾಗೃತವಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ದೇವರ ವಾಕ್ಯವನ್ನು ಅಭ್ಯಸಿಸಬೇಕು. ಹಾಗಾದರೆ ಸತ್ಯವೇದ ಯಾಕೋಬ 1:12ರಲ್ಲಿ ಹೇಳುವಂತೆ ಮುಂದಿನ ಮಟ್ಟಕ್ಕೆ ನಾವು ಆತ್ಮೀಕ ಮುಂಬಡ್ತಿಯನ್ನು ಹೊಂದುತ್ತೇವೆ.

**ಲೋಕದ ಪ್ರಕಾರವಾಗಿ ನಡೆಯುವ ವಿಶ್ವಾಸಿಗಳು, ಸಮಸ್ಯೆಯ ಮಧ್ಯದಲ್ಲಿ ಒಂದು ಸಂದೇಶವಿದೆ ಮತ್ತು ಒಬ್ಬ ಸಂದೇಶಕನಿದ್ದಾನೆ ಎಂದು ಎಂದಿಗೂ ಯೋಚಿಸುವದಿಲ್ಲ. ನಾವು ಯಾವಾಗಲೂ ಸಮಸ್ಯೆಯನ್ನು ತೆಗೆದುಹಾಕಲು ಓಡಾಡುತ್ತೇವೆ. ಸಮಸ್ಯೆ ಹೇಗೆ ಮತ್ತು ಯಾಕೆ ಬಂತೆಂದು ನಾವು ಎಂದಿಗೂ ಯೋಚಿಸುವುದಿಲ್ಲ?**

ಸಮಸ್ಯೆಯ ಮಧ್ಯದಲ್ಲಿ ಒಂದು ಸಂದೇಶ ಮತ್ತು ಸಂದೇಶಕನಿದ್ದಾನೆ ಎಂದು ನಾವು ಎಂದಿಗೂ ಯೋಚಿಸುವುದಿಲ್ಲ. ನಾವು ಯಾವಾಗಲೂ ಸಮಸ್ಯೆಯನ್ನು ತೆಗೆದು ಹಾಕಲು ಓಡಾಡುತ್ತೇವೆ. ಯಾಕೆ ಸಮಸ್ಯೆ ಬಂತೆಂದು ನಾವು ಎಂದಿಗೂ ಯೋಚಿಸುವುದಿಲ್ಲ.

ದೇವರ ವಾಕ್ಯವನ್ನು ಅಭ್ಯಸಿಸುವ ಆರಂಭದಲ್ಲಿ ನಾವು ಬೀಳಬಹುದು, ಅದು ತುಂಬಾ ಸಾಮಾನ್ಯ, ಆದರೆ ನಿಲ್ಲಿಸಬಾರದು.

ಮಗು ಮೊದಲು ನಡೆಯಲು ಪ್ರಯತ್ನಿಸಿದಾಗ, ಅದು ಬೀಳಬಹುದು. ಅದರಲ್ಲಿ ಯಾವುದೇ ಸಮಸ್ಯೆಯಿಲ್ಲ ಆದರೆ ಅಲ್ಲಿಯೇ ಮಲಗಲು ಮಗು ಮುಂದುವರೆಸಿದರೆ ಅದು ವಿಫಲವಾಗುತ್ತದೆ. ಇನ್ನೊಂದು ಬದಿಯಲ್ಲಿ ಮಗು ಎದ್ದೇಳಲು ಮತ್ತು ಮತ್ತೆ ನಡೆಯಲು ಪ್ರಯತ್ನಿಸಿದರೆ, ಅದು ನಡೆಯುವುದಕ್ಕೆ ಪ್ರಾರಂಭಿಸುತ್ತದೆ.

ಒಬ್ಬ ವ್ಯಕ್ತಿ ನಮಗೆ ಹೊಡೆಯಲು ಎರಡನೇ ಬಾರಿಗೆ ದೇವರಿಂದ ಅನುಮತಿಸಲ್ಪಟ್ಟ ಪಕ್ಷದಲ್ಲಿ, ನಮ್ಮಲ್ಲಿನ ಪರಿಶುದ್ಧಾತ್ಮನು ಅವನ ಕಾರ್ಯವನ್ನು ಮುಂದುವರೆಸುತ್ತಾನೆ. ಆದ್ದರಿಂದ ಹೊಡೆಯಲು ನಾವು ನಮ್ಮ ಕೈಯನ್ನು ಎತ್ತಿದಾಗ, "ಹೊಡೆಯದಂತೆ" ಪರಿಶುದ್ಧಾತ್ಮನು ನಮಗೆ ನೆನಪಿಸುತ್ತಾನೆ. ಅದೇ ಸಮಯದಲ್ಲಿ, ನಾವು ವಾಕ್ಯವನ್ನು ಕೇಳುವಾಗ ಮತ್ತು ಅದಕ್ಕೆ ವಿಧೇಯರಾಗುವಾಗ, ನಾವು ಬದಲಾವಣೆಯನ್ನು ಅನುಭವಿಸುತ್ತೇವೆ. ಪರಿಶುದ್ಧಾತ್ಮನ ಸಹಾಯದೊಂದಿಗೆ ನಾವು ಮಾಡಿದ್ದು ಸರಿಯಾಗಿಲ್ಲ ಎಂದು ಒಳಗಿನಿಂದ ಯೋಚಿಸಲು ಪ್ರಾರಂಭಿಸುತ್ತೇವೆ. ತಕ್ಷಣವೇ  ಇಂದು ನಾವು ಕೇಳಿದ, "ನಿಮ್ಮ ವೈರಿಗಳನ್ನು ನೀವು ಪ್ರೀತಿಸಬೇಕು" ಎಂಬ ವಾಕ್ಯವನ್ನು, ಆತ್ಮದಿಂದ ಪ್ರಾಣಕ್ಕೆ ಪರಿಶುದ್ಧಾತ್ಮನು ನೆನೆಪಿಸುತ್ತಾನೆ.

## ಉ) ಮನಸ್ಸಿನಲ್ಲಿ ಎರಡು ಭಾವಗಳ ನಡುವೆ ಯುದ್ಧ

ನೀವು ನಿಜವಾದ ದೇವರ ಮಗುವಾಗಿದ್ದರೆ, ನಿಮ್ಮ ಮನಸ್ಸಿನಲ್ಲಿ ಪದೇ ಪದೇ ಕೆಲವು ಆಲೋಚನೆಗಳು ಮೇಲೇಳಲು ಪ್ರಾರಂಭಿಸುತ್ತವೆ. "ಪ್ರೀತಿಸಿರಿ; ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು" ಎಂಬ ದೇವರ ವಾಕ್ಯದ ಆಲೋಚನೆಗಳು ಬರಲು ಮುಂದುವರೆಯುತ್ತವೆ.

ಇದರ ಅರ್ಥ ಲೌಕಿಕ ಭಾವಗಳ ಪ್ರಕಾರ ಅಥವಾ ನಮ್ಮೊಳಗಿನ ವ್ಯವಸ್ಥೆಯ ಪ್ರಕಾರ ನಾವು ವರ್ತಿಸಬಾರದು, ಬದಲಿಗೆ ನಮ್ಮ ಮನಸ್ಸಿಗೆ ಪರಿಶದ್ಧಾತ್ಮನು ನೀಡುವ ಸಂದೇಶಗಳ


ಪ್ರಕಾರ, ಅಂದರೆ ನಾವು ಕೇಳಿದ ವಾಕ್ಯದ ಆಲೋಚನೆಯ ಪ್ರಕಾರ ವರ್ತಿಸಬೇಕು. ಈ ಭಾವಗಳು ಪರಸ್ಪರ ಕಾದಾಡಲು ಪ್ರಾರಂಭಿಸುತ್ತವೆ. ಒಳಗಿನಿಂದ ಪರಿಶುದ್ಧಾತ್ಮನು ನೀಡುವ ವಾಕ್ಯಗಳ ಭಾವಗಳು ಮತ್ತು ಪ್ರಾಣದಲ್ಲಿ, ದುಷ್ಟನು ಇಟ್ಟಿರುವ ಶರೀರದ ಭಾವಗಳು, ಪರಸ್ಪರ ಕಾದಾಡುತ್ತವೆ. ದೇವರ ವಾಕ್ಯದ ಭಾವಕ್ಕೆ ನಮ್ಮನ್ನು ನಾವು ಎಷ್ಟು ತಗ್ಗಿಸಿಕೊಳ್ಳುತ್ತೇವೆ ಎನ್ನುವುದರ ಆಧಾರದ ಮೇಲೆ ಆತ್ಮ ಗೆಲ್ಲುತ್ತದೆ. ನಾವು ಹೆಚ್ಚು ತಗ್ಗಿಸಿಕೊಟ್ಟರೆ, ನಮ್ಮಲ್ಲಿರುವ ಶರೀರದ ಭಾವಗಳು ತೆಗೆದುಹಾಕಲ್ಪಡುವುದಕ್ಕೆ ಹೆಚ್ಚು ಸಾಧ್ಯತೆಯಿದೆ, (ಪ್ರಾಣದಲ್ಲಿ ಸೈತಾನನು ಇಟ್ಟಿರುವ ಶರೀರದ ಭಾವಗಳು ನಾಶವಾಗುತ್ತವೆ) ಮತ್ತು ಆಂತರಿಕ ಮನುಷ್ಯನು ಬೆಳೆಯಲು ಮುಂದುವರೆಸುತ್ತಾನೆ.

ನಾವು ಯಾವ ಮಟ್ಟಕ್ಕೆ ಆತ್ಮದ ಭಾವಗಳಿಗೆ ಶರಣಾಗುತ್ತೇವೋ ಅದೇ ಮಟ್ಟಕ್ಕೆ ದೇವರಾತ್ಮನಿಂದ ಬಲಪಡಿಸಲ್ಪಡುತ್ತಿರುವ ಆಂತರಿಕ ಮನುಷ್ಯನಿಂದ, ಶರೀರದ ಭಾವಗಳಿಂದ ತುಂಬಲ್ಪಟ್ಟಿರುವ ಪ್ರಾಣವನ್ನು (ಹಳೆಯ ಸ್ವಯಂ) ಬಂಧಿಸಬೇಕು ಮತ್ತು ಕಟ್ಟಬೇಕು. ದೇವರ ಪರಿಶದ್ಧಾತ್ಮನು ನಮ್ಮ ಆತ್ಮದಲ್ಲಿ ವಾಸಿಸುತ್ತಾನೆ ಮತ್ತು ನಮ್ಮನ್ನು ಎಲ್ಲಾ ಸತ್ಯಕ್ಕೆ ಮಾರ್ಗದರ್ಶಿಸುತ್ತಾನೆ. (ಯೋಹಾನ 16:13)

**"ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿ 3:16)**

ಈ ಬಾರಿ ನಾವು ಹೊಡೆಸಿಕೊಳ್ಳುವುದಕ್ಕೆ ದೇವರು ಅನುಮತಿಸುತ್ತಾರೆ. ನಾವು ಮತ್ತೊಮ್ಮೆ ಹೊಡೆಸಿಕೊಳ್ಳಲು ಅನುಮತಿಸಲ್ಪಟ್ಟಾಗ, ದೇವರ ಆತ್ಮನು ನೀಡುವ ವಾಕ್ಯದ ಭಾವವನ್ನು ಒಳಗೆ ಬೆಳೆದಿರುವ ಆಂತರಿಕ ಮನುಷ್ಯನು ಉಪಯೋಗಿಸುತ್ತಾನೆ ಮತ್ತು ಆ ವ್ಯಕ್ತಿಯನ್ನು ತಿರಿಗಿ ಹೊಡೆಯದೆ ಶರೀರದ ಭಾವಗಳನ್ನು ಬಂಧಿಸುತ್ತಾನೆ ಮತ್ತು ಕಟ್ಟುತ್ತಾನೆ.

ನಮ್ಮಲ್ಲಿನ ಹಳೆಯ ಸೂಖಿ ಶೈಲಿ ಅಥವಾ ವ್ಯವಸ್ಥೆ ಹೊಡೆಯಲು ಬಯಸುತ್ತದೆ. ಆದರೆ ಸೂಖಿ ಮೇಲೆದ್ದಾಗ, ಬಲಹೊಂದಿರುವ ಆಂತರಿಕ ಮನುಷ್ಯನು ವಾಕ್ಯದ ಭಾವಗಳಿಂದ ಶರೀರವನ್ನು ಬಲವಾಗಿ ಹಿಡಿಯುತ್ತಾನೆ. ನಮ್ಮೊಳಗೆ, ಇದು ಎರಡು ಭಾವಗಳಾಗಿ ಕಂಡುಬರುತ್ತದೆ. ಎರಡು ಭಾವಗಳ ನಡುವಿನ ಯುದ್ಧವು ನಮ್ಮ ಪ್ರಾಣದ ಮನಸ್ಸಿನಲ್ಲಿ ಜರುಗುತ್ತದೆ (ಚಿತ್ರ – 21). ಮನಸ್ಸಿನಲ್ಲಿ, ಆಂತರಿಕ ಮನುಷ್ಯನಲ್ಲಿರುವ ದೇವರ ಆತ್ಮವು ಹೇಳುತ್ತದೆ, ನೀನು ಹೊಡೆಯಬಾರದು; ನೀನು ನಿನ್ನ ವೈರಿಯನ್ನು ಪ್ರೀತಿಸಬೇಕು.




*ಹೊಸದಾಗಿ ಹುಟ್ಟಿದ ವ್ಯಕ್ತಿಯ ಮನಸ್ಸಿನಲ್ಲಿ ಕಾಣದ ಆತ್ಮೀಕ ಯುದ್ಧ*
*(2 ಕೊರಿ 10:4-5)*
**ಚಿತ್ರ–21**

> ಆತ್ಮದ ಭಾವಗಳನ್ನು ಬೆಳೆಯಲು ನಾವು ಅನುಮತಿಸುವ ಮಟ್ಟಕ್ಕೆ ಆಂತರಿಕ ಮನುಷ್ಯನು ಬಲಹೊಂದುತ್ತಾನೆ. ಮತ್ತು ಅವನು ಬಲಹೊಂದುವ ಅದೇ ಮಟ್ಟಕ್ಕೆ ಆ ವ್ಯಕ್ತಿಯಲ್ಲಿನ ಶರೀರವು ಬಂಧಿಸಲ್ಪಡುತ್ತದೆ ಮತ್ತು ಕಟ್ಟಿಹಾಕಲ್ಪಡುತ್ತದೆ.

ಆದರೆ ಶರೀರವು ಹೇಳುತ್ತದೆ, ಹೊಡೆಸಿಕೊಂಡರೆ, ನೀನು ಅವನನ್ನು ಹಿಂತಿರುಗಿ ಹೊಡೆ. ಈ ಎರಡು ಭಾವಗಳು ಬರುತ್ತವೆ ಮತ್ತು ಮನಸ್ಸಿನಲ್ಲಿ ಕಾದಾಡುತ್ತವೆ ಮತ್ತು ಎಲ್ಲ ಯುದ್ಧಗಳಂತೆ, ಬಲಿಷ್ಠ ಸೇನೆಯು ಗೆಲ್ಲುತ್ತದೆ. ಆಂತರಿಕ ಮನುಷ್ಯನು ಬಲವಾಗಬೇಕಾದರೆ ನಮ್ಮೊಳಗೇ ಆತ್ಮದ ಭಾವ ಗಳನ್ನು ಬೆಳೆಯಲು ನಾವು ಅನುಮತಿಸಬೇಕು. ಮತ್ತು ಯಾವ ಮಟ್ಟಕ್ಕೆ ಅದು ಬಲಹೊಂದುತ್ತದೋ, ಅದೇ ಮಟ್ಟಕ್ಕೆ ಆ ವ್ಯಕ್ತಿಯಲ್ಲಿನ ಶರೀರಭಾವವು ಬಂಧಿಸಲ್ಪಡುತ್ತದೆ ಮತ್ತು ಕಟ್ಟಿಹಾಕಲ್ಪಡುತ್ತದೆ. ಬೆಳೆದ ಆಂತರಿಕ ಮನುಷ್ಯನ ಕೆಲಸವೇನೆಂದರೆ ಆಂತರಿಕ ದೇವರ ಆತ್ಮನ ಬಗ್ಗೆ ಮನಸ್ಸಿಗೆ ನೆನೆಪಿಸುವುದು ಮತ್ತು ನಾವು ಕೇಳಿದ ವಾಕ್ಯದ ಪ್ರಕಾರ ನಡೆಸುವುದು.

ನಮ್ಮನ್ನು ನಿಯಂತ್ರಿಸಲು ನಮ್ಮ ಹಳೆಯ ಶರೀರದ ಸ್ವಭಾವವನ್ನು ನಾವು ಅನುಮತಿಸಬಾರದು ಬದಲಿಗೆ ಆತ್ಮ ಸೂಚಿಸಿರುವಂತೆ ಆತ್ಮದ ಭಾವಗಳ ಮೂಲಕ ಮನಸ್ಸಿನಿಂದ ನಿಯಂತ್ರಿಸಲ್ಪಡಬೇಕು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಶರೀರವು ಆತ್ಮದಿಂದ ನಿಯಂತ್ರಿಸಲ್ಪಡಬೇಕು ಮತ್ತು ನಡೆಸಲ್ಪಡಬೇಕು. (ರೋಮಾಪುರದವರಿಗೆ 8:14) ಇದುವೇ ಬಲಹೊಂದಿದ ಆಂತರಿಕ ಮನುಷ್ಯನ ಫಲಿತಾಂಶ.

ಹಳೆಯ ಶೈಲಿಯ ಪ್ರಕಾರ, ನಿಮಗೆ ಹೊಡೆದ ವ್ಯಕ್ತಿಯನ್ನು ಹೊಡೆಯಲು ಶರೀರವು

ಬಯಸುತ್ತದೆ, ನಂತರ ದೇಹವು ಖಂಡಿತವಾಗಿ ಅವನನ್ನು ಹೊಡೆದಿರುತ್ತಿತ್ತು. ಆದರೆ ದೇವರ ಆತ್ಮನು ನೀಡುವ ವಾಕ್ಯದ ಭಾವಗಳಿಂದ ಶರೀರವನ್ನು ನಿಯಂತ್ರಿಸುವುದು ಆಂತರಿಕ ಮನುಷ್ಯನ ಜವಾಬ್ದಾರಿ.

**"ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ." (ರೋಮಾ 8:13)**

ಶರೀರದ ಕಾರ್ಯಗಳನ್ನು ನಾವು ಆತ್ಮದ ಸಹಾಯದ ಮೂಲಕ ಸಾಯಿಸಬೇಕು. ಈ ಕಾರ್ಯಗಳು ನಮ್ಮ ಜೀವಿತದಲ್ಲಿ ಕ್ರಿಸ್ತನ ಮೂಲಕ ಜರುಗುತ್ತದೆ.

## ಊ) ಪಾಪದ ಕ್ಷಮೆ ಮತ್ತು ಪಾಪದ ಸ್ವಭಾವ

ನಾವು ಈ ಪರಿವರ್ತನಾ ಪ್ರಕ್ರಿಯೆಯ ಮೂಲಕ ಹೋದಾಗ ನಮಗೆ ಏನು ಸಂಭವಿಸುತ್ತದೆ ಎಂದು ನಿಮಗೆ ಗೊತ್ತೇ? ನಾವು ಪಾಪವನ್ನು ಸಂಪೂರ್ಣವಾಗಿ ತೊಡೆದುಹಾಕುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಪಾಪದ ಸ್ವಭಾವವು ನಮ್ಮಿಂದ ಕೀಳಲ್ಪಡುತ್ತದೆ ಮತ್ತು ತೆಗೆದುಹಾಕಲ್ಪಡುತ್ತದೆ.

ಯೇಸು ಕ್ರಿಸ್ತನ ರಕ್ತವು ನಮ್ಮ ಎಲ್ಲರ ಪಾಪವನ್ನು ಹೊತ್ತುಕೊಂಡಿತು ಮತ್ತು ಆತ್ಮದಲ್ಲಿ, ನಾವು ಹೊಸ ಸೃಷ್ಟಿಯಾದೆವು ಆದರೆ ಪಾಪದ ಸ್ವಭಾವವು ನಮ್ಮ ಪ್ರಾಣವನ್ನು ಬಿಟ್ಟಿಲ್ಲ.

ಯೇಸು ಕ್ರಿಸ್ತನ ರಕ್ತವು ನಮ್ಮ ಎಲ್ಲಾ ಪಾಪದ ಸ್ವಭಾವವನ್ನು ತೊಳೆದುಹಾಕಿದೆ ಮತ್ತು ಈಗ ನಾವು ಆ ಪಾಪ ಸ್ವಭಾವವನ್ನು ಹೊಂದಿಲ್ಲ ಎಂದು ನೀವು ಕೇಳಿರಬಹುದು. ಆದರೆ ವಿಮೋಚಿಸಲ್ಪಟ್ಟವರಾದ ನಮ್ಮೊಳಗೆ ಪಾಪ ಸ್ವಭಾವವು ಇನ್ನೂ ಇದೆ. ನಾವು ಪಾಪ ಮಾಡಲು ಮುಂದುವರೆಸುತ್ತೇವೆ; ನಾವು ಇತರರನ್ನು ಟೀಕಿಸುತ್ತೇವೆ. ಯೇಸು ಕ್ರಿಸ್ತನ ರಕ್ತ ನಮ್ಮನ್ನು ನಮ್ಮ ಪಾಪಗಳಿಂದ ತೊಳೆಯುತ್ತದೆ ಮತ್ತು ಶುದ್ಧೀಕರಿಸುತ್ತದೆ ಎನ್ನುವುದು ನಿಜ, ಆದರೆ ನಮ್ಮ ಪಾಪ ಸ್ವಭಾವವನ್ನು ತೆಗೆದುಹಾಕುವುದು ಯೇಸುವಿನ ಶಿಲುಬೆಯಾಗಿದೆ.

> ನಾವು ರಕ್ಷಿಸಲ್ಪಡುವ ಸಮಯದಲ್ಲಿ ನಮ್ಮ ಹಿಂದಿನ ಪಾಪಗಳ ಎಲ್ಲಾ ಶಿಕ್ಷೆಗಳಿಂದ ನಾವು ವಿಮೋಚಿ ಸಲ್ಪಟ್ಟಿದ್ದರೂ, ನಮ್ಮ ಪ್ರಾಣದಲ್ಲಿನ ಪಾಪದ ಸ್ವಭಾವದಿಂದ ಇನ್ನೂ ವಿಮೋಚಿಸಲ್ಪಟ್ಟಿಲ್ಲ.

> ನಾವು ರಕ್ಷಣೆ ಹೊಂದಿದ ಸಮಯದಲ್ಲಿ ಪಾಪದ ದಂಡನೆಯಿಂದ ವಿಮೋಚನೆಯನ್ನು ನಾವು ಹೊಂದಿದರೂ, ನಾವು ನಮ್ಮ ಪ್ರಾಣದಲ್ಲಿ ಪಾಪದ ಉಪಸ್ಥಿತಿ ಮತ್ತು ಸ್ವಭಾವದಿಂದ ವಿಮೋಚನೆಯನ್ನು ಹೊಂದಿಲ್ಲ.

## ಋ) ಹೊಸ ಆತ್ಮೀಕ ಆಯುಧ

**"ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ, ಯಾಕೆಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿ..." (1 ಪೇತ್ರ 4:1)**

ನಮಗೆ ಸಂಬಂಧಿಸಿದಂತೆ, ಇದು ಹೊಸ ಆಯುಧ. ನಮ್ಮ ಯಾವ ಸುವಾರ್ತಾ ಪ್ರಸಂಗದಲ್ಲಿಯೂ ಇರದ ಆಯುಧವಾಗಿದೆ ಈ **ಬಾಧೆಪಡುವ ಭಾವದ ಆಯುಧ.** ಹೊಸದಾಗಿ ಹುಟ್ಟಿದವರು ಆತ್ಮೀಕ ಹಸುಮಕ್ಕಳಾಗಿ ಇನ್ನೂ ಕುಳಿತಿರುವುದಕ್ಕೆ ಕಾರಣವೇನೆಂದರೆ ಅವರು ಬೆಳೆಯುತ್ತಿಲ್ಲ. ಈ ವಿಷಯದ ಕುರಿತು ದೇವರ ವಾಕ್ಯವು ತುಂಬಾ ಸ್ಪಷ್ಟವಾಗಿದೆ, ಏನೆಂದರೆ ದೇವರ ರಾಜ್ಯದಲ್ಲಿ ನೀವು ಮುಂದುವರೆಯಬೇಕಾದರೆ "ಬಾಧೆಪಡುವ ಭಾವವನ್ನು" ಆಯುಧವಾಗಿ ತೆಗೆದುಕೊಳ್ಳಬೇಕು.

ಕ್ರಿಸ್ತನೇ, ನಾನು ಆ ಪೂರ್ವಸಿದ್ಧತಾ ಕಾರ್ಯಕ್ಕಾಗಿ ನಿನ್ನ ಮುಂದೆ ಒಪ್ಪಿಸಿಕೊಡುತ್ತೇನೆ ಮತ್ತು ನಾನು ಬಾಧೆಪಡಲು ಸಿದ್ಧನಿದ್ದೇನೆ. ನಿನ್ನ ಚಿತ್ತದ ಪ್ರಕಾರ ನನ್ನನ್ನು ಸಿದ್ಧಮಾಡು. ನಾವು ಈ ಭಾವವನ್ನು ಆಯುಧವಾಗಿ ತೆಗೆದುಕೊಳ್ಳಬೇಕು. ನಾವು ಪ್ರಾರಂಭಿಸುವದಕ್ಕೂ ಮೊದಲು, ನಮಗೆ ತಿಳಿದಿರುವ ಆಯುಧಗಳನ್ನು ನೆನೆಪಿಸಿಕೊಳ್ಳೋಣ.

ನಾವು ದೇವರ ವಾಕ್ಯವನ್ನು, ಆಕ್ರಮಣ ಮಾಡುವುದಕ್ಕೆ ಆಯುಧವಾಗಿ ಉಪಯೋಗಿಸುತ್ತೇವೆ. ಅದರಂತೆಯೇ ನಂಬಿಕೆಯ ಗುರಾಣಿಯು ರಕ್ಷಣೆಯ ಆಯುಧ. ನಾವು ಈ ಎಲ್ಲವನ್ನೂ (ಎಫೆಸದವರಿಗೆ 6:17) ಧರಿಸಲು ಬಯಸುತ್ತೇವೆ, ಆದರೆ ಬಾಧೆಪಡುವ ಭಾವವನ್ನೂ ಧರಿಸಲು ನಾವೆಲ್ಲರೂ ಪರಿಗಣಿಸಬೇಕು.

ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಾಗ, ನಮ್ಮ ಎಲ್ಲಾ ಪಾಪಗಳು ತೊಳೆಯಲ್ಪಟ್ಟಿತು ಮತ್ತು ನಾವು ದೇವರ ರಾಜ್ಯದಲ್ಲಿ ಹೊಸದಾಗಿ ಹುಟ್ಟಿದೆವು ಎಂಬುದು ನಿಜ ಆದರೆ ಪಾಪ ಸ್ವಭಾವವು ನಮ್ಮ ಜೀವನದಿಂದ ಹೋಗಿಲ್ಲ. ಕ್ರಿಸ್ತನು ಬಾಧೆಪಟ್ಟಂತೆಯೇ ನಾವು ಬಾಧೆಪಟ್ಟಾಗ (ವಿವಿಧ ರೀತಿಯ ಕಷ್ಟಗಳು), ನಮ್ಮಿಂದ ಪಾಪದ ಸ್ವಭಾವವು ತೆಗೆದುಹಾಕಲ್ಪಡುತ್ತದೆ.

> ವಿಮೋಚಿಸಲ್ಪಟ್ಟವರಾದ ನಮ್ಮೊಳಗೆ ಪಾಪ ಸ್ವಭಾವವು ಇನ್ನೂ ಇದೆ. ನಾವು ಇಂದಿಗೂ ಸುಳ್ಳನ್ನು ಹೇಳುತ್ತೇವೆ ಮತ್ತು ಇತರರನ್ನು ಟೀಕಿಸುತ್ತೇವೆ.

ಯೇಸು ನಮಗೆ ಜೀವವನ್ನು (ಝೋಯೆ) ನೀಡಲು ಮಾತ್ರ ಬರಲಿಲ್ಲ. ಆತನು ಮೊದಲಿಗೆ ನಮಗೆ ಝೋಯೆಯನ್ನು ಕೊಟ್ಟನು ಆದರೆ ಅವನು ಅಲ್ಲಿಗೇ ನಿಲ್ಲಲಿಲ್ಲ. ಮುಂದಿನ ಹಂತವು ನಮಗೆ ಝೋಯೆಯನ್ನು ಹೇರಳವಾಗಿ ನೀಡುವುದು.

**"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು." (ಯೋಹಾನ 10:10)**

ನಾವು ನಂಬಿದಾಗ, ಝೋಯೆಯನ್ನು (ದೇವರ ಜೀವ) ಪಡೆಯುತ್ತೇವೆ; ಆದರೆ ದೇವರ ವಾಕ್ಯದ ಪ್ರಕಾರ ಕಷ್ಟವನ್ನು ಅನುಭವಿಸಿದಾಗ, ನಾವು ಝೋಯೆಯನ್ನು ಸಮೃದ್ಧವಾಗಿ ಪಡೆಯುತ್ತೇವೆ. ಅಂದರೆ, ದೇವರ ಜೀವವಾಗಿರುವ ಝೋಯೇ, ಆತ್ಮದಿಂದ ಪ್ರಾಣಕ್ಕೆ ತೂರಿಬರುತ್ತದೆ. ಪ್ರಾಣದಲ್ಲಿ ಶರೀರದ ಭಾವಗಳು ನಾಶವಾಗುತ್ತವೆ ಮತ್ತು ಆತ್ಮದ ಭಾವಗಳಿಂದ ಪ್ರಾಣವು ತುಂಬಲ್ಪಡುತ್ತದೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಾಗ, ಪಾಪದ ದಂಡನೆಯು ಕಟ್ಟಲ್ಪಟ್ಟಿತು, ಆದರೆ ಯೇಸು ಕ್ರಿಸ್ತನ ಶಿಲುಬೆಗೆ ನಾವು ಶರಣಾದಾಗ ನಮ್ಮ ಪಾಪ ಸ್ವಭಾವವೂ ಸಹ ಹೋಗುತ್ತವೆ.

> ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಾಗ ಪಾಪದ ದಂಡನೆಯು ಕಟ್ಟಲ್ಪಟ್ಟಿತು, ಆದರೆ ಯೇಸುಕ್ರಿಸ್ತನ ಶಿಲುಬೆಗೆ ನಾವು ಶರಣಾದಾಗ ನಮ್ಮ ಪಾಪ ಸ್ವಭಾವವೂ ಸಹ ಹೋಗುತ್ತದೆ.

ದೇವರ ವಾಕ್ಯ ಹೇಳುವುದನ್ನು ಗಮನಿಸಿ:

"ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನಮಾಡುವನು." (1 ಪೇತ್ರ 4:2)

ದೇವರ ಚಿತ್ತದ ಪ್ರಕಾರ ಶರೀರದಲ್ಲಿ ಬಾಧೆಪಡುವವರು, ಈ ಭೂಮಿಯ ಮೇಲೆ ಜೀವಿಸಿರುವವರೆಗೂ, ಪಾಪವು ಅವರ ಮೇಲೆ ಯಾವುದೇ ಅಧಿಕಾರವನ್ನು ಹೊಂದಿರುವುದಿಲ್ಲ.

ಈಗ ಪಾಪದ ದಂಡನೆ ಮಾತ್ರವೇ ದೂರ ಹೋಗಿಲ್ಲ, ಪಾಪದ ಸ್ವಭಾವವೂ ಸಹ ಕಿತ್ತುಹಾಕಲ್ಪಟ್ಟಿದೆ. ಇದರ ಫಲಿತಾಂಶಕ್ಕಾಗಿ, ಆ ವ್ಯಕ್ತಿಯಲ್ಲಿ ಉಂಟಾಗಿರುವ ಬದಲಾವಣೆಯ ಮೇಲೆ ನಾವು ಗಮನಹರಿಸಬೇಕು.

> ಯೇಸು ಕ್ರಿಸ್ತನ ರಕ್ತವು ನಮ್ಮ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸುತ್ತದೆ. ಯೇಸು ಕ್ರಿಸ್ತನ ಶಿಲುಬೆಯು ನಮ್ಮ ಪಾಪ ಸ್ವಭಾವವನ್ನು ತೆಗೆದುಹಾಕುತ್ತದೆ.

## ಎ) ಮನುಷ್ಯನ ಚಿತ್ತದಿಂದ ದೇವರ ಚಿತ್ತಕ್ಕೆ


ಆದ್ದರಿಂದ ನಾವು ಈ ಕಾರ್ಯದ ಮೂಲಕ ಹಾದುಹೋಗುವಾಗ, ಯಾರ ಚಿತ್ತವನ್ನು ನಾವು ಮಾಡುತ್ತಿರುವುದು? ನಾವು ನಮ್ಮ ಬಯಕೆಯನ್ನು (ಸೂಖೆಯ ಚಿತ್ತ) ನೆರವೇರಿಸುತ್ತಿದ್ದೇವೆಯೇ ಅಥವಾ ದೇವರ ಚಿತ್ತವನ್ನು ನೆರವೇರಿಸುತ್ತಿದ್ದೇವೆಯೇ? "ಅಲ್ಲಿ ಹೋಗುವಂತೆ ಮತ್ತು ಪ್ರಸಂಗಿಸುವಂತೆ ಹಾಗೂ ಅಲ್ಲಿ ಕೆಲಸಮಾಡುವಂತೆ ನನಗೆ ಅನ್ನಿಸಿತು", ಎಂದು ಅನೇಕ ಜನರು ಹೇಳಿರುವದನ್ನು ನೀವು ಕೇಳಿರಬಹುದು. ನಮ್ಮ ಕುರಿತು ದೇವರ

ಬಯಕೆಯು ನಾವು ಏನು ಯೋಚಿಸುತ್ತೇವೆ ಅದನ್ನು ಮಾಡುವುದಾಗಲೀ ಅಥವಾ ನಮ್ಮ ಚಿತ್ತದ ಪ್ರಕಾರ ಮಾಡುವುದಾಗಲೀ ಅಲ್ಲ. ನಮ್ಮ ಚಿತ್ತದ ಪ್ರಕಾರ ನೂರು ಕೆಲಸಗಳನ್ನು ನಾವು ಮಾಡುವುದಕ್ಕಿಂತ, ದೇವರು ನಮ್ಮಿಂದ ನಿರೀಕ್ಷಿಸುವಂತದ್ದರ ಪ್ರಕಾರ ಒಂದು ಕೆಲಸವನ್ನು ಮಾಡುವುದು ದೇವರ ಬಯಕೆಯಾಗಿದೆ. ಕಾರಣವೇನೆಂದರೆ, ಒಡೆಯನು ನಮ್ಮ ಜೊತೆ ಕೆಲಸದವನಲ್ಲ ಬದಲಿಗೆ ನಾವು ಒಡೆಯನ ಜೊತೆ ಕೆಲಸದವರು. **“ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ ದೇವರ ಕಟ್ಟಡವೂ ಆಗಿದ್ದೀರಿ.” (1 ಕೊರಿ 3:9)**

> ನಮ್ಮ ಕುರಿತು ದೇವರ ಬಯಕೆಯು ನಾವು ಏನು ಯೋಚಿಸುತ್ತೇವೆ ಅದನ್ನು ಮಾಡುವುದಾಗಲೀ ಅಥವಾ ನಮ್ಮ ಚಿತ್ತದ ಪ್ರಕಾರ ಮಾಡುವುದಾಗಲೀ ಅಲ್ಲ . ನಮ್ಮ ಸ್ವಂತ ಚಿತ್ತದ ಪ್ರಕಾರ ನೂರು ಕೆಲಸಗಳನ್ನು ಮಾಡುವುದಕ್ಕಿಂತ, ದೇವರು ನಮ್ಮಿಂದ ನಿರೀಕ್ಷಿಸುವಂಥದ್ದರ ಪ್ರಕಾರ ಒಂದು ಕೆಲಸವನ್ನು ನಾವು ಮಾಡುವುದು ದೇವರ ಬಯಕೆಯಾಗಿದೆ.

ಈ ಭೂಮಿಯಲ್ಲಿ ನಮ್ಮ ಉದ್ದೇಶವು ಒಡೆಯನ ಬಯಕೆಯನ್ನು ನೆರವೇರಿಸುವುದು. ಆದರೆ ನಮ್ಮ ಸೂಖೆಯನ್ನು ನಾಶಮಾಡದೆ, ನಾವು ಎಂದಿಗೂ ಆತ್ಮದ ಭಾವಗಳಿಗೆ ಬರಲಾಗುವುದಿಲ್ಲ.

ಪ್ರಿಯ ಸಹೋದರರೇ ಮತ್ತು ಸಹೋದರಿಯರೇ, ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು ನಾವು ಅರಿತುಕೊಳ್ಳಬೇಕು. ನಾವು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದ್ದೇವೆಯೇ (ಆತನ ಚಿತ್ತದ ಪ್ರಕಾರ) ಅಥವಾ ತಪ್ಪಾದ ದಿಕ್ಕಿನಲ್ಲಿ ನಡೆಯುತ್ತಿದ್ದೇವೆಯೇ? (ನಮ್ಮ ಚಿತ್ತದ ಪ್ರಕಾರ) , ಇದನ್ನು ಮತ್ತಷ್ಟು ಅರ್ಥಮಾಡಿಕೊಳ್ಳಲು, ದೇವರ ಅಭಿಷಿಕ್ತ ಸೇವಕನಿಂದ ಉಪದೇಶವನ್ನು ನಾವು ಕೇಳಿದಾಗ ನಮ್ಮ ಪ್ರತಿಕ್ರಿಯೆ ಏನಾಗಿರುತ್ತದೆಂದು ನಾವು ತಿಳಿದುಕೊಳ್ಳೋಣ. ದೇವರ ಸೇವಕನು ಹೇಳಿದ್ದನ್ನು ನಾವು ಹೊರಗೆ ಹೋದಾಗ ಮಾತಾಡುತ್ತೇವಾ ಅಥವಾ ನಮ್ಮ ಆಲೋಚನೆಗಳು (ಮಾತು) ಮೇಲಿನ ಮಟ್ಟದಿಂದ ಕೆಳಗಿನ ಮಟ್ಟಕ್ಕೆ ಇಳಿಯಲು ಬಿಡುತ್ತೇವಾ? ನಾವು ಪರಿಶುದ್ಧಾತ್ಮನ ಕಾರ್ಯದಿಂದ ನಡೆಸಲ್ಪಡುವವರಾಗಿದ್ದರೆ, ವಾಕ್ಯವನ್ನು ಕೇಳಿದ ನಂತರ, ನಾವು ವಾಕ್ಯದ ಮೇಲೆ ಧ್ಯಾನಿಸುತ್ತೇವೆ ಮತ್ತು ಇದರ ಬಗ್ಗೆ ಮಾತಾಡುತ್ತೇವೆ ಹಾಗೂ ಅದನ್ನು ಕ್ರಮೇಣವಾಗಿ ಬೆಳೆಸುತ್ತೇವೆ. ಈ ಸಣ್ಣ ಅಭ್ಯಾಸದಿಂದ ನಾವು ಯಾವ ಮಟ್ಟದಲ್ಲಿ ನಿಂತಿದ್ದೇವೆ ಎಂದು ತಿಳಿದುಕೊಳ್ಳುತ್ತೇವೆ. ಆದರೆ ಅದು ಯಾವ ಮಟ್ಟವಾಗಿದ್ದರೂ, ಕ್ರಿಸ್ತನು ನಮ್ಮನ್ನು ಮುಂಬಡ್ತಿಸಲು ಸಿದ್ಧನಾಗಿದ್ದಾನೆ.




**"ಶರೀರದಿಂದ ಪ್ರತಿರೋಧ, ಫಲಿತಾಂಶ ಆತ್ಮೀಕ ಬೆಳವಣಿಗೆ ಇಲ್ಲ"**

*ಚಿತ್ರ 22*

ನಾವು ಬೆಳೆಯಲು ಸಿದ್ಧರಿದ್ದರೆ ಏನಾಗುತ್ತದೆ? (ಮೇಲಿನ ವಿವರಣೆಯನ್ನು ನೋಡಿರಿ). ಉದಾಹರಣೆಗೆ, ಒಬ್ಬ ವ್ಯಕ್ತಿ ಖಡ್ಗದೊಂದಿಗೆ ನಮ್ಮ ಕಡೆಗೆ ಬರುತ್ತಿದ್ದಾನೆ. ವಾಸ್ತವವಾಗಿ ಕ್ರಿಸ್ತನು ಅವನನ್ನು ಅಲ್ಲಿ ಅನುಮತಿಸಿದ್ದಾನೆ. ದೇವರ ಉದ್ದೇಶವನ್ನು ನೆರವೇರಿಸುವ ಸಲುವಾಗಿ ಸೈತಾನನು ನಮ್ಮನ್ನು ಪರೀಕ್ಷಿಸಲು ದೇವರು ಅನುಮತಿಸುತ್ತಾರೆ ಮತ್ತು ಈ ಪರೀಕ್ಷೆಯ ಮೂಲಕ, ನಾವು ಆತನಿಗೆ ವಿಧೇಯರಾಗುತ್ತೇವಾ ಅಥವಾ ಇಲ್ಲವಾ ಎಂದು ನಮ್ಮ ನಿಜ ಭಾವಗಳನ್ನು ತಿಳುಕೊಳ್ಳುವುದಕ್ಕಾಗಿ ಅನುಮತಿಸುತ್ತಾರೆ. ಸೈತಾನನಿಂದ ಶೋಧಿಸಲ್ಪಡುವ ಸಲುವಾಗಿ ಆತ್ಮನಿಂದ ಯೇಸುವು ಮರುಭೂಮಿಗೆ ನಡೆಸಲ್ಪಟ್ಟನು ಮತ್ತು ಶೋಧಕನಾದ ಸೈತಾನ ಯೇಸುವಿನ ಹತ್ತಿರ ಬಂದ ಎಂದು ನಾವು ವಾಕ್ಯದಲ್ಲಿ (ಮತ್ತಾ 4:1) ನೋಡುತ್ತೇವೆ. ಅದೇ ಸೈತಾನನು ನಮ್ಮ ಸುತ್ತಲಿರುವ ಜನರನ್ನು ಉಪಯೋಗಿಸಿ ನಮಗೆ ಹಾನಿಮಾಡಲು ಪ್ರಯತ್ನಿಸುತ್ತಿದ್ದಾನೆ. ಸೈತಾನನು ಮನುಷ್ಯನ ಮೂಲಕ ಕಾರ್ಯಮಾಡುತ್ತಿರುವುದನ್ನು ನಾವು ವಿವರಣೆಯಲ್ಲಿ ನೋಡಬಹುದು.

ಒಂದು ಕೈಯಲ್ಲಿ ಖಡ್ಗದೊಂದಿಗೆ, ಕಾದಾಡಲು ಸಿದ್ಧವಾಗಿ ವ್ಯಕ್ತಿಯು ನಮ್ಮ ಬಳಿಗೆ ಬಂದಾಗ, ನಮ್ಮ ಹಳೆಯ ಶೈಲಿಯ ಪ್ರಕಾರ ಹೋರಾಟಕ್ಕೆ ಸಿದ್ಧರಾಗಿ ನಮ್ಮನ್ನು ನಾವು ಕನಿಷ್ಟ ಎರಡು ಖಡ್ಗಗಳಿಂದಾದರೂ ಶಸ್ತ್ರಸಜ್ಜಿತಗೊಳಿಸಿಕೊಳ್ಳುತ್ತಿದ್ದೆವು. ಆದರೆ ಅದರ ಫಲವೇನು? ಸಂಶಯವೇ ಇಲ್ಲ, ಅದು ಶರೀರದ ಫಲ! **ಶರೀರದ ಫಲದಲ್ಲಿ ನಾವು ನಿಯಂತ್ರಣವನ್ನು ಹೊಂದಿರುವದಿಲ್ಲ ಆದರೆ ಆತ್ಮದ ಫಲದಲ್ಲಿ ನಾವು ಸ್ವಯಂ-ನಿಯಂತ್ರಣವನ್ನು ಹೊಂದಿರುತ್ತೇವೆ.**

ನಾವು ಶರೀರದ ಪ್ರಕಾರ ಅಥವಾ ಲೋಕದ ಪ್ರಕಾರ ಕಾರ್ಯಮಾಡಿದರೆ ಯಾವ ಆತ್ಮೀಕ ಬೆಳವಣಿಗೆಯೂ ನಮಗಿರುವುದಿಲ್ಲ. ಮತ್ತು ಬೆಳವಣಿಗೆ ಇಲ್ಲದಿರುವುದರಿಂದ

ವ್ಯಕ್ತಿಯು ಲೋಕದ ಮಾನದಂಡಗಳ ಪ್ರಕಾರ ಬೆಳೆಯಲು ಮುಂದುವರೆಸುತ್ತಾನೆ. ಈ ವ್ಯಕ್ತಿಯು ಶರೀರದ ಪ್ರಕಾರ ದೇವರ ಮಗುವಾಗಿರಬಹುದು ಮತ್ತು ಸಭೆಗೆ ಬರಲು, ಚಪ್ಪಾಳೆ ತಟ್ಟಲು, ಹಾಡನ್ನು ಹಾಡಲು,.. ಇತ್ಯಾದಿಗಳನ್ನು ಮುಂದುವರೆಸಬಹುದು ಆದರೆ ಈ ವ್ಯಕ್ತಿಯಿಂದ ಕ್ರಿಸ್ತನ ರಾಜ್ಯದಲ್ಲಿ ಯಾವುದೇ ಉಪಯೋಗವಿಲ್ಲ ಮತ್ತು ಅದು ಮಾತ್ರವೇ ಅಲ್ಲ, ಇದು ಅವಮಾನಕ್ಕೆ ಕಾರಣವಾಗಿದೆ. ಆ ವ್ಯಕ್ತಿ ಆ ಸ್ಥಿತಿಯಲ್ಲಿ ಮುಂದುವರೆಯುತ್ತಿದ್ದರೆ, ಸಭೆಯಲ್ಲಿ ನಿರಂತರ ಸಮಸ್ಯೆಗಳಿರುತ್ತವೆ. ದೇವರ ಸೇವಕರು ಮೊದಲು ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಸಭೆಯ ವಿಶ್ವಾಸಿಗಳಿಗೆ ದೇವರ ರಾಜ್ಯದ ನಿಯಮಗಳನ್ನು ಬೋಧಿಸಬೇಕು ಮತ್ತು ಹಿಂದೆ ಸೂಚಿಸಿರುವ ಪರಿಶುದ್ಧಾತ್ಮನ ತರಬೇತಿಯೊಳಗೆ ಅವರನ್ನು ತರಬೇಕು ಇಲ್ಲವಾದರೆ ಅವರು ಸ್ವತಃ ಸಭೆಗೇ ಸಮಸ್ಯೆಯಾಗುತ್ತಾರೆ.

ನಮ್ಮೊಳಗೆ ಉಂಟುಮಾಡಲ್ಪಟ್ಟಿರುವ ನೂತನ ಮನುಷ್ಯನು, ದೇವರ ಸ್ವಾರೂಪ್ಯದಲ್ಲಿದ್ದಾನೆ ಎಂದು ನಾವು ವಾಕ್ಯದ ಮೂಲಕ ನೋಡಬಹುದು. (ಎಫೆ 4:24, ಕೊಲೊ 3:10)

ನೂತನವಾಗಿ ಸೃಷ್ಟಿಸಲ್ಪಟ್ಟ ವ್ಯಕ್ತಿಯು ಸಂಪೂರ್ಣತೆಯಿಂದ ಉಂಟುಮಾಡಲ್ಪಟ್ಟ ಮನುಷ್ಯನಾಗಿದ್ದಾನೆ. ಅವನು ದೇವರ ಸೃಷ್ಟಿ (ಚಿತ್ರ–8). ಈ ಹೊಸ ಸೃಷ್ಟಿಯಲ್ಲಿ ಯಾವ ಕೊರತೆಯಿಲ್ಲ; ಕಾರಣವೇನೆಂದರೆ ಅದು ದೇವರ ಸೃಷ್ಟಿ. ಆದರೆ ಅದೇ ಸಮಯದಲ್ಲಿ 1 ಪೇತ್ರ 2:1-2ರಲ್ಲಿ, ಅದು ಹೇಳುತ್ತದೆ,

*"ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ* **ಹಸುಮಕ್ಕಳಂತೆ** *ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ, ಆದರಿಂದ* **ಬೆಳೆಯುತ್ತಾ** *ರಕ್ಷಣೆಯನ್ನು ಹೊಂದುವಿರಿ."*

ಇಲ್ಲಿ ಇದು ಹೇಳುತ್ತದೆ ನಾವು ಚಿಕ್ಕ ಮಗುವಿನಂತೆ ಬೆಳೆಯಬೇಕು.

**"ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ.** ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ **ನಿರ್ಮಿಸಲ್ಪಟ್ಟಿದೆ."** (ಎಫೆ 4:24)

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು **ನೂತನ ಸೃಷ್ಟಿಯಾದನು.** ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು." (2 ಕೊರಿ 5:17)

ಮೇಲೆ ಸೂಚಿಸಿರುವ ಎರಡು ವಾಕ್ಯಗಳು ಮತ್ತು 1 ಪೇತ್ರ 2:1-2ರಲ್ಲಿ ಹೇಳಿರುವ ವಾಕ್ಯಗಳು ಹೋಲಿಕೆಯಾಗುವುದಿಲ್ಲ. ಕಾರಣವೇನು?

ಅಪೋಸ್ತಲ ಪೌಲನು 2 ಕೊರಿಂಥದವರಿಗೆ 4:16ರಲ್ಲಿ ಹೇಳುತ್ತಾನೆ ನಮ್ಮ ಹೊರಗಣ

ಮನುಷ್ಯನು ನಾಶವವಾಗುತ್ತಿದ್ದರೂ, ಆಂತರಿಕ ಮನುಷ್ಯನು ದಿನೇ ದಿನೇ ನೂತನವಾಗುತ್ತಿದ್ದಾನೆ ಅಥವಾ ಬಲಗೊಳ್ಳುತ್ತಿದ್ದಾನೆ. ಇಲ್ಲಿ ನಾವು ಬೆಳವಣಿಗೆಯನ್ನು ಗಮನಿಸಬಹುದು. ನಾವು ಇದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾದರೆ, ಯಾರು ಒಳಗಣ ಮನುಷ್ಯ ಮತ್ತು ಯಾರು ಹೊರಗಣ ಮನುಷ್ಯ ಎಂದು ಅರ್ಥಮಾಡಿಕೊಳ್ಳಬೇಕು. ಹೊಸದಾಗಿ ಸೃಷ್ಟಿಸಲ್ಪಟ್ಟ ಆತ್ಮವು ನೂತನ ಸೃಷ್ಟಿ. ದೇವರು ಅದನ್ನು ಮಾಡಿರುವುದರಿಂದ, ಆತ್ಮಕ್ಕೆ ಮತ್ತೊಮ್ಮೆ ಬದಲಾವಣೆ ಬೇಡ. ಆದರೆ ನಮ್ಮ ಪ್ರಾಣವು ಶರೀರದ ಭಾವದಿಂದ ತುಂಬಿದೆ, ಹಾಗಾಗಿ ವಾಕ್ಯದ ಪ್ರಕಾರ ಶರೀರಭಾವದಿಂದ ಆತ್ಮಭಾವಕ್ಕೆ ಪ್ರಾಣವು ಬದಲಾಗಬೇಕಿದೆ.

ಆಂತರಿಕ ಮನುಷ್ಯನು, ಆತ್ಮ ಮತ್ತು ಪ್ರಾಣದ ಸಂಯೋಗ ಎಂದು ನಾವು ಕಲಿತಿದ್ದೇವೆ. ಹಾಗೆಯೇ ಶರೀರ ಮತ್ತು ಪ್ರಾಣದ ಸಂಯೋಗ ಬಾಹೀರಿಕ ಮನುಷ್ಯನಾಗಿದೆ (ಚಿತ್ರ 11&12). ಎರಡೂ ಪ್ರಾಣವನ್ನು ಪರಸ್ಪರ ಎಳೆಯುತ್ತಿವೆ. ಶರೀರವು ಪ್ರಾಣವನ್ನು ಬಿಡದಿರಲು ಪ್ರಯತ್ನಿಸಿದಾಗ, ಆತ್ಮವು ಪ್ರಾಣವನ್ನು ಬಂಧಿಸಲು ಪ್ರಯತ್ನಿಸುತ್ತದೆ.

## ಏ) ಮಗುವಿನಂತೆ ಬೆಳೆಯಿರಿ

ಮುಂದುವರಿಕೆಯಲ್ಲಿ, ಆಂತರಿಕ ಮನುಷ್ಯನು ದಿನೇ ದಿನೇ ನೂತನವಾಗುತ್ತಿದ್ದಾನೆ ಎಂದು ಹೇಳುವುದರ ಅರ್ಥವನ್ನು ನಾವು ತಿಳಿದುಕೊಳ್ಳಲು ಪ್ರಯತ್ನಿಸೋಣ. ಚಿಕ್ಕ ಮಗುವಿನಂತೆ ನಾವು ಬೆಳೆದಾಗ ನಮಗೆ ಏನು ಸಂಭವಿಸುತ್ತದೆ? ನಮ್ಮಿಂದ ಏನು ತೆಗೆದುಹಾಕಲ್ಪಡುತ್ತದೆ? 1 ಪೇತ್ರ 2:1ರಲ್ಲಿ ನಾವು ನೋಡುತ್ತೇವೆ ನಾವು ಚಿಕ್ಕ ಮಗುವಿನಂತೆ ಬೆಳೆದಾಗ, ಎಲ್ಲಾ ಕೆಟ್ಟತನ, ಎಲ್ಲಾ ವಂಚನೆ, ಎಲ್ಲಾ ಶರೀರದ ಸ್ವಭಾವಗಳು ತೆಗೆದುಹಾಕಲ್ಪಡುತ್ತವೆ. ಈ ಎಲ್ಲವೂ ತೆಗೆದುಹಾಕಲ್ಪಡುವಾಗ ಏನು ಸಂಭವಿಸುತ್ತದೆ? ಆಂತರಿಕ ಮನುಷ್ಯನು ಬೆಳೆಯುತ್ತಿರುತ್ತಾನೆ.

ಈ ಪತ್ರಿಕೆ ಯಾರಿಗೆ ಬರೆಯಲ್ಪಟ್ಟಿದೆ ಎಂದು ಕೆಲವರು ಆಶ್ಚರ್ಯಪಡಬಹುದು. ಅನ್ಯಜನರಿಗೇ? ಇಲ್ಲ, ಇದು ಯೇಸು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟಂತವರಿಗೆ ಬರೆಯಲ್ಪಟ್ಟಿದೆ. ಪಾಪದ ದಂಡನೆಯು ಕಟ್ಟಲ್ಪಟ್ಟಿದ್ದರೂ, ಪಾಪದ ಉಪಸ್ಥಿತಿ ಮತ್ತು ಸ್ವಭಾವ ಇನ್ನೂ ಮನುಷ್ಯನ ಪ್ರಾಣದಲ್ಲಿದೆ. ದೇವರ ವಾಕ್ಯದಲ್ಲಿ ಹೇಳಿರುವಂತೆ, ಇದು ಕಿತ್ತುಹಾಕಲ್ಪಡಬೇಕು, ಹಾಗಾದರೆ ಮಾತ್ರ ನಾವು ಬೆಳೆಯಬಹುದು. ಈ ಬೆಳವಣಿಗೆ ಹೇಗೆ ಸಂಭವಿಸುತ್ತದೆ ಎಂದು ನಾವು ನೋಡೋಣ.


ಒಬ್ಬ ವ್ಯಕ್ತಿ ಹೊಸದಾಗಿ ಹುಟ್ಟಿದಾಗ ಆ ಮನುಷ್ಯನ ಆತ್ಮದಲ್ಲಿ ಆತ್ಮೀಕ ಬೆಳವಣಿಗೆ ಪ್ರಾರಂಭವಾದರೂ, ಉಳಿದ ದೇವರ ಕಾರ್ಯವು ಅವನು ಭೂಮಿಯಲ್ಲಿ ಜೀವಿಸುವಾಗ ಪ್ರಾಣದಲ್ಲಿ ಜರುಗುತ್ತದೆ. ಆದರೆ ದೇಹವು ತಟಸ್ಥವಾಗಿರುತ್ತದೆ. ಪ್ರಾಣವು ದೇಹಕ್ಕೆ ಏನು

> ದೇಹದ ಮೂಲಕ ಪ್ರಾಣದ ಶಾರೀರಿಕ ಸ್ವಭಾವವನ್ನು ಸಂರಕ್ಷಿಸಲು ಸೈತಾನನು ಪ್ರಯತ್ನಿಸಿದರೆ, ಪರಿಶುದ್ಧಾತ್ಮನು ನಮ್ಮ ಆತ್ಮದಲ್ಲಿ ನೆಲೆಸಿ ನಮ್ಮ ಪ್ರಾಣವನ್ನು ಆತ್ಮದ ಸ್ವಭಾವಕ್ಕೆ ತರಲು ಪ್ರಯತ್ನಿಸುತ್ತಾನೆ.

ಹೇಳಿದರೂ, ಅದು ಕೇಳುತ್ತದೆ. ಅದರಂತೆಯೇ ಆತ್ಮವು ಪ್ರಸಂಗಿಸಲು ಹೇಳಿದಾಗ, ಅದು ಪ್ರಸಂಗಿಸುತ್ತದೆ. ದೇಹವು ಪ್ರಾಣದಿಂದ ಏನನ್ನು ಕೇಳಿದರೂ, ಅದು ಅದರ ಪ್ರಕಾರ ಮಾಡುತ್ತದೆ. ಸಮಸ್ಯೆಯೇನೆಂದರೆ ದೇಹವು ಆತ್ಮದ ಧ್ವನಿಯನ್ನು ಕೇಳುವುದಿಲ್ಲ. ಆತ್ಮವು ಪ್ರಾಣದ ಮೂಲಕ ದೇಹಕ್ಕೆ ಸೂಚನೆಯನ್ನು ನೀಡುತ್ತದೆ. ಶರೀರದ ಭಾವಗಳೊಂದಿಗೆ ತುಂಬಿರುವ ಪ್ರಾಣವು ಅದನ್ನು ಅನುಮತಿಸುವುದಿಲ್ಲ. ಮುಂದಿನ ಚಿತ್ರದಲ್ಲಿ ನಕ್ಷತ್ರವನ್ನು ಹಾಕಿರುವ ಸ್ಥಳದಲ್ಲಿ ಅದನ್ನು ತೋರಿಸಲಾಗಿದೆ (ಚಿತ್ರ–23). ಆತ್ಮದಿಂದ ಕಳುಹಿಸಲ್ಪಟ್ಟಿರುವ ಸೂಚನೆಗಳು ಶರೀರದ ಸ್ವಭಾವದಿಂದ ತುಂಬಲ್ಪಟ್ಟಿರುವ ಪ್ರಾಣದಿಂದ (ಪ್ರಾಣದಲ್ಲಿ ಕಪ್ಪು ಬಣ್ಣದಲ್ಲಿ ತೋರಿಸಲಾಗಿದೆ) ಹಿಂದಿರುಗುತ್ತವೆ. ಕಾರಣವೇನೆಂದರೆ "ಶರೀರಭಾವವು" ಮನುಷ್ಯನ "ಸ್ವಯಂ"ನಲ್ಲಿ (ಪ್ರಾಣ) ಸೈತಾನನಿಂದ ಇಡಲ್ಪಟ್ಟಿರುವ ಕಾರ್ಯಕ್ರಮವಾಗಿದೆ. ದೇವರಾತ್ಮನು ನಮ್ಮ ದೇಹವನ್ನು ಉಪಯೋಗಿಸಬೇಕಾದರೆ ಶರೀರದ ಸ್ವಭಾವವನ್ನು ಹೊಂದಿರುವ ಪ್ರಾಣವು (ಸೈತಾನನ ಸ್ವಭಾವ) ಆತ್ಮದ ಸ್ವಭಾವದೊಂದಿಗೆ (ದೇವರ ಸ್ವಭಾವ) ನವೀಕರಿಸಲ್ಪಡಬೇಕು. ಅಂದರೆ, ಸೈತಾನನ ಪ್ರತಿನಿಧಿಯಾಗಿರುವ ನಮ್ಮ ಪ್ರಾಣವು, ದೇವರ ಪ್ರತಿನಿಧಿಯಾಗಿ ಬದಲಾಗಬೇಕು. ಈ ಪ್ರಕ್ರಿಯೆಯನ್ನು "ಮಗುವಿನಂತೆ ಬೆಳೆಯುವುದು" ಎನ್ನಬಹುದು.

ಬೇರೆ ಮಾತುಗಳಲ್ಲಿ ಹೇಳುವದಾದರೆ, 1 ಪೇತ್ರ 2:1-2ರಲ್ಲಿ ದೇವರ ವಾಕ್ಯ ಹೇಳುವುದನ್ನು ಆತ್ಮೀಕ ಬೆಳವಣಿಗೆ ಎನ್ನಲಾಗುತ್ತದೆ. ಈ ಕಾರ್ಯದಲ್ಲಿ ನಮ್ಮನ್ನು ಒಪ್ಪಿಸಿಕೊಡುವ ಆಧಾರದ ಮೇಲೆ ನಾವು ಆತ್ಮೀಕವಾಗಿ ಬೆಳೆಯುತ್ತೇವೆ.


**ಆತ್ಮೀಕ ಬೆಳವಣಿಗೆ ಇಲ್ಲದ ಪರಿಸ್ಥಿತಿ**




*ಶಾರೀರಿಕ ಮನಸ್ಸು ಆತ್ಮದಿಂದ ಸಂದೇಶವನ್ನು ತಡೆಯುತ್ತದೆ ಮತ್ತು ಸೆರೆಮನೆಯನ್ನು ಸಿದ್ಧಮಾಡುತ್ತದೆ*

**ಚಿತ್ರ –23**

ಸಂಬಂಧದಲ್ಲಿ ಅದು ಪ್ರಾಣವನ್ನು ಮದುವೆಯಾಗಿರುವಂತೆ, ಶರೀರವು ಪ್ರಾಣದ ಹತ್ತಿರ ನಿಲ್ಲುತ್ತದೆ. ಹೆಂಡತಿ ಮತ್ತು ಗಂಡನಂತೆ, ಒಂದೇ ದೇಹವಾಗಿ ಜೀವಿಸುತ್ತಾ, ದೇಹವು ಪ್ರಾಣದೊಂದಿಗೆ ಕೈಜೋಡಿಸುತ್ತದೆ. ಇದು ನಾವು ಬೇರ್ಪಡಿಸಲಾಗದಂತಹ ಪರಿಸ್ಥಿತಿ. ಆದ್ದರಿಂದ, ದೇಹವು ಪ್ರಾಣದಿಂದ ಸ್ವೀಕರಿಸುವಂತಹ ಸಂದೇಶಕ್ಕೆ ವಿಧೇಯವಾಗುತ್ತದೆ.




*ಶರೀರಕ್ಕೆ ವಿಧೇಯರಾಗುವದು ಆತ್ಮೀಕ ಮರಣಕ್ಕೆ ನಡೆಸುತ್ತದೆ (ರೋಮಾ 8:13)*

**ಚಿತ್ರ–24**

ಅಂದರೆ, ಅದು ಶರೀರದ ಕೆಲಸವನ್ನು ಮಾಡುತ್ತಿದೆ. ಮೇಲಿನ ವಿವರಣೆಯಲ್ಲಿ, ನಕ್ಷತ್ರವನ್ನು ನೀಡಲಾಗಿರುವ ಸ್ಥಳದ ಮೇಲೆ ನಾವು ಕೇಂದ್ರೀಕರಿಸಿದರೆ, ದೇಹವು ಶರೀರದ ಸ್ವಭಾವವನ್ನು ಹೊಂದಿರುವ ಪ್ರಾಣದ ಸೂಚನೆಯನ್ನು ಪಾಲಿಸುತ್ತಿದೆ ಎಂದು ನಾವು ನೋಡುತ್ತೇವೆ. ಆದರೆ ಅದು ಆತ್ಮದಿಂದ ಸಂದೇಶವನ್ನು ಪಡೆದರೆ, ದೇಹವು ಅದನ್ನು ಪಾಲಿಸುತ್ತದೆ. ಇದು ನಮ್ಮ ಆತ್ಮೀಕ ಬೆಳವಣಿಗೆಯ ಕೊನೆಯ ಹಂತದಲ್ಲಿ ಪೂರ್ಣವಾಗಿ ನಡೆಯುತ್ತದೆ. ಕೊನೆಯ ಹಂತಕ್ಕೆ ಬಂದಾಗ, ಶರೀರದ ಸ್ವಭಾವದಿಂದ ತುಂಬಿರುವ ಪ್ರಾಣವು ತೆಗೆಯಲ್ಪಡುತ್ತದೆ ಮತ್ತು ಅದು ಆತ್ಮದ ಸ್ವಭಾವದಿಂದ ತುಂಬಲ್ಪಡುತ್ತದೆ. ಬೇರೆ ಮಾತುಗಳಲ್ಲಿ ನಾವು ಹೇಳಿದರೆ ಆತ್ಮವು ಪ್ರಾಣವನ್ನು ನುಂಗುತ್ತದೆ. ಮುಂದುವರಿಕೆಯಲ್ಲಿ, ಈ ಆತ್ಮೀಕ ಜೀವವು (ಝೋಯೆ) ನಮ್ಮ ಪ್ರಾಣವನ್ನು ನುಂಗುವುದು ಮಾತ್ರವಲ್ಲ ನಮ್ಮ ದೇಹವನ್ನು ಪುನರುತ್ಥಾನದ ಹಂತಕ್ಕೆ ಕೊಂಡೊಯ್ಯುತ್ತದೆ.

**"ಈ ಗುಡಾರದಲ್ಲಿರುವವರಾದ ನಾವು ಭಾರಹೊತ್ತುಕೊಂಡವರಾಗಿ ನರಳುತ್ತೇವೆ; ಇದು ಕಳಚಿಹೋಗಬೇಕೆಂಬದು ನಮ್ಮ ಇಷ್ಟವಲ್ಲ; ಮರ್ತ್ಯವಾದದ್ದು ನುಂಗಿ ಹೋಗಿ ಜೀವವೊಂದೇ ಉಳಿಯುವಂತೆ ಈ ಗುಡಾರದ ಮೇಲೆ ಆ ನಿವಾಸವನ್ನು ಧರಿಸಿಕೊಳ್ಳಬೇಕೆಂಬದೇ ನಮ್ಮ ಇಷ್ಟ." (2 ಕೊರಿ 5:4)**

ಆತ್ಮೀಕ ಬೆಳವಣಿಗೆಯ ಕೊನೆಯ ಹಂತಗಳಲ್ಲಿ, ಆತ್ಮವು ಪ್ರಾಣವನ್ನು ನುಂಗುತ್ತದೆ ಮತ್ತು ಶರೀರದ ಪುನರುತ್ಥಾನದಲ್ಲಿ, ಈ ಆತ್ಮೀಕ ಜೀವವು (ಝೋಯೆ) ನಮ್ಮ ಪ್ರಾಣವನ್ನು ನುಂಗುವುದು ಮಾತ್ರವಲ್ಲದೇ ನಮ್ಮ ದೇಹವನ್ನೂ ಸಹ ನುಂಗುತ್ತದೆ.

ನಂತರ ದೇಹವು ಪೂರ್ಣವಾಗಿ ಆತ್ಮದ ನಿಯಂತ್ರಣದಡಿಯಲ್ಲಿ ಇರುತ್ತದೆ. ಆತ್ಮ ಮತ್ತು ಪ್ರಾಣದ ಸಂಯೋಗವಾಗಿರುವ ಆಂತರಿಕ ಮನುಷ್ಯ ಬೆಳೆಯುತ್ತಿದ್ದಾನೆ ಎಂದು ನಾವು ಹೇಳಿದಾಗ, ನಮ್ಮ ಮಾತಿನ ಅರ್ಥ, "ಶಾರೀರಿಕ ಮನಸ್ಸಿನ ಭಾವಗಳು ಆತ್ಮದ ಭಾವಗಳಿಂದ ಬದಲಾಯಿಸಲ್ಪಡುತ್ತಿವೆ" ಎಂದು.

ಶರೀರದ ಸ್ವಭಾವದಿಂದ ತುಂಬಿರುವ ಪ್ರಾಣವು ಆತ್ಮದ ಭಾವಗಳನ್ನು ಅಂಗೀಕರಿಸುವುದಿಲ್ಲ ಮತ್ತು ಆತ್ಮವೂ ಶರೀರದ ಭಾವಗಳನ್ನು ಅಂಗೀಕರಿಸುವುದಿಲ್ಲ. ದೇವರ ವಾಕ್ಯವು ಹೇಳುತ್ತದೆ,

**"ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ." (ಗಲಾ 5:17)**

ಶರೀರದ ಭಾವಗಳು ಪ್ರಾಣದಲ್ಲಿ ತುಂಬುತ್ತಿವೆ. ಆತ್ಮದ ಭಾವಗಳು ಸಕಾರಾತ್ಮಕವಾಗಿದ್ದರೆ, ಶರೀರದ ಭಾವಗಳು ನಕಾರಾತ್ಮಕವಾಗಿದೆ. ಆಂತರಿಕ ಮನುಷ್ಯನು ಈ ಎರಡರ ಸಂಯೋಗವಾಗಿದ್ದಾನೆ.

## ಐ) ಆತ್ಮೀಕ ಬೆಳವಣಿಗೆಯಲ್ಲಿ ಕಾಲ್ಪನಿಕ ರೂಪುರೇಖೆ

ಊಹಿಸಿಕೊಳ್ಳಿ ಆತ್ಮವು (ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟ ಮನುಷ್ಯನ ಆತ್ಮ) 10ನೇ ಶ್ರೇಣಿಯನ್ನು ಹೊಂದಿದೆ. ಪ್ರಾಣದ ಶ್ರೇಣಿಯು 'ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮಕ್ಕಿಂತ' ಸ್ವಲ್ಪ ಕಡಿಮೆಯಿದೆ (–9), ಕಾರಣವೇನೆಂದರೆ ಪ್ರಾಣವು ಇಲ್ಲದಿದ್ದರೆ (–9), ಕ್ರಿಸ್ತನು ನಮ್ಮೊಳಗೆ ಬರುತ್ತಿರಲಿಲ್ಲ. ನಾವು ಸುವಾರ್ತೆಯನ್ನು ಕೇಳಿದಾಗ ವಾಕ್ಯದ ವಿರುದ್ಧವಾಗಿ ಗುಣುಗುಟ್ಟಲಿಲ್ಲ ಬದಲಿಗೆ "ನಮ್ಮ ಜೀವನದೊಳಗೆ ಬಾ" ಎಂದು ಕ್ರಿಸ್ತನಿಗೆ ಹೇಳಿದೆವು. ನಾವು ಬೇರೆ ಏನನ್ನೂ ಯೋಚಿಸಲಿಲ್ಲ. ಈ ಪ್ರಾಣವು ಅಂಗೀಕರಿಸಿದಾಗ, ಆತ್ಮದಲ್ಲಿ ನಾವು ನೂತನ ಸೃಷ್ಟಿಯಾದೆವು ಮತ್ತು ಆ ನೂತನ ಆತ್ಮದಲ್ಲಿ ದೇವರಾತ್ಮನು ವಾಸಿಸುತ್ತಿದ್ದಾನೆ.

ಕ್ರಿಸ್ತನು ನಮ್ಮಿಂದ (ಪ್ರಾಣ) ಅಂಗೀಕಾರವನ್ನು ಪಡೆದ ನಂತರ ಪ್ರತೀ ಕ್ಷಣವು ನಮ್ಮೊಳಗೆ ಬರುವ ದೇವರಾತ್ಮನ ಮಾತಿಗೆ ನಾವು ಕಿವಿಗೊಟ್ಟರೆ ನಾವು ಆತ್ಮೀಕವಾಗಿ ಬೆಳೆಯುವುದಕ್ಕೆ ಪ್ರಾರಂಭಿಸುತ್ತೇವೆ. ಅದು ಹೇಗಿರುತ್ತದೆ ಎಂದು ಅರ್ಥಮಾಡಿಕೊಳ್ಳಲು ಒಂದು ಕಾಲ್ಪನಿಕ ಮೌಲ್ಯಮಾಪನವನ್ನು ಕೆಳಗೆ ನೀಡಲಾಗಿದೆ.

ಆತ್ಮದ ಮೌಲ್ಯ = + 10

ಪ್ರಾಣದ ಮೌಲ್ಯ = - 9

ಅವೆರಡರ ಒಟ್ಟು ಶಕ್ತಿ ಏನಾಗುತ್ತದೆ?

(+10) + (− 9) = 1

ಫಲಿತಾಂಶವೇನು? ಒಂದು.

ಗಲಾತ್ಯದವರಿಗೆ 5:17 ಹೇಳುತ್ತದೆ **"ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ."** ಒಂದು ಸಕಾರಾತ್ಮಕವಾಗಿದ್ದರೆ ಇನ್ನೊಂದು ನಕಾರಾತ್ಮಕವಾಗಿದೆ. ಆದ್ದರಿಂದ ಅವೆರಡರ ಭಾವಗಳ ಫಲಿತಾಂಶವನ್ನು ಆಂತರಿಕ ಮನುಷ್ಯನ ಬಲವೆಂದು ಹೇಳಲಾಗುತ್ತದೆ. ಈಗ ಇದು 1.

ಆತ್ಮ + ಪ್ರಾಣ = ಆಂತರಿಕ ಮನುಷ್ಯನ ಶಕ್ತಿ.

+10 + − 9 = 1

ಮುಂದುವರಿಕೆಯಲ್ಲಿ, ಪ್ರತೀನಿಮಿಷ ನಾವು ದೇವರಾತ್ಮನಿಗೆ ಕಿವಿಗೊಟ್ಟಾಗ ಮತ್ತು ಮುಂದುವರೆದಾಗ, ಪ್ರಾಣದಲ್ಲಿ ಇಡಲಾಗಿರುವ ಲೌಕಿಕ ಭಾವಗಳು (ಶರೀರದ ಭಾವಗಳು) ನಾಶವಾಗುತ್ತವೆ ಮತ್ತು ಆಂತರಿಕ ಮನುಷ್ಯನು ಬಲಗೊಳ್ಳುತ್ತಾನೆ.

| | ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮ | ಲೌಕಿಕ ಭಾವಗಳಿಂದ ತುಂಬಿರುವ ಪ್ರಾಣ | ಆಂತರಿಕ ಮನುಷ್ಯನ ಶಕ್ತಿ |
|---|---|---|---|
| ರಕ್ಷಣೆಯ ಸಮಯದಂದು | +10 | -9 | 1 |
| ವ್ಯಕ್ತಿಯು ಪರಿಶುದ್ಧಾತ್ಮನಿಗೆ ಅಲ್ಪಮಟ್ಟಿಗೆ ವಿಧೇಯನಾಗಲು ಪ್ರಾರಂಭಿಸಿದಾಗ | +10 | -7 | 3 |
| ವಿಧೇಯರಾಗಿ ಹಾಗೂ ಮುಂದುವರೆದಾಗ | +10 | -4 | 6 |
| ವಿಧೇಯರಾಗಲು ಮುಂದುವರಿಸಿದಾಗ | +10 | 0 | +10<br>(ತಲೆಯಾದ ಕ್ರಿಸ್ತನತನಕ ಬೆಳೆದಾಗ) |

ಮೇಲಿನ ಕೋಷ್ಟಕದಲ್ಲಿ, ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮ ಮನುಷ್ಯನ ಮೌಲ್ಯವು ಯಾವಾಗಲೂ +10 ಎಂದು ನಾವು ನೋಡುತ್ತೇವೆ, ಕಾರಣವೇನೆಂದರೆ, ವ್ಯಕ್ತಿಯು ದೇವರ ಸ್ವಾರೂಪ್ಯದಲ್ಲಿ ನೂತನವಾಗಿ ಉಂಟುಮಾಡಲ್ಪಟ್ಟಿದ್ದಾನೆ (ಎಫೆ 4:24, 2 ಕೊರಿ 5:17) ದೇವರಿಂದ ಹುಟ್ಟಿದ ವ್ಯಕ್ತಿಯು ಅಪೂರ್ಣತೆಯನ್ನು ಹೊಂದಿಲ್ಲ. ಹಾಗಾಗಿ ಮತ್ತಷ್ಟು ಬೆಳವಣಿಗೆಯ ಅವಶ್ಯವಿಲ್ಲ. ಕಾರಣವೇನೆಂದರೆ ಆ ವ್ಯಕ್ತಿಯು ದೇವರ ಸ್ವಾರೂಪ್ಯದಲ್ಲಿದ್ದಾನೆ.

**"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು." (2 ಕೊರಿ 5:17)**

ನಮ್ಮ ಆಂತರಿಕ ಮನುಷ್ಯನ ಬಲವು ಹೆಚ್ಚುತ್ತಿರುವುದಕ್ಕೆ ಕಾರಣವೇನೆಂದರೆ ಪ್ರಾಣದಲ್ಲಿನ (ಸ್ವಯಂ) ಶಾರೀರಿಕ ಸ್ವಭಾವವು ನಾಶವಾಗುತ್ತಿರುವುದಾಗಿದೆ (1, 3, 6, 10). ಈ ಲೋಕದಲ್ಲಿ ನಮ್ಮ ಪ್ರಾಣ 'ಸ್ವಯಂ' ಆಗಿದೆ. ನಮ್ಮ ಸ್ವಯಂ ಲೋಕದ ಭಾವಗಳಿಂದ ತುಂಬಿದೆ. ಯೇಸು ಕ್ರಿಸ್ತ ಹೇಳಿದ್ದೇನೆಂದರೆ;

**"ಮತ್ತು ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ – ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ." (ಮತ್ತಾ 16:24)**

ಒಬ್ಬ ವ್ಯಕ್ತಿ ಕ್ರಿಸ್ತೀಯ ಜೀವಿತದಲ್ಲಿ ಅವನ ಸ್ವಾರ್ಥವನ್ನು "ಶೂನ್ಯ" ಮಾಡುವುದನ್ನು ಅತ್ಯುನ್ನತ ಮಟ್ಟ ಎನ್ನಬಹುದು. ಆ ಸಮಯದಲ್ಲಿ, ಅವನೊಳಗಿರುವ ದೇವರ ಸ್ವಾರೂಪ್ಯದಲ್ಲಿರುವ ನೂತನವಾಗಿ ಸೃಷ್ಟಿಸಲ್ಪಟ್ಟ ಮನುಷ್ಯನು ಪೂರ್ಣವಾಗಿ ಪ್ರಕಟವಾಗುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ತಲೆಯಾಗಿರುವ ಕ್ರಿಸ್ತನವರೆಗೆ ಬೆಳೆಯುತ್ತೇವೆ. ಆದುದರಿಂದಲೇ ದೇವರ ವಾಕ್ಯವು ಹೇಳುತ್ತದೆ ನಾವು ನಮ್ಮ ಸ್ವಾರ್ಥದ ಮುಖವಾಡವನ್ನು ಕಳಚಿಡಬೇಕು ಮತ್ತು ಕನ್ನಡಿಯ ಮೂಲಕ ಒಳಗಿನ ದೇವರ ಮಹಿಮೆಯಿಂದ ಜಗತ್ತನ್ನು ಬೆಳಗಿಸಬೇಕು.

> ಒಬ್ಬ ವ್ಯಕ್ತಿ ಕ್ರಿಸ್ತೀಯ ಜೀವಿತದಲ್ಲಿ ಅವನ ಸ್ವಾರ್ಥವನ್ನು "ಶೂನ್ಯ" ಮಾಡುವುದನ್ನು ಅತ್ಯುನ್ನತ ಮಟ್ಟ ಎನ್ನಬಹುದು. ಆ ಸಮಯದಲ್ಲಿ ಅವನೊಳಗಿರುವ ದೇವರ ಸ್ವಾರೂಪ್ಯದಲ್ಲಿರುವ ನೂತನವಾಗಿ ಸೃಷ್ಟಿಸಲ್ಪಟ್ಟ ಮನುಷ್ಯನು ಪೂರ್ಣವಾಗಿ ಪ್ರಕಟವಾಗುತ್ತಾನೆ.

**"ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ." (2 ಕೊರಿ 3:18)**


ದೇವರು ಬೆಳಕಾಗಿದ್ದಾನೆ. (1 ಯೋಹಾನ 1:5) ದೇವರ ವಾಕ್ಯವು ಹೇಳುತ್ತದೆ; ದೇವರು ವಾಸಿಸುವ ನಾವು ಈ ಲೋಕದ ಬೆಳಕಾಗಿದ್ದೇವೆ.

**"ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು." (ಮತ್ತಾ 5:14)**

ನಮ್ಮ ಬೆಳಕನ್ನು ಶರೀರದ ಭಾವಗಳಿಂದ (ಮುಖವಾಡ) ತುಂಬಿರುವ ಪ್ರಾಣದಿಂದ ಮರೆಮಾಡಬಾರದು. ಬದಲಿಗೆ ನಾವು ಅದನ್ನು ಲೋಕಕ್ಕೆ ಹರಡಬೇಕು ಮತ್ತು ಲೋಕವನ್ನು ಬೆಳಗಿಸಬೇಕು.

ಆತ್ಮೀಕ ಬೆಳವಣಿಗೆಯ ಪ್ರಾರಂಭದಲ್ಲಿ ವಿಮೋಚಿಸಲ್ಪಟ್ಟಿರುವ ಮಗುವು ಹಸುಮಗುವಿನಂತೆ ಮಾತ್ರ ಕಾರ್ಯಮಾಡಲು ಸಾಧ್ಯ. ಆದರೆ ನಾವು ಪರಿಶುದ್ಧಾತ್ಮನ ಕಾರ್ಯದ ಮೂಲಕ ಹೋದಾಗ ಶರೀರದ ಭಾವಗಳಾಗಿರುವ, ಬಾಹೀರಿಕ ಮನುಷ್ಯನ ಶಕ್ತಿ ಸ್ವಲ್ಪ ಸ್ವಲ್ಪ ನಮ್ಮಿಂದ ತೆಗೆದುಹಾಕಲ್ಪಡುತ್ತದೆ. ಬೆಳಣಿಗೆಯು ವೇಗವಾಗಿರುವುದಿಲ್ಲ, ಅದು ನಿಧಾನವಾಗಿರುತ್ತದೆ. ಈ ಬೆಳವಣಿಗೆಯ ಸಮಯದಲ್ಲಿ, ಶರೀರದ ಸ್ವಭಾವವು ನಮ್ಮ ಪ್ರಾಣದಿಂದ ತೆಗೆದುಹಾಕಲ್ಪಡುತ್ತದೆ. ವಾಕ್ಯವಾಗಿರುವ ಹಾಲನ್ನು ನಾವು ಕುಡಿದಂತೆ, ನಾವು ಬೆಳೆಯುತ್ತೇವೆ ಮತ್ತು ದೇವರ ಚಿತ್ತವನ್ನು ಮಾಡಲು ಸಾಧ್ಯವಾಗುತ್ತದೆ.

ನಾವು ವಾಕ್ಯವನ್ನು ಕೇಳುವುದು, ವಾಕ್ಯವನ್ನು ಓದುವುದು ಮತ್ತು ವಾಕ್ಯದ ಮೇಲೆ ಧ್ಯಾನಮಾಡುವುದು ಬಹಳ ಪ್ರಾಮುಖ್ಯವುಳ್ಳದ್ದಾಗಿದೆ. ದೇವರ ವಾಕ್ಯವನ್ನು ನಾವು ಕೇಳದಿದ್ದರೆ ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು ಎಂದು ನಮಗೆ ತಿಳಿಯುತ್ತಿರಲಿಲ್ಲ. ನಾವು ಕೇಳಿದ್ದರಿಂದ, ನಾವು ವಿಧೇಯರಾದೆವು. ನಾವು ವಿಧೇಯರಾಗಲು ಪ್ರಾರಂಭಿಸಿದಾಗ, ಶರೀರದ ಭಾವಗಳಿಂದ ತುಂಬಿದ್ದ ಪ್ರಾಣವು (ಕಪ್ಪು ಬಣ್ಣದಲ್ಲಿ ತೋರಿಸಲಾಗಿದೆ) ಶರೀರ ಭಾವಗಳಿಂದ ನಿಧಾನವಾಗಿ ಬದಲಾಗಲು ಪ್ರಾರಂಭಿಸಿತು (ಕಪ್ಪು ಬಣ್ಣವು ಬದಲಾಗುತ್ತಿದೆ ಮತ್ತು ಬಿಳಿಯಾಗಲು ಪ್ರಾರಂಭಿಸಿದೆ).




*ನೂತನ ಮನಸ್ಸಿನ ಮೂಲಕ ಆತ್ಮದ ಸಂದೇಶಗಳಿಗೆ ದೇಹ ವಿಧೇಯವಾಗಲು ಪ್ರಾರಂಭಿಸುತ್ತದೆ*

**ಚಿತ್ರ–25**


ಶರೀರದ ಭಾವಗಳು ಕಡಿಮೆಯಾಗಿದೆ. ಇದಕ್ಕೂ ಮೊದಲು, ಆತ್ಮ ಮನುಷ್ಯ (ನೂತನ ಸೃಷ್ಟಿ) ಪ್ರಾಣದ ಮೂಲಕ ಅನೇಕ ಸಂದೇಶಗಳನ್ನು ಶರೀರಕ್ಕೆ ಕೊಟ್ಟಿದ್ದಾನೆ. ಆದರೆ ಎಲ್ಲವೂ ಪ್ರಾಣದ ಶಾರೀರಿಕ ಸ್ವಭಾವದ ಕಾರಣದಿಂದ ಹಿಂದಿರುಗುತ್ತಿದ್ದವು. ಪ್ರಾಣದ ಅಂಗೀಕಾರವಿಲ್ಲದೇ, ಆತ್ಮವು ಶರೀರದ ಮೂಲಕ ಈ ಲೋಕದಲ್ಲಿ ಬಿಡುಗಡೆಯಾಗಲು ಸಾಧ್ಯವಿಲ್ಲ. ಕಾರಣ ಈ ಭೂಮಿಯಲ್ಲಿ ದೇವರು "ಪ್ರಾಣಕ್ಕೆ" ಅಧಿಕಾರವನ್ನು ಕೊಟ್ಟಿದ್ದಾನೆ.

**"ಮನುಷ್ಯನು ಬದುಕುವ ಪ್ರಾಣಿಯಾದನು." (ಆದಿ 2:7)**

**"ಅವರು (ಪ್ರಾಣ ಜೀವಿಗಳು) . . . . ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು." (ಆದಿ 1:26)**

ಮೊದಲಿಗೆ, ನಮ್ಮ ಶಾರೀರಿಕ ಮನಸ್ಸಿನ ಕಾರಣದಿಂದ ಆತ್ಮದ ಕಾರ್ಯಗಳು ನಮ್ಮ ಮೂಲಕ ಈ ಲೋಕದೊಳಗೆ ಮುಂದೆ ಚಲಿಸಲು ಆಗುವುದಿಲ್ಲ. ಆದರೆ ನಾವು ಆತ್ಮಕ್ಕೆ ವಿಧೇಯರಾದಾಗ, ವಾಕ್ಯಕ್ಕೆ ಶರಣಾಗುತ್ತೇವೆ. ಅಲ್ಲಿಯವರೆಗೂ ಅದು ನಮ್ಮ ಶಾರೀರಿಕ ಮನಸ್ಸಿನಲ್ಲಿ ಏನೂ ಆಗುತ್ತಿಲ್ಲವೆಂಬಂತೆ, ಅಂದರೆ ಆತ್ಮದ ಯಾವುದೇ ಆಲೋಚನೆಗಳು ಮುಂದುವರಿಯಲು ಸಾಧ್ಯವಿಲ್ಲವೆಂಬಂತಿತ್ತು; ಆದರೆ ನಾವು ವಾಕ್ಯಕ್ಕೆ ಮತ್ತೆ ಶರಣಾದಾಗ (ಆತ್ಮದ ಕಪ್ಪು ಬಣ್ಣ ಕಡಿಮೆಯಾಗುತ್ತದೆ), ಶರೀರದ ಸ್ವಭಾವವು ನಮ್ಮಲ್ಲಿ ಕ್ಷೀಣಿಸಲು ಪ್ರಾರಂಭಿಸಿತು. ಅದು ಪೂರ್ಣವಾಗಿ ತೆಗೆದುಹಾಕಲ್ಪಡದಿದ್ದರೂ, ಆತ್ಮವು ಪ್ರಾಣದ ನವೀಕರಿಸಲ್ಪಟ್ಟ ಮನಸ್ಸಿನ ಮೂಲಕ ಶರೀರಕ್ಕೆ ಕೆಲವು "ವಾಕ್ಯದ ಆಲೋಚನೆಗಳನ್ನು"

ಕಳುಹಿಸಲು ಸಾಧ್ಯವಾಗುತ್ತದೆ, ನಂತರ ಆತ್ಮದ ಸ್ವಭಾವವು ದೇಹದ ಮೂಲಕ ಅಥವಾ ಅದರ ಕ್ರಿಯೆಗಳ ಮೂಲಕ ಲೋಕದಲ್ಲಿ ಪ್ರಕಟಗೊಳ್ಳಲು ಪ್ರಾರಂಭಿಸುತ್ತದೆ. ಆದ್ದರಿಂದ ಆತ್ಮದಿಂದ ಸಂದೇಶವು ಶರೀರಕ್ಕೆ ಹೋಗಲು ಪ್ರಾರಂಭಿಸುತ್ತದೆ. ಶರೀರದ ಭಾವಗಳನ್ನು ಬದಿಗಿಟ್ಟು, ಆತ್ಮದ ಭಾವಗಳು ಪ್ರಾಣದಲ್ಲಿ ತುಂಬಲು ಪ್ರಾರಂಭಿಸುತ್ತವೆ.




*ಆತ್ಮಕ್ಕೆ ವಿಧೇಯವಾಗುವದರಿಂದ ಆಂತರಿಕ ಮನುಷ್ಯನು ಬೆಳೆಯುತ್ತಿದ್ದಾನೆ*

**ಚಿತ್ರ–26**

ಆತ್ಮದ ಕಾರ್ಯದಿಂದ ಉದ್ದೇಶಪೂರ್ವಕವಾಗಿ ಆವರಿಸಲ್ಪಟ್ಟಾಗ, ನಮ್ಮ ಪ್ರಾಣ ಶರೀರದ ಭಾವಗಳನ್ನು ಜಯಿಸಿತು. ನಂತರ ನಮ್ಮ ನವೀಕೃತ ಪ್ರಾಣವು ಆತ್ಮದಿಂದ ತುಂಬಲ್ಪಡುತ್ತದೆ. (ಪ್ರಾಣದ ಕಪ್ಪು ಬಣ್ಣವು ಬಿಳಿ ಬಣ್ಣವನ್ನು ಪಡೆಯುತ್ತಿದೆ ಎಂದು ಚಿತ್ರದಲ್ಲಿ ನಾವು ನೋಡಬಹುದು).

**ಚಿತ್ರದಲ್ಲಿ 3 ರೀತಿಯ ಬದಲಾವಣೆಗಳನ್ನು ಪ್ರಾಣಕ್ಕೆ ನೀಡಲಾಗಿದೆ:**

1. ಪ್ರಾಣದ ಗಾತ್ರವು ಕಡಿಮೆಯಾಗುತ್ತಿದೆ = ಸ್ವಯಂ ತ್ಯಜಿಸಲ್ಪಟ್ಟಿದೆ.

2. ಪ್ರಾಣದಲ್ಲಿ ಕಪ್ಪು ಬಣ್ಣ ಕಡಿಮೆಯಾಗುತ್ತಿದೆ = ಶರೀರದ ಭಾವಗಳು ಕಡಿಮೆಯಾಗುತ್ತಿದೆ.

3. ಪ್ರಾಣವು ಆತ್ಮಕ್ಕೆ ಹತ್ತಿರವಾಗುತ್ತಿದೆ = ಪ್ರಾಣವು ಆತ್ಮದ ಸ್ವಭಾವದಿಂದ ತುಂಬಲ್ಪಡುತ್ತಿದೆ.

ನಮ್ಮನ್ನು ನಾವು ತ್ಯಜಿಸಿದಾಗ, ಮತ್ತು ನಮ್ಮಲ್ಲಿನ "ಪರಿಶುದ್ಧಾತ್ಮನ ಕಾರ್ಯಕ್ಕೆ" ಶರಣಾಗುವ ಮೂಲಕ ದೇವರ ವಾಕ್ಯಕ್ಕೆ ನಮ್ಮ ಮನಸ್ಸನ್ನು ಖಾಲಿಮಾಡಿದಾಗ ಮಾತ್ರ, ದೇವರಾತ್ಮನು ನಮ್ಮನ್ನು ದೇವರ ಜೀವದಿಂದ (ಝೋಯೆ) ಹೆಚ್ಚು ಸಮೃದ್ಧವಾಗಿ ತುಂಬಲು ಸಾಧ್ಯ. ನಾವು ದೇವರಿಗೆ ನಮ್ಮನ್ನು ತುಂಬಿಸು ಎಂದು ಪ್ರಾರ್ಥಿಸಲು ಮುಂದುವರೆಸಿದಂತೆಯೇ, ಖಾಲಿತನವನ್ನೂ ಅನುಭವಿಸಲು ಮುಂದುವರೆಸುತ್ತೇವೆ. ವಾಸ್ತವವಾಗಿ ನಮ್ಮನ್ನು ತುಂಬುವ ಸಲುವಾಗಿ ಕ್ರಿಸ್ತನು ಬಾಗಿಲ ಬಳಿಯಲ್ಲಿ ನಿಂತಿದ್ದಾನೆ ಆದರೆ ನಮ್ಮ ಪ್ರಾಣವು ಶರೀರದ ಭಾವಗಳಿಂದ ತುಂಬಿರುವುದರಿಂದ ಆತನಿಗೆ ತುಂಬಲು ಆಗುವುದಿಲ್ಲ. ಹಾಗಾದರೆ ಅದನ್ನು ಹೇಗೆ ತುಂಬಬಹುದು? ನಾವು ಶರೀರಭಾವಗಳನ್ನು ಹೊರಸುರಿಯುವುದಾದರೆ ಮಾತ್ರ ಆತನು ನಮ್ಮನ್ನು ಆತ್ಮ ಭಾವಗಳಿಂದ ಭರ್ತಿಮಾಡಬಹುದು.

ಬಾಧೆಪಡುವ ಆಯುಧವನ್ನು ನೀವು ಹೊಂದಿದ್ದೀರಾ? ನಮ್ಮನ್ನು ನಾವು ತ್ಯಜಿಸುತ್ತಾ ಬಾಧೆಪಡುವ ಮನಸ್ಸಿನೊಂದಿಗೆ ನಮ್ಮನ್ನು ನಾವು ಸಜ್ಜುಗೊಳಿಸಬೇಕು (1 ಪೇತ್ರ 4:1-2). ಶರೀರದ ಭಾವದಿಂದ ಅದು ಖಾಲಿಯಾಗದ ಹೊರತು, ಕ್ರಿಸ್ತನು ಅದನ್ನು ತುಂಬಿಸಲು ಆಗುವುದಿಲ್ಲ. ನಾವು ನಮ್ಮನ್ನು ತುಂಬಿಸು ಎಂದು ಪ್ರಾರ್ಥಿಸಿದರೆ, "ನಾನು ನಿನ್ನನ್ನು ತುಂಬಲು ಸಿದ್ಧನಿದ್ದೇನೆ ಆದರೆ ಅದಕ್ಕೂ ಮೊದಲು ಒಳಗಡೆ ತುಂಬಿರುವುದನ್ನು ಖಾಲಿಮಾಡಲು ನೀನು ಸಿದ್ಧನಿದ್ದೀಯ? ಹಾಗಾದರೆ ನಾನು ನಿನ್ನನ್ನು ತುಂಬಿಸುತ್ತೇನೆ" ಎಂದು ಕ್ರಿಸ್ತನು ಹೇಳುತ್ತಾನೆ. ನಾವು ಹೊರಗೆ ಸುರಿದರೆ, ಮೊದಲು ದೇವರು, ಹೃದಯ–ರೀತಿಯ ಮಡಕೆಗೆ ಯಾವುದು ಅಗತ್ಯವಿದೆಯೋ ಅದನ್ನು ತುಂಬಿಸುತ್ತಾನೆ. ಅದು ತುಂಬಲ್ಪಟ್ಟ ನಂತರ ನಾವು ಹೊರಸೂಸಲು ಅನುಮತಿಸಿದರೆ, ಅದು ಹೊರಗೆ ಹರಿಯುತ್ತದೆ ಮತ್ತು ಬೇರೆಯವರಿಗೆ ಆಶೀರ್ವಾದವಾಗಿ ಬದಲಾಗುತ್ತದೆ. ನಮ್ಮ ಆತ್ಮೀಕ ಬೆಳವಣಿಗೆಯ ಅನುಸಾರವಾಗಿ, ಆತ್ಮದ ನದಿಯು ನಮ್ಮಿಂದ ಹೊರಗೆ ಹರಿಯಲು ಪ್ರಾರಂಭಿಸುತ್ತದೆ. (ಯೋಹಾನ 7:38)

ಮೊದಲು, ಅದು ನಮ್ಮಲ್ಲಿ ತುಂಬಲ್ಪಡಬೇಕು, ನಂತರ ಕ್ರಿಸ್ತನು ತುಂಬಿಸುವಾಗ ಅದು ತುಂಬಿ ಹೊರಸೂಸಲ್ಪಡಬೇಕು. ನಾವು ಮೊದಲು ನಮ್ಮ ಪಾತ್ರೆಯನ್ನು ಖಾಲಿಮಾಡದಿದ್ದರೆ, ಕ್ರಿಸ್ತನು ನಮ್ಮ ಪಾತ್ರೆಯನ್ನು ತುಂಬಲು ಆಗುವುದಿಲ್ಲ.

ಈ ಕಾರ್ಯಭರಿತ ಜೀವಿತದಲ್ಲಿ, ಆತ್ಮ ನಮಗೆ ನೀಡುವ ವಾಕ್ಯದ ಆಲೋಚನೆಗಳಿಂದ ನಮ್ಮ ಪ್ರಾಣವನ್ನು ನಾವು ಬಂಧಿಸುತ್ತೇವೆ.

ಈ ಕಾರ್ಯಭರಿತ ಜೀವನದಲ್ಲಿ, ಆತ್ಮ ನಮಗೆ ನೀಡುವ ವಾಕ್ಯದ ಆಲೋಚನೆಗಳಿಂದ ನಮ್ಮ ಪ್ರಾಣವನ್ನು ನಾವು ಬಂಧಿಸುತ್ತೇವೆ.

ಆದ್ದರಿಂದ ನಮ್ಮನ್ನು ತುಂಬಿಸು ಎಂದು ಪ್ರಾರ್ಥಿಸುವ ಮೊದಲು, ಕ್ರಿಸ್ತನು ನಮಗೆ ನೇಮಿಸಿರುವ "ಖಾಲಿಮಾಡುವ ಕಾರ್ಯ"ವನ್ನು ನಾವು ಮಾಡಬೇಕು. ನಮಗೆ ಬೇಕಾದರೆ ಆ ಕಾರ್ಯದಲ್ಲಿ ನಾವು ಭಾಗವಹಿಸಬಹುದು ಅಥವಾ ಇಲ್ಲದಿರಬಹುದು. ಆದರೆ ನಮ್ಮ ಪ್ರಾಣವು ವಿಶ್ರಾಂತಿ ಪಡೆಯುವ ಸಲುವಾಗಿ ನಾವು ಭಾಗವಹಿಸಬೇಕೆಂದು ದೇವರು ಬಯಸುತ್ತಾರೆ. (ಮತ್ತಾ 11:29)

## ಒ) ಪಾಪದ ನೊಗ, ಯೇಸುವಿನ ನೊಗ

ನೀವು ನನ್ನನ್ನು ನಿಮ್ಮ ಗುರುವಾಗಿ ಮಾಡಿಕೊಳ್ಳಲು ಇಚ್ಛಿಸಿದರೆ, ನನ್ನ ನೊಗವನ್ನು ತೆಗೆದುಕೊಳ್ಳಬೇಕು ಎಂದು ಕ್ರಿಸ್ತನು ಹೇಳುತ್ತಾರೆ.

**"ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ." (ಮತ್ತಾ 11:29)**

'ನಾವು ಯೇಸುವಿನ ಬಳಿಗೆ ಹೋದರೆ ಎಲ್ಲಾ ಹೊರೆಗಳು ದೂರ ಹೋಗುತ್ತವೆ' ಎಂದು ಪದೇ ಪದೇ ಜನರು ಹೇಳುವುದನ್ನು ನೀವು ಕೇಳಿರಬಹುದು. ಆದರೆ ಯೇಸು ಹೇಳುವುದು ಇದನ್ನಲ್ಲ (ಮತ್ತಾ 11:29). ನಾವು ಆತನ ಬಳಿಗೆ ಬಂದಾಗ, ಅವನು ಒಂದು ಹೊರೆಯನ್ನು ತೆಗೆದುಹಾಕುತ್ತಾನೆ ಮತ್ತು ನಮಗೆ ಬೇರೊಂದನ್ನು ನೀಡುತ್ತಾನೆ. ಅವನು ನಮ್ಮಿಂದ ಪಾಪದ ಹೊರೆಯನ್ನು ತೆಗೆದುಹಾಕುತ್ತಾನೆ ಮತ್ತು ಆತನ ಹೊರೆಯೊಂದಿಗೆ ಅದನ್ನು ಬದಲಿಸುತ್ತಾನೆ. ನಾವು ದೇವರ ಚಿತ್ತದ ಪ್ರಕಾರ ಬಾಧೆಪಡಲು ಸಿದ್ಧರಾಗಿರಬೇಕು, ಬದಲಿಗೆ ಶರೀರದ ಭಾವಗಳು ತುಂಬಿರುವ ಪ್ರಾಣದಲ್ಲಿ (ಸೂಖ) ವಿಶ್ರಮಿಸುಬಾರದು. ದುರದೃಷ್ಟಕರವಾಗಿ ಇದನ್ನೇ ನಾವು ಸಾಮಾನ್ಯವಾಗಿ ಮಾಡುವುದು.

ಯೇಸು ತನ್ನ ಬಳಿ ಬರುವವರ ಪಾಪದ ಹೊರೆಯನ್ನು ತೆಗೆದುಹಾಕುತ್ತಾನೆ ಮತ್ತು ಅವರಿಗೆ ತನ್ನ ಹೊರೆಯನ್ನು ನೀಡುತ್ತಾನೆ ಹಾಗೂ ಅವರಿಗೆ ಕಲಿಸುತ್ತಾನೆ.

ನನ್ನ ಜೀವನದಲ್ಲಿ, ಯಾರಾದರೂ ನನ್ನನ್ನು ಹೊಡೆದರೆ, ಮೊದಲು ನಾನು ಲೋಕದ ಕಡೆಗೆ ಅಥವಾ ಶರೀರದ ಕಡೆಗೆ ದೃಷ್ಟಿಸಿದರೆ, ನನ್ನ ಅರಿವಿಲ್ಲದೆಯೇ ಹಿಂದಿನಂತೆ ನಾನು ಅವನನ್ನು ಹಿಂತಿರುಗಿ ಹೊಡೆಯುತ್ತೇನೆ (ಹಳೆಯ ಕಾರ್ಯ). ನಂತರದಲ್ಲಿ ನಾನು ಕ್ರಿಸ್ತನ ಕಡೆಗೆ ಅಥವಾ ವಾಕ್ಯದ ಕಡೆಗೆ ನೋಡಿದಾಗ, ನಾನು ಅವನನ್ನು ಹಿಂತಿರುಗಿ ಹೊಡೆಯುವುದಿಲ್ಲ ಬದಲಿಗೆ ಆತ್ಮದ ಭಾವಗಳ ಮೂಲಕ, ಅವನನ್ನು ತಿರುಗಿ ಹೊಡೆಯುವ ಆಲೋಚನೆಗಳನ್ನು (ಶಾರೀರಿಕ ಭಾವಗಳು) ಬಂಧಿಸುತ್ತೇನೆ ಮತ್ತು ಕಟ್ಟುತ್ತೇನೆ.

ನಂತರ ಕ್ರಿಸ್ತನು ನಮ್ಮನ್ನು ಬೆಳೆಸಲು ಪ್ರಾರಂಭಿಸುತ್ತಾನೆ. ಮೊದಲಿಗೆ, ನಾನು ಅವನನ್ನು ತಿರಿಗಿ ಹೊಡೆಯುತ್ತೇನೆ ಆದರೆ ಅವನು ಎರಡನೇ ಸಲ ಹೊಡೆದರೆ, ತುಂಬಾ ಕಷ್ಟದೊಂದಿಗೆ ದೇವರಾತ್ಮನಿಗೆ ವಿಧೇಯನಾಗಿ ಆ ವ್ಯಕ್ತಿಯನ್ನು ಹೊಡೆಯದೆಯೇ ನಾನು ಸುಮ್ಮನೆ ಹೋಗುತ್ತೇನೆ. ಭೌತಿಕ ಪ್ರಪಂಚದಲ್ಲಿ, ದೇವರಾತ್ಮನು ನಮಗೆ ನೀಡುವ ವಾಕ್ಯದ ಭಾವಗಳಿಂದ ನಮ್ಮನ್ನು ನಾವು ಕಟ್ಟಿಹಾಕುತ್ತೇವೆ.

ಲೋಕವು ಹೊಡೆಯಲು ಹೇಳುತ್ತದೆ, ಆದರೆ ವಾಕ್ಯವು ಹೊಡೆಯಬಾರದೆಂದು ಹೇಳುತ್ತದೆ. ನೀನು ಮನುಷ್ಯನಾ ಎಂದು ಸ್ನೇಹಿತರು ಪ್ರಶ್ನೆಮಾಡುತ್ತಾರೆ. ನೀವು ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಎರಡೂ ಭಾವಗಳು ಪ್ರಾಣದಲ್ಲಿ (ಮನಸ್ಸು) ಕಾದಾಡುತ್ತವೆ. ಇದು ನಮ್ಮ ಮನಸ್ಸಿನಲ್ಲಿ ಲೋಕದ ಮತ್ತು ವಾಕ್ಯದ ಭಾವಗಳ ವಿಮರ್ಷಣಾತ್ಮಕ ಅವಧಿಯಾಗಿದೆ.

ಆ ಸಮಯದಲ್ಲಿ, ನಾವು ಅನುಮತಿಸಿದರೆ (ನಮ್ಮನ್ನು ನಾವು ತ್ಯಜಿಸಿದರೆ) ದೇವರ ವಾಕ್ಯದ ಬೇರು ನಮ್ಮ ಪ್ರಾಣದೊಳಕ್ಕೆ ಹೆಚ್ಚು ಇಳಿಯುತ್ತದೆ. ನಮ್ಮ ಪ್ರಾಣವು ಆತ್ಮದ ಆಲೋಚನೆಗಳೊಂದಿಗೆ ತುಂಬಲ್ಪಡುತ್ತದೆ. ಅಂದರೆ ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮ, ಪ್ರಾಣವನ್ನು ಆಕ್ರಮಿಸುತ್ತದೆ. ಯುದ್ಧದಲ್ಲಿ ಒಂದು ಸೇನೆಯು ಇನ್ನೊಂದು ರಾಜ್ಯವನ್ನು ಆಕ್ರಮಿಸುವಂತೆ, ಆತ್ಮವು ಪ್ರಾಣದಲ್ಲಿ ಶರೀರದ ಭಾವಗಳ ವಿರುದ್ಧ ಯುದ್ಧಮಾಡುತ್ತದೆ. ಈ ಹಿಂದಿನ ಚಿತ್ರಗಳಲ್ಲಿ ಯಾವುದೆಲ್ಲಾ ಕಪ್ಪು ಬಣ್ಣದ್ದೋ ಅದು ಶರೀರದ ಭಾವಗಳೊಂದಿಗೆ ತುಂಬಿದೆ. ಆತ್ಮವು ಪ್ರಾಣವನ್ನು ಆಕ್ರಮಿಸುತ್ತದೆ ಮತ್ತು ದೇಹವನ್ನು ಉಪಯೋಗಿಸಲು ಪ್ರಾರಂಭಿಸುತ್ತದೆ. ಯಾವಾಗ ಈ ಎಲ್ಲವೂ ಜರುಗುತ್ತದೋ ಅವಾಗ ನಾವು ದೊಡ್ಡ ಆತ್ಮೀಕ ವ್ಯಕ್ತಿಗಳು ಎಂದು ಯೋಚಿಸತೊಡಗುತ್ತೇವೆ. “ಆ ವ್ಯಕ್ತಿ ನನ್ನನ್ನು ಹೊಡೆದರೂ, ನಾನು ಅವನ ವಿರುದ್ಧ ಏನನ್ನೂ ಮಾಡಿಲ್ಲ” ಎಂದು ನಾವು ಇತರರಿಗೆ ಹೇಳುತ್ತೇವೆ.

ಮೊದಲ ತೊಡಕನ್ನು ಜಯಿಸಿದ ಮಾತ್ರದಿಂದ ಈಗ ನಮ್ಮನ್ನು ನಾವು ಆತ್ಮೀಕ ದೈತ್ಯರು ಎಂದು ಪರಿಗಣಿಸಲು ಪ್ರಾರಂಭಿಸುತ್ತೇವೆ. ಆತ್ಮೀಕ ಹೋರಾಟಕ್ಕೆ ಈ ಸಣ್ಣ ಪ್ರಗತಿ ಸಾಕು ಎಂದು ನಾವು ಯೋಚಿಸುತ್ತೇವೆ. ಆದರೆ ಪ್ರತೀ ಕ್ರೈಸ್ತನೂ ಕ್ರಿಸ್ತನ ತಲೆಯವರೆಗೂ ತಲುಪುವುದಕ್ಕೆ ಗುರಿಯಿಡಬೇಕು ಎಂದು ನಾವು ಕಲಿತೆವು. ಮತ್ತು ಅದಕ್ಕಾಗಿ ಇನ್ನೂ ಹೆಚ್ಚು ಬಾಧೆಗಳು (ನೊಗ) ನಮಗಾಗಿ ಕಾಯುತ್ತಿವೆ. ನಾವು ಕಲಿಯಲಿರುವ ಮುಂದಿನ ಸಂಗತಿ, “ಇನ್ನೊಂದು ಕೆನ್ನೆಯನ್ನೂ ಸಹ ತೋರಿಸುವುದು.”

“ಸರಿ, ಈಗ ಇದು ತುಂಬಾ ದೂರ ಹೋಗುತ್ತಿದೆ!” ಎಂದು ಕೆಲವು ಓದುಗರು ಈಗ ಯೋಚಿಸಬಹುದು. ಕೆಲವರು ಹತಾಶೆಗೊಳಗಾಗಿರಬಹುದು. ಕಾರಣವೇನೆಂದರೆ ಈ ಹತಾಶೆಯು ಸೂಖಿಯ (ಶರೀರದ ಸ್ವಭಾವದಿಂದ ತುಂಬಿರುವ ಪ್ರಾಣ) ಚಿಂತನೆ. “ಯಾರು ಇದನ್ನೆಲ್ಲಾ ಮಾಡುತ್ತಾರೆ?” ಎಂದು ಅನೇಕರು ಪ್ರಶ್ನಿಸಬಹುದು!

ಇದನ್ನು ಮಾಡುವವರು ದೇವರ ರಾಜ್ಯಕ್ಕೆ ಉಪಯೋಗವಾಗುತ್ತಾರೆ. ದೇವರ ರಾಜ್ಯವು ಆ ವ್ಯಕ್ತಿಯ ಮೂಲಕ ಹರಡುತ್ತದೆ.

ಪರಿಶುದ್ಧಾತ್ಮನ ಕಾರ್ಯದಲ್ಲಿ, ಆ ವ್ಯಕ್ತಿ ಮುಂದಿನಬಾರಿ ಹೊಡೆಯಲು ಬಂದಾಗ, ಅವನು ಮೌನವಾಗಿರುವುದು ಮತ್ತು ತಿರುಗಿ ಹಿಂದಕ್ಕೆ ಹೊಡೆಯಬೇಕೆಂಬ ಪ್ರಚೋದನೆಯನ್ನು ತಡೆಯುವುದು ಮಾತ್ರವಲ್ಲ, ಒಂದು ಕೆನ್ನೆಗೆ ಹೊಡೆಸಿಕೊಂಡಾಗ ಇನ್ನೊಂದು ಕೆನ್ನೆಯನ್ನೂ ಸಹ ತೋರಿಸುತ್ತಾನೆ. ಇದನ್ನು ಮಾಡಲು, ಪ್ರಾಣವು ಎಷ್ಟು ಶಕ್ತಿಯನ್ನು ಹೊಂದಿರಬೇಕೆಂದು ನಿಮಗೆ ಗೊತ್ತೇ? ಸಾಮಾನ್ಯ ಶಕ್ತಿಯಲ್ಲ ಬದಲಿಗೆ ಅಸಾಮಾನ್ಯ ಶಕ್ತಿ. ಆತ್ಮದಿಂದ ಆಂತರಿಕ ಮನುಷ್ಯನು ಬಲಹೊಂದಲ್ಪಡದಿದ್ದರೆ ಮತ್ತು ಆತ್ಮದಿಂದ ಪ್ರಾಣವು ಆಕ್ರಮಿಸಲ್ಪಡದಿದ್ದರೆ ನಾವು ತಿರುಗಲು ಮತ್ತು ಇನ್ನೊಂದು ಕೆನ್ನೆಯನ್ನು ತೋರಿಸಲು ಆಗುವುದಿಲ್ಲ. ಹಾಗಾದರೆ ಏನಾಗುತ್ತದೆ? ದೇವರು ನಮ್ಮ ಆತ್ಮೀಕ ಸ್ಥಿತಿಯನ್ನು ಪದೇ ಪದೇ ಬದಲಾಯಿಸುತ್ತಿರಬೇಕಾಗುತ್ತದೆ. ಯಾರು ಈ ಪರಿಶುದ್ಧಾತ್ಮನ ತರಬೇತಿಯಲ್ಲಿ ನಿಜವಾಗಿ ಭಾಗವಹಿಸುತ್ತಾರೋ ಅವರು ತಮ್ಮೊಳಗೆ ಆತ್ಮದ ಮಹಿಮೆಯು ಬೆಳೆಯುತ್ತಿದೆ ಎಂಬ

ಸಂಗತಿಯನ್ನು ತಮ್ಮ ಅರಿವಿಲ್ಲದೆಯೇ ತಿಳಿದಿರುತ್ತಾರೆ. ಅಪೋಸ್ತಲನಾದ ಪೌಲನು ಇದನ್ನು ಹೇಳುತ್ತಾನೆ,

**"ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವೂ ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ." (2 ಕೊರಿ 4:17)**

**"ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ." (1 ಪೇತ್ರ 4:14)**

ಹಾಗಾದರೆ ಕ್ರಿಸ್ತನ ಮಹಿಮೆ ನಮ್ಮ ಮೂಲಕ ಹರಡುತ್ತದೆ.

**"ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ." (2 ಕೊರಿ 3:18)**

ಪರಿಶುದ್ಧಾತ್ಮನ ತರಬೇತಿಯ ಮೂಲಕ ನಮ್ಮ ಪ್ರಾಣವು ನಾಶವಾದಾಗ ಮತ್ತು ದೇವರ ಕಾರ್ಯದಲ್ಲಿ ನಾವು ಬಾಧೆಯನ್ನು ಅನುಭವಿಸಿದಾಗ, ನಮ್ಮ ಆತ್ಮೀಕ ಮಹಿಮೆ (ದೇವರ ಪ್ರಸನ್ನತೆ) ನಮ್ಮ ಆತ್ಮದಿಂದ ಬೆಳೆಯುತ್ತದೆ. ಈ ದೇವರ ಪ್ರಸನ್ನತೆ ಎಂದೆಂದೂ ಇರುವ ಮಹಾ ನಿಧಿಯಾಗಿದೆ.

**ನಮ್ಮ ದೇವರು ಎಷ್ಟು ಒಳ್ಳೆಯವನು! ಈ ಪ್ರೀತಿಯ ನಿಧಿಯ ಮುಂದೆ ಬರೋಣ ಮತ್ತು ಆತನು ನಮಗೆ ನೀಡಿರುವ ವಾಕ್ಯಕ್ಕಾಗಿ ಮತ್ತು ನಾವು ಆತ್ಮೀಕವಾಗಿ ಬೆಳೆಯುವದಕ್ಕೆ ಸಹಾಯಮಾಡಿದ್ದಕ್ಕಾಗಿ ಆತನನ್ನು ವಂದಿಸೋಣ.**

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನಾನು ಪರಿವರ್ತನಾ ಪ್ರಕ್ರಿಯೆಯಲ್ಲಿದ್ದೇನೆ ಮತ್ತು ನನ್ನೊಳಗಿರುವ ಶರೀರಭಾವಗಳು ಆತ್ಮದ ಭಾವಗಳಿಂದ ಬದಲಿಸಲ್ಪಡುತ್ತಿವೆ ಎಂದು ನಾನು ಕಲಿತುಕೊಂಡೆ. ಕರ್ತನೇ, ನಾನು ಎದುರಿಸುವ ಪ್ರತೀ ಸಮಸ್ಯೆಯಲ್ಲಿಯೂ ಒಂದು ಸಂದೇಶವಿದೆ ಮತ್ತು ಒಬ್ಬ ಸಂದೇಶಕನಿದ್ದಾನೆ ಎಂದು ಅರಿತುಕೊಳ್ಳಲು ನನಗೆ ಸಹಾಯಮಾಡು. ಮತ್ತು ಯೇಸು ಕ್ರಿಸ್ತನ ರಕ್ತವು ನನ್ನ ಪಾಪಗಳನ್ನು ತೊಳೆದರೆ ಮತ್ತು ಶುದ್ಧೀಕರಿಸಿದರೆ, ಯೇಸುವಿನ ಶಿಲುಬೆಯು ನನ್ನ ಪಾಪದ ಸ್ವಭಾವವನ್ನು ತೆಗೆದುಹಾಕುತ್ತದೆ ಎಂದೂ ಅರಿತುಕೊಳ್ಳಲು ನನಗೆ ಸಹಾಯಮಾಡು. ಆಂತರಿಕ ಮನುಷ್ಯನು ಬಲಗೊಳ್ಳುವಂತಹ ಆತ್ಮದ ಆಲೋಚನೆಗಳು ಬೆಳೆಯಲು ಅನುವುಮಾಡಿಕೊಡುವ ಮೂಲಕ ನನ್ನ ಶರೀರವನ್ನು ಸಾಯಿಸಲು ನನಗೆ ಸಹಾಯಮಾಡು ಕರ್ತನೆ. ನನ್ನೊಳಗಿನ ಹೊಸದಾಗಿ ಸೃಷ್ಟಿಯಾದ*

*ಮನುಷ್ಯನು ಸಂಪೂರ್ಣವಾಗಿ ಪ್ರಕಟಗೊಳ್ಳುವುದಕ್ಕಾಗಿ ನನ್ನನ್ನು ನಾನು ನಿರಾಕರಿಸಲು ನನಗೆ ಕೃಪೆಮಾಡು. ಹೆಚ್ಚು ಹೆಚ್ಚಾಗಿ ಬೆಳೆಯುವುದಕ್ಕೆ ನನಗೆ ಸಹಾಯಮಾಡಿದ್ದಕ್ಕಾಗಿ ವಂದನೆಗಳು... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಶರೀರದ ಭಾವಗಳಿಂದ ಆತ್ಮದ ಭಾವಕ್ಕೆ ಬದಲಾಗುವ, ಪರಿವರ್ತನಾ ಪ್ರಕ್ರಿಯೆಯಲ್ಲಿ ನಾವಿದ್ದೇವೆ. ನಮ್ಮೊಳಗಿರುವ ಶರೀರ ಭಾವಗಳಿಗೆ ಸಂಭಂದಿಸಿದ ಎಲ್ಲಾ ಕಡತಗಳು ತೆಗೆದುಹಾಕಲ್ಪಡುತ್ತಿರುವ ಮತ್ತು ಅದಕ್ಕೆ ಪ್ರತಿಯಾಗಿ ಆತ್ಮದ ಕಡತಗಳು (ವಾಕ್ಯ) ತುಂಬಲ್ಪಡುತ್ತಿರುವ ಪ್ರಕ್ರಿಯೆಯಲ್ಲಿ ನಾವಿದ್ದೇವೆ. ಪರಿಶುದ್ಧಾತ್ಮನು ನಮ್ಮ ಸಹಕಾರದೊಂದಿಗೆ ಈ ಕಾರ್ಯವನ್ನು ಮಾಡುತ್ತಿದ್ದಾನೆ.
2. ನಮಗೆ ಹೊಡೆದಿರುವ ವ್ಯಕ್ತಿಯನ್ನು ಹೊಡೆಯಲು ನಮಗೆ ಹೆಚ್ಚು ಶಕ್ತಿ ಬೇಡ. ನಮ್ಮ ಅರಿವಿಲ್ಲದೆಯೂ ನಮ್ಮ ಕೈಗಳು ಮೇಲೆ ಹೋಗುತ್ತವೆ. ನಮಗೆ ಹೊಡೆದಿರುವ ವ್ಯಕ್ತಿಯನ್ನು ಹೊಡೆಯದಿರಲು ನಾವು ಹೆಚ್ಚು ಶಕ್ತಿಯನ್ನು ಹೊಂದಿರಬೇಕು.
3. ಸಮಸ್ಯೆಯ ಮಧ್ಯದಲ್ಲಿ ಒಂದು ಸಂದೇಶವಿದೆ ಹಾಗೂ ಒಬ್ಬ ಸಂದೇಶಕನಿದ್ದಾನೆ ಎಂದು ನಾವು ಎಂದಿಗೂ ಯೋಚಿಸುವುದಿಲ್ಲ. ನಾವು ಯಾವಾಗಲೂ ಸಮಸ್ಯೆಯನ್ನು ಮಾತ್ರ ನೋಡುತ್ತೇವೆ. ಆದರೆ ಈಗಿನಿಂದ ಸಂದೇಶಕ ಮತ್ತು ಸಂದೇಶವನ್ನು ನಾವು ನೋಡೋಣ.
4. ನಾವು ಹಿಂದೆ ಮಾಡಿದ ಪಾಪದ ದಂಡನೆಯಿಂದ ನಾವು ವಿಮೋಚನೆಯನ್ನು ಪಡೆದರೂ, ನಮ್ಮ ಪ್ರಾಣದಲ್ಲಿ ಪಾಪದ ಸ್ವಭಾವದಿಂದ ವಿಮೋಚನೆಯನ್ನು ಪಡೆದಿಲ್ಲ.
5. ಪಾಪದ ಸ್ವಭಾವವು ಇನ್ನೂ ನಮ್ಮೊಳಗಡೆ ಇದೆ (ವಿಮೋಚಿಸಲ್ಪಟ್ಟವರೊಳಗೆ), ಹಾಗಾಗಿಯೇ ನಾವು ಈಗಲೂ ಸುಳ್ಳನ್ನು ಹೇಳುತ್ತೇವೆ ಮತ್ತು ಹಾಗಾಗಿಯೇ ನಾವು ಈಗಲೂ ಇತರರನ್ನು ತಪ್ಪಾಗಿ ಟೀಕಿಸುತ್ತೇವೆ.
6. ಯೇಸು ಕ್ರಿಸ್ತನ ರಕ್ತವು ನಮ್ಮ ಪಾಪಗಳಿಂದ ನಮ್ಮನ್ನು ತೊಳೆದರೆ ಮತ್ತು ಶುದ್ಧೀಕರಿಸಿದರೆ, ಯೇಸುವಿನ ಶಿಲುಬೆಯು ನಮ್ಮ ಪಾಪದ ಸ್ವಭಾವನ್ನು ತೆಗೆದುಹಾಕುತ್ತದೆ.
7. ಯೇಸು ಕ್ರಿಸ್ತನಲ್ಲಿ ನಾವು ನಂಬಿಕೆಯಿಟ್ಟಾಗ, ನಮ್ಮ ಎಲ್ಲಾ ಪಾಪವೂ ಹೋಯಿತು (ಕ್ಷಮಿಸಲ್ಪಟ್ಟಿತು) ಆದರೆ ನಾವು ಯೇಸುವಿನ ಶಿಲುಬೆಗೆ ಶರಣಾದಾಗ, ನಮ್ಮ ಪಾಪದ ಸ್ವಭಾವವೂ ಸಹ ಹೋಗುತ್ತದೆ.
8. ನಮ್ಮ ಚಿತ್ತದ ಪ್ರಕಾರ ನೂರಕ್ಕಿಂತ ಹೆಚ್ಚು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಿಂತ, ದೇವರು ನಮ್ಮಿಂದ ಬಯಸುವಂತದ್ದರ ಪ್ರಕಾರ ಒಂದು ಕೆಲಸವನ್ನು ನಾವು ಮಾಡುವುದು ದೇವರ ಬಯಕೆಯಾಗಿದೆ.
9. ಕ್ರಿಸ್ತನು ನಮ್ಮ ಜೊತೆ–ಕೆಲಸದವನಲ್ಲ ಬದಲಿಗೆ ನಾವು ಆತನ ಜೊತೆ–ಕೆಲಸದವರು.

10. ಒಬ್ಬ ವ್ಯಕ್ತಿ ಹೊಸದಾಗಿ ಹುಟ್ಟಿದ ಸಮಯದಿಂದ ಈ ಭೌತಿಕ ಪ್ರಪಂಚದಿಂದ ತೆಗೆಯಲ್ಪಡುವವರೆಗೂ, ಪ್ರತೀ ವಿಶ್ವಾಸಿಯೂ "ಪರಿವರ್ತನಾ ಕಾರ್ಯದಲ್ಲಿದ್ದಾನೆ."
11. ಆತ್ಮೀಕ ಬೆಳವಣಿಗೆಯಲ್ಲಿ, ನಮ್ಮ ಪ್ರಾಣದ ಮನಸ್ಸಿನಲ್ಲಿ ಎರಡು ಭಾವಗಳ ಮಧ್ಯೆ ಯುದ್ಧ ಸಂಭವಿಸುತ್ತದೆ. ಈ ಮನಸ್ಸಿನಲ್ಲಿ, ಆಂತರಿಕ ಮನುಷ್ಯನಲ್ಲಿರುವ ದೇವರ ಆತ್ಮನು ದೇವರ ವಾಕ್ಯಕ್ಕೆ ವಿಧೇಯರಾಗಲು ಹೇಳುತ್ತಾನೆ. (ನೀನು ಹೊಡೆಯಬಾರದು ಮತ್ತು ನೀನು ನಿನ್ನ ವೈರಿಯನ್ನು ಪ್ರೀತಿಸಬೇಕು) ಆದರೆ ಶರೀರವು ಲೋಕದ ಪ್ರಕಾರ ಕಾರ್ಯಮಾಡಲು ಹೇಳುತ್ತದೆ (ಯಾರಾದರೂ ನಿನ್ನನ್ನು ಹೊಡೆದರೆ, ಅವನನ್ನು ನೀನು ತಿರಿಗಿ ಹೊಡೆ) . ಈ ಎರಡು ಭಾವಗಳು ಮನಸ್ಸಿನಲ್ಲಿ ಪರಸ್ಪರ ಕಾದಾಡುತ್ತವೆ.
12. ನಮ್ಮ ಮನಸ್ಸಿನಲ್ಲಿ ಆತ್ಮದ ಭಾವಗಳನ್ನು ಬೆಳೆಯಲು ನಾವು ಅನುಮತಿಸುವಾಗ ಆಂತರಿಕ ಮನುಷ್ಯನು ಬಲಗೊಳ್ಳುವುದಕ್ಕನುಸಾರವಾಗಿ ಆ ವ್ಯಕ್ತಿ ಶರೀರವನ್ನು ಜಯಿಸಲು ಸಾಧ್ಯವಾಗುತ್ತದೆ.
13. ಒಬ್ಬ ಕ್ರೈಸ್ತನ ಜೀವಿತದಲ್ಲಿನ ಅತ್ಯುನ್ನತ ಮಟ್ಟವು ವ್ಯಕ್ತಿಯ 'ಸ್ವಾರ್ಥ'ವನ್ನು ಶೂನ್ಯ ಮಾಡುವುದಾಗಿದೆ. ಆ ಸಮಯದಲ್ಲಿ, ಅವನೊಳಗಿರುವ ನೂತನವಾಗಿ ಸೃಷ್ಟಿಸಲ್ಪಟ್ಟ ದೇವರ ಸ್ವಾರೂಪ್ಯದಲ್ಲಿರುವ ಮನುಷ್ಯನು ಪೂರ್ಣವಾಗಿ ಪ್ರಕಟವಾಗುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಮ್ಮನ್ನು ನಾವು ಶೂನ್ಯ ಮಾಡಿಕೊಳ್ಳುವುದರಿಂದ, ತಲೆಯಾಗಿರುವ ಕ್ರಿಸ್ತನವರೆಗೆ ಬೆಳೆಯಲು ನಮಗೆ ಸಾಧ್ಯವಾಗುತ್ತದೆ.
14. ಈ ಲೋಕದಲ್ಲಿ, ದೇವರ ಆತ್ಮನು ನಮಗೆ ನೀಡುವ ವಾಕ್ಯದ ಆಲೋಚನೆಗಳಿಂದ ನಮ್ಮ "ಸ್ವಯಂ" ಅನ್ನು ನಾವು ಬಂಧಿಸಬೇಕು.



*ಅಧ್ಯಾಯ 13*

# ನೀವು ಲೋಕಕ್ಕೆ ಬೆಳಕಾಗಿದ್ದೀರಿ

*"ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು." (ಮತ್ತಾ 5:14)*


ಯೇಸು "ನೀವು ಲೋಕಕ್ಕೆ ಬೆಳಕಾಗಿದ್ದೀರಿ" ಎಂದು ಹೇಳುವ ಮೂಲಕ, ಅವರ ಮುಂದೆ ಸೇರಿದ್ದ ಜನರಿಗೆ ಹೇಳಿದ ಮಾತುಗಳನ್ನು ಮುಕ್ತಾಯಗೊಳಿಸುತ್ತಾರೆ. ನಾವು ಲೋಕಕ್ಕೆ ಬೆಳಕು ಎಂದು ನಮಗೆ (ಮತ್ತೊಮ್ಮೆ ಹುಟ್ಟಿದ ವಿಶ್ವಾಸಿಗಳು) ಹೇಳಲಾಗಿದೆ. ಹಾಗಾದರೆ ನಮ್ಮನ್ನು ನಾವು ಕೇಳಿಕೊಳ್ಳಬಹುದು, "ಯಾಕೆ ಇದು ನಮ್ಮಲ್ಲಿ ಮತ್ತು ನಮ್ಮ ಮೂಲಕ ಪ್ರಕಟವಾಗಿಲ್ಲ?."

## ಅ) ಬೆಳಕು ನಮ್ಮಿಂದ ಅಡಗಿಸಲ್ಪಟ್ಟಿದೆ

ನಮ್ಮೊಳಗೆ ಶರೀರದ ಭಾವಗಳನ್ನು ನಾವು ನಾಶಮಾಡಿದರೆ ಮಾತ್ರ, ನಮ್ಮೊಳಗಿರುವ ಕ್ರಿಸ್ತನ ಮಹಿಮೆಯನ್ನು ನಾವು ಬೆಳಗಿಸಬಹುದು. ಇದನ್ನು ನೀವು ಬೇಗ ಅರ್ಥಮಾಡಿಕೊಳ್ಳುವ ಸಲುವಾಗಿ ನಾನು ನಿಮಗೊಂದು ಉದಾಹರಣೆಯನ್ನು ಬರೆಯುತ್ತೇನೆ. ಸಾಮಾನ್ಯವಾಗಿ ಪೇಪರ್ ನಕ್ಷತ್ರಗಳನ್ನು ಮಾಡಲು ಉಪಯೋಗಿಸಲಾಗುವ ಅರೆಪಾರದರ್ಶಕ ಪೇಪರ್ ಅನ್ನು ತೆಗೆದುಕೊಳ್ಳೋಣ, ಅದರ ಮೇಲೆ "ಕೋಪ" ಎಂದು ಬರೆಯೋಣ ಮತ್ತು ಒಂದು ವಿದ್ಯುತ್ ಬಲ್ಬ್ ಸುತ್ತಲೂ ಸುತ್ತೋಣ. ಏನಾಗುತ್ತದೆ ಎಂದು ನೀವು ಯೋಚಿಸುತ್ತೀರಾ? ಬಲ್ಬ್ ನ ಪ್ರಕಾಶತೆ ಹೆಚ್ಚಾಗುತ್ತದೋ ಅಥವಾ ಕಡಿಮೆಯಾಗುತ್ತದೋ? ಸರಿ, ಇದು ಯಾವ ರಾಕೆಟ್ ವಿಜ್ಞಾನವೂ ಅಲ್ಲ – ಯಾಕಂದರೆ ಅದು ಕಡಿಮೆಯಾಗುತ್ತದೆ.

ಈಗ ಇನ್ನೊಂದು ಪೇಪರ್ ತೆಗೆದುಕೊಳ್ಳಿರಿ ಮತ್ತು ಅದರ ಮೇಲೆ "ಹೊಟ್ಟೆಕಿಚ್ಚು" ಎಂದು ಬರೆಯಿರಿ. ಈ ಪೇಪರ್ ಅನ್ನು ಮೊದಲ ಪೇಪರ್ ನ ಮೇಲೆ ಸುತ್ತಿದಾಗ ಬಲ್ಬ್ ನ ಪ್ರಕಾಶವು ಮತ್ತಷ್ಟು ಕಡಿಮೆಯಾಗಿರುವುದನ್ನು ನೀವು ನೋಡುತ್ತೀರಿ. ಅದರಂತೆಯೇ ಅದೇ ರೀತಿಯ ಪೇಪರ್ ಗಳ ಮೇಲೆ ಶರೀರದ ಎಲ್ಲಾ ಸ್ವಭಾವಗಳನ್ನು ಬರೆಯಿರಿ ಮತ್ತು ಹಿಂದಿನ ಪೇಪರ್ ಗಳ ಮೇಲೆ ಸುತ್ತಿರಿ. ಈ ಎಲ್ಲಾ ಪೇಪರ್ ಗಳು ಬಲ್ಬ್ ನ ಮೇಲೆ ಸುತ್ತಿರುವುದರಿಂದ ಸ್ವಲ್ಪ ಅಥವಾ ಬೆಳಕಿನ ಯಾವುದೇ ಪ್ರಸರಣವಿಲ್ಲ ಹಾಗೂ ಸ್ಥಳವು ಕತ್ತಲೆಯಿಂದ ತುಂಬಿದೆ ಎಂದು ನೀವು ಗಮನಿಸುತ್ತೀರಿ. ಅದಕ್ಕೆ ಕಾರಣ ಬೆಳಕು ಬೆಳಗದೇ ಇರುವುದರಿಂದಲ್ಲ, ಅದು ಬೆಳಗಿದೆ ಆದರೆ ಆ ಸುತ್ತಲ್ಪಟ್ಟಿರುವ ಪೇಪರ್ ಗಳು ಬೆಳಕನ್ನು ಮುಚ್ಚಿರುವುದರಿಂದ ಅವುಗಳು ಪ್ರಕಾಶವನ್ನು ಹೊರಕ್ಕೆ ಹೋಗಲು ಅನುವುಮಾಡುತ್ತಿಲ್ಲ. ಅದರಂತೆಯೇ ನಮ್ಮೊಳಗೆ ಕ್ರಿಸ್ತನ ಬೆಳಕು ನಮ್ಮ ಶರೀರದ ಭಾವಗಳಿಂದ ಮುಚ್ಚಲ್ಪಟ್ಟಿದೆ. ಇದರ ಕುರಿತು ನಾವು ಅರಿತಿಲ್ಲ ಹಾಗಾಗಿ ಇದನ್ನು ಸರಿಪಡಿಸುವ ಪರಿಹಾರವನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಆದುದರಿಂದಲೇ ದೇವರ ವಾಕ್ಯವು ಹೇಳುತ್ತದೆ, ನಮ್ಮಲ್ಲಿ ಮತ್ತು ನಮ್ಮ ಮೂಲಕ ಲೋಕದಲ್ಲಿ ಕ್ರಿಸ್ತನ ಮಹಿಮೆಯನ್ನು ಬೆಳಗಿಸುವ ಸಲುವಾಗಿ ಶಾರೀರಿಕ ಭಾವಗಳಿಂದ ಬೆಂಬಲಿಸಲ್ಪಟ್ಟಿರುವ, ಈ ಸ್ವಾರ್ಥವನ್ನು ಅನಾವರಣಗೊಳಿಸಬೇಕಿದೆ.

**"ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ." (2 ಕೊರಿ 3:18)**




*ಹೊಸದಾಗಿ ಹುಟ್ಟಿದ ವ್ಯಕ್ತಿಯ ಶಾರೀರಿಕ ಭಾವಗಳು, ಲೋಕಕ್ಕೆ ಪ್ರಕಾಶಿಸಲು ಪ್ರಯತ್ನಿಸುತ್ತಿರುವ ಆವನಲ್ಲಿನ ಕ್ರಿಸ್ತನ ಬೆಳಕನ್ನು ನಿರ್ಬಂಧಿಸುತ್ತಿವೆ*

**ಚಿತ್ರ–27**

ಅದನ್ನು ತಡೆಯುವಂತಹ ಎಲ್ಲವನ್ನೂ ನಾಶಮಾಡಿ ಈ ಪ್ರಕಾಶವನ್ನು ಹೊರತರುವುದು ದೇವರ ಯೋಜನೆಯ ಒಂದು ಭಾಗವಾಗಿದೆ. ದೇವರ ಪ್ರಕಾಶವು ಸೈತಾನನು ನೆಟ್ಟಿರುವ ಗಿಡಗಳಿಂದ (ಶರೀರದ/ಲೌಕಿಕ ಭಾವಗಳು) ತಡೆಯಲ್ಪಟ್ಟಿದೆ. ಈ ಗಿಡಗಳು ತಂದೆಯಿಂದ ನೆಡಲ್ಪಟ್ಟಿಲ್ಲ, ಆದರೆ ನಮ್ಮ ಸಹಕಾರದಿಂದ ತಂದೆ ಆತನ ಪರಿಶುದ್ಧಾತ್ಮನ ಕಾರ್ಯದ ಮೂಲಕ ನಮ್ಮಿಂದ ಅದನ್ನು ಒಂದೊಂದಾಗಿ ತೆಗೆದುಹಾಕುತ್ತಾನೆ. ನಾವು ಸಹಕರಿಸಿದರೆ ಮಾತ್ರ ಈ ಕಾರ್ಯವನ್ನು ಕೈಗೊಳ್ಳಬಹುದು, ಇಲ್ಲವಾದರೆ ಇದು ಆಗುವದಿಲ್ಲ. ಆದ್ದರಿಂದ ಒಬ್ಬ ವಿಶ್ವಾಸಿ, ಅವನು ಹೊಸದಾಗಿ ಹುಟ್ಟಿದ ಸಮಯದಿಂದ ತನ್ನ ಭೌತಿಕ ದೇಹದಿಂದ (ಮಣ್ಣಿನ ಉಡುಪು) ಬೇರ್ಪಡಿಸಲ್ಪಡುವ ಸಮಯದವರೆಗೂ, ಅವನು ದೇವರಿಂದ ಪರಿವರ್ತಿಸಲ್ಪಡುತ್ತಿದ್ದಾನೆ ಅಥವಾ ಸಿದ್ಧವಾಗುತ್ತಿದ್ದಾನೆ. ಆದ್ದರಿಂದ ಪ್ರಿಯ ದೇವರ ಮಗುವೇ, ನೀನು ಹೇಳಬೇಕು "ನಾನು ಪೂರ್ಣವಾದ ಉತ್ಪನ್ನವಲ್ಲ ಬದಲಿಗೆ ಅದರ ಪ್ರಕ್ರಿಯೆಯಲ್ಲಿದ್ದೇನೆ." ಇಂದು ನಾವು ರೂಪಾಂತರ ವಾಗುತ್ತಿದ್ದೇವೆ. ಸ್ವತಃ ನಾನು, ಪರಿಪೂರ್ಣನಲ್ಲ ಮತ್ತು ಇಂದಿಗೂ ದೇವರ ಕಾರ್ಯವು ನನ್ನೊಳಗೆ ನಡೆಯುತ್ತಿದೆ.

## ಆ) ಸಮಸ್ಯೆಯ ನಡುವೆ ದೇವರ ಮನುಷ್ಯನ ನೋಟ

ಜೀವನದಲ್ಲಿ ಏನಾದರೂ ತೊಂದರೆ ಅಥವಾ ಇತರೆ ಸಮಸ್ಯೆಗಳು ಬಂದಾಗ, ತಕ್ಷಣವೇ ಲೋಕದ ಮಕ್ಕಳಂತೆ ಅದನ್ನು ಬದಲಾಯಿಸಲು ದಾರಿಯನ್ನು ಹುಡುಕಲು ಪ್ರಯತ್ನಿಸಬೇಡಿ, ಬದಲಿಗೆ ದೇವರಿಗೆ ತಿಳಿಯದೇ ಈ ಸಮಸ್ಯೆ ನಿಮ್ಮ ಜೀವನದಲ್ಲಿ ಬಂದಿಲ್ಲ ಎಂದು ಅರ್ಥಮಾಡಿಕೊಳ್ಳಿ. "ನಿಮ್ಮ ತಲೇಕೂದಲುಗಳೂ ಸಹ ಎಲ್ಲವೂ ಎಣಿಕೆಯಾಗಿವೆ" (ಮತ್ತಾ 10:30) ಮತ್ತು ಆತನ ಅನುಮತಿಯಿಲ್ಲದೇ ಅವುಗಳಲ್ಲೊಂದೂ ಬೀಳುವದಿಲ್ಲ ಎಂದು ಸತ್ಯವೇದದಿಂದ ನಾವು ಕಲಿಯುತ್ತೇವೆ. ಆದ್ದರಿಂದ ನಾವು ಎದುರಿಸುತ್ತಿರುವ ಸಮಸ್ಯೆಯ ಮಧ್ಯದಲ್ಲಿ ಆತನ ಸಲಹೆಯನ್ನು ನಾವು ಹುಡುಕಬೇಕು. ನಾವು ಆತನನ್ನು ಕೇಳಬೇಕು, "ಕರ್ತನೇ, ನೀನು ನನ್ನೊಂದಿಗೆ ಮಾತನಾಡಲು ಬಯಸುತ್ತಿರುವುದೇನು? ನಾನು ಮಾಡಬೇಕಾಗಿರುವುದೇನು?" ಇದನ್ನು ನಾವು ಕ್ರಿಸ್ತನಿಗೆ ಕೇಳಿದಾಗ, ತಕ್ಷಣವೇ ಆತನು ನಮಗೆ ಉತ್ತರವನ್ನು ನೀಡುತ್ತಾನೆ. "ಅದು ನಮ್ಮನ್ನು ಮುಂಬಡ್ತಿಸಲು ಪರೀಕ್ಷೆಯಾಗಿರಬಹುದು (ಯಾಕೋಬ 1:12) ಅಥವಾ ನಮ್ಮ ತಪ್ಪುಗಳಿಂದ ನಮ್ಮನ್ನು ಸರಿಪಡಿಸಲು ತಂದೆಯ ಶಿಕ್ಷೆಯಿರಬಹುದು (ಇಬ್ರಿಯ 12:9-11) ಅಥವಾ "ರಾಜನ ಸೇವೆಗೆ" ಅನ್ಯಾಯದ ಬಾಧೆಯಾಗಿರಬಹುದು." (1 ಪೇತ್ರ 2:19-21) ದೇವರು ನೀಡುವ ಉತ್ತರದ ಪ್ರಕಾರ ನಾವು ನಮ್ಮ ಮನಸ್ಸನ್ನು ಬದಲಾಯಿಸಿದರೆ ನಮ್ಮ ತೊಂದರೆ ದೂರವಾಗುತ್ತದೆ. ನಾವು ಪರೀಕ್ಷೆ ಅಥವಾ ಶೋಧನೆಯನ್ನೂ ಸಹ ಜಯಿಸಲು ಸಾಧ್ಯವಾಗುತ್ತದೆ. ವಾಸ್ತವವಾಗಿ ನಾವು ಗೆಲ್ಲುವ ಸಲುವಾಗಿ ಪರೀಕ್ಷೆಯನ್ನು ಇಡಲಾಗಿತ್ತು. ಅದು ಕಷ್ಟ ಎಂದು ನಾವು ಯೋಚಿಸಿದರೆ ಮತ್ತು ಪರೀಕ್ಷೆಯಿಂದ ನಾವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಅದೇ ತರಗತಿಯಲ್ಲಿ ನಾವು ಕೂರಲು ಮತ್ತು ಬರೆಯಲು ಮುಂದುವರೆಸುತ್ತೇವೆ. ಇದು ನಾವು ಕರ್ತನನ್ನು ಅಂಗೀಕರಿಸಿದಾಗ ಮತ್ತು ದೀಕ್ಷಾಸ್ನಾನ ತೆಗೆದುಕೊಂಡಾಗ ಇದ್ದಂತಹ ಸ್ಥಿತಿಯಾಗಿದೆ. ನಮ್ಮಲ್ಲಿ ಬಹುತೇಕರು ಮುಂದಿನ ಆತ್ಮೀಕ ಮಟ್ಟಕ್ಕೆ ಹೋಗಲು ಸಾಧ್ಯವಾಗಿಲ್ಲ ಕಾರಣ ನಾವು ಪ್ರಯತ್ನಿಸಿರುವ ಪರಲೋಕೀಯ ಪರೀಕ್ಷೆಗಳನ್ನು ಜಯಿಸಲು ಅಥವಾ ಉತ್ತೀರ್ಣರಾಗಲು ನಮಗೆ ಸಾಧ್ಯವಾಗಿಲ್ಲ.

ನಾವು ಗೆಲ್ಲುವ ಸಲುವಾಗಿ ಪರೀಕ್ಷೆಯನ್ನು ಇಡಲಾಗಿತ್ತು. ಅದು ಕಷ್ಟ ಎಂದು ನಾವು ಯೋಚಿಸಿದರೆ ಮತ್ತು ಪರೀಕ್ಷೆ ಅಥವಾ ಶೋಧನೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಅದೇ ತರಗತಿಯಲ್ಲಿ ನಾವು ಕೂರಲು ಮತ್ತು ಬರೆಯಲು ಮುಂದುವರೆಸುತ್ತೇವೆ.

ಸಮಸ್ಯೆಗಳನ್ನು ತೆಗೆದುಹಾಕುವಂತೆ ಅದಕ್ಕಾಗಿ ಪ್ರಾರ್ಥಿಸಿದ ನಂತರವೂ ನಮ್ಮ ಜೀವನದಲ್ಲಿ ತೊಂದರೆಗಳು ಮುಂದುವರೆಯುವುದಕ್ಕೆ ಕಾರಣವೇನೆಂದರೆ ನಾವು ಅದನ್ನು ಜಯಿಸಲು ಮತ್ತು ವಿಜಯಶಾಲಿಯಾಗಲು ದೇವರು ಅದನ್ನು ಇನ್ನೂ ಉಳಿಸಿದ್ದಾರೆ. ನಮ್ಮಲ್ಲಿ ಅನೇಕರು ಅದರ ಕುರಿತು ಅರಿತಿಲ್ಲ ಆದ್ದರಿಂದ ಸಮಸ್ಯೆಯಿಂದ ಹೊರಬರುವ ದಾರಿಗಾಗಿ ಪ್ರಾರ್ಥಿಸಲು ಮುಂದುವರೆಸುತ್ತಾರೆ. ಈ ಸಮಸ್ಯೆಯಿಂದ ಹೊರಬರಲು ಅದರ ಮೂಲಕ ಹೋಗಬೇಕು ಮತ್ತು ದೇವರ ವಾಕ್ಯಕ್ಕೆ ವಿಧೇಯರಾಗುವುದರಿಂದ ಅದನ್ನು ಜಯಿಸಬೇಕು ಎಂದು ಅರ್ಥಮಾಡಿಕೊಳ್ಳಲು ನಾವು ವಿಫಲವಾಗುತ್ತೇವೆ. ಆದ್ದರಿಂದ ಸಮಸ್ಯೆಗಳು ಹೋಗಲು ಪ್ರಾರ್ಥಿಸುವುದನ್ನು ನಿಲ್ಲಿಸುವ ಜೊತೆಗೆ ಸಮಸ್ಯೆಗಳನ್ನು ಹಾಗೂ ತೊಂದರೆಗಳನ್ನು ಜಯಿಸುವ ಶಕ್ತಿಗಾಗಿ ಪ್ರಾರ್ಥಿಸಲು ಪ್ರಾರಂಭಿಸಿ.

ಕಲ್ವಾರಿಯ ಕ್ರಿಸ್ತನನ್ನು ನೆನಪಿಸಿಕೊಳ್ಳಿ, ಆತನು ನಮ್ಮ ಸರಿಯಾದ ಮಾದರಿಯಾಗಿದ್ದಾನೆ (1 ಪೇತ್ರ 2:21). ಈ ತೊಂದರೆಯ ಮೂಲಕ, ಅದನ್ನು ಜಯಿಸಿ ನಾವು ಇನ್ನೊಂದು ಬದಿಗೆ ಹೋಗಲೇಬೇಕು. ಹಾಗಾದರೆ ಮಾತ್ರ ನಾವು ಮುಂಬಡ್ತಿ ಪಡೆಯುತ್ತೇವೆ. ಇದು ನಾವು ಐದನೇ ತರಗತಿಯಿಂದ ಆರನೇ ತರಗತಿಗೆ ಬಡ್ತಿಪಡೆಯುವ ರೀತಿಯೇ ಆಗಿದೆ.

**"ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು." (ಯಾಕೋಬ 1:12)**

## ಇ) ಪರೀಕ್ಷೆ ಮತ್ತು ಶೋಧನೆಗಳ ನಡುವಿನ ವ್ಯತ್ಯಾಸವೇನು?

ನಾವು ಕೇಳಿದಂತಹ ಮತ್ತು ಅರ್ಥಮಾಡಿಕೊಂಡಂತಹ ದೇವರ ವಾಕ್ಯವನ್ನು ಅಭ್ಯಸಿಸಲು ಮತ್ತು ನಾವು ಬಡ್ತಿಯನ್ನು ಹೊಂದಲು ದೇವರು ನಮ್ಮ ಜೀವನದಲ್ಲಿ ಪರೀಕ್ಷೆಗಳನ್ನು ಅನುಮತಿಸುತ್ತಾರೆ. (ಮತ್ತಾ 13:21, ಯಾಕೋಬ 1:12) ಆದರೆ ಬಹುತೇಕ ಜನರು ದೇವರ ವಾಕ್ಯವನ್ನು ಅಭ್ಯಸಿಸುವ ಬದಲು, ಪರೀಕ್ಷೆಯಲ್ಲಿ ಅವರ ಹಳೆಯ ಶಾರೀರಿಕ ಮತ್ತು ಲೌಕಿಕ ರೀತಿಯನ್ನು ಅಭ್ಯಸಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆ. (1 ಕೊರಿ 3:3, ಯಾಕೋಬ 1:22, ರೋಮಾ 12:2) ಅವರಿಗೆ ಈ ಪರೀಕ್ಷೆಯು ಶೋಧನೆಯಾಗಿ ಬದಲಾಗುತ್ತದೆ. (ಯಾಕೋಬ 1:13-14) ಆದರೆ ಈ ಶೋಧನೆಯನ್ನು ಪರಿಶುದ್ಧಾತ್ಮನು ನೀಡುವ ದೇವರ ವಾಕ್ಯದಿಂದ ನಾವು ಜಯಿಸಬೇಕು. (ರೋಮಾ 8:13, ಗಲಾ 5:16)

## ಈ) ಪರೀಕ್ಷೆಗಳು ಯಾಕೆ?

ಪರೀಕ್ಷೆಯು ನಮ್ಮನ್ನು ಉತ್ತಮಗೊಳಿಸುವುದಕ್ಕಾಗಿದೆ. ಹಾಗಾದರೇ ನಾವು ಬಹುಮಾನವನ್ನು ಪಡೆಯುತ್ತೇವೆ. ಪರೀಕ್ಷೆಯು ನಮ್ಮನ್ನು ನಾಶಮಾಡಲು ಅಲ್ಲ ಬದಲಿಗೆ ನಮ್ಮನ್ನು ಮೇಲಕ್ಕೆತ್ತುವದಕ್ಕಾಗಿದೆ. ದೇವರ ವಾಕ್ಯವು ಹೇಳುತ್ತದೆ, "ಸಂಜೆಗೆ ದುಃಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು." (ಕೀರ್ತ 30:5) ಪರೀಕ್ಷೆಯು (ರಾತ್ರಿ) ಕೇವಲ ಅಲ್ಪಕಾಲ ಮಾತ್ರವಿರುತ್ತದೆ ಮತ್ತು ಮುಂಜಾನೆ ಬೇಗನೆ ಬರುತ್ತದೆ. ಆದ್ದರಿಂದ ನಾವು ಹಳೆಯ ದಿನದಲ್ಲಿರುವದಿಲ್ಲ ಬದಲಿಗೆ ಬಡ್ತಿಯೊಂದಿಗೆ ನೂತನ ಮುಂಜಾನೆಯಲ್ಲಿರುತ್ತೇವೆ. ಪರಿಶುದ್ಧಾತ್ಮನು ನಮ್ಮನ್ನು ಶುದ್ಧಪಡಿಸುತ್ತಿರುವ ಪ್ರಕ್ರಿಯೆಯ ಮೂಲಕ ನಾವು ನಡೆದರೆ ಮಾತ್ರ ನಾವು ಮೊದಲು ಓದಿದ ಹಾಗೆ ಬಲ್ಬ್ ನ ಮೇಲಿನಿಂದ ಪೇಪರನ್ನು ತೆಗೆಯಲು ಮತ್ತು ಹರಿದುಹಾಕಲು ನಮಗೆ ಸಾಧ್ಯ. ನಾವು ಅದನ್ನು ತೆಗೆದುಹಾಕಿದಂತೆ, ಪ್ರಕಾಶವು ತೂರಿಹೋಗುತ್ತದೆ ಮತ್ತು ಅದು ನಮಗೂ ಹಾಗೆಯೇ ಇತರರಿಗೂ ಆಶೀರ್ವಾದವಾಗುತ್ತದೆ. ನಮ್ಮೊಳಗಿರುವ ಕ್ರಿಸ್ತನ

1. ಪರೀಕ್ಷೆಯು ನಮ್ಮನ್ನು ನಾಶಮಾಡಲು ಅಲ್ಲ ಬದಲಿಗೆ ನಮ್ಮನ್ನು ಮೇಲಕ್ಕೆತ್ತುವದಕ್ಕಾಗಿದೆ.

2. ಪರೀಕ್ಷೆಯು (ರಾತ್ರಿ) ಕೇವಲ ಅಲ್ಪಕಾಲಮಾತ್ರವಿರುತ್ತದೆ ಮತ್ತು ಮುಂಜಾನೆ ಬೇಗನೆ ಬರುತ್ತದೆ. ಆದ್ದರಿಂದ ನಾವು ಹಳೆಯ ದಿನದಲ್ಲಿರುವದಿಲ್ಲ ಬದಲಿಗೆ ಬಡ್ತಿಯೊಂದಿಗೆ ನೂತನ ಮುಂಜಾನೆಯಲ್ಲಿರುತ್ತೇವೆ.

ಪ್ರಕಾಶವು ಶರೀರಭಾವವನ್ನು ನಾಶಮಾಡುತ್ತಾ ಹೊರಗೆ ಬರುತ್ತದೆ ಮತ್ತು ಇತರರಿಗೆ ಆಶೀರ್ವಾದವಾಗಿರುತ್ತದೆ ಹಾಗೂ ನಾವು ಈ ಲೋಕದಲ್ಲಿ ದೇವರ ಚಿತ್ತದ ಪ್ರಕಾರ ಮಾಡಲು ನಮಗೆ ಸಾಧ್ಯವಾಗುತ್ತದೆ. ಪರಿಶುದ್ಧಾತ್ಮನ ಸಹಾಯದಿಂದ ಕನ್ನಡಿಯ ಮೂಲಕ ನೋಡುವಂತೆ ಕರ್ತನ ಮಹಿಮೆಯನ್ನು ನಾವು ನೋಡಬಹುದು ಮತ್ತು ಲೋಕಕ್ಕೆ ಆಶೀರ್ವಾದವಾಗಬಹುದು.

ಇದಕ್ಕಾಗಿ ದೇವರು ನಮ್ಮನ್ನು ಸಿದ್ಧಪಡಿಸಲಿ ಮತ್ತು ಸಹಾಯಮಾಡಲಿ. ಆತನ ಪ್ರಸನ್ನತೆಯಲ್ಲಿ ದೀನತೆಯಿಂದ ಶರಣಾಗಿ ನಾವು ಪ್ರಾರ್ಥಿಸೋಣ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಪರೀಕ್ಷೆ ಮತ್ತು ಶೋಧನೆಯ ನಡುವಿನ ಸ್ಪಷ್ಟವಾದ ತಿಳುವಳಿಕೆಯನ್ನು ನನಗೆ ನೀಡಿದ್ದಕ್ಕಾಗಿ ವಂದನೆ. ಕರ್ತನೇ, ನನ್ನ ಜೀವಿತದಲ್ಲಿ ಬರುವ ಎಲ್ಲಾ ಶೋಧನೆಗಳ ಮೇಲೆ ಜಯ ಪಡೆಯಲು ನನಗೆ ಅನುವುಮಾಡಿಕೊಡು ಮತ್ತು ಪರೀಕ್ಷೆಗಳು ನನ್ನನ್ನು ನಾಶಮಾಡಲು ಅಲ್ಲ ಬದಲಿಗೆ ನನ್ನನ್ನು ಮೇಲಕ್ಕೆತ್ತುವುದಕ್ಕಾಗಿ ಎಂದು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯಮಾಡು. ಕ್ರಿಸ್ತನ ಮಹಿಮೆ ನನ್ನಲ್ಲಿ ಪ್ರಕಟವಾಗುವಂತೆ ಶರೀರದ ಭಾವಗಳನ್ನು ಸಾಯಿಸಲು ನನಗೆ ಸಹಾಯ ಮಾಡು ಕರ್ತನೆ. ವಂದನೆಗಳು ತಂದೆ, ಕಾರಣ ಈಗ ನಾನು ಹೆಚ್ಚು ಹೆಚ್ಚು ಬೆಳೆಯುತ್ತಿದ್ದೇನೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ದೇವರಾತ್ಮನಿಂದ ನಮ್ಮ ಶರೀರದ ಭಾವಗಳನ್ನು ಸಾಯಿಸಿದರೆ ಮಾತ್ರ ಕ್ರಿಸ್ತನ ಮಹಿಮೆಯನ್ನು ನಮ್ಮಲ್ಲಿ ಬೆಳಗಿಸಲು ನಮಗೆ ಸಾಧ್ಯ.
2. ಒಬ್ಬ ವಿಶ್ವಾಸಿ, ಅವನು ಹೊಸದಾಗಿ ಹುಟ್ಟಿದ ಸಮಯದಿಂದ ತನ್ನ ಲೌಕಿಕ ದೇಹದಿಂದ (ಮಣ್ಣಿನ ಉಡುಪು) ಬೇರ್ಪಡಿಸಲ್ಪಡುವ ಸಮಯದವರೆಗೂ, ಅವನು ದೇವರಿಂದ ಪರಿವರ್ತಿಸಲ್ಪಡುತ್ತಿದ್ದಾನೆ ಅಥವಾ ಸಿದ್ಧಪಡಿಸಲ್ಪಡುತ್ತಿದ್ದಾನೆ.
3. ನಾವು ಗೆಲ್ಲುವ ಸಲುವಾಗಿ ಪರೀಕ್ಷೆಯನ್ನು ಇಡಲಾಗಿತ್ತು. ಅದು ಕಷ್ಟ ಎಂದು ನಾವು ಯೋಚಿಸಿದರೆ ಮತ್ತು ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ನಾವು ಪ್ರಯತ್ನಿಸಿದರೆ ಅದೇ ತರಗತಿಯಲ್ಲಿ ನಾವು ಕೂರಲು ಮತ್ತು ಬರೆಯಲು ಮುಂದುವರೆಸುತ್ತೇವೆ.
4. ಪರೀಕ್ಷೆಯು ನಮ್ಮನ್ನು ನಾಶಮಾಡಲು ಅಲ್ಲ ಬದಲಿಗೆ ನಮ್ಮನ್ನು ಮೇಲಕ್ಕೆತ್ತುವುದಕ್ಕಾಗಿದೆ.
5. ಪರೀಕ್ಷೆಯು (ರಾತ್ರಿ) ಕೇವಲ ಅಲ್ಪಸಮಯದವರೆಗೆ ಮಾತ್ರ ಇರುತ್ತದೆ ಆದರೆ ಮುಂಜಾನೆ ಬೇಗನೆ ಬರುತ್ತದೆ. ಆದ್ದರಿಂದ ನಾವು ಹಳೆಯ ದಿನದಲ್ಲಿರುವದಿಲ್ಲ ಬದಲಿಗೆ ಬಡ್ತಿಯೊಂದಿಗೆ ನೂತನ ಮುಂಜಾನೆಯಲ್ಲಿರುತ್ತೇವೆ.

6. ನಾವು ಕೇಳಿದಂತಹ ಮತ್ತು ಅರ್ಥಮಾಡಿಕೊಂಡಂತಹ ದೇವರ ವಾಕ್ಯವನ್ನು ಅಭ್ಯಸಿಸಲು ಮತ್ತು ನಾವು ಬಡ್ತಿಯನ್ನು ಹೊಂದಲು ದೇವರು ನಮ್ಮ ಜೀವನದಲ್ಲಿ ಪರೀಕ್ಷೆಗಳನ್ನು ಅನುಮತಿಸುತ್ತಾರೆ. (ಮತ್ತಾ 13:21, ಯಾಕೋಬ 1:12) ಆದರೆ ಬಹುತೇಕ ಜನರು ದೇವರ ವಾಕ್ಯವನ್ನು ಅಭ್ಯಸಿಸುವ ಬದಲು, ಪರೀಕ್ಷೆಯಲ್ಲಿ ಅವರ ಹಳೆಯ ಶಾರೀರಿಕ ಮತ್ತು ಲೌಕಿಕ ರೀತಿಯನ್ನು ಅಭ್ಯಸಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆ (1 ಕೊರಿ 3:3, ಯಾಕೋಬ 1:22, ರೋಮಾ 12:2). ಅವರಿಗೆ ಈ ಪರೀಕ್ಷೆಯು ಶೋಧನೆಯಾಗಿ ಬದಲಾಗುತ್ತದೆ. (ಯಾಕೋಬ 1:13-14)



*ಅಧ್ಯಾಯ 14*

# ಈ ಲೋಕದಲ್ಲಿ ಝೋಯೆ ಮನುಷ್ಯನ (ದೇವಪುತ್ರರು) ಪ್ರಕಟಗೊಳ್ಳುವಿಕೆ

*"ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು." (ಮಾರ್ಕ 16:17–18)*

## ಅ) ದೇವರ ಪುತ್ರರು (ಝೋಯೆ ಮನುಷ್ಯರು)

ಹೇಗೆ ಒಂದು ಜೀವ ಇನ್ನೊಂದನ್ನು ಜಯಿಸುತ್ತದೆ? ಅಥವಾ ಹೇಗೆ ಝೋಯೆ ಸೂಖೆಯನ್ನು ಜಯಿಸುತ್ತದೆ? ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ – ವಿಮೋಚಿಸಲ್ಪಟ್ಟ ವ್ಯಕ್ತಿಯಲ್ಲಿ ಹೇಗೆ ದೇವರ ಜೀವವು, ಮನುಷ್ಯನ ಜೀವವನ್ನು (ಸೂಖೆ) ಜಯಿಸುತ್ತದೆ?

ಝೋಯೆ – ದೇವರ ಜೀವ

ಸೂಖೆ – ಮನುಷ್ಯನ ಜೀವ

ಮೊದಲು ನಾವು (ಹೊಸದಾಗಿ –ಹುಟ್ಟಿದ ವಿಶ್ವಾಸಿಗಳು) ಎರಡು ವ್ಯಕ್ತಿಗಳನ್ನು ಹೊಂದಿದ್ದೇವೆ ಎಂದು ಅರ್ಥಮಾಡಿಕೊಳ್ಳಬೇಕು. ಅದರಲ್ಲಿ ಪ್ರತಿಯೊಂದು ವ್ಯತ್ಯಸ್ಥ ಜೀವವನ್ನು ಹಿಡಿದುಕೊಂಡಿದೆ ಮತ್ತು ಒಂದೇ ಸಮಯದಲ್ಲಿ ಭೌತಿಕ ಲೋಕ ಮತ್ತು ದೇವರ ಆತ್ಮೀಕ ರಾಜ್ಯ ಎಂಬ ಎರಡು ವ್ಯತ್ಯಸ್ಥ ಲೋಕದಲ್ಲಿ ಜೀವಿಸುತ್ತಿದೆ. ಮನುಷ್ಯನ ಜೀವ (ಸೂಖೆ) ಮತ್ತು ದೇವರ ಜೀವ (ಝೋಯೆ) ಗಳೆರಡೂ ನಮ್ಮಲ್ಲಿವೆ.

## ಆ) ಹೇಗೆ ನಾವು ರಾಜ್ಯವನ್ನು ಬದಲಾಯಿಸುತ್ತೇವೆ?

ನಾವು ಅಂತರ್ಯದಿಂದ ಬಾಹ್ಯಕ್ಕೆ ಜೀವಿಸಿದರೆ, ದೇವರ ರಾಜ್ಯದಲ್ಲಿ ಜೀವಿಸುತ್ತೇವೆ ಮತ್ತು ನಾವು ಬಾಹ್ಯದಿಂದ ಅಂತರ್ಯಕ್ಕೆ ಜೀವಿಸಿದರೆ ಲೌಕಿಕ ರಾಜ್ಯದಲ್ಲಿ ಜೀವಿಸುತ್ತೇವೆ.

ಪೇತ್ರನ ಪ್ರಯಾಣದಿಂದ (ಅಧ್ಯಾಯ 4ರಲ್ಲಿ ಉಲ್ಲೇಖಿಸಲಾಗಿದೆ) ನಮ್ಮ ಚಿಂತನಾ ಪ್ರಕ್ರಿಯೆಯ ಮೂಲಕ ನಾವು ಲೌಕಿಕದಿಂದ ಸ್ವರ್ಗೀಯಕ್ಕೆ ಅಥವಾ ಸ್ವರ್ಗೀಯದಿಂದ ಲೌಕಿಕಕ್ಕೆ ರಾಜ್ಯಗಳನ್ನು ಬದಲಾಯಿಸಬಹುದು ಎಂದು ಅರ್ಥ ಮಾಡಿಕೊಳ್ಳುತ್ತೇವೆ. ನಾವು ಯಾವುದೇ ರಾಜ್ಯದಲ್ಲಿದ್ದರೂ, ಆ ರಾಜ್ಯದ ನಿಯಮಗಳಿಂದ

ನಾವು ಬಂಧಿಸಲ್ಪಟ್ಟಿದ್ದೇವೆ ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ, ಆ ರಾಜ್ಯದ ನಿಯಮವು ನಮ್ಮ ಮೇಲೆ ಆಳುತ್ತದೆ. ನಾವು ದೇವರ ರಾಜ್ಯದಲ್ಲಿದ್ದರೆ ದೇವರ ನಿಯಮದಿಂದ ನಾವು ಬಂಧಿಸಲ್ಪಟ್ಟಿದ್ದೇವೆ ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ, ಆ ರಾಜ್ಯದ ನಿಯಮವು ನಮ್ಮ ಮೇಲೆ ಆಳುತ್ತದೆ. ನಾವು ದೇವರ ರಾಜ್ಯದಲ್ಲಿದ್ದರೆ ದೇವರ ನಿಯಮದಿಂದ ನಾವು ಬಂಧಿಸಲ್ಪಟ್ಟಿದ್ದೇವೆ ಮತ್ತು ಆ ಸಮಯದಲ್ಲಿ ನಮ್ಮ ಮೇಲೆ ಯಾವುದೇ ಅಧಿಕಾರವನ್ನು ಹೊಂದಿರದ ಕಾರಣದಿಂದ, ಲೋಕದ ನಿಯಮವು ನಮಗೆ ಶರಣಾಗುತ್ತದೆ. ಆದಾಗ್ಯೂ, ನಾವು ಲೌಕಿಕ ನಿಯಮದಲ್ಲಿ ಜೀವಿಸಿದರೆ, ಲೌಕಿಕ ನಿಯಮಕ್ಕೆ ಶರಣಾಗಬೇಕು.

ನಾವು ಇನ್ನೊಂದು ರಾಜ್ಯವನ್ನು ಭೇಟಿಯಾಗಬೇಕಾದರೆ ಅಥವಾ ಪ್ರವೇಶಿಸಬೇಕಾದರೆ (ನೀವು ಪ್ರಜೆಯಾಗಿರುವ ದೇಶವಲ್ಲ), ಅಗತ್ಯ ವೀಸಾವನ್ನು ಪಡೆಯುತ್ತೇವೆ, ಪ್ರಯಾಣದ ದಾಖಲೆಯನ್ನು ತೆಗೆದುಕೊಳ್ಳುತ್ತೇವೆ ಮತ್ತು ನಾವು ಬಯಸಿದ ಸ್ಥಳಕ್ಕೆ ವಿಮಾನದಲ್ಲಿ ಪ್ರಯಾಣಿಸಬಹುದು. ಆದರೆ ನಾವು ಅನುಮತಿ ಪಡೆದ ಮೇಲೆ ಮಾತ್ರ ಪ್ರವೇಶಿಸಬಹುದು (ವಲಸೆ). ಹೀಗೆ ನಾವು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಪ್ರಯಾಣಿಸುತ್ತೇವೆ.

ನಮ್ಮ ಜೀವನದಲ್ಲಿ ಲೋಕದ ಮತ್ತು ದೇವರ ರಾಜ್ಯದ ಪರಿಣಾಮಗಳು ನಮ್ಮ ಆಲೋಚನೆಗಳ ಮೇಲೆ ಆಧಾರಿತವಾಗಿವೆ. ನಾವು ನಿಂತಿರುವ ರಾಜ್ಯದ ಮೇಲೆ ನಮ್ಮ ಆಲೋಚನೆಗಳು ಆಧಾರಿತವಾಗಿವೆ. ಆ ರಾಜ್ಯದ ನಿಯಮಗಳು ನಮ್ಮ ಮೇಲೆ ಆಳುತ್ತವೆ.

ಆದ್ದರಿಂದ ನಮ್ಮ ಆಲೋಚನೆಗಳ ಮೂಲಕ ನಾವು ಆತ್ಮೀಕ ಲೋಕಕ್ಕೆ ಬದಲಾಗುತ್ತೇವೆ. ರಾಜ್ಯದ ಬದಲಾವಣೆಯು ನಮ್ಮ ಒಳಗಿನ ಪ್ರಾಣದ ಆಲೋಚನೆಗಳ ಮೂಲಕ ಜರುಗುತ್ತದೆ. ಭೌತಿಕ ಲೋಕ ಮತ್ತು ದೇವರ ರಾಜ್ಯಗಳೆರಡೂ ನಮ್ಮ ಪ್ರಾಣದ ಎರಡೂ ಬದಿಯಲ್ಲಿವೆ (ಚಿತ್ರ 7). **ನಾವು ಆಂತರಿಕದಿಂದ ಬಾಹೀರಿಕಕ್ಕೆ ಜೀವಿಸಿದರೆ (ದೇವರ ವಾಕ್ಯದ ಮೂಲಕ ಕಾಣದ ಲೋಕವನ್ನು ನೋಡುತ್ತಾ, ಕಾಣುವ ಲೋಕದಲ್ಲಿ ಜೀವಿಸುವದು) ನಾವು ದೇವರ ರಾಜ್ಯದಲ್ಲಿ ಜೀವಿಸುತ್ತಿದ್ದೇವೆ, ಅಥವಾ ಬೇರೆ ಮಾತುಗಳಲ್ಲಿ, "ದೇವರ ರಾಜ್ಯದಿಂದ ಲೋಕದಲ್ಲಿ ಜೀವಿಸುತ್ತಿದ್ದೇವೆ." ನಾವು ಬಾಹೀರಿಕದಿಂದ ಆಂತರಿಕಕ್ಕೆ ಜೀವಿಸಿದರೆ (ಭೌತಿಕ ಲೋಕವನ್ನು ಮಾತ್ರ ನೋಡಿ ಜೀವಿಸುವದು) ನಾವು ಲೋಕದಲ್ಲಿ ಮಾತ್ರ ಜೀವಿಸುತ್ತಿದ್ದೇವೆ.**

ದೇವರ ರಾಜ್ಯವು ಲೌಕಿಕ ರಾಜ್ಯವನ್ನು ಉಂಟುಮಾಡಿದೆ. ಕ್ರಿಸ್ತನು ಹೇಳಿದ ಸಂಗತಿಗಳನ್ನು ನಾವು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವುದಿಲ್ಲ; ಕಾರಣ ನಾವು ವಾಕ್ಯವನ್ನು ಈ ಎರಡು ಹಂತಗಳಲ್ಲಿ ಪ್ರತ್ಯೇಕಿಸುವುದಿಲ್ಲ.

## ಇ) ಮನುಷ್ಯನ ಜೀವದಿಂದ ದೇವರ ಜೀವಕ್ಕೆ ಪರಿವರ್ತನೆ (ಸೂಖೆಯಿಂದ ಝೋಯೆಗೆ)

ಝೋಯೆ ಮನುಷ್ಯನು ಹೊಸದಾಗಿ ಹುಟ್ಟಿದ ವ್ಯಕ್ತಿ. ಅವನು ದೇವರ ಸ್ವಭಾವದೊಂದಿಗಿನ ನೂತನ ಸೃಷ್ಟಿ ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರ ಸ್ವಾರೂಪ್ಯವು ಅವನೊಳಗೆ ಹುಟ್ಟಿದೆ. (2 ಕೊರಿ 5:17, ಎಫೆ 4:23,24) ಈ ವ್ಯಕ್ತಿಯು ದೇವರ ಮಗ. ಈ ದೇವರ ಮಗನು ವಿಮೋಚಿಸಲ್ಪಟ್ಟ ಪ್ರತೀ ವ್ಯಕ್ತಿಯೊಳಗಿದ್ದಾನೆ. ಈ ವ್ಯಕ್ತಿ ಈ ಲೋಕದಲ್ಲಿ ಪೂರ್ಣವಾಗಿ ಪ್ರಕಟವಾದರೆ ಅವನು ಸ್ವತಃ ಲೋಕಕ್ಕೆ ಅದ್ಭುತವಾಗುತ್ತಾನೆ. ಈ ವ್ಯಕ್ತಿಯ ಮೂಲಕ ಸ್ವತಃ ದೇವರೇ ಈ ಲೋಕದಲ್ಲಿ ಕಾರ್ಯಮಾಡುತ್ತಿದ್ದಾನೆ. ಎಲ್ಲಾ ಸೃಷ್ಟಿಯು ದೇವರ ಪುತ್ರರ ಪ್ರತ್ಯಕ್ಷತೆಗಾಗಿ ಕಾಯುತ್ತಿದೆ ಎಂದು ಸತ್ಯವೇದವು ಉಲ್ಲೇಖಿಸುತ್ತದೆ.

**ರೋಮಾಪುರದವರಿಗೆ 8:19ರಲ್ಲಿ ನಾವು ಓದುತ್ತೇವೆ, "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರುನೋಡುತ್ತಿರುವದು."**

ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುತ್ತವೆ ಎಂದು ಮಾರ್ಕ 16:17-18ರಲ್ಲಿ ಹೇಳುತ್ತದೆ, "ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನ್ನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು." ಈ ಎಲ್ಲಾ ಸೂಚನೆಗಳು ನಂಬುವವರೊಂದಿಗೆ ಮತ್ತು ಈ ನೂತನ ಸೃಷ್ಟಿಯಲ್ಲಿ ಕಾರ್ಯಮಾಡುವವರೊಂದಿಗಿರುತ್ತವೆ. ನಾವು ಇವುಗಳು ಆತ್ಮೀಕ ವರಗಳು ಎಂದು ಯೋಚಿಸಬಹುದು ಆದರೆ ಈ ಭಾಗವು ಅದರೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ.

ನಾವು ಇಲ್ಲಿಗೆ ನಿಲ್ಲಿಸಿ ಒಂದು ಪ್ರಶ್ನೆಯನ್ನು ಕೇಳೋಣ, ಮಾರ್ಕ 16:17-18ರಲ್ಲಿ ಹೇಳಿರುವ ಕಾರ್ಯಗಳು ನೂತನವಾಗಿ ಸೃಷ್ಟಿಸಲ್ಪಟ್ಟ ದೇವಪುತ್ರರ ಕುರಿತಾಗಿದ್ದರೆ, ಯಾಕೆ ಅದು ಇಂದು ಹೊಸದಾಗಿ ಹುಟ್ಟಿದ ಕ್ರೈಸ್ತರ ಮೂಲಕ ಪ್ರಕಟವಾಗುತ್ತಿಲ್ಲ?

ಕಾರಣವೇನೆಂದರೆ ಬಹುತೇಕ ಹೊಸದಾಗಿ ಹುಟ್ಟಿದ ವ್ಯಕ್ತಿಗಳು ದೇವರ ಪುತ್ರರಾಗಿ ಪ್ರಕಟವಾಗುತ್ತಿಲ್ಲ ಬದಲಿಗೆ ದೇವರ ಮಗುವಾಗಿ ಅಥವಾ ಹಸುಮಕ್ಕಳಾಗಿ ಪ್ರಕಟವಾಗುತ್ತಿದ್ದಾರೆ.

ಹಸುಮಕ್ಕಳು ತಮ್ಮನ್ನು ತಾವು ಪೋಷಿಸಿಕೊಳ್ಳುವಷ್ಟು ಪ್ರಬುದ್ಧರಲ್ಲದ್ದರಿಂದ, ಅವುಗಳಿಗೆ ಅವರ ಅಗತ್ಯತೆಗಳಿಗಾಗಿ ಹೇಗೆ ಅಳಬೇಕೆಂದು ಮಾತ್ರವೇ ತಿಳಿದದೆ. ಅದರಂತೆಯೇ, ಆತ್ಮೀಕ ಹಸುಮಕ್ಕಳಾಗಿರುವ ಕ್ರೈಸ್ತರು ಅವರ ಪ್ರಸಕ್ತ ಸ್ಥಿತಿಯಿಂದ ಬೆಳೆಯಲು ಅಥವಾ ಪ್ರಗತಿಹೊಂದಲು ಸಾಧ್ಯವಾಗದಿರುವುದರಿಂದ ಈ ಅಸಾಮಾನ್ಯ ಕಾರ್ಯಗಳ ಕುರಿತು ಓದುವವರಾಗಿರುತ್ತಾರೆ ಆದರೆ ಅವರ ಜೀವಿತದಲ್ಲಿ ಅನುಭವಿಸಲು ಆಗುವುದಿಲ್ಲ. ಆದುದರಿಂದಲೇ, ನಾವು ಆತ್ಮೀಕವಾಗಿ ಬೆಳೆಯಬೇಕೆಂದು ದೇವರ ವಾಕ್ಯವು ಹೇಳುತ್ತದೆ,

**"ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ." (1 ಪೇತ್ರ 2:1-2)**

ನಿಮ್ಮೊಳಗೆ ಒಂದು ಪ್ರಶ್ನೆ ಉದ್ಭವಿಸಬಹುದು – ಮನುಷ್ಯನು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿದ್ದಾನೆ ಎಂದು ಸತ್ಯವೇದದಲ್ಲಿ ಉಲ್ಲೇಖಿಸಿಲ್ಲವೇ? ಹಾಗಾದರೆ ಆ ಮನುಷ್ಯನು ಯಾಕೆ ಹಸುಮಗುವಿನಂತೆ "ಬೆಳೆಯಬೇಕು?" ಸರಿ, ದೇವರು ಆದಾಮನನ್ನು ಸೃಷ್ಟಿಸಿದಾಗ, ಆತನು ಮಗುವನ್ನು ಸೃಷ್ಟಿಸಲಿಲ್ಲ ಮತ್ತು ಅವನನ್ನು ಬೆಳೆಸಲಿಲ್ಲ, ಬದಲಿಗೆ ಅವನು ಪೂರ್ಣವಾಗಿ ರೂಪುಗೊಂಡ ಮನುಷ್ಯನನ್ನು ಸೃಷ್ಟಿಸಿದನು. ಅದರಂತೆಯೇ ನಾವು ಹೊಸದಾಗಿ ಹುಟ್ಟಿದಾಗ, ಒಬ್ಬ ನೂತನ ವ್ಯಕ್ತಿ ದೇವರಿಂದ ಸೃಷ್ಟಿಸಲ್ಪಟ್ಟಿದ್ದಾನೆ.

**"ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ." (ಎಫೆ 4:23-24)**

ಖಂಡಿತವಾಗಿ ನಾವು ದೇವರ ಮೂಲಕ ನೂತನ ಮನುಷ್ಯರಾದಾಗ, ದೇವರ ಸ್ವಂತ ಸ್ವಾರೂಪ್ಯದಲ್ಲಿ ಒಬ್ಬ ವ್ಯಕ್ತಿ ನಮ್ಮೊಳಗೆ ಹುಟ್ಟಿದನು. ಅವನು ದೇವರ ಸೃಷ್ಟಿಯಾಗಿರುವುದರಿಂದ, ಆ ವ್ಯಕ್ತಿ ಹಸುಮಗುವಲ್ಲ, ಬದಲಿಗೆ ಅವನು ಅಖಂಡ ಮತ್ತು ಪೂರ್ಣವಾಗಿ ಮಾಡಲ್ಪಟ್ಟಿದ್ದಾನೆ. ಆ ವ್ಯಕ್ತಿ ದೇವರ ರಾಜ್ಯದಲ್ಲಿ ಹುಟ್ಟಿದ್ದಾನೆ ಮತ್ತು ಅವನು ಜಯಶಾಲಿಯಾಗಲು ಜನಿಸಿದ್ದಾನೆ.

**"ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ." (1 ಯೋಹಾ 5:4)**

ಆ ವ್ಯಕ್ತಿ ದೇವಪುತ್ರನಾಗಿದ್ದಾನೆ.

**"ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು." (ಯೋಹಾ 1:13)**

ಹಾಗಾಗಿ ನಾವು ದೇವರ ಉತ್ತರಾಧಿಕಾರಿಗಳು, ಕ್ರಿಸ್ತನೊಂದಿಗೆ ಜಂಟಿ–ಉತ್ತರಾಧಿಕಾರಿಗಳು. (ರೋಮಾ 8:17) ನಾವು ಈ ಸತ್ಯದ ಬಗ್ಗೆ ಅರಿತಿಲ್ಲ ಕಾರಣ 'ಹಳೆಯ ಸ್ವಯಂ' ಶರೀರದ ಸ್ವಭಾವದಿಂದ ತುಂಬಿದೆ ಮತ್ತು ನೂತನ ಸೃಷ್ಟಿಯನ್ನು ಆವರಿಸಿದೆ.

**"ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು." (ರೋಮಾ 8:17)**

ಭೌತಿಕ ಲೋಕದಲ್ಲಿ ಜನಿಸಿರುವ ಪ್ರಾಣ ಅಥವಾ ಸ್ವಯಂ (ಸೂಖೆ) ಶರೀರದ ಪ್ರಕಾರವಾಗಿ ಚಿಂತಿಸುತ್ತದೆ ಮತ್ತು ಈ ಆಲೋಚನೆಗಳು ಕೇವಲ ಆತ್ಮೀಕವಾಗಿ ಚಿಂತಿಸುವ ಮತ್ತು ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿರುವ, ದೇವರ ಆತ್ಮೀಕ ರಾಜ್ಯದಲ್ಲಿ ಜನಿಸಿರುವ ನೂತನ ಸೃಷ್ಟಿಯ ಆಲೋಚನೆಗಳ ವಿರುದ್ಧ ಯುದ್ಧ ಮಾಡುತ್ತವೆ. ಆತ್ಮದ ಆಲೋಚನೆಗಳು ಶರೀರದ ವಿರುದ್ಧವಾಗಿವೆ ಮತ್ತು ಶರೀರದ ಆಲೋಚನೆಗಳು ಆತ್ಮದ ವಿರುದ್ಧವಾಗಿವೆ ಎಂದು ದೇವರ ವಾಕ್ಯವು ಹೇಳುತ್ತದೆ.

**"ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ." (ಗಲಾ 5:17)**

## ಈ) ದೇವಪುತ್ರರು ಪ್ರಕಟವಾಗುವುದರಲ್ಲಿ ಅಡಚಣೆಗಳು

ಈ ಲೋಕದಲ್ಲಿ ಕಾರ್ಯಮಾಡಲು ಮನುಷ್ಯನಿಗೆ ದೇವರು ಅಧಿಕಾರವನ್ನು ನೀಡಿದ್ದಾರೆ. ಹೆಚ್ಚು ನಿಖರವಾಗಿ ಹೇಳಬೇಕೆಂದರೆ, ಮನುಷ್ಯನ ಪ್ರಾಣಕ್ಕೆ ಅಧಿಕಾರವನ್ನು ನೀಡಲಾಗಿದೆ! ಆದರೆ ಪ್ರಾಣವು ಈ ಲೋಕದ ಭಾವಗಳಿಂದ ತುಂಬಿದೆ. "ನೂತನ ಮನುಷ್ಯ," ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟವನು ಅಥವಾ ಜಯಶಾಲಿಯಾಗಲು ಸೃಷ್ಟಿಸಲ್ಪಟ್ಟವನು (1 ಯೋಹಾ 5:4), ಕಾರ್ಯಮಾಡಲು ಆಗುವದಿಲ್ಲ ಕಾರಣ ಪ್ರಾಣವು ತಡೆಯಾಗಿ ಮುಂದೆ ನಿಂತಿದೆ. ಅವನು ಈ ಪ್ರಾಣವನ್ನು ಹಾದುಹೋಗಿ ಕಾರ್ಯಮಾಡಲು ಆಗುವದಿಲ್ಲ. ಈ ಲೋಕದಲ್ಲಿ ಅಧಿಕಾರವನ್ನು ಪ್ರಾಣಕ್ಕೆ ನೀಡಲಾಗಿರುವುದರಿಂದ, ಅದನ್ನು "ಶೂನ್ಯಕ್ಕೆ" ತರಬೇಕು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಮಾರ್ಕ 16:17-18ರ ಪ್ರಕಾರ ವಿಶೇಷ ಸ್ವಭಾವವಿರುವ, ನೂತನ ಸೃಷ್ಟಿಯು ಹೊರಬರಲು ಮತ್ತು ಅದರ ಸ್ವಂತ ಸ್ವಭಾವವನ್ನು ಪ್ರಕಟಗೊಳಿಸಲು, ಪ್ರಾಣವು ನಾಶವಾಗಬೇಕು. ಇಂದು, ದೇವರ ಮಕ್ಕಳ ಪ್ರಾಣವು ಪರಿಶುದ್ಧಾತ್ಮನ ಕಾರ್ಯದ ಮೂಲಕ ನಾಶವಾಗಲು ಅನುವುಮಾಡಲ್ಪಡುತ್ತಿಲ್ಲ. ಅದರ ಪರಿಣಾಮವಾಗಿ, ದೇವರ ಸ್ವಾರೂಪ್ಯದಲ್ಲಿರುವ ನೂತನ ಮನುಷ್ಯನು ವಿಶೇಷ ಸ್ವಭಾವದೊಂದಿಗೆ ಮಾಡಬೇಕಾದ ಅದ್ಭುತ ಕೆಲಸದೊಂದಿಗೆ ಪ್ರಕಟವಾಗುತ್ತಿಲ್ಲ.

**"ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು." (ಮಾರ್ಕ 16:17-18)**

> ನಮ್ಮ ಸ್ವಾರ್ಥವನ್ನು ನಿರಾಕರಿಸುವ ಆಧಾರದ ಮೇಲೆ, ದೇವರ ಜೀವವು (ಝೋಯೆ) ನಮ್ಮಲ್ಲಿ ಪ್ರಕಟವಾಗುತ್ತದೆ.

ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರ ಪುತ್ರರು ಝೋಯೆ ಜೀವದೊಂದಿಗೆ ಜಯ ಶಾಲಿಯಾಗಲು ದೇವರ ರಾಜ್ಯದಲ್ಲಿ ಹುಟ್ಟಿದ್ದರೂ, ಈ ಲೋಕದಲ್ಲಿ ಜನಿಸಿದ ಮನುಷ್ಯನ ಜೀವದಿಂದ

(ಸೂಖೆ) ತಡೆಯಲ್ಪಟ್ಟಿದೆ. ಆದರೆ ಕ್ರಿಸ್ತನು ಹೇಳಿದಂತೆ ನಾವು ನಮ್ಮ ಸ್ವಾರ್ಥವನ್ನು (ಸೂಖೆ) ನಿರಾಕರಿಸುವ ಅಳತೆಗೆ ತಕ್ಕಂತೆ ನೂತನವಾಗಿ ಸೃಷ್ಟಿಸಲ್ಪಟ್ಟ ದೇವರ ಮಗನ ಜೀವವು ಪ್ರಕಟವಾಗುತ್ತದೆ.

1 ಪೇತ್ರ 2:1-2ರಲ್ಲಿ "ದೇವರಿಂದ ಹುಟ್ಟಿದ ಮಗು ಬೆಳೆಯಬೇಕು" ಎಂದು ಹೇಳಿಲ್ಲ ಬದಲಿಗೆ ಅದು ಹೇಳುತ್ತದೆ "ನೀವು ಆತ್ಮೀಕವಾಗಿ ಬೆಳೆಯುವ ಸಲುವಾಗಿ ಹಸುಮಕ್ಕಳಂತೆ ದೇವರ ಶುದ್ಧ ಹಾಲನ್ನು ಬಯಸಿರಿ." ಕಾರಣವೇನೆಂದರೆ ನಮ್ಮೊಳಗಿನ ಆಂತರಿಕ ಮನುಷ್ಯನು, ನೂತನವಾಗಿ ಸೃಷ್ಟಿಸಲಾದ ಆತ್ಮ (ನೂತನ ಸೃಷ್ಟಿ) ಮತ್ತು ಪ್ರಾಣದ ಸಂಯೋಗವಾಗಿದ್ದಾನೆ.

## ನೂತನವಾಗಿ ಸೃಷ್ಟಿಸಲಾದ 'ಆತ್ಮ ವ್ಯಕ್ತಿ'

ಆಂತರಿಕ ಮನುಷ್ಯ = ದೇವರಿಂದ ಹುಟ್ಟಿದ ನೂತನವಾಗಿ ಸೃಷ್ಟಿಸಲ್ಪಟ್ಟ "ಆತ್ಮ ವ್ಯಕ್ತಿ" (ದೇವರ ಸ್ವಭಾವ) + ಆದಾಮನಿಂದ ಹುಟ್ಟಿದ ಹಳೆಯ "ಪ್ರಾಣ ವ್ಯಕ್ತಿ" (ಆದಾಮನ ಸ್ವಭಾವ). ಈ ಆಂತರಿಕ ಮನುಷ್ಯನು ಪ್ರಾಣದಲ್ಲಿ ತುಂಬಿರುವ ಶರೀರದ ಭಾವಗಳ (ಬಿದ್ದುಹೋದ ಆದಾಮನ ಸ್ವಭಾವ) ಕಾರಣ ದುರ್ಬಲನಾಗಿದ್ದಾನೆ. ಆದುದರಿಂದಲೇ, ದೇವರ ವಾಕ್ಯವಾದ ಹಾಲನ್ನು ಕುಡಿಯುವ ಮೂಲಕ, ನಾವು ಎಲ್ಲಾ ದುರುದ್ದೇಶ, ವಂಚನೆ, ಕಪಟ, ಅಸೂಯೆ ಮತ್ತು ಕೆಟ್ಟಮಾತುಗಳನ್ನು ಒಂದೊಂದಾಗಿ ತೆಗೆದುಹಾಕಬೇಕು ಎಂದು ದೇವರ ವಾಕ್ಯ ಹೇಳುತ್ತದೆ. ದೇವರಾತ್ಮನು ನೀಡುವ ದೇವರ ವಾಕ್ಯದ ಮೂಲಕ ನಾವು ಹಳೆಯ ಸೂಖೆಯನ್ನು ನಾಶಮಾಡಬೇಕು ಮತ್ತು ಅದರ ಪ್ರಕಾರ ದೇವರ ಜ್ಞಾನವನ್ನು ಪಡೆಯಲು ನಮ್ಮನ್ನು ನಾವು ಒಪ್ಪಿಸಿಕೊಡಬೇಕು. ಹಾಗೆ ಮಾಡುವುದರಿಂದ ನೂತನ ಸೃಷ್ಟಿಯು ದೇವರ ರಾಜ್ಯದ ಪೌರತ್ವವನ್ನು ಹೊಂದಿ (ಫಿಲಿ 3:19-20) ನಮ್ಮೊಳಗಿಂದ ಪ್ರಕಟವಾಗುತ್ತದೆ ಮತ್ತು ಯೇಸು ತನ್ನ ಲೌಕಿಕ ಸೇವೆಯ ಸಮಯದಲ್ಲಿ ಮಾಡಿದಂತೆ, ಮನುಷ್ಯನಿಂದ ಸಾಧ್ಯವಾಗದ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ.

**"ನಾವಾದರೋ ಪರಲೋಕಸಂಸ್ಥಾನದವರು; ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ." (ಫಿಲಿ 3:19-20)**

ನಮ್ಮಲ್ಲಿನ ಎರಡು ಜೀವಗಳ ಕುರಿತು ನಾವು ಮಾತನಾಡಿದೆವು. ನಾವು ನಂಬಿಕೆಯಿಂದ ಪಡೆದುಕೊಂಡಿರುವ ಎರಡನೇ ಜೀವವಾಗಿರುವ ಝೋಯೆ ನಮ್ಮ ಆತ್ಮದಲ್ಲಿದೆ ಮತ್ತು ದೇವರ ಜೀವವೆಂದು (ಝೋಯೆ) ಕರೆಯಲ್ಪಡುತ್ತದೆ. ದೇವರ ವಾಕ್ಯವು ಹೇಳುತ್ತದೆ,

"ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕಹಾಗೆ ಆತನನ್ನು ಅನುಸರಿಸುವವರಾಗಿರಿ." (ಎಫೆ 5:1)

## ಉ) ನೂತನ ಸೃಷ್ಟಿಯಿಂದ ಆಳ್ವಿಕೆ

**"ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು" (ಯೋಹಾ 1:13)**

ನೂತನ ಮನುಷ್ಯನು ಮಾಂಸದ ಇಲ್ಲವೇ ರಕ್ತದ ಚಿತ್ತದ ಪ್ರಕಾರ ಉಂಟುಮಾಡಲಾಗಿಲ್ಲ. ರಕ್ತದಿಂದಾದ (ಸೂಖೆ) ಜೀವವು ಈ ಲೋಕದ ಎಲ್ಲಾ ನಿಯಮಗಳಿಂದ ಬಾಧಿತವಾಗಿದೆ. ಯಾವುದಾದರೂ ಆಹಾರ ಹಾಳಾಗಿದ್ದ ಪಕ್ಷದಲ್ಲಿ ಮತ್ತು ನಾವು ಅದನ್ನು ಸೇವಿಸಿದರೆ, ಅದರಿಂದ ನಾವು ಬಾಧೆಗೊಳಗಾಗುತ್ತೇವೆ. ಆದರೆ ನಾವು ದೇವರ ಮಕ್ಕಳಾಗಿ, ಯೇಸು ಕ್ರಿಸ್ತನು ನಮಗೆ ನೀಡಿರುವ ನೂತನ ಸೃಷ್ಟಿಯಲ್ಲಿ ನಂಬುವವರಾದ ನಾವು ದೇವರ ರಾಜ್ಯದ ನಿಯಮದಿಂದ ಈ ಲೋಕದ ನಿಯಮವನ್ನು ಜಯಿಸಲು ಮತ್ತು ಜೀವಿಸಲು ಸಾಧ್ಯವಾಗುತ್ತದೆ.

> ಯೇಸು ಕ್ರಿಸ್ತನು ನಮಗೆ ನೀಡಿರುವ ನೂತನ ಸೃಷ್ಟಿಯನ್ನು ಯಾರು ನಂಬುತ್ತಾರೋ ಅವರು ದೇವರ ರಾಜ್ಯದ ನಿಯಮದಿಂದ ಲೋಕದ ನಿಯಮವನ್ನು ಜಯಿಸಿ ಜೀವಿಸಲು ಸಾಧ್ಯವಾಗುತ್ತದೆ.

ವಾಕ್ಯದ ಪ್ರಕಾರ ದೇವರಿಂದ ಹುಟ್ಟಿದವರು ಈ ಲೋಕದ ಮೇಲೆ ಆಳುತ್ತಾರೆ ಮತ್ತು ಜಯಶಾಲಿಯಾಗಲು ಹುಟ್ಟಿದ್ದಾರೆ. ನೂತನ ಸೃಷ್ಟಿಯಿಂದ ನಮ್ಮ ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮದಲ್ಲಿ ನಾವು ದೇವರನ್ನು ಹೋಲುತ್ತೇವೆ. (ಎಫೆ 4:23) ಎಲ್ಲಾ ಸಂಗತಿಗಳಲ್ಲೂ ನಾವು ದೇವರಂತಿದ್ದೇವೆ. ಮಕ್ಕಳು ತಮ್ಮ ಹೆತ್ತವರನ್ನು ಅನೇಕ ರೀತಿಯಾಗಿ ಹೋಲುವಂತೆ, ಯೇಸು ಕ್ರಿಸ್ತನ ಮೂಲಕ ಹುಟ್ಟಿದ ನೂತನವಾಗಿ ಉಂಟುಮಾಡಲ್ಪಟ್ಟ ಆತ್ಮವು "ಆತ್ಮಗಳ ತಂದೆಯ" ಅದೇ ಸ್ವಾರೂಪ್ಯದಲ್ಲಿದೆ.

**"ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ." (ಇಬ್ರಿ 12:9)**

**ದೇವರು ಹೇಳುತ್ತಾನೆ, "ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" (ಎಫೆ 5:1); ಅದರ ಅರ್ಥ ನಮ್ಮ ಶೈಲಿಯು ಬಿದ್ದುಹೋದ ಆದಾಮನಂತಿತ್ತು. ಆದರೆ ಯೇಸು ಕ್ರಿಸ್ತನು ನಮ್ಮನ್ನು ಮೊದಲ ಆದಾಮನಿಂದ ಬೇರ್ಪಡಿಸಿದನು ಮತ್ತು ಹೊಸ ಆದಾಮನೊಂದಿಗೆ (ಕ್ರಿಸ್ತ) ಸೇರಿಸಿದನು.**

> ಯೇಸು ಕ್ರಿಸ್ತನು ಮತ್ತೆ ಹುಟ್ಟಿದ ಮನುಷ್ಯರನ್ನು ಮೊದಲ ಆದಾಮನಿಂದ ಬೇರ್ಪಡಿಸಿದನು ಮತ್ತು ಅವರನ್ನು ಕೊನೆಯ ಆದಾಮನಿಗೆ ಸೇರಿಸಿದನು (ಸ್ವತಃ ಆತನೇ).

**"ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿ ಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು." (ರೋಮಾ 6:2-4)**

ನಾವು ಯೇಸು ಕ್ರಿಸ್ತನ ಸ್ವಭಾವವನ್ನು ಹೊಂದಬೇಕು. ಆದರೆ ನಮ್ಮ ಮನಸ್ಸು ಹಳೆಯ ಆದಾಮನ ಸ್ವಭಾವದಿಂದ ಕೂಡಿದೆ. ನಮ್ಮ ಸ್ವಭಾವವು ಬದಲಾಗಿದೆ, ಸಂಬಂಧವು ಬದಲಾಗಿದೆ ಮತ್ತು ಆತ್ಮದಿಂದ ಹುಟ್ಟಿದ ನೂತನ ಸೃಷ್ಟಿ, ಈಗಾಗಲೇ ನಮ್ಮಲ್ಲಿ ಉಂಟುಮಾಡಲ್ಪಟ್ಟಿದೆ ಎಂದು ದೇವರ ವಾಕ್ಯವು ಭರವಸೆ ನೀಡುತ್ತದೆ. (ಯೆಹೆ 36:26, 2ಕೊರಿ 5:17) ಆದ್ದರಿಂದ ನಾವು ನಮ್ಮ ಸ್ವಭಾವವನ್ನು ನೂತನಪಡಿಸಬೇಕು ಮತ್ತು ಮನಸ್ಸನ್ನು ನೂತನ ಸ್ವಭಾವದೊಂದಿಗೆ ತುಂಬಿಸಬೇಕು. (ರೋಮಾ 12:2) ನಮ್ಮ ಮನಸ್ಸನ್ನು ನೂತನ ಆದಾಮನ ಸ್ವಭಾವದೊಂದಿಗೆ ತುಂಬಿಸಿದರೆ ಮಾತ್ರ ನಾವು ನೂತನ ಸ್ವಭಾವದಲ್ಲಿ ಕಾರ್ಯಮಾಡಲು ಸಾಧ್ಯವಾಗುತ್ತದೆ, ಕಾರಣ ನಾವು ದೇವರನ್ನು ಮನಸ್ಸಿನಿಂದ ಸೇವಿಸುತ್ತೇವೆ. (ರೋಮಾ 7:25)

ಆದುದರಿಂದಲೇ 1 ಯೋಹಾನ 4:17ರಲ್ಲಿ ಆತನ ಹಾಗೆಯೇ ನಾವೂ ಇರಬೇಕು ಎಂದು ಕ್ರಿಸ್ತನು ಹೇಳುತ್ತಾನೆ.

ನೂತನ ಸೃಷ್ಟಿಯಲ್ಲಿ ಜೀವಿಸುವವರು (ನೂತನ ಜೀವ – ಝೋಯೆ) ಉನ್ನತ ಜೀವವನ್ನು (ಝೋಯೆ) ಹೊಂದುವುದು ಮಾತ್ರವಲ್ಲ ಬದಲಿಗೆ ಅವರ ಆಲೋಚನೆಗಳ ಮುಖಾಂತರ ಲೌಕಿಕ ರಾಜ್ಯವನ್ನು ದೇವರ ರಾಜ್ಯಕ್ಕೆ ಬದಲಾಯಿಸಲು ಅವರಿಗೆ ಸಾಧ್ಯವಿದೆ ಎಂದು ಮಾರ್ಕ 16:17-18ರಲ್ಲಿ ಹೇಳಲಾಗಿದೆ. ದೇವರ ಉದ್ದೇಶಕ್ಕಾಗಿ ನಂಬಲಸಾಧ್ಯವಾದ ರೀತಿಯಲ್ಲಿ ಕಾರ್ಯಮಾಡುವಂಥವರು ಅವರೇ. ನಾವು ನೂತನ ಸೃಷ್ಟಿಯಲ್ಲಿ ನಂಬಿಕೆಯಿಟ್ಟರೆ, ನಾವು ನಮ್ಮ ಕೈಗಳನ್ನಿಟ್ಟಾಗ, ಝೋಯೆ ಜೀವ (ದೇವರ ಜೀವ) ನಮ್ಮ ಮೂಲಕ ಕಾರ್ಯಮಾಡುತ್ತದೆ ಮತ್ತು ರೋಗಿಯು ಸ್ವಸ್ಥನಾಗುತ್ತಾನೆ ಎಂದು ಕ್ರಿಸ್ತನು ಹೇಳಿದನು. ಅಂದರೆ ಉನ್ನತ ರಾಜ್ಯದ ನಿಯಮವು ಕೆಳಗಿನ ರಾಜ್ಯಕ್ಕೆ ಅನ್ವಯವಾಗುತ್ತದೆ. ಒಂದು ಪ್ರಖ್ಯಾತ ನಂಬಿಕೆಯಾಗಿರುವ ಪರಿಶುದ್ಧಾತ್ಮನ ವರಗಳೊಂದಿಗೆ ಇದು ಯಾವ ಸಂಬಂಧವನ್ನೂ ಹೊಂದಿಲ್ಲ. ವಾಸ್ತವವಾಗಿ ಇದು ಆತ್ಮೀಕ ವರಗಳೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಇದು ನೈಜ ನೂತನ ಸೃಷ್ಟಿಯ ನಿಯಮವಾಗಿದೆ.

ಮಾರ್ಕ 16:17-18ರಲ್ಲಿ ಉಲ್ಲೇಖಿಸಿರುವ ಅದ್ಭುತಕಾರ್ಯವನ್ನು ಮುಂದುವರೆಸುತ್ತಾ, ನೂತನ ಮನುಷ್ಯನು ರೋಗಿಯನ್ನು ಸ್ವಸ್ಥಮಾಡುವದು ಮಾತ್ರವಲ್ಲ, ಅವನಿಗೆ ದೆವ್ವಗಳನ್ನು ಬಿಡಿಸಲೂ ಸಹ ಸಾಧ್ಯವಾಗುತ್ತದೆ. ಸರ್ಪಗಳನ್ನು ಹಿಡಿಯಲು ಅಥವಾ ನಿಯಂತ್ರಿಸಲೂ ಸಹ ಅವರಿಗೆ ಸಾಧ್ಯವಾಗುತ್ತದೆ. ಸರ್ಪ ಯಾವುದಕ್ಕೆ ಸಂಬಂಧಿಸುತ್ತದೆ? ದೇವರು

ಸೃಷ್ಟಿಸಿದ್ದವುಗಳಲ್ಲಿ ಸರ್ಪವು ಅತ್ಯಂತ ಕುತಂತ್ರವುಳ್ಳದ್ದಾಗಿತ್ತು. ಸರ್ಪದ ತೀಕ್ಷ್ಣಜ್ಞಾನವನ್ನು ಇಲ್ಲಿ ತೋರಿಸಲಾಗಿದೆ. ದೇವರ ಪುತ್ರರಾಗಿ ನೂತನ ಸೃಷ್ಟಿಯಲ್ಲಿ ನಾವು ಜೀವಿಸಲು ಪ್ರಾರಂಭಿಸಿದರೆ, ನಮಗೆ ಸೈತಾನನ ಎಲ್ಲಾ ತಂತ್ರಗಳನ್ನು ಜಯಿಸಲು ನಂತರ ಜ್ಞಾನದಲ್ಲಿ ಕಡಿಮೆಯಿರುವ ಎಲ್ಲಾ ಜೀವಿಗಳನ್ನು ಜಯಿಸಲು ನಮಗೆ ಸಾಧ್ಯವಾಗುತ್ತದೆ. ಎಲ್ಲಾ ಜೀವಿಗಳೂ ಅವುಗಳ ಜೀವನದ ಮೂಲಕ ಇದನ್ನು ನಿಜಮಾಡಲು ಕಾಯುತ್ತಿವೆ –

**"ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹುಲವಲವಿಕೆಯಿಂದ ಎದುರುನೋಡುತ್ತಿರುವದು." (ರೋಮಾ 8:19)**

ಒಂದು ಹೂವಿನ ಮಹಿಮೆಯು ಸೊಲೊಮೋನನದಕ್ಕಿಂತಲೂ ಹೆಚ್ಚಾಗಿದೆ ಎಂದು ಮತ್ತಾಯ 6:28-29ರಲ್ಲಿ ಯೇಸು ಹೇಳಿದರು. ನಾವು ಈ ಹೇಳಿಕೆಯನ್ನು ವಿಮರ್ಶಿಸಿದರೆ ಈ ವಾಕ್ಯದಿಂದ ಆಶ್ಚರ್ಯಗೊಳ್ಳುತ್ತೇವೆ. ಸರಳವಾಗಿ ಹೇಳುವದಾದರೆ, ಈ ಭೂಮಿಯ ಹುಲ್ಲು ಬಿದ್ದುಹೋದ ಮನುಷ್ಯನಿಗಿಂತಲೂ ಹೆಚ್ಚು ಮಹಿಮೆಯನ್ನು ಹೊಂದಿದೆ. ಹಾಗಿದ್ದಲ್ಲಿ ಯಾಕೆ ಸೃಷ್ಟಿಗಳು ದೇವಪುತ್ರರ ಪ್ರತ್ಯಕ್ಷತೆಗಾಗಿ ಲವಲವಿಕೆಯಿಂದ ಕಾಯುತ್ತಿವೆ?

| |
|---|
| ಪರಿಶುದ್ಧಾತ್ಮನ ವರಗಳು ಒಬ್ಬ ವ್ಯಕ್ತಿಯ ಜೀವನದಲ್ಲಿ ಪರಿಶುದ್ಧಾತ್ಮನ ಅಭಿಷೇಕದಿಂದ ಕಾರ್ಯಮಾಡಿದರೆ (ಅ.ಕೃ 1:8), ಮಾರ್ಕ 16:17-18ರಲ್ಲಿ ಉಲ್ಲೇಖಿಸಿರುವ ಅಸಾಮಾನ್ಯ ಮತ್ತು ಅದ್ಭುತ ಕಾರ್ಯಗಳು, ಝೋಯೆಯಿಂದ ನಿರ್ವಹಿಸಲ್ಪಡುತ್ತವೆ ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ, ಯೇಸು ಕ್ರಿಸ್ತನ ಮೂಲಕ ಮತ್ತೆ ಜನಿಸುವಾಗ ನೂತನ ಸೃಷ್ಟಿಯನ್ನು ನಂಬುವ ಮೂಲಕ ಹಾಗೂ ಹೊಸ ಸೃಷ್ಟಿಯಲ್ಲಿರುವ "ದೇವರ ನೂತನ ಜೀವ"ವನ್ನು (ಝೋಯೆ) ಲೋಕಕ್ಕೆ ಬಿಡುಗಡೆ ಮಾಡುವ ಮೂಲಕ ನಿರ್ವಹಿಸಲ್ಪಡುತ್ತವೆ. ಈ ಜೀವದ ಬಿಡುಗಡೆ 'ಹಳೆಯ ಸ್ವಯಂ' ಅನ್ನು (ಸೂಖೆ, ಯೋಹಾನ 12:24) ನಾಶಮಾಡುವುದರಿಂದ ಮತ್ತು ಈ ಜೀವದಲ್ಲಿ ಕಾರ್ಯಮಾಡಲು ಕ್ರಿಸ್ತನಲ್ಲಿ 'ನೂತನ ಸೃಷ್ಟಿ'ಯನ್ನು ನಂಬುವುದರಿಂದ ಸಾಧ್ಯವಾಗುತ್ತದೆ. (ಮಾರ್ಕ 16:17) |

ಆದಾಮನು ದೇವರ ಮಗನಾಗಿ ಉಳಿದುಕೊಂಡಾಗ, ಅವನ ಕೆಳಗಿದ್ದ ಎಲ್ಲಾ ಕಾಡು ಪ್ರಾಣಿಗಳಿಗೆ ಅವನು ಹೆಸರಿಟ್ಟ. ಅವುಗಳಲ್ಲಿ ಯಾವುವೂ ಆದಾಮನಿಗೆ ಹಾನಿಮಾಡಲಿಲ್ಲ. ಅವುಗಳಿಗೆ ಅವನು ಏನು ಹೆಸರಿಟ್ಟನೋ, ಅದು ಜಾರಿಗೆಬಂತು. ಆದರೆ ಆದಾಮನು ಪಾಪ ಮಾಡಿದಾಗ ಹಾನಿಗೊಳಗಾಗುತ್ತೇನೆಂಬ ಭಯದಿಂದ ಮನುಷ್ಯನು ಈ ಪ್ರಾಣಿಗಳ ಸಮೀಪ ಬರಲಾಗಲಿಲ್ಲ. ಆದಾಗ್ಯೂ, 'ದೇವಪುತ್ರರ' ಸ್ವಭಾವಕ್ಕೆ ನಾವು ಉಗಮಿಸಿದಾಗ ಅವು ನಮಗೆ ಹಾನಿಮಾಡುವುದಿಲ್ಲ ಬದಲಿಗೆ ನಮಗೆ ವಿಧೇಯರಾಗುತ್ತವೆ ಎಂದು ದೇವರ ವಾಕ್ಯವು ನಮಗೆ ಭರವಸೆ ನೀಡುತ್ತದೆ.

## ಊ) ಎಂದಿಗೂ ವಿರೋಧಿಸದ ಹಾವುಗಳು

ನನ್ನ ಜೀವನದಲ್ಲಿನ ಒಂದು ಘಟನೆಯ ಕುರಿತು ಬರೆಯಲು ನನಗೆ ಅವಕಾಶ ಮಾಡಿಕೊಡಿ:

UAE ನಲ್ಲಿ ರಸ್-ಅಲ್-ಖೈಮಾ ಎಂದು ಕರೆಯಲಾಗುವ ಒಂದು ಸ್ಥಳದಲ್ಲಿ ನಾನು ವಾಸಿಸುತ್ತಿದ್ದೆ. ಒಮ್ಮೆ ರಾತ್ರಿ ಸುಮಾರು 8-9 ಗಂಟೆಗೆ ಮನೆಗೆ ಹಿಂದಿರುಗುವಾಗ, ನಾನು ಕಾರನ್ನು ಮನೆಯ ಮುಂದೆ ನಿಲ್ಲಿಸಿದೆ ಮತ್ತು ಮನೆಯನ್ನು ಪ್ರವೇಶಿಸುವಾಗ ನನ್ನನ್ನು ನೋಡಲು ನನ್ನ ಹೆಂಡತಿಯೊಂದಿಗೆ ಹೊರಗೆ ಬಂದ ನನ್ನ ಮಗುವಿನ ಹತ್ತಿರ ಒಂದು ಹಾವನ್ನು ತಕ್ಷಣ ನೋಡಿದೆ. ಅವರಿಬ್ಬರೂ ನೆಲದಮೇಲಿದ್ದ ಆ ಹಾವನ್ನು ಗಮನಿಸಲಿಲ್ಲ. ನನಗೆ ಸ್ಪಷ್ಟವಾಗಿ ನೆನಪಿದೆ, ನಾನು ಬಾಲ್ಯದಲ್ಲಿದ್ದಾಗ, ನನ್ನ ತಾಯ್ನಾಡಿನಲ್ಲಿ ನನ್ನ ಸ್ನೇಹಿತರು ಒಮ್ಮೆ ಹಾವನ್ನು ಕೊಲ್ಲಲು ಪ್ರಯತ್ನಿಸಿದರು ಮತ್ತು ಹಾವು ತಿರಿಗಿ ಕಚ್ಚಲು ಪ್ರಯತ್ನಿಸಿತು. ನನ್ನನ್ನು ನೋಡಿದ ನಂತರ ನನ್ನ ಕುಟುಂಬದವರೂ ಹಾವನ್ನು ನೋಡಿದರು ಮತ್ತು ನಾವೆಲ್ಲರೂ ಭಯಗೊಂಡೆವು. ದೇವರ ಕೃಪೆಯಿಂದ ನಾನು ಒಂದು ಅಲ್ಯೂಮಿನಿಯಂ ಪಟ್ಟಿಯನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಮತ್ತು ನಾನು ಹಾವನ್ನು ತುಂಬಾ ಎಚ್ಚರಿಕೆಯಿಂದ ಸಮೀಪಿಸಿದೆ. ನನಗೆ ಎದುರಾಗಿ ಬರಬೇಕಾದ ಈ ಹಾವು ತೆವಳಿಹೋಗಿ ತನ್ನ ತಲೆಯನ್ನು ಗೋಡೆಗೆ ಒರಗಿಸಿ ನನ್ನನ್ನು ಕೊಲ್ಲಿ ಅಥವಾ ಸಾಯಿಸಿ ಎಂದು ಹೇಳುವ ರೀತಿಯಲ್ಲಿ ಅಲ್ಲಾಡದೇ ಶರಣಾಗಿದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಯಾವುದೇ ಹಿಂಜರಿಕೆಯಿಲ್ಲದೆ ನಾನು ಅದನ್ನು ಗೋಡೆಗೆ ಚುಚ್ಚಿ ಸಾಯಿಸಿದೆ. ಎರಡು ದಿನಗಳ ನಂತರ, ಅದೇ ಸ್ಥಳದಲ್ಲಿ ನಾನು ಇನ್ನೊಂದು ಹಾವನ್ನು ನೋಡಿದೆ. ನಾನು ಅದೇ ರೀತಿಯಲ್ಲಿ ಅದನ್ನೂ ಸಾಯಿಸಿದೆ ಮತ್ತು ಅದರ ಹಾಗೆಯೇ ಕೆಲವು ದಿವಸಗಳ ನಂತರ ಇನ್ನೊಂದು ಕಾಣಿಸಿತು.

> ಮನುಷ್ಯನ ಬೀಳುವಿಕೆಯ ಕಾರಣದಿಂದ ಸೃಷ್ಟಿಗಳು ಒಂದು ನ್ಯೂನ್ಯತೆಯನ್ನು ಹೊಂದಿದವು. ಈ ಲೋಕದಲ್ಲಿ ಅವರ ಆಳ್ವಿಕೆಗಾರನಾಗಿ ದೇವರು ಇಟ್ಟಿದ್ದ ಮನುಕುಲವು ಪಾಪಮಾಡಿತು (ದೇವರಿಗೆ ಅವಿಧೇಯರಾಗುವುದು) ಮತ್ತು ಅದರ ಮಹಿಮೆಯಿಂದ ಕೆಳಗೆ ಬಿದ್ದಿತು. ಹಾಗಾಗಿ ಪೂರ್ವಯೋಜಿತವಾಗಿ ಎಲ್ಲಾ ಸೃಷ್ಟಿಗಳು ಅವರ (ಮನುಷ್ಯರ) ಗುಲಾಮಗಿರಿ ಮತ್ತು ಶಾಪದ ಕೆಳಗೆ ಬಂದವು. ಆದರೆ ಮನುಷ್ಯರು 'ದೇವಪುತ್ರರಾಗಿ' ಪ್ರಕಟವಾದಾಗ ಮತ್ತು ದೇವರು ಬಯಸಿದಂತೆ ಈ ಲೋಕದಲ್ಲಿ ಮತ್ತೆ ಜೀವನ ಪ್ರಾರಂಭವಾದಾಗ ಎಲ್ಲಾ ಸೃಷ್ಟಿಗಳೂ ಸಂತೋಷಗೊಳ್ಳುತ್ತವೆ ಕಾರಣ ನಾವು ಓದಿದಂತೆ, "ಸೃಷ್ಟಿಗಳು ದೇವಪುತ್ರರ ಪ್ರತ್ಯಕ್ಷತೆಗಾಗಿ ಲವಲವಿಕೆಯಿಂದ ಕಾಯುತ್ತಿವೆ."

ಅದರ ನಂತರ ನನಗೆ ಅನುಮಾನವಾಯಿತು, ಈ ಹಾವುಗಳು ನಿಜವಾಗಿಯೂ ಕಚ್ಚುತ್ತವೆಯೇ? ಯಾಕೆ ಅವು ಸಾಯಿಸಲ್ಪಡುವ ಸಲುವಾಗಿ ಮೌನವಾಗಿ ಬಿದ್ದುಕೊಂಡಿವೆ? ನನ್ನ ಅನುಮಾನದಿಂದ ನನ್ನನ್ನು ಬಿಡಿಸುವುದಕ್ಕಾಗಿಯೇ ಎಂಬಂತೆ ಮರುದಿನ ಒಂದು ಘಟನೆ ಜರುಗಿತು, ಅದೇರೀತಿಯ ಹಾವು ಹತ್ತಿರದ ಮನೆಗೆ ಹೋಯಿತು ಮತ್ತು ಅವರನ್ನು

ಹಾನಿಮಾಡಲು ಪ್ರಯತ್ನಿಸಿತು. ಇದನ್ನು ನಾನು ಒಂದು ಕಂಪನಿಯಲ್ಲಿ ವ್ಯವಸ್ಥಾಪಕನಾಗಿರುವ ನನ್ನ ನೆರೆಯವನಿಂದ ಕೇಳಿದೆ. ಈ ಹಾವು ಕಚ್ಚುತ್ತದೆ ಎಂದು ನಾನು ಅರಿತುಕೊಂಡೆ ಆದರೆ ದೇವಪುತ್ರರಾಗಿ ನಾವು ಎಷ್ಟರ ಮಟ್ಟಿಕ್ಕೆ ಪ್ರಕಟವಾಗುತ್ತೇವೋ ಅದೇ ಮಟ್ಟಿಕ್ಕೆ ಜೀವಿಗಳೂ ನಮಗೆ ಶರಣಾಗುತ್ತವೆ. ಆದರ ಹಾಗೆಯೇ ಅದೇ ರೀತಿಯ ಇನ್ನೂ ಎರಡು ಹಾವುಗಳು ಬಂದವು ಮತ್ತು ದೇವರು ನನಗೆ ಅರ್ಥಮಾಡಿಸುವ ಸಲುವಾಗಿ ನಾನು ಅವುಗಳನ್ನು ಕೊಲ್ಲುವಂತೆ ಅನುವುಮಾಡಿದರು. ನಂತರದಲ್ಲಿ ಇವು ನನ್ನ ಆತ್ಮೀಕ ತರಬೇತಿಯಲ್ಲಿ ಭಾಗಗಳಾಗಿದ್ದವು ಎಂದು ನಾನು ಅರ್ಥಮಾಡಿಕೊಂಡೆ.

## ಖ) ಎಂದಿಗೂ ಕಚ್ಚದ ಜೇನುನೊಣಗಳು

ನಾವು ದೇವರಿಗೆ ವಿಧೇಯರಾದರೆ ದೇವರು ಸೃಷ್ಟಿಸಿರುವ ಎಲ್ಲಾ ಜೀವಂತ ಜೀವಿಗಳು ನಮಗೆ ವಿಧೇಯವಾಗುತ್ತವೆ. ಇನ್ನೊಂದು ಘಟನೆಯ ಕುರಿತು ಬರೆಯಲು ನನಗೆ ಅವಕಾಶ ಮಾಡಿಕೊಡಿ. ರಸ್-ಅಲ್-ಖೈಮಾ ದಲ್ಲಿ ನಮ್ಮ ಕಾರ್ಯಾಗಾರದ ಬಾಗಿಲಿನ ಬಳಿ, ಜೇನುಹುಳುಗಳಿಂದ ತುಂಬಿದ್ದ ಒಂದು ದೊಡ್ಡ ಜೇನು ಗೂಡನ್ನು ನಾವು ನೋಡಿದೆವು. ಕಾರ್ಯಾಗಾರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ನನ್ನ ಸಹೋದರ ಸಂಬಂಧಿ, ಎಲ್ಲರೂ ಭಯಭೀತರಾಗಿರುವುದರಿಂದ ಯಾರೊಬ್ಬರೂ ಕಾರ್ಯಾಗಾರಕ್ಕೆ ಹೋಗಲು ಮತ್ತು ಯಾವುದೇ ವಸ್ತುಗಳನ್ನು ತೆಗೆದುಕೊಳ್ಳಲು ಹಿಂದೇಟುಹಾಕುತ್ತಿದ್ದಾರೆ ಎಂದು ನನಗೆ ಹೇಳಿದರು. ಅದು ತುಂಬಾ ದೊಡ್ಡ ಜೇನುಗೂಡಾಗಿತ್ತು. ಈಗ, ಅದು ಮನುಷ್ಯನಾಗಿದ್ದರೆ ಹೊರಡುವಂತೆ ನಾವು ಅವನಿಗೆ ಹೇಳಬಹುದಿತ್ತು ಅಥವಾ ಅದು ಹಾವಾಗಿದ್ದರೆ ಹೇಗಾದರೂ ಅದನ್ನು ಸಾಯಿಸಬಹುದಿತ್ತು, ಆದರೆ ಅಂತಹ ಸ್ಥಿತಿ ಎದುರುಗೊಂಡಾಗ ನೀವು ಏನುಮಾಡುತ್ತೀರಾ?

ಉಮ್-ಅಲ್-ಕ್ವಾಯಿನ್ ನಲ್ಲಿದ್ದ ನನ್ನ ಸ್ನೇಹಿತ ಮತ್ತು ಕ್ರಿಸ್ತನಲ್ಲಿ ಜೊತೆ ಸಹೋದರ ಅವರ ಮನೆಯಲ್ಲಿ ರಾತ್ರಿಯಲ್ಲಿ ಕೆಲವು ಜೇನುಹುಳಗಳನ್ನು ಸಾಯಿಸಲು ಒಮ್ಮೆ ಪ್ರಯತ್ನಿಸಿದರು ಆದರೆ ಜೇನುಹುಳುಗಳು ಅವರನ್ನು ದಾಳಿಮಾಡಿದವು ಮತ್ತು ಅವರು 4-5 ದಿನಗಳವರೆಗೆ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಈ ದುರದೃಷ್ಟಕರ ಘಟನೆಯು ನನ್ನ ಮನಸ್ಸಿನಲ್ಲಿ ಹಸಿಯಾಗಿತ್ತು ಹಾಗಾಗಿ ನಾನು ಸ್ಥಳವನ್ನು ತಲುಪಿದಾಗ ಏನು ಮಾಡಬೇಕೆಂದು ನನಗೆ ಗೊತ್ತಾಗಲಿಲ್ಲ. ಕೆಲವು ದಿನಗಳು ಕಳೆದ ನಂತರ ಒಂದು ದಿನ ದೇವರ ರಾಜ್ಯದ ನಿಯಮವನ್ನು ನಾನು ನೆನಪಿಸಿಕೊಂಡೆ. ಈ ಹುಳಗಳು ನನಗೇನೂ ಮಾಡುವದಿಲ್ಲ ಮತ್ತು ನಾನು ಅವುಗಳಿಗೆ ಹೋಗಲು ಹೇಳಿದರೆ ಅವು ಹೋಗುತ್ತವೆಂದು ನನ್ನ ಮನಸ್ಸಿನಲ್ಲಿ ನಂಬಿಕೆ ಮತ್ತು ನಿರ್ಧಾರದೊಂದಿಗೆ ನಾನು ಕಾರ್ಯಾಗಾರಕ್ಕೆ ಹೋದೆ. “ನನಗೆ ನಿಮ್ಮ ವಿರುದ್ಧ ಏನೂ ಇಲ್ಲ, ಆದರೆ ನೀವು ಹೆಚ್ಚುದಿನ ಇಲ್ಲಿ ಉಳಿದರೆ, ನನ್ನ ಕೆಲಸದ ಸಿಬ್ಬಂದಿಗಳು ಕೆಲಸಮಾಡಲು ಆಗುವದಿಲ್ಲ, ಏಕೆಂದರೆ ಅವರು ನಿಮ್ಮ ಕುರಿತು ಭಯಭೀತರಾಗಿದ್ದಾರೆ ಮತ್ತು ಒಳಗೆ ಬರಲು ಹಿಂಜರಿಯುತ್ತಿದ್ದಾರೆ. ಹಾಗಾಗಿ ಈ ಸ್ಥಳವನ್ನು ತೊರೆಯಲು ಮತ್ತು ಬೇರೆಡೆ ಆಶ್ರಯವನ್ನು ಪಡೆಯಲು ನಿಮಗೆ ಹೇಳುತ್ತೇನೆ. ಇಲ್ಲಿ ಕೂರಬೇಡಿ” ಎಂದು ಹುಳಗಳಿಗೆ ಹೇಳಿದೆ.

> ನಾವು ದೇವರಿಗೆ ವಿಧೇಯರಾದರೆ ದೇವರು ಉಂಟುಮಾಡಿರುವ ಸೃಷ್ಟಿಗಳು ನಮಗೆ ವಿಧೇಯವಾಗುತ್ತವೆ.

ದೇವರ ರಾಜ್ಯದ ನಿಯಮವನ್ನು ಅನ್ವಯಿಸುತ್ತಾ ನಾನು ಇದನ್ನು ಹೇಳಿದೆ ಮತ್ತು ಅಲ್ಲಿಂದ ಹೊರಟೆ. ಕೆಲವು ದಿನಗಳ ನಂತರ ನಾನು ಸ್ಥಳಕ್ಕೆ ಹಿಂದಿರುಗಿದಾಗ, ಹುಳುಗಳು ಕಣ್ಮರೆಯಾಗಿದ್ದನ್ನು ಮತ್ತು ಅಲ್ಲಿ ಅವುಗಳ ಗೂಡು ಮಾತ್ರವೇ ಇದ್ದದ್ದನ್ನು ನಾನು ನೋಡಿದೆ.

## ಎ) ಎಂದಿಗೂ ಹಾನಿಮಾಡದ ಕಡಜಗಳು

ಒಮ್ಮೆ ಸೇವೆಗಾಗಿ ಭಾರತದಲ್ಲಿ ಎರ್ನಾಕುಲಂಗೆ ನಾನು ಬಂದಾಗ, ನನ್ನ ಮನೆಯ ಮೇಲೆ ಜೇಡರ ಬಲೆಯನ್ನು ನೋಡಿ ಒಂದು ಪೊರಕೆಯನ್ನು ತೆಗೆದುಕೊಂಡೆ ಮತ್ತು ಮೇಲೆಹೋದೆ. ನಾನು ಒಂದು ಬದಿಯನ್ನು ತಲುಪಿದಾಗ ಒಂದು ರಂಧ್ರವನ್ನು ನೋಡಿದೆ. ಆ ಸ್ಥಳವನ್ನು ಚೆನ್ನಾಗಿ ಧೂಳು ಹೊಡೆದೆ ಆದರೆ ಅದು ಒಂದು ಕಡಜದ ಗೂಡು ಎಂದು ನನಗೆ ತಿಳಿದಿರಲಿಲ್ಲ. ಅದು ಸಂಜೆಯ ಸಮಯವಾಗಿದ್ದರಿಂದ ಎಲ್ಲಾ ಕಡಜಗಳೂ ಅವುಗಳ ಗೂಡಿನಲ್ಲಿದ್ದವು ಮತ್ತು ಸ್ಥಳದಲ್ಲಿ ಧೂಳುಹೊಡೆದದ್ದು ಅದೇ ಸಮಯದಲ್ಲಾಗಿತ್ತು. ಗೂಡು ಮುರಿದುಹೋಯಿತು ಮತ್ತು ಕೆಳಗೆ ಬಿತ್ತು. ತುಂಬಾ ಅಪಾಯಕಾರಿಯಾದ ಈ ಕಡಜಗಳು ನನ್ನ ಸುತ್ತಲೂ ಹಾರಾಡಲು ಪ್ರಾರಂಭಿಸಿದವು. ನಾನು ಅವುಗಳಿಗೆ ಹೇಳಿದೆ, ಯೇಸುವಿನ ನಾಮದಲ್ಲಿ "ನನ್ನನ್ನು ಮುಟ್ಟಬೇಡಿ." ಅವು ಸುತ್ತಲೂ ಹಾರಾಡಿದವು ಆದರೆ ನನಗೆ ಏನನ್ನೂ ಮಾಡಲಿಲ್ಲ. ದೇವರಿಗೆ ಕೃತಜ್ಞತೆ ಸಲ್ಲಿಸಿ ಕೆಳಗೆ ಬಂದೆ. ಆದರೆ ಅಲ್ಲಿಂದ ಕಸದ–ಮೊರವನ್ನು ತರಲು ಮರೆತುಹೋದೆ. ನಾನು ದೇವರನ್ನು ಕೇಳಿದೆ "ಅಪ್ಪಾ, ನಾನು ಏನು ಮಾಡಲಿ?" ಆಗ "ನೀನು ಹೋಗಿ ತೆಗೆದುಕೋ, ಅವು ಏನೂ ಮಾಡುವದಿಲ್ಲ" ಎಂದು ನನ್ನೊಳಗೆ ಹೇಳಲ್ಪಟ್ಟ ಮಾತಿನ ಮೇಲೆ ನಾನು ಕೇಂದ್ರೀಕರಿಸಿದೆ. ಈ ಕಡಜಗಳ ಮಧ್ಯೆ ನಾನು ಮತ್ತೆ ಹೋದೆ ಹಾಗೂ ಕಸದ–ಮೊರವನ್ನು ತೆಗೆದುಕೊಂಡೆ. ಅವುಗಳು ನನಗೇನೂ ಮಾಡಲಿಲ್ಲ. ನಾನು ಕಸದ ಮೊರವನ್ನು ತೆಗೆದುಕೊಂಡೆ ಮತ್ತು ಕೆಳಗೆಬಂದೆ.

ನಾನು ಈ ಘಟನೆಯನ್ನು ನನ್ನ ತಾಯಿಗೆ ವಿವರಿಸಿದೆ, ಆಗ ನಮಗೆ ಹತ್ತಿರದ ಸ್ಥಳವಾದ "ಮರಡು" ಎಂಬಲ್ಲಿ ಒಬ್ಬ ವ್ಯಕ್ತಿ ಒಂದು ವಾರದ ಹಿಂದೆ ಕಡಜದ ಕಡಿತದಿಂದ ಸಾವನ್ನಪ್ಪಿದ ಎಂದು ನನಗೆ ಹೇಳಿದರು.

> ಎಲ್ಲಾ ಸೃಷ್ಟಿಸಲ್ಪಟ್ಟ ವಸ್ತುಗಳು ಅಥವಾ ಜೀವಂತ ಜೀವಿಗಳು ದೇವಪುತ್ರರ ಪ್ರತ್ಯಕ್ಷತೆಗಾಗಿ ಕಾಯುತ್ತಿವೆ.

ಎಲ್ಲಾ ಸೃಷ್ಟಿಸಲ್ಪಟ್ಟ ವಸ್ತುಗಳು ಅಥವಾ ಜೀವಿಸುವ ಜೀವಿಗಳು ದೇವಪುತ್ರರ ಪ್ರತ್ಯಕ್ಷತೆಗಾಗಿ ಕಾಯುತ್ತಿವೆ. ಸೂಖೆ ಸ್ವಭಾವದಿಂದ ಝೋಯೆ ಸ್ವಭಾವಕ್ಕೆ ನಾವು ಬದಲಾದ ಸಮಯದಿಂದ, ಎಲ್ಲಾ ಜೀವಂತ ಸೃಷ್ಟಿಗಳು ಸಂತೋಷಗೊಳ್ಳುತ್ತವೆ ಹಾಗೂ ನಾವು ಈ ಲೋಕದ ನಿಯಮವನ್ನು ಬಿಟ್ಟು ದೇವರ ರಾಜ್ಯದ ನಿಯಮಕ್ಕೆ ಪ್ರವೇಶಿಸುತ್ತೇವೆ.

ಅಂದರೆ, ನಾವು ಮೊದಲ ಆದಾಮನ ಸ್ವಭಾವವನ್ನು ಬಿಟ್ಟು ಕೊನೆಯ ಆದಾಮನ (ಯೇಸು) ಸ್ವಭಾವಕ್ಕೆ ಪ್ರವೇಶಿಸುತ್ತೇವೆ. ಅಥವಾ ಈ ಸಂಗತಿಗಳನ್ನು ಸರಳವಾಗಿ ಹೇಳುವದಾದರೆ, ನಾವು ಹಳೆಯ ಸೃಷ್ಟಿಯ ಸ್ವಭಾವವನ್ನು ಬಿಡುತ್ತೇವೆ ಮತ್ತು ನಾವು

ಹೊಸದಾಗಿ ಹುಟ್ಟಿದಾಗ ದೇವರ ಸ್ವಾರೂಪ್ಯದಲ್ಲಿ ಸೃಷ್ಟಿಸಲಾದ, ನೂತನ ಸೃಷ್ಟಿಯ (ದೇವಪುತ್ರರ) ಸ್ವಭಾವಕ್ಕೆ ಪ್ರವೇಶಿಸುತ್ತೇವೆ.

ನಂತರ ಪರಿಶುದ್ಧಾತ್ಮನ ಶಾಲೆಯನ್ನು ಸೇರುವುದರಿಂದ ಮತ್ತು ದೇವರ ವಾಕ್ಯಕ್ಕೆ ವಿಧೇಯರಾಗುವುದರಿಂದ, ಲೋಕದ ಭಾವಗಳಿಂದ ತುಂಬಿರುವ ಸೂಖೆಯನ್ನು ನಮಗೆ ನಾಶಮಾಡಲು ಮತ್ತು ದೇವರ ಜೀವವಾದ ಝೋಯೆಯೊಂದಿಗೆ, ಅದನ್ನು ತುಂಬಿಸಲು ನಮಗೆ ಸಾಧ್ಯವಾಗುತ್ತದೆ. ಸೂಖೆಯ ಬಲವು ಕಡಿಮೆಯಾದಾಗ, ಆಂತರಿಕ ಮನುಷ್ಯನ ಆತ್ಮೀಕ ಬಲವು ಹೆಚ್ಚುತ್ತದೆ.

1 ಪೇತ್ರ 2:1-2 ಇದು ಹೇಳುತ್ತದೆ,

**"ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ."**

ಎಲ್ಲಾ ಅಶುದ್ಧತೆ ಹೋದಾಗ, ಆಂತರಿಕ ಮನುಷ್ಯನ ಆತ್ಮೀಕ ಬಲ ಪ್ರಾಣಕ್ಕೆ ಬೆಳೆಯಲು ಪ್ರಾರಂಭಿಸುತ್ತದೆ. ಸೂಖೆ ಮನುಷ್ಯನ ನಾಶನದ ಆಧಾರದ ಮೇಲೆ, ಝೋಯೆ ಮನುಷ್ಯ ಬೆಳೆಯುತ್ತಾನೆ. ನಮಗೆ ತಿಳಿದಿರುವಂತೆ ಇರಾಕ್ ಕುವಾಯತ್ ಅನ್ನು ಆಕ್ರಮಿಸಿದಾಗ, ಸಹಾಯಕ್ಕಾಗಿ ಕುವಾಯತ್ ಅಮೆರಿಕಾದ ಕಡೆಗೆ ತಿರುಗಿತು. ಅಮೆರಿಕಾ ಸೌದಿಗೆ ಬಂದಿತು, ಅಲ್ಲಿ ತನ್ನ ನೆಲೆಯನ್ನು ಹಾಕಿತು ಮತ್ತು ಇರಾಕ್ ನಿಂದ ಕುವಾಯತ್ ನ ಪ್ರತೀ ಭಾಗವನ್ನು ಆಕ್ರಮಿಸಲು ಮತ್ತು ಕುವಾಯತ್ ಅನ್ನು ಸಂಪೂರ್ಣವಾಗಿ ವಿಮೋಚಿಸಲು ಪ್ರತೀ ನಿಮಿಷ ಹೋರಾಡಿತು.

ಅದರ ಹಾಗೆಯೇ ನಮ್ಮ ಆತ್ಮದೊಳಗೆ ಬಂದಿರುವ ದೇವರ ಪರಿಶುದ್ಧಾತ್ಮನು ಶರೀರದ ಭಾವಗಳಿಂದ ಅಥವಾ ಶರೀರದ ಕಾರ್ಯಗಳಿಂದ ನಮ್ಮನ್ನು ಪೂರ್ಣವಾಗಿ ಬಿಡಿಸುತ್ತಾನೆ. ನಾವು ಸಹಕರಿಸಿದರೆ ಪರಿಶುದ್ಧಾತ್ಮನ ಕಾರ್ಯದ ಮೂಲಕ, ಸೂಖೆ ಝೋಯೆಯಿಂದ ತುಂಬಲ್ಪಡುತ್ತದೆ. ಸೂಖೆಯ ಭಾವಗಳಿಂದ ತುಂಬಿರುವ ಪ್ರಾಣವು ಝೋಯೆಗೆ ಸಮೀಪಿಸಲು ಪ್ರಾರಂಭಿಸುತ್ತದೆ. ಝೋಯೆ ಸೂಖೆಯನ್ನು ಜಯಿಸಲು ಪ್ರಾರಂಭಿಸುತ್ತದೆ. ದೇವರ ಜೀವವು ಮನುಷ್ಯನ ಜೀವವನ್ನು ಜಯಿಸುತ್ತದೆ. ಅದು ಜಯಿಸುವಾಗ, ಪ್ರಾಣವು ಝೋಯೆಯಿಂದ ತುಂಬಲ್ಪಡುತ್ತದೆ. 'ಆತ್ಮೀಕ ಮನುಷ್ಯನು' (ನೂತನ ಸೃಷ್ಟಿ) 'ಪ್ರಾಣ ಮನುಷ್ಯನನ್ನು' ನುಂಗುತ್ತಿದ್ದಾನೆ.

## ಏ) ವಿಷಪದಾರ್ಥವನ್ನೇನಾದರೂ ಕುಡಿದರೆ ನಿಮಗೆ ಏನಾದರೂ ಸಂಭವಿಸುತ್ತದೆಯೇ?

**"ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ**

**ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು." (ಮಾರ್ಕ 16:18)**

> ಈ ನೂತನ ಸೃಷ್ಟಿಯಲ್ಲಿ ನೈಜವಾಗಿ ನಂಬಿಕೆಯಿಡುವ ವ್ಯಕ್ತಿ ಹಾವನ್ನು ಮೇಲೆತ್ತುತ್ತಾನೆ, ಮತ್ತು ಅವನು ಯಾವುದೇ ಮಾರಣಾಂತಿಕ ಪದಾರ್ಥಗಳನ್ನು ಕುಡಿದರೂ, ಅದು ಅವನಿಗೆ ಬಾಧಿಸುವುದಿಲ್ಲ (ಸತ್ಯವೇದ) .

ಈ ಕಾರ್ಯದಲ್ಲಿ ನಾವು ಎಷ್ಟರಮಟ್ಟಿಗೆ ಹೋಗುತ್ತೇವೋ, ಅದೇ ಮಟ್ಟಕ್ಕೆ ದೇವರ ರಾಜ್ಯದ ಕಾರ್ಯದಿಂದ ನಾವು ಬಲಹೊಂದುತ್ತೇವೆ. ಈ ನೂತನ ಸೃಷ್ಟಿಯಲ್ಲಿ ನಂಬಿಕೆಯಿಡುವ ವ್ಯಕ್ತಿಯು ತನ್ನ ಕೈಯಲ್ಲಿ ಹಾವುಗಳನ್ನು ಎತ್ತುವದು ಮಾತ್ರವಲ್ಲ ಏನಾದರೂ ವಿಷಪದಾರ್ಥವನ್ನು ಕುಡಿದರೂ ಅವರು ಯಾವ ಕೇಡೂ ಸಂಭವಿಸದೆ ಉಳಿಯುತ್ತಾರೆ. ಕಾರಣವೇನೆಂದರೆ ಈ ವ್ಯಕ್ತಿ ಸೂಖೆಯಲ್ಲಲ್ಲ, ದೇವರ ಜೀವವಾಗಿರುವ (ಝೋಯೆ) ನೂತನ ಸೃಷ್ಟಿಯಲ್ಲಿ ನಂಬಿ ಕಾರ್ಯಮಾಡುತ್ತಾನೆ. ಆದರೆ ಇನ್ನೊಂದು ಬದಿಯಲ್ಲಿ ಸೂಖೆಯಲ್ಲಿ ಮುಂದುವರೆಯುತ್ತಾ ಅಂತಹ ಕಾರ್ಯಗಳನ್ನು ಮಾಡಿದರೆ ನಂತರ ನಾವು ಈ ಲೋಕದ ನಿಯಮಗಳಿಂದ ಬಾಧಿಸಲ್ಪಡುತ್ತೇವೆ.

> 15 ವ್ಯಾಟ್ ಬಲ್ಬ್ ನ್ನು ಬಳಸಿ ನಾವು ಏನನ್ನಾದರೂ ಓದುತ್ತಿರುವಾಗ ತಕ್ಷಣ ಅಲ್ಲಿ ಸೂರ್ಯನು ಉದಯಿಸಿದರೆ, ಬಲ್ಬ್ ನ ಪ್ರಾಮುಖ್ಯತೆ ಹೋಗುತ್ತದೆ. ಸೂಖೆ ಜೀವದಿಂದ ಝೋಯೆ ಜೀವಕ್ಕೆ ಪರಿವರ್ತನೆಯೂ ಇದೇ ರೀತಿಯಾಗಿದೆ .

ಹೊಸದಾಗಿ ಹುಟ್ಟಿದ ಮಗು ಝೋಯೆ ಜೀವದಲ್ಲಿ ಕಾರ್ಯಮಾಡಿದಾಗ, ಆ ವ್ಯಕ್ತಿಯ ಜೀವವು ಕೆಳಗಿನ ರಕ್ತಜೀವದಿಂದ ಮೇಲಿನ ಆತ್ಮ ಜೀವಕ್ಕೆ ಬದಲಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. ನಾವು 15 ವ್ಯಾಟ್ ಬಲ್ಬ್ ಬಳಸುತ್ತಿದ್ದಾಗ ತಕ್ಷಣವೇ ಸೂರ್ಯ ಉದಯಿಸಿದರೆ 15 ವ್ಯಾಟ್ ಬಲ್ಬ್ ನ ಪ್ರಕಾಶವು ಅದರ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ. ಸೂಖೆ ಜೀವದಿಂದ ಝೋಯೆ ಜೀವಕ್ಕೆ ಪರಿವರ್ತನೆಯೂ ಇದೇ ರೀತಿಯಾಗಿದೆ.

ನನ್ನ ಜೀವನದಲ್ಲಿ, ಉದ್ದೇಶಪೂರ್ವಕವಾಗಿ ಯಾವುದೇ ವಿಷವನ್ನು ಕುಡಿಯಲು ನಾನು ಪ್ರಯತ್ನಿಸಿಲ್ಲ. ಆದರೆ ತಿಳಿಯದೇ ಹಳೆಯ ತುಕ್ಕುಹಿಡಿದ ವಸ್ತುಗಳನ್ನು ಹಾಕಿದ್ದ ನೀರನ್ನು ಒಮ್ಮೆ ನಾನು ಕುಡಿದಿದ್ದೇನೆ. ಹಡಗಿನ ಮೂಲಕ ಬಂದ ಕೆಲವು ಯಂತ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ಶಾರ್ಜಾ ಮುಕ್ತವಲಯಕ್ಕೆ ನಾನು ಭೇಟಿ ನೀಡಿದ ಸಂದರ್ಭದಲ್ಲಿ ಇದು ಸಂಭವಿಸಿತು. ನಾನು ಅಲ್ಲಿಗೆ ಹೋಗುವಾಗ ಕುಡಿಯಲು ನೀರನ್ನು ತೆಗೆದುಕೊಳ್ಳಲಿಲ್ಲ. ಮಧ್ಯಾಹ್ನದಿಂದ ಸಂಜೆ ಸುಮಾರು ಏಳರವರೆಗೆ ನಾನು ಆಹಾರ ಮತ್ತು ನೀರಿಲ್ಲದೇ ಇದ್ದೆ. ಈ ಸಮಯದಲ್ಲಿ, ನಾನು ಒಂದು ಬಾಟಲಿ ನೀರನ್ನು ನೋಡಿದೆ ಮತ್ತು ಅದರೊಳಗಿನ ಹಾನಿಕಾರಕ ಅಂಶಗಳನ್ನು ತಿಳಿಯದೇ ನಾನು ಅದನ್ನು ಸೇವಿಸಿದೆ. ಆದರೆ ದೇವರ ಕೃಪೆಯಿಂದ ನನಗೆ ಹಾನಿಯುಂಟಾಗಲಿಲ್ಲ. ಒಬ್ಬ ಲೇಖಕನಾಗಿ ನನ್ನ ಜೀವನದಲ್ಲಿ ಮುಂದುವರೆಯುತ್ತಿರುವ ಪರಿಶುದ್ಧಾತ್ಮನ ಕಾರ್ಯದಲ್ಲಿ ನನ್ನ ಜೀವನದ ಅನುಭವವನ್ನು

ನಾನು ಪ್ರಸ್ತಾಪಿಸಿದೆ. ಆದರೆ ದೇವರನ್ನು ಪರೀಕ್ಷಿಸಲು ಯಾವುದೇ ವಿಷವನ್ನು ಕುಡಿಯಲು ಅಥವಾ ಹಾವುಗಳನ್ನು ನಿರ್ವಹಿಸಲು ಉದ್ದೇಶಪೂರ್ವಕವಾಗಿ ಎಂದಿಗೂ ಪ್ರಯತ್ನಿಸಲಿಲ್ಲ. ನನ್ನ ದಾರಿಗೆ ಅಡ್ಡಬಂದದ್ದನ್ನು, ದೇವರ ಜೀವ 'ಝೋಯೆ'ಯಾಗಿ ನನ್ನಲ್ಲಿ ವಾಸವಿರುವ ಆತನ ಪರಿಶುದ್ಧಾತ್ಮನಿಂದ, ದೇವರು ನನಗೆ ಜಯವನ್ನು ನೀಡಿದ್ದಾನೆ. ಆದುದರಿಂದ ಎಲ್ಲಾ ಓದುಗರಿಗೆ, ದೇವರನ್ನು ಪರೀಕ್ಷಿಸಬೇಡಿ, ಬದಲಿಗೆ ಕ್ರಿಸ್ತನು ನಮಗೆ ನೀಡಿರುವ ನೂತನ ಸೃಷ್ಟಿಯಲ್ಲಿ ನಂಬಿಕೆಯಿಡಿರಿ ಮತ್ತು ಪರಿಶುದ್ಧಾತ್ಮನ ಕಾರ್ಯದಿಂದ 'ದೇವಪುತ್ರರಾಗಿ' ಪ್ರಕಟಹೊಂದಿ ಎಂದು ಸೂಚಿಸುತ್ತೇನೆ. ಹಾಗಾದರೆ ನಾವು ಭೂಮಿಯ ರಾಜ್ಯದ ಅಸಾಮಾನ್ಯ ವ್ಯಕ್ತಿಯಾಗುತ್ತೇವೆ.

## ಐ) ದೇವರ ಜೀವ ಮನುಷ್ಯನ ಜೀವವನ್ನು ನುಂಗುವುದು (ಝೋಯೆ ಸೂಖೆಯನ್ನು ನುಂಗುವುದು)

ಎಲ್ಲಾ ರೀತಿಗಳಲ್ಲಿಯೂ ನಾವು ಝೋಯೆಯೊಂದಿಗೆ ಮುಂದೆಹೋದಾಗ, ಸೂಖೆಯ ನಿಯಮಗಳು ಅಥವಾ ಲೋಕದ ನಿಯಮಗಳು ನಮಗೆ ಶರಣಾಗುತ್ತವೆ. ಝೋಯೆ ಸೂಖೆಯನ್ನು ಪೂರ್ಣವಾಗಿ ಜಯಿಸುವ ಮತ್ತು ದೇವಪುತ್ರರ ಪ್ರಕಟಣೆ ಸಂಪೂರ್ಣವಾಗಿ ಸಂಭವಿಸುವ ಸ್ಥಿತಿ ಇದಾಗಿದೆ. ಆ ಸ್ಥಿತಿಯಲ್ಲಿ ಒಬ್ಬ ದೇವರ ಮಗುವು ಇನ್ನು ಮುಂದೆ ತನ್ನದೇ ಸ್ವಾರ್ಥದಿಂದ ಅಥವಾ ತನ್ನದೇ ಇಷ್ಟಗಳಿಂದ ಮುನ್ನಡೆಸಲ್ಪಡುವದಿಲ್ಲ ಬದಲಿಗೆ ದೇವರ ಆತ್ಮದಿಂದ ನಡೆಸಲ್ಪಡುತ್ತಾರೆ. ದೇವರ ವಾಕ್ಯವು ಹೇಳುತ್ತದೆ, ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು. (ರೋಮಾ 8:14) ಹೀಗೆ ಯೇಸು ಕ್ರಿಸ್ತನು ಮನುಷ್ಯನ ಮೂಲಕ ಲೋಕದಲ್ಲಿ ಪ್ರಕಟಗೊಳ್ಳುತ್ತಾನೆ.

ರೋಮಾ 8:19ರಲ್ಲಿ ಉಲ್ಲೇಖಿಸಿರುವಂತೆ ಎಲ್ಲಾ ಸೃಷ್ಟಿಯು ದೇವಪುತ್ರರ ಪ್ರತ್ಯಕ್ಷತೆಗಾಗಿ ಕಾಯುತ್ತಿದೆ. ಯಾರು ದೇವರ ಮಕ್ಕಳು? ಯಾರು ದೇವರ ಪುತ್ರರೆಂದು ಕರೆಯಲ್ಪಡುತ್ತಾರೆ?

**"ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು." (ರೋಮಾ 8:14)**

ಝೋಯೆ – ದೇವರ ಜೀವ


ಸೂಖೆ ನಾಶವಾದಾಗ, ನಮ್ಮ ಬಯಕೆಗಳು ನಾಶವಾಗುತ್ತವೆ. ಇನ್ನು ಮುಂದೆ ನಾವು ನಮ್ಮ ಸ್ವಾರ್ಥ ಉದ್ದೇಶ ಮತ್ತು ಬಯಕೆಗಳಿಂದ ನಡೆಸಲ್ಪಡುವದಿಲ್ಲ ಬದಲಿಗೆ ದೇವರಾತ್ಮನಿಂದ ನಡೆಸಲ್ಪಡುತ್ತೇವೆ.

1ಪೇತ್ರ 4:1-2 ರಲ್ಲಿ ಹೇಳುತ್ತದೆ,

**"ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವೂ ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ**

**ತಪ್ಪಿಸಿಕೊಂಡವನಾಗಿ ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನಮಾಡುವನು."**

ಝೋಯೆ ಸೂಖೆಯನ್ನು ಸಂಪೂರ್ಣವಾಗಿ ಜಯಿಸುವ ಪರಿಸ್ಥಿತಿಯಲ್ಲಿ, ದೇವರ ಪುತ್ರರ ಪ್ರತ್ಯಕ್ಷತೆ ಸಂಪೂರ್ಣವಾಗಿ ಆಗುತ್ತದೆ.




*ಮನುಷ್ಯನು ತನ್ನನ್ನು ತಾನು ನಿರಾಕರಿಸುತ್ತಾನೆ ಮತ್ತು ದೇವರಾತ್ಮನಲ್ಲಿ ನಡೆಯುತ್ತಾನೆ*

**(ಚಿತ್ರ–28)**


ಮೇಲಿನ ವಿವರಣೆಯಿಂದ ಆತ್ಮ ದೇಹವನ್ನು ನೇರವಾಗಿ ನಿಯಂತ್ರಿಸುವ ಪರಿಸ್ಥಿತಿಯನ್ನು ಈಗ ತಲುಪಿದ್ದೇವೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ಇದನ್ನೇ ದೇವರು ನಮ್ಮಿಂದ ಬಯಸುವಂಥದು. ದೇವರ ಮಕ್ಕಳಾಗಿ, ನಮ್ಮಲ್ಲಿ ಅನೇಕರು ದೇವರ ರಾಜ್ಯದ ಕುರಿತು ಅವಶ್ಯವಿರುವ ವಾಕ್ಯವನ್ನು ನಿರ್ಲಕ್ಷಿಸುತ್ತೇವೆ, ಹಾಗಾಗಿ ಕೆಲವರು ಮಾತ್ರ ಆತ್ಮೀಕ ಬೆಳವಣಿಗೆಯನ್ನು ಹೊಂದುತ್ತೇವೆ. ಅವರು ಮನುಷ್ಯನ ಬಯಕೆಯ ಪ್ರಕಾರ ಜೀವಿಸುವದಿಲ್ಲ ಆದರೆ ದೇವರ ಬಯಕೆಯ ಪ್ರಕಾರ ಜೀವಿಸುತ್ತಾರೆ. ದೇವರ ವಾಕ್ಯದ ಪ್ರಕಾರ ಬಾಧೆಪಡುವ ಭಾವನೆಯು ಮನುಷ್ಯನ ಬಯಕೆಯನ್ನು ಕೊಲ್ಲುತ್ತದೆ.

ನಾವು ಬಾಧೆಪಡುವ ಭಾವದ ಆಯುಧವನ್ನು ಧರಿಸಿ ಮುಂದುವರೆದಾಗ, ಬಿದ್ದುಹೋದ ಮನುಷ್ಯನ ಹೋಲಿಕೆಯನ್ನು ನಮ್ಮಿಂದ ತೆಗೆಯಲಾಗುತ್ತದೆ, ಅದನ್ನು ದೇವರ ಹೋಲಿಕೆಯಿಂದ ಬದಲಾಯಿಸಲಾಗುತ್ತದೆ.

ನಾವು ಬಾಧೆಪಡುವ ಭಾವದ ಆಯುಧವನ್ನು ಧರಿಸಿ ಮುಂದುವರೆದಾಗ, ಮನುಷ್ಯನ ಬಯಕೆಗಳು ನಮ್ಮಿಂದ ತೆಗೆದುಹಾಕಲ್ಪಡುತ್ತವೆ ಮತ್ತು

ದೇವರ ಬಯಕೆಗಳು ನೆರವೇರುತ್ತವೆ.

ದೇವರ ವಾಕ್ಯಕ್ಕೆ ವಿಧೇಯವಾಗುವ ಮನೋಭಾವವನ್ನು ಕಳೆದುಕೊಳ್ಳದೆ, ನಾವು ಕಷ್ಟದ ಮೂಲಕ ಹೋದಾಗ ದೇವರ ಸ್ವಂತ ಸ್ವಾರೂಪ್ಯದಲ್ಲಿರುವ ನೂತನ ಸೃಷ್ಟಿ, ವಾಸ್ತವವಾಗಿ ನಮ್ಮ ಸ್ವಂತ ಬಯಕೆಗಳಿಂದ ತುಂಬಿರುವ ಪ್ರಾಣವನ್ನು (ಸೂಖೆ) ತುಂಬುತ್ತದೆ. ನಂತರ ನಮ್ಮ ಸೂಖೆ ನಾಶವಾಗುತ್ತದೆ ಮತ್ತು ದೇವರ ಚಿತ್ತವನ್ನು ಮಾಡುತ್ತಾ, ಆತ್ಮೀಕವಾಗಿ ಒಂದು ಹೆಜ್ಜೆ ಮುಂದಕ್ಕೆ ನಾವು ಬೆಳೆಯುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತ್ಮವು ಪ್ರಾಣವನ್ನು ನುಂಗುತ್ತದೆ. ದೇವರ ಭಾವಗಳು ಮನುಷ್ಯನ ಭಾವಗಳನ್ನು ನುಂಗುತ್ತದೆ. ಮನುಷ್ಯನು ಅವನ ಮನಸ್ಸನ್ನು ನವೀಕರಿಸುತ್ತಾನೆ ಮತ್ತು ದೇವರ ಸ್ವಾರೂಪ್ಯವಾಗುತ್ತಾನೆ.




*ಆತ್ಮವು ಪ್ರಾಣವನ್ನು ಭೌತಿಕ ಮರಣದಲ್ಲಿ ನುಂಗುತ್ತದೆ*

**ಚಿತ್ರ–29**

ಆತ್ಮವು ನಮ್ಮ ನೂತನ ಮನಸ್ಸಿನ ಮೂಲಕ ಶರೀರವನ್ನು ನೇರವಾಗಿ ನಿಯಂತ್ರಿಸುವ ಪರಿಸ್ಥಿತಿಯನ್ನು ಈಗ ನಾವು ತಲುಪುತ್ತೇವೆ. ಇದನ್ನೇ ದೇವರು ನಮ್ಮಿಂದ ಬಯಸುವಂಥದು. ಇದು ಹಲವರಲ್ಲಿ ಹೇಗೆ ಪರಿಶುದ್ಧಾತ್ಮನ ಕಾರ್ಯಕ್ಕೆ ಒಪ್ಪಿಸಿಕೊಡುತ್ತಾರೆ ಎನ್ನುವ ಆಧಾರದ ಮೇಲೆ ವ್ಯತ್ಯಾಸಕರವಾಗಿರುತ್ತದೆ. ಆದರೆ ಆತ್ಮ (ಝೋಯೆ ಜೀವ) ಭೂಮಿಯ ಮೇಲೆ ನಮ್ಮ ಭೌತಿಕ ಮರಣದ ಸಮಯದಂದು ಮಾತ್ರವೇ ಪ್ರಾಣವನ್ನು (ಸೂಖೆ ಜೀವ) ಸಂಪೂರ್ಣವಾಗಿ ನುಂಗುತ್ತದೆ. ನಂತರದಲ್ಲಿ ದೇಹದ ಪುನರುತ್ಥಾನದ ಸಮಯದಲ್ಲಿ, ಝೋಯೆ ಜೀವ ಶರೀರವನ್ನೂ ಸಹ ನುಂಗುತ್ತದೆ.

ಆತ್ಮ **(ಝೋೕಯೆ ಜೀವ)** ಭೂಮಿಯ ಮೇಲೆ ನಮ್ಮ ಭೌತಿಕ ಮರಣದ ಸಮಯದಂದು ಮಾತ್ರವೇ ಪ್ರಾಣವನ್ನು **(ಸೂಖೆ ಜೀವ)** ಸಂಪೂರ್ಣವಾಗಿ ನುಂಗುತ್ತದೆ.

**"ಈ ಗುಡಾರದಲ್ಲಿರುವವರಾದ ನಾವು ಭಾರಹೊತ್ತುಕೊಂಡವರಾಗಿ ನರಳುತ್ತೇವೆ; ಇದು ಕಳಚಿಹೋಗಬೇಕೆಂಬದು ನಮ್ಮ ಇಷ್ಟವಲ್ಲ; ಮರ್ತ್ಯವಾದದ್ದು ನುಂಗಿಹೋಗಿ ಜೀವವೊಂದೇ ಉಳಿಯುವಂತೆ ಈ ಗುಡಾರದ ಮೇಲೆ ಆ ನಿವಾಸವನ್ನು ಧರಿಸಿಕೊಳ್ಳಬೇಕೆಂಬದೇ ನಮ್ಮ ಇಷ್ಟ." (2 ಕೊರಿ 5:4)**

ಅಂದರೆ ನಮ್ಮ ಭೌತಿಕ ಸಾವಿನೊಂದಿಗೆ, ಝೋೕಯೆ (ದೇವರ ಜೀವ) ಸೂಖೆಯನ್ನು (ಮನುಷ್ಯನ ಜೀವ) ನುಂಗುತ್ತದೆ. (ಮತ್ತಾ 16:25, 27:52) ಪುನರುತ್ಥಾನದಲ್ಲಿ, ಝೋೕಯೆ ಜೀವವು ಶರೀರವನ್ನೂ ಸಹ ನುಂಗುತ್ತದೆ. (2 ಕೊರಿ 5:4, 1ಕೊರಿ 15:51-53, 1ಥೆಸ 4:16)

1000 ವರ್ಷಗಳ ಆಳ್ವಿಕೆಯ ಸಮಯದಲ್ಲಿ ಹೀಗಾಗುತ್ತದೆ. ನಾಶವಾಗುವ ಈ ನಮ್ಮ ಶರೀರವು ಮಹಿಮೀಕರಿಸಲ್ಪಡುತ್ತದೆ ಮತ್ತು ನಮ್ಮ ನೂತನ ಶರೀರದೊಂದಿಗೆ (ಆತ್ಮೀಕ ಶರೀರ) ನಾವು ಆತ್ಮದಿಂದ ನಿಯಂತ್ರಿಸಲ್ಪಡುತ್ತೇವೆ. ಈಗಿನಿಂದ ನಾವು ಆತ್ಮದಿಂದ ನಿಯಂತ್ರಿಸಲ್ಪಡುತ್ತಿದ್ದರೆ ನಂತರ ನಮ್ಮ ಆಯ್ಕೆ ಖಚಿತ.

**"ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು." (ರೋಮಾ 8:14)**

**"ನೀjವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ." (ರೋಮಾ 8:13)**

## ಒ) ಗುಡಾರ – ಮಾನವ ರಚನೆ

ಗುಡಾರದಲ್ಲೂ ಅದನ್ನೇ ಕಾಣಬಹುದು. ಆತ್ಮ ಪ್ರಾಣವನ್ನು ನುಂಗಿದಾಗ, ಪ್ರಾಣ ಆತ್ಮದ ರೂಪವನ್ನು ತೆಗೆದುಕೊಳ್ಳುತ್ತದೆ. ಹಳೆಯ ನಿಯಮಗಳು ನೆರಳಾಗಿವೆ ಮತ್ತು ನೂತನ ನಿಯಮಗಳು ವಾಸ್ತವವಾಗಿವೆ. ನಾವು ಗುಡಾರವನ್ನು ಪರಿಗಣಿಸಿದಾಗ ಮೂರು ಭಾಗಗಳಿವೆ ಎಂದು ನೋಡುತ್ತೇವೆ:


ಅಂಗಳ, ಪರಿಶುದ್ಧ ಸ್ಥಳ ಮತ್ತು ಮಹಾಪರಿಶುದ್ಧ ಸ್ಥಳ.

ಅಂಗಳದಲ್ಲಿ – ಯಜ್ಞವೇದಿ, ಕಂಚಿನ ಗಂಗಾಳ (ಬೋಗುಣಿ).

ಪರಿಶುದ್ಧ ಸ್ಥಳದಲ್ಲಿ – ದೀಪ, ನೈವೇದ್ಯ ರೊಟ್ಟಿಯ ಮೇಜು, ನೈವೇದ್ಯ ರೊಟ್ಟಿ.

ಮಹಾಪರಿಶುದ್ಧ ಸ್ಥಳದಲ್ಲಿ – ಚಿನ್ನದ ಧೂಪವೇದಿ, ಕೆರೂಬಿಯರು, ಒಡಂಬಡಿಕೆಯ ಮಂಜೂಷ.

ಒಂದು ಗಾಢ ತೆರೆಯು (ಪರದೆ) ಮಹಾಪರಿಶುದ್ಧ ಸ್ಥಳ ಮತ್ತು ಪರಿಶುದ್ಧ ಸ್ಥಳವನ್ನು ಬೇರ್ಪಡಿಸಿದೆ. ಗುಡಾರವೂ ಮೂರು ಭಾಗಗಳನ್ನು ಹೊಂದಿರುವಂತೆ, ಮನುಷ್ಯನ ರಚನೆಯೂ ಸಹ ಮೂರು ಭಾಗಗಳನ್ನು ಒಳಗೊಂಡಿದೆ. "ಅಂಗಳ" ಮನುಷ್ಯನ "ಶರೀರವನ್ನು" ಸಂಕೇತಿಸುತ್ತದೆ, "ಪರಿಶುದ್ಧ ಸ್ಥಳ" "ಪ್ರಾಣವನ್ನು" ಸಂಕೇತಿಸುತ್ತದೆ ಮತ್ತು "ಮಹಾಪರಿಶುದ್ಧ ಸ್ಥಳ" "ಮನುಷ್ಯನ" "ಆತ್ಮವನ್ನು" ತೋರಿಸುತ್ತದೆ.




**ಚಿತ್ರ – 30**


"ಪರಿಶುದ್ಧ ಸ್ಥಳ" ಮತ್ತು "ಮಹಾಪರಿಶುದ್ಧ ಸ್ಥಳ"ದ ಮಧ್ಯೆ ಒಂದು ತೆರೆಯಿದೆ. ದೇವರು "ಮಹಾಪರಿಶುದ್ಧ ಸ್ಥಳದಲ್ಲಿ" ವಾಸಿಸುತ್ತಾನೆ. ಮನುಷ್ಯನು ಅಂಗಳಕ್ಕೆ ಬರಲು ಮಾತ್ರ ಸಾಧ್ಯ. ಆದರೆ ಯಾಜಕ ಪರಿಶುದ್ಧ ಸ್ಥಳಕ್ಕೆ ಬರಬಹುದು ಮತ್ತು ಪ್ರಧಾನ ಮಹಾಯಾಜಕ ಮಾತ್ರ ವರ್ಷಕ್ಕೆ ಒಮ್ಮೆ ಅವನ ಕಾಲಿಗೆ ಸರಪಳಿಯನ್ನು ಕಟ್ಟಿಕೊಂಡು ಮಹಾಪರಿಶುದ್ಧ ಸ್ಥಳವನ್ನು ಪ್ರವೇಶಿಸಬಹುದು.

ಈ ಪರಿಶುದ್ಧಾತ್ಮನ ಕಾರ್ಯದಲ್ಲಿ, ಯೇಸು ಕ್ರಿಸ್ತನು ತನ್ನ ಸೂಖೆಯನ್ನು (ಜೀವ) ನಮಗಾಗಿ ಕಲ್ವಾರಿಯಲ್ಲಿ ಕೊಟ್ಟನು. ಯೇಸುವಿನ ಸೂಖೆ ನಾಶವಾಯಿತು, ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ ಮಗನು ತನ್ನ ತಂದೆಯ ಕಾರ್ಯಕ್ಕಾಗಿ, ತನ್ನ ಸೂಖೆಯನ್ನು ನಾಶಮಾಡಲು ತನ್ನನ್ನೇ ಕೊಟ್ಟನು.

**"ಆಗ ಇಗೋ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು; ಭೂಮಿಯು ಅದರಿತು; ಬಂಡೆಗಳು ಸೀಳಿಹೋದವು; ಸಮಾಧಿಗಳು ತೆರೆದವು;**

**ನಿದ್ರೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು." (ಮತ್ತಾ 27:51-52)**

ನಮ್ಮ ಸೂಖೆ ನಾಶವಾದಾಗ, ನಮ್ಮ ಪ್ರಾಣ ಮತ್ತು ಆತ್ಮದ ನಡುವಿನ ಗೋಡೆ ಉರುಳಿಹೋಗುತ್ತದೆ. ಯೇಸುವಿನ ಸೂಖೆ ನಾಶವಾದಾಗ, ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು. ಇನ್ನು ಪರಿಶುದ್ಧ ಸ್ಥಳವಿಲ್ಲ. ಪರಿಶುದ್ಧ ಸ್ಥಳ ಮಹಾಪರಿಶುದ್ಧ ಸ್ಥಳದೊಂದಿಗೆ ಬೆರೆಯಿತು ಮತ್ತು ಎರಡೂ ಮಹಾಪರಿಶುದ್ಧ ಸ್ಥಳವಾದವು **(ಚಿತ್ರ 31) .**




**ಚಿತ್ರ – 31**

ಯೇಸುವಿನ ಪ್ರಾಣ ಆತ್ಮದೊಂದಿಗೆ ಬೆರೆಯಿತು ಮತ್ತು ಆತನ ಪುನರುತ್ಥಾನ ಸಮಯದಲ್ಲಿ, ಅವನ ದೇಹ ಆತ್ಮದೊಂದಿಗೆ ಒಂದಾಯಿತು. ಆತನ ಸತ್ತ ಶರೀರ ಆತ್ಮ ನಿಯಂತ್ರಿತ ಮಹಿಮೀಕೃತ ದೇಹಕ್ಕೆ ಬದಲಾಯಿತು ಮತ್ತು ಪುನರುತ್ಥಾನವಾಯಿತು. ಆತ್ಮದಿಂದ ನಿಯಂತ್ರಿಸಲ್ಪಡುವ ಈ ದೇಹ ಅದರ ಇಷ್ಟದ ಹಾಗೆ ಎಲ್ಲಿಬೇಕಾದರೂ ಕಾಣಿಸಬಹುದು ಮತ್ತು ಲೌಕಿಕ ನಿಯಮಗಳಿಗೆ ಇನ್ನು ಒಳಪಟ್ಟಿಲ್ಲ. ಯೇಸು ಒಂದು ಮುಚ್ಚಿದ ಕೋಣೆಯಲ್ಲಿ ಶಿಷ್ಯರಿಗೆ ಕಾಣಿಸಿಕೊಂಡಾಗ ಅದನ್ನೇ ನೋಡಬಹುದು. (ಯೋಹಾನ 20:26 ಮಾರ್ಕ 16:9, 16:14)

> ನಮ್ಮ "ಸ್ವಯಂ"ನ ನಾಶನದ ಆಧಾರದ ಮೇಲೆ, ನಮ್ಮ ನೂತನ ಮನಸ್ಸಿನ ಮೂಲಕ ಆತ್ಮ (ಝೋಯೆ) ದೇಹವನ್ನು ನಿಯಂತ್ರಿಸಲು ಪ್ರಾರಂಭಿಸುತ್ತದೆ.

ಯೇಸುವಿನ ಸಾವಿನ ಸಮಯದಲ್ಲಿ, ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು ಮತ್ತು ಮಹಾಪರಿಶುದ್ಧ ಸ್ಥಳ, ಪರಿಶುದ್ಧ ಸ್ಥಳವನ್ನು ನುಂಗಿತು.

ನಾವು ಈ ಲೋಕದಲ್ಲಿ ಕೆಲವು ದಿನಗಳ ವರೆಗೆ ಮಾತ್ರ ಇದ್ದೇವೆ. ಈ ಸಮಯದಲ್ಲಿ ನಾವು ನಮ್ಮನ್ನು ಕ್ರಿಸ್ತನ ಕಾರ್ಯಕ್ಕೆ ಒಪ್ಪಿಸಿಕೊಟ್ಟರೆ, ಸೂಖೆ ನಾಶವಾಗುವಂತಹ ಪರಿಸ್ಥಿತಿಗೆ ನಾವು ತಲುಪುತ್ತೇವೆ. ನಮ್ಮ "ಸ್ವಯಂ"ನ ನಾಶನದ ಆಧಾರದ ಮೇಲೆ, ನಮ್ಮ ನೂತನ ಮನಸ್ಸಿನ ಮೂಲಕ ಆತ್ಮ (ಝೋಯೆ) ದೇಹವನ್ನು ನಿಯಂತ್ರಿಸಲು ಪ್ರಾರಂಭಿಸುತ್ತದೆ. ಅವುಗಳ ನಡುವಿನ ಅಡತಡೆಯು (ಆತ್ಮ & ದೇಹ) ಕಡಿಮೆಯಾಗುತ್ತದೆ. ಮೊದಲು ನಾನು ಪ್ರಸಂಗಿಸುತ್ತಿದ್ದಾಗ, ನನ್ನೊಳಗಿದ್ದ ಶಾರೀರಿಕ ಭಾವಗಳ ಕಾರಣದಿಂದ, ದೇವರಾತ್ಮನು ಪ್ರಾಣಕ್ಕೆ ನೀಡಿದ ಆಲೋಚನೆಗಳು ತಡೆಯಲ್ಪಡುತ್ತಿದ್ದವು, ನನ್ನ "ಸ್ವಯಂ"ನ (ಸೂಖೆ) ಬಯಕೆಗಳು ನಾಶವಾಗಿರಲಿಲ್ಲ. ಆದರೆ ನಾನು ದೇವರ ಕಾರ್ಯದ ಮೂಲಕ ನಡೆಯಲು ಪ್ರಾರಂಭಿಸಿದಾಗ ತಡೆಗಳು ಕಡಿಮೆಯಾದವು. ಈಗ ಪರಿಶುದ್ಧಾತ್ಮನು ನನ್ನ ಆತ್ಮದಲ್ಲಿ ನಿಲ್ಲುತ್ತಾನೆ ಮತ್ತು ನನ್ನ ನೂತನ ಮನಸ್ಸಿನ ಮೂಲಕ ನನ್ನ ದೇಹವನ್ನು ನಿಯಂತ್ರಿಸುತ್ತಿದ್ದಾನೆ. ನಾನು ತಡೆಗಳು ಇಲ್ಲ ಎಂದು ಹೇಳುತ್ತಿಲ್ಲ. ಈಗಲೂ ಇವೆ, ಆದರೆ ಕ್ರಿಸ್ತನು ತನ್ನ ಕಾರ್ಯದ ಮೂಲಕ ಅವುಗಳನ್ನು ಕಡಿಮೆಮಾಡುತ್ತಿದ್ದಾನೆ. ದೇವರು ಈ ಕಾರ್ಯದ ಮೂಲಕ ನಮ್ಮೆಲ್ಲರನ್ನೂ ಬದಲಾಯಿಸಲಿ ಮತ್ತು ದೇವರ ರಾಜ್ಯಕ್ಕೆ ಉಪಯುಕ್ತವಾಗುವಂತೆ ನಮ್ಮನ್ನು ಮಾಡಲಿ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಆತ್ಮೀಕ ಬೆಳವಣಿಗೆಯ ಆಳವಾದ ಅಧ್ಯಯನವನ್ನು ನನಗೆ ನೀಡಿದ್ದಕ್ಕಾಗಿ ವಂದನೆಗಳು. ಕರ್ತನೇ ನನ್ನ ಸೂಖೆಯನ್ನು ನಿರಾಕರಿಸಲು ನನಗೆ ಸಹಾಯ ಮಾಡು, ಇದರಿಂದ ನನ್ನೊಳಗೆ ಸೃಷ್ಟಿಸಲಾದ ನೂತನ ಮನುಷ್ಯನು ಸಂಪೂರ್ಣವಾಗಿ ಪ್ರಕಟವಾಗುತ್ತಾನೆ. ಕರ್ತನೇ ನನ್ನ ಸ್ವಂತ ಬಯಕೆಗಳು ತೆಗೆದು ಹಾಕಲ್ಪಡಲಿ ಹಾಗೂ ಬಾಧೆಪಡುವ ಭಾವದೊಂದಿಗೆ ಮುಂದೆನಡೆಯುವ ಆಯುಧವನ್ನು ನಾನು ಧರಿಸಿದಂತೆ ನಿಮ್ಮ ಬಯಕೆ ನನ್ನ ಮೂಲಕ ನಡೆಯಲಿ. ನನ್ನ ಆತ್ಮ, ಪ್ರಾಣ ಮತ್ತು ಶರೀರವನ್ನು ನಿಮ್ಮ ಕಾರ್ಯದ ಮುಂದೆ ನಾನು ಒಪ್ಪಿಸುತ್ತೇನೆ.. ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ನಮ್ಮ ಜೀವನದಲ್ಲಿ ಲೋಕದ ಮತ್ತು ದೇವರ ರಾಜ್ಯದ ಪರಿಣಾಮವು, ನಮ್ಮ ಸ್ವಂತ ಆಲೋಚನೆಗಳ ಮೇಲೆ ಆಧರಿಸಿದೆ. ನಮ್ಮ ಆಲೋಚನೆಗಳಲ್ಲಿ ನಾವು ನಿಂತಿರುವ ರಾಜ್ಯದ ಪ್ರಕಾರ, ಆ ರಾಜ್ಯದ ನಿಯಮಗಳು ನಮ್ಮನ್ನು ಆಳುತ್ತವೆ.
2. ನಾವು ಅಂತರಿಕದಿಂದ ಬಾಹೀರಿಕಕ್ಕೆ ಜೀವಿಸುತ್ತಿದ್ದರೆ (ವಾಕ್ಯದ ಮೂಲಕ ಕಾಣದ ಲೋಕವನ್ನು ನೋಡುತ್ತಾ, ಕಾಣುವ ಲೋಕದಲ್ಲಿ ಜೀವಿಸುವದು), ದೇವರ ರಾಜ್ಯದಿಂದ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. ನಾವು ಬಾಹೀರಿಕದಿಂದ ಅಂತರಿಕಕ್ಕೆ ಜೀವಿಸುತ್ತಿದ್ದರೆ (ಕೇವಲ ಭೌತಿಕ ಲೋಕವನ್ನು ನೋಡಿ ಜೀವಿಸುವದು) ಲೋಕದ ರಾಜ್ಯದಲ್ಲಿ ಮಾತ್ರ ಜೀವಿಸುತ್ತಿದ್ದೇವೆ.

3. ನಾವು ನಮ್ಮ ಸ್ವಯಂ (ಸೂಖೆ) ಅನ್ನು ನಿರಾಕರಿಸುವ ಅದೇ ಮಟ್ಟಕ್ಕೆ ನೂತನವಾಗಿ ಸೃಷ್ಟಿಸಲ್ಪಟ್ಟ ದೇವರ ಮಗನ ಜೀವವು ಪ್ರಕಟವಾಗುತ್ತದೆ.
4. ಯೇಸು ಕ್ರಿಸ್ತನು ನಮಗೆ ನೀಡಿರುವ ನೂತನ ಸೃಷ್ಟಿಯಲ್ಲಿ ನಂಬುವವರು 1 ಯೋಹಾನ 5:4 ರ ಪ್ರಕಾರ ಈ ಲೋಕದ ನಿಯಮವನ್ನು ಜಯಿಸಿ ಜೀವಿಸಲು ಸಾಧ್ಯವಾಗುತ್ತದೆ.
5. ನಾವು ದೇವರಿಗೆ ವಿಧೇಯರಾದರೆ ದೇವರಿಂದ ಆದಾಮನ ಕೆಳಗೆ ಉಂಟಾದ ಸೃಷ್ಟಿಗಳು ನಮಗೆ ವಿಧೇಯವಾಗುತ್ತವೆ.
6. ನಾವು ಸೂಖೆ ಸ್ವಭಾವವನ್ನು ತೊರೆದು (ಬಿದ್ದುಹೋದ ಆದಾಮನ ಸ್ವಭಾವದಿಂದ ತಿರುಗುವುದು) ದೇವರ ಝೋೀಯೆ ಸ್ವಭಾವಕ್ಕೆ ಪ್ರವೇಶಿಸುವ ಸಮಯದಲ್ಲಿ, ಎಲ್ಲಾ ಸೃಷ್ಟಿಗಳು ಸಂತೋಷಗೊಳ್ಳುತ್ತವೆ ಮತ್ತು ನಾವು ಈ ಲೋಕದ ನಿಯಮಗಳನ್ನು ಜಯಿಸಲು ಮತ್ತು ದೇವರ ರಾಜ್ಯದ ನಿಯಮಗಳಿಗೆ ಪ್ರವೇಶಿಸಲು ಸಾಧ್ಯವಾಗುತ್ತದೆ.
7. ನೂತನ ಸೃಷ್ಟಿಯಲ್ಲಿ ನಂಬುವ ವ್ಯಕ್ತಿಯ ಮೂಲಕ ಅಸಾಮಾನ್ಯ ಪ್ರಕಟಿಸುವಿಕೆಗಳು ಉಂಟಾಗುತ್ತವೆ.
8. ನಾವು ಬಾಧೆಪಡುವ ಭಾವದ ಆಯುಧವನ್ನು ಧರಿಸಿದಾಗ ಮತ್ತು ಅದರಲ್ಲಿ ಮುಂದುವರೆದಾಗ ಮನುಷ್ಯನ ಬಯಕೆಗಳು ನಮ್ಮಿಂದ ತೆಗೆದುಹಾಕಲ್ಪಡುತ್ತವೆ ಮತ್ತು ದೇವರ ಬಯಕೆಗಳು ನೆರವೇರುತ್ತವೆ.
9. ಸೂಖೆ ನಾಶವಾಗುವ ಅದೇ ಮಟ್ಟಕ್ಕೆ, ಆತ್ಮ (ಝೋೀಯೆ) ನೂತನ ಮನಸ್ಸಿನ ಮೂಲಕ ದೇಹವನ್ನು ನಿಯಂತ್ರಿಸಲು ಪ್ರಾರಂಭಿಸುತ್ತದೆ.
10. ಪರಿಶುದ್ಧಾತ್ಮನಿಂದ ನಡೆಯುವವರ ಭೌತಿಕ ಮರಣದ ಸಮಯದಲ್ಲಿ, ಅವರ ಆತ್ಮೀಕ ಜೀವ (ಝೋೀಯೆ) ಅವರದೇ ಪ್ರಾಣೀಯ ಜೀವವನ್ನು (ಸೂಖೆ) ನುಂಗುತ್ತದೆ ಮತ್ತು ದೇಹದ ಪುನರುತ್ಥಾನ ಸಮಯದಲ್ಲಿ, ಅದೇ ಆತ್ಮೀಕ ಜೀವವು ಅವರ ದೇಹವನ್ನೂ ಸಹ ನುಂಗುತ್ತದೆ.



*ಅಧ್ಯಾಯ 15*

# ನೋಡಿ, ಬೆಲೆ ಪಾವತಿಸಿ ಮತ್ತು ಪಡೆಯಿರಿ

*"ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನಮಾಡುವನು." (1 ಪೇತ್ರ 4:2)*

ನಮ್ಮ ಪ್ರತಿಯೊಬ್ಬರ ಜೀವಿತದಲ್ಲಿ ತನ್ನನ್ನು ಪ್ರಕಟಮಾಡಿಕೊಳ್ಳುವುದು ದೇವರ ಬಯಕೆಯಾಗಿದೆ. ನಮ್ಮನ್ನು ಆಶೀರ್ವದಿಸಲು, ನಮ್ಮನ್ನು ಮಾರ್ಗದರ್ಶಿಸಲು, ನಮ್ಮನ್ನು ಸಂತೈಸಲು ಮತ್ತು ನಮ್ಮನ್ನು ತಿದ್ದಲು ಆತನ ಅದ್ಭುತಕರ ಹಸ್ತವು ನಮ್ಮ ಮೇಲಿದೆ ಎಂದು ಸತ್ಯವೇದ ಹೇಳುತ್ತದೆ. ಹಾಗಾದರೆ ಆತನ ಮಕ್ಕಳಾಗಿರುವ ನಾವು ಏಕೆ ಆತನನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ? ಯಾಕೆ ಎಂದು ನೀವು ಎಂದಾದರೂ ಯೋಚಿಸಿದ್ದೀರಾ? ಇದಕ್ಕೆ ಕಾರಣ ನಾವು ಅದನ್ನು "ನೋಡಲು" ಸಾಧ್ಯವಾಗದಿರುವುದು! ನಮಗೆ "ನೋಡಲು" ಸಾಧ್ಯವಾದರೆ ಮಾತ್ರ ನಾವು ಅದನ್ನು ಅನುಭವಿಸಲು ಸಾಧ್ಯ.

ಈ ಅಧ್ಯಾಯದಲ್ಲಿ, ನಮ್ಮ "ನೋಟ"ವನ್ನು ಹೇಗೆ ಸುಧಾರಿಸಿಕೊಳ್ಳಬೇಕೆಂದು ಅರ್ಥಮಾಡಿಕೊಳ್ಳಲು ದೇವರು ನಮಗೆ ಸಹಾಯ ಮಾಡುತ್ತಾನೆ ಮತ್ತು ಆತನನ್ನು ಅನುಭವಿಸುವುದರಲ್ಲಿ ನಮಗೆ ನೆರವುಮಾಡುತ್ತಾನೆ. ಆದ್ದರಿಂದ, ಪರಿಶುದ್ಧಾತ್ಮನು ಈ ಸತ್ಯಗಳನ್ನು ನಮ್ಮ ಜೀವನದಲ್ಲಿ ಪ್ರಕಟಮಾಡಲಿ, ಆಮೆನ್.

ನಾವು ಸೂಪರ್ ಮಾರ್ಕೆಟ್ ಗೆ ಹೋದಾಗ ಕಪಾಟಿನ ಮೇಲೆ ಅನೇಕ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿರುವುದನ್ನು ನಾವು ನೋಡಬಹುದು ಆದರೆ ನಾವು ಅವುಗಳನ್ನು ಖರೀದಿಸುವವರೆಗೂ ಮತ್ತು ಖರೀದಿಸದ ಹೊರತು ಆ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗಲಾಗುವುದಿಲ್ಲ. ಆದ್ದರಿಂದ ಮೊದಲು ನಮಗೆ ಏನು ಬೇಕು ಎಂದು ನಾವು "ನೋಡುತ್ತೇವೆ" ಮತ್ತು ಅದನ್ನು ಉಪಯೋಗಿಸಲು ಅದಕ್ಕೆ "ಪಾವತಿಸುತ್ತೇವೆ." ನೋಡುವುದು ಉಚಿತ, ಆದರೆ ಕೊಳ್ಳುವುದು ವೆಚ್ಚವನ್ನು ಒಳಗೊಂಡಿರುತ್ತದೆ. ಬೆಲೆಯನ್ನು ಪಾವತಿಸದಿರುವವರು ನೋಡಬಹುದು, ಕೇಳಬಹುದು ಮತ್ತು ಸಂತೋಷಗೊಳ್ಳಬಹುದು ಆದರೆ ಅವರು ಅದನ್ನು ಅನುಭವಿಸಲು ಆಗುವದಿಲ್ಲ. ಅದರಹಾಗೆಯೇ ಬೆಲೆಯನ್ನು ಪಾವತಿಸದೇ ದೇವರ ರಾಜ್ಯದಿಂದ ಏನನ್ನೂ ನಾವು ಸ್ವೀಕರಿಸಲಾಗುವದಿಲ್ಲ.

> ಮೊದಲು ನಾವು ನೋಡಬೇಕು ಮತ್ತು ನಂತರ ಅದನ್ನು ಪಡೆದುಕೊಳ್ಳಬೇಕು.

ನಾವು ಯಾವುದೇ ಆತ್ಮೀಕ ಆಶೀರ್ವಾದವನ್ನು ಪಡೆಯಬೇಕೆಂದರೆ ನಾವು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ಅದನ್ನು ಹೊಂದಲು ಅದರ ಸರಿಯಾದ ಮೌಲ್ಯವನ್ನು ಪಾವತಿಸಬೇಕು. ಎಲೀಯನು ಸತ್ಯವೇದ ಉಲ್ಲೇಖಿಸಲಾಗಿರುವ ಶ್ರೇಷ್ಠ ಪ್ರವಾದಿಗಳಲ್ಲೊಬ್ಬನಾಗಿದ್ದಾನೆ. ಅವನ ಅಭಿಷೇಕದ ಎರಡರಷ್ಟು ಭಾಗವನ್ನು ಪಡೆಯುವ ಸಲುವಾಗಿ, ಎಲೀಷ ಎಲೀಯನನ್ನು ನಿರಂತರವಾಗಿ

ಹಿಂಬಾಲಿಸಿದ. ಇದು ಎಲೀಯನಿಗೆ ಕುತೂಹಲ ಕೆರಳಿಸಿತು ಆದರೆ ಅವನು ಕೊನೆಯವರೆಗೂ ಎಲೀಷನನ್ನು ನಿರ್ಲಕ್ಷಿಸಿದನು. ವಾಸ್ತವವಾಗಿ ಅವನು ಎಲೀಷನಿಗೆ ತನ್ನನ್ನು ಹಿಂಬಾಲಿಸದಂತೆ ಮತ್ತು ದೇವರು ತನ್ನನ್ನು ಕರೆದಿದ್ದಾನೆ ಎಂದು ಅನೇಕ ಬಾರಿ ಹೇಳಿದನು. ಆದರೆ ಎಲೀಷ ಅವನ ಕೋರಿಕೆಯನ್ನು ನಿರಾಕರಿಸಿದನು ಮತ್ತು ಅವರು ಯೋರ್ದಾನ್ ದಾಟುವವರೆಗೆ ಎಲೀಯನನ್ನು ಹಿಂಬಾಲಿಸಿದನು. ನಂತರ ಎಲೀಯ ಕೇಳಿದನು, "ನಿನಗೆ ಬೇಕಾಗಿರುವದು ಏನು?" ಅದಕ್ಕೆ ಎಲೀಷ ಉತ್ತರಿಸಿದ, "ನಿನ್ನಲ್ಲಿರುವ ಆತ್ಮದ ಅಭಿಷೇಕದ ಎರಡು ಪಾಲು ನನಗೆ ಬೇಕು." ಎಲೀಯ ಹೇಳಿದ, "ನೀನು ಕೇಳುವದು ಬಹು ಕಷ್ಟಕರವಾದದ್ದು ಆದರೆ ನಾನು ಆತ್ಮೀಕ ಲೋಕಕ್ಕೆ ರೂಪಾಂತರವಾಗುವ ನೋಟವನ್ನು ನೀನು ನೋಡಿದರೆ (ನಿನ್ನ ಆತ್ಮದಲ್ಲಿ) ನೀನು ಅದನ್ನು ಪಡೆಯುವೆ."

ಅಂತೆಯೇ ಫರಿಸಾಯರ ಒಬ್ಬ ಧಾರ್ಮಿಕ ನಾಯಕ ಯೇಸುವಿನ ಬಳಿಗೆ ಒಮ್ಮೆ ಬಂದ ಮತ್ತು ಹೇಳಿದ, "ಗುರುವೇ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಸೂಚಕಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು." (ಯೋಹಾನ 3:2)

ಈ ಹೊಗಳುವಿಕೆಯನ್ನು ಕೇಳಿ, "ಸೂಖೆ"ಯಲ್ಲಿ ಕಾರ್ಯಮಾಡುವ ನಮ್ಮಲ್ಲಿ ಅನೇಕರು ಮಾಡುವಂತೆ, ಯೇಸು ತನ್ನನ್ನು ಮೇಲಕ್ಕೆ ಹೆಚ್ಚಿಸಿಕೊಳ್ಳಲಿಲ್ಲ. ಬದಲಿಗೆ ಯೇಸುವಿಗೆ ಹೇಳಲು ಒಂದು ವಿಷಯವಿತ್ತು, "ನೀನು ಹೊಸದಾಗಿ ಹುಟ್ಟದಿದ್ದರೆ ದೇವರ ರಾಜ್ಯವನ್ನು ನೀನು ಕಾಣುವದಿಲ್ಲ." ಮೊದಲು ನೋಡು ಹಾಗೂ ನಂತರ ಅದನ್ನು ಪಡೆ.

ಗ್ರೀಕ್ ನಲ್ಲಿ "ನೋಡು" [ಐಡೊ (Eido)] ಎಂಬ ಪದದ ಅರ್ಥ "ಅರ್ಥ ಮಾಡಿಕೊಳ್ಳಲು" (ಅರ್ಥಮಾಡಿಕೋ – ತಿಳಿದುಕೊಳ್ಳಲು) ಎಂಬುದಾಗಿದೆ. ನೀನು ಹೊಸದಾಗಿ ಹುಟ್ಟಿದ್ದರೆ, ದೇವರ ರಾಜ್ಯವನ್ನು "ನೋಡಬಹುದು" ಎಂದು ದೇವರು ಹೇಳುತ್ತಾನೆ. ನಾವು ಅನೇಕ ಬಾರಿ ದೇವರ ರಾಜ್ಯದ ಕುರಿತು ಪುನರಾವರ್ತಿಸಿದರೂ ಹೊಸದಾಗಿ ಹುಟ್ಟದಿರುವಂಥಹವರು ದೇವರ ರಾಜ್ಯದ ಕುರಿತು ಒಂದು ಸಂಗತಿಯನ್ನೂ ಸಹ ಅರ್ಥಮಾಡಿಕೊಳ್ಳುವದಿಲ್ಲ.

**"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ." (1 ಕೊರಿ 2:14)**

ನಾವು ರಕ್ಷಣಾ ಅನುಭವಕ್ಕೆ ಬಂದಾಗ, ನಾವು ದೇವರ ರಾಜ್ಯವನ್ನು "ನೋಡಲು" ಪ್ರಾರಂಭಿಸುತ್ತೇವೆ. ಪಡೆಯುವಿಕೆ ನಂತರ ಬರುತ್ತದೆ. ಆದುದರಿಂದಲೇ ಗಲಾತ್ಯದವರಿಗೆಯಲ್ಲಿ ಮತ್ತು ಕೊರಿಂಥದವರಿಗೆಯಲ್ಲಿ ಕ್ರಮವಾಗಿ ಹೀಗೆ ಬರೆಯಲ್ಪಟ್ಟಿದೆ, "ನೀವು ಅನ್ಯಾಯ ಕಾರ್ಯಗಳನ್ನು ಮಾಡಿದರೆ ಅಥವಾ ಶರೀರದ (ಸೂಖೆ) ಪ್ರಕಾರ ಕಾರ್ಯಮಾಡಿದರೆ ನೀವು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ." (1 ಕೊರಿ 6:9; ಗಲಾ 5:19-21) ಪೌಲನು ಈ ಪತ್ರಿಕೆಗಳನ್ನು ಹೊಸದಾಗಿ ಹುಟ್ಟದ ಅನ್ಯಜನರಿಗೆ ಬರೆದಿಲ್ಲ ಬದಲಿಗೆ ಹೊಸದಾಗಿ ಹುಟ್ಟಿದ, ದೇವರನ್ನು ಆರಾಧಿಸುವ ಹಾಗೂ ಕರ್ತನ ಮೇಜಿನಲ್ಲಿ ಭಾಗವಹಿಸುವ ವಿಶ್ವಾಸಿಗಳಿಗೆ ಮತ್ತು

ದೇವರ ಸೇವಕರಿಗೆ ಬರೆದಿದ್ದಾನೆ ಎಂದು ನೆನಪುಮಾಡಿಕೊಳ್ಳಿ.

ಯೇಸುವನ್ನು ನಮ್ಮ ರಕ್ಷಕನನ್ನಾಗಿ ಅಂಗೀಕರಿಸಿಕೊಂಡವರಾದ ನಾವು, ದೇವರ ರಾಜ್ಯವನ್ನು ನೋಡಿದ್ದೇವೆ ಆದರೆ ಅದನ್ನು ಇನ್ನೂ ಬಾಧ್ಯಪಡಿಸಿಕೊಂಡಿಲ್ಲ. ಅದನ್ನು ಬಾಧ್ಯಪಡಿಸಿಕೊಳ್ಳುವದಕ್ಕೂ ಮೊದಲು ನಾವು ಪಾವತಿಸಬೇಕಾದ ಬೆಲೆಯಿದೆ. ನಾವು ಅನುಮತಿಸಿದರೆ, ದೇವರು ಬೆಲೆಯನ್ನು ಪಾವತಿಸಲು ನಮಗೆ ಸಹಾಯ ಮಾಡುವದಕ್ಕೆ ಸಿದ್ಧರಿದ್ದಾರೆ.

## ಅ) ಬೆಲೆಯನ್ನು ಪಾವತಿಸಿ

ಈ ಬೆಲೆ ಏನು?

ಈ ಬೆಲೆ ದೇವರ ವಾಕ್ಯಕ್ಕೆ ವಿಧೇಯವಾಗುವುದಾಗಿದೆ.

ಅಥವಾ

ಸೈತಾನನಿಂದ ಆಳಲ್ಪಡುತ್ತಿರುವ ಈ ಲೋಕದಲ್ಲಿ ನಾವು ದೇವರ ಸಲುವಾಗಿ ಮತ್ತು ದೇವರ ಕೆಲಸಕ್ಕಾಗಿ ಸ್ವಇಚ್ಛೆಯಿಂದ ನಮ್ಮ ಕಾನೂನು ಹಕ್ಕುಗಳನ್ನು ಅಥವಾ ನಮ್ಮ ಬಯಕೆಗಳನ್ನು ತ್ಯಾಗಮಾಡುವುದಾಗಿದೆ.

"ಒಬ್ಬನು ಅನ್ಯಾಯವಾಗಿ ಬಾಧೆಪಡುವವನಾಗಿದ್ದು ದೇವರು ನೋಡುತ್ತಾನೆಂದು ಅರಿತು ಆ ಕಷ್ಟವನ್ನು ಸಹಿಸಿಕೊಂಡರೆ ಅದು ಶ್ಲಾಘ್ಯವಾಗಿದೆ. ತಪ್ಪುಮಾಡಿ ಗುದ್ದು ತಿನ್ನುವುದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ." (1 ಪೇತ್ರ 2:19-20)

> ಸೈತಾನನಿಂದ ಆಳಲ್ಪಡುವ ಈ ಲೋಕದಲ್ಲಿರುವ ನಾವು ಯೇಸುವಿನ ನಾಮದಲ್ಲಿ ಅನ್ಯಾಯವಾಗಿ ಬಾಧೆಪಟ್ಟರೆ ಅದು ನಾವು ನೀಡುವ ಬೆಲೆಯಾಗಿದೆ.

ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರು ನಮ್ಮ ಜೀವನದಲ್ಲಿ ಅನುಮತಿಸಿರುವ ಬಾಧೆಗಳ ಮೂಲಕ ನಾವು ಹೋಗಬೇಕು. (ಫಿಲಿ 1:29; 1 ಪೇತ್ರ 4:1-2) ನಮ್ಮ ಸ್ವಂತ ಇಚ್ಛೆಗಳಿಂದ ತುಂಬಿರುವ ನಮ್ಮ ಸೂಖ ಮತ್ತು ನಮ್ಮ ಸ್ವಯಂ, ಅಂದರೆ ಪ್ರಾಣದಲ್ಲಿ ಸೈತಾನನು ಇಟ್ಟಿರುವ ಅವನ ಸಂಪತ್ತನ್ನು ನಾವು ನಾಶಮಾಡಬೇಕು ಮತ್ತು ಅದನ್ನು ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲ್ಪಟ್ಟಿರುವ ನೂತನವಾಗಿ ಸೃಷ್ಟಿಸಲ್ಪಟ್ಟ ಮನುಷ್ಯನ ಭಾವಗಳಿಂದ, ಅಂದರೆ ಜೀವ (ಝೋಯೆ) ದಿಂದ ಅದನ್ನು ತುಂಬಿಸಬೇಕು. ಬೆಲೆ ಪಾವತಿಸುವ ಕಾರ್ಯದಲ್ಲಿ ಇದು ಸಂಭವಿಸುತ್ತದೆ.

**"ಹೇಗಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು." (ಫಿಲಿ 1:29)**

**“ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದವಶದಿಂದ ತಪ್ಪಿಸಿಕೊಂಡವನಾಗಿ ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನ ಮಾಡುವನು.” (1 ಪೇತ್ರ 4:1-2)**

ಆದ್ದರಿಂದ ನಾವು ಈ ಕಾರ್ಯದ ಮೂಲಕ ಹೋದಂತೆ ನಮ್ಮಲ್ಲಿ ಸೈತಾನನ ಸಂಪತ್ತು ಕಡಿಮೆಯಾಗುತ್ತದೆ ಮತ್ತು ದೇವರ ಸಂಪತ್ತು ಹೆಚ್ಚುತ್ತದೆ. ಈಗ ಓದುಗರ ಮನಸ್ಸಿನಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದು, ಸೈತಾನನ ಸಂಪತ್ತುಗಳು ಏನು? ದೇವರ ಸಂಪತ್ತುಗಳು ಏನು?

ನಮ್ಮ ಹಳೆಯ ಲೌಕಿಕ ಸ್ವಯಂನಲ್ಲಿರುವ ಅಥವಾ ಪ್ರಾಣದಲ್ಲಿ ತುಂಬಿರುವ “ಶರೀರ ಅಥವಾ ಶರೀರದ ಭಾವಗಳು” ಸೈತಾನನ ಸಂಪತ್ತಾಗಿದೆ. (ಗಲಾ 5:19-21) ದೇವರ ಸಂಪತ್ತು ನೂತನವಾಗಿ ಸೃಷ್ಟಿಸಲ್ಪಟ್ಟ ಆತ್ಮದ ಮೂಲಕ, ದೇವರಿಂದ ನಮ್ಮ ನೂತನ “ಸ್ವಯಂ”ನಲ್ಲಿ ಇಡಲ್ಪಟ್ಟ “ಆತ್ಮದ ಫಲಗಳಾಗಿದೆ.” (ದೇವರ ಸ್ವಭಾವ) ಆತ್ಮದ ಫಲವೆಂದರೆ ಪರಿಶುದ್ಧಾತ್ಮನ ಮೂಲಕ ನಮ್ಮಲ್ಲಿ ತುಂಬಿರುವ “ದೇವರ ಪ್ರೀತಿ.” (ರೋಮಾ 5:5; ಗಲಾ 5:22-23)

ಉದ್ಭವಿಸಬಹುದಾದ ಇನ್ನೊಂದು ಪ್ರಶ್ನೆಯೇನೆಂದರೆ, ನಾವು ಈ ಎರಡು ವ್ಯಕ್ತಿಗಳನ್ನು ಹೊಂದಿದ್ದೇವೆಯೇ? ಹೌದು. ದೇವರ ವಾಕ್ಯ ಹೇಳುತ್ತದೆ, ಮೊದಲ ಮನುಷ್ಯನಾದ ಆದಾಮ ಪ್ರಾಣವಾಗಿದ್ದ (ಬದುಕುವ ಪ್ರಾಣಿ); ಎರಡನೇ ಆದಾಮ ಪ್ರಾಣವಲ್ಲ ಬದಲಿಗೆ ಆತ್ಮವಾಗಿದ್ದಾನೆ (ಜೀವ–ನೀಡುವ ಆತ್ಮ). (1 ಕೊರಿ 15:45-49)

ಆದಾಮನ ಸ್ವಾರೂಪ್ಯದಲ್ಲಿರುವ ಪ್ರಾಣ ಮನುಷ್ಯ, ಲೋಕದಲ್ಲಿ ಜೀವಿಸುತ್ತಿದ್ದಾನೆ ಆದರೆ ದೇವರ ಸ್ವಾರೂಪ್ಯದಲ್ಲಿ ಉಂಟುಮಾಡಲಾಗಿರುವ ನೂತನ ಸೃಷ್ಟಿ ಆತ್ಮೀಕ ಲೋಕವಾಗಿರುವ ದೇವರ ರಾಜ್ಯದಲ್ಲಿದ್ದಾನೆ. (2 ಕೊರಿ 5:17) ದೇವರ ವಾಕ್ಯವು ಈ ಎರಡು ವ್ಯಕ್ತಿಗಳನ್ನು ಸಂಪರ್ಕದಲ್ಲಿ ಬಾಹೀರಿಕ ಮನುಷ್ಯ ಮತ್ತು ಆತ್ಮೀಕ ಮನುಷ್ಯ ಎಂದು ವ್ಯತ್ಯಾಸಿಸುತ್ತದೆ.

**“ಆದದರಿಂದ ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ.” (2 ಕೊರಿ 4:16)**

ಹೊಸದಾಗಿ ಹುಟ್ಟಿರುವಂಥ ನಾವು ಒಂದೇ ಸಮಯದಲ್ಲಿ ಒಂದು ಲೋಕದಲ್ಲಿ ಮಾತ್ರವಲ್ಲ ಬದಲಿಗೆ ಎರಡು ಲೋಕಗಳಲ್ಲಿ ಜೀವಿಸುತ್ತೇವೆ ಎಂಬ ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ನಾವು ನಮ್ಮಲ್ಲಿ ಹಳೆಯವ ಮತ್ತು ಹೊಸಬನೆಂಬ ಎರಡು ವ್ಯಕ್ತಿಗಳನ್ನು ಹೊಂದಿದ್ದೇವೆ, ಅಲ್ಲಿ ಹಳೆಯವನು ನಾಶವಾಗಬೇಕು ಮತ್ತು ಹಳೆಯವನು ಹೊಸಬನಿಂದ ಬದಲಾಯಿಸಲ್ಪಡಬೇಕು.

> ದೇವರ ಮಕ್ಕಳು ಒಂದೇ ಸಮಯದಲ್ಲಿ ಎರಡು ಲೋಕಗಳಲ್ಲಿ ಜೀವಿಸುತ್ತಾರೆ. ನಾವು ಹಳೆಯ ಮತ್ತು ಹೊಸ 'ಸ್ವಯಂ' ಅನ್ನು ಹೊಂದಿದ್ದೇವೆ. ಹಳೆಯದ್ದರಲ್ಲಿನ ಭಾವಗಳು ನಾಶವಾಗುತ್ತವೆ ಮತ್ತು ಹಳೆಯ 'ಸ್ವಯಂ' ಅನ್ನು ಹೊಸ 'ಸ್ವಯಂ' ನಿಂದ ಬದಲಾಯಿಸಲಾಗುತ್ತದೆ.

ಆದ್ದರಿಂದ ಪರಿಶುದ್ಧಾತ್ಮ ಕಾರ್ಯದಿಂದ ಸಂಪೂರ್ಣವಾಗಿ ನಾಶವಾಗಲು ನಮ್ಮ ಹಳೆಯ ಸ್ವಯಂ ಅನ್ನು ಸಲ್ಲಿಸಿ ಪಾವತಿಸಬೇಕಾದ ಬೆಲೆಯನ್ನು ಪಾವತಿಸಬೇಕು. ಈ ನಾಶನದಿಂದ, ದೇವರ ಜೀವವು (ಝೋಯೆ) ನಮ್ಮ ಜೀವದೊಳಕ್ಕೆ (ಪ್ರಾಣ) ಬರುವ ಅದೇ ಮಟ್ಟಕ್ಕೆ ನಮ್ಮ ಆತ್ಮೀಕ ಐಶ್ವರ್ಯದ ಮಟ್ಟವೂ ಹೆಚ್ಚುತ್ತದೆ. ಸ್ವಾಭಾವಿಕ ಲೋಕದಲ್ಲಿ, ನಾವು ನಮ್ಮ ಬ್ಯಾಂಕ್ ನಲ್ಲಿ ಹೊಂದಿರುವ ಠೇವಣಿಯ ಆಧಾರದ ಮೇಲೆ ನಾವು ಶ್ರೀಮಂತರು. ನಮ್ಮ ಆತ್ಮೀಕ ಜೀವನದಲ್ಲಿ, ನಮ್ಮ ಪ್ರಾಣದಲ್ಲಿ ದೇವರ ಜೀವ (ಝೋಯೆ) ಕಾರ್ಯಮಾಡುತ್ತಿರುವ ಮಟ್ಟದ ಆಧಾರದ ಮೇಲೆ ನಾವು ಶ್ರೀಮಂತರು. ಭೌತಿಕ ಲೋಕದ ಐಶ್ವರ್ಯ ಇಲ್ಲಿ ಮುಗಿಯುತ್ತದೆ ಆದರೆ ನಮ್ಮ ಪ್ರಾಣವು ಝೋಯೆಯಿಂದ ತುಂಬಲ್ಪಡುವಾಗ, ಆ ಐಶ್ವರ್ಯವು ಎಂದಿಗೂ ಮುಗಿಯುವುದಿಲ್ಲ. ಅದು ಶಾಶ್ವತ ಐಶ್ವರ್ಯ.

| | |
|---|---|
| ಸೂಖೆ | – ಮನುಷ್ಯನ ಜೀವ |
| ಝೋಯೆ | – ದೇವರ ಜೀವ |

ನಮ್ಮೊಳಗೆ ಸೂಖೆ ಅಥವಾ ಶರೀರದ ಸ್ವಭಾವವನ್ನು ನಾವು ನಾಶಮಾಡಿದಾಗ ಪ್ರತೀ ಕ್ಷಣ ನಾವು ಬೆಲೆಯನ್ನು ಪಾವತಿಸುತ್ತಿದ್ದೇವೆ ಮತ್ತು ನಾವು ಝೋಯೆಯೊಂದಿಗೆ ತುಂಬಲ್ಪಡುತ್ತಿದ್ದೇವೆ. ಈ ಕಾರ್ಯದ ಸಮಯದಲ್ಲಿ ನಾವು ನಮ್ಮ ಅನೇಕ ಭೌತಿಕ ಹಕ್ಕುಗಳನ್ನು ಕಳೆದುಕೊಳ್ಳಬಹುದು. ನಾವು ಇದನ್ನು ಕಳೆದುಕೊಂಡಾಗ ಮತ್ತು ದೇವರ ವಾಕ್ಯದ ಪ್ರಕಾರ ನಾವು ಅದನ್ನು ಬಾಧಿಸಲು ಪ್ರಯತ್ನಿಸಿದಾಗ, ನಮ್ಮ ಹಳೆಯ ವ್ಯಕ್ತಿ (ಸೂಖೆ) ಮೌನವಾಗಿರುವದಿಲ್ಲ. ಅದರ ಹಕ್ಕುಗಳು ಕಳೆದುಹೋಗುವತನಕ ಅದು ಎದ್ದು ನಿಲ್ಲಲು ಪ್ರಯತ್ನಿಸುತ್ತದೆ ಮತ್ತು ಕಾರ್ಯಮಾಡುತ್ತದೆ. ಆದರೆ ಅದನ್ನು, ಮೇಲೇಳುವದನ್ನು ಪರಿಶುದ್ಧಾತ್ಮನ ಮೂಲಕ ನಾವು ಕಟ್ಟಿದರೆ (ಅದು ದೇವರ ವಾಕ್ಯದ ಆಲೋಚನೆಗಳಿಂದ) ಆ ಹಳೆಯ ಮನುಷ್ಯನ (ಪ್ರಾಣ) ಸ್ವಭಾವವನ್ನು ನಾವು ಕೊಲ್ಲುತ್ತೇವೆ.

ಮತ್ತಾಯ 5:40ರಲ್ಲಿ ಯೇಸು ಒಮ್ಮೆ ಹೀಗೆ ಹೇಳಿದರು, **"ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು."**

ಒಬ್ಬ ವ್ಯಕ್ತಿ ನಿಮ್ಮ ವಿರುದ್ಧ ಪ್ರಕರಣವನ್ನು ನೀಡಿ ತಮ್ಮದಲ್ಲದ ನಮ್ಮ ಆಸ್ತಿಯನ್ನು ಕಸಕೊಳ್ಳಲು ಬಯಸಿದರೆ, ನಾವು ಖಂಡಿತವಾಗಿಯೂ ಅದನ್ನು ಹೋಗಗೊಡಿಸುವದಿಲ್ಲ ಹಾಗೂ ಕೊನೆಯವರೆಗೂ ಹೋರಾಡುತ್ತೇವೆ, ಯಾಕಂದರೆ ಆ ಅಸ್ತಿ ನಮ್ಮ ಕಾನೂನುಬದ್ಧ ಹಕ್ಕು. ನಾವು ನಮ್ಮ ಸ್ವಂತ ಅಧಿಕಾರವನ್ನು ಬಿಡುವದು ಮಾತ್ರವಲ್ಲ ಬದಲಿಗೆ ನಮ್ಮ ಒಳಂಗಿಯ ಜೊತೆಗೆ ಶೀತದಿಂದ ರಕ್ಷಿಸಲು ಉಪಯೋಗಿಸುವ

ನಮ್ಮ ಮೇಲಂಗಿಯನ್ನೂ ಬಿಡಬೇಕು ಎಂದು ಕ್ರಿಸ್ತನು ಹೇಳುತ್ತಾನೆ. ಆ ಮಟ್ಟಿಗೆ ಬಿಟ್ಟುಕೊಡಲು ಯಾರೂ ಅನುಮತಿಸುವದಿಲ್ಲ. ಆದರೆ ಇದನ್ನೇ ಕ್ರಿಸ್ತನು ನಮ್ಮಿಂದ ಬಯಸುವದು. ನಾವು ಕೊಡಬೇಕು ಮತ್ತು ಈ ಲೋಕದಲ್ಲಿ ನಾವು ಏನನ್ನಾದರೂ ಕಳೆದುಕೊಂಡರೆ ನಾವು ಶಾಶ್ವತವಾದದ್ದರಿಂದ ತುಂಬಲ್ಪಡುತ್ತೇವೆ. ನಾವು ಶಾಶ್ವತವಾದದ್ದರಿಂದ ತುಂಬಲ್ಪಟ್ಟಾಗ, ಇದರ ಮೂಲಕ ಹಾದುಹೋದವರಿಗೆ, ಅವರು ದೇವರ ಪ್ರಸನ್ನತೆಯಿಂದ ತುಂಬಲ್ಪಡುತ್ತಾರೆ ಎಂದು ತಿಳಿದಿರುತ್ತದೆ. ಬೆಲೆಯನ್ನು ಪಾವತಿಸದೇ ನಾವು ತುಂಬಲ್ಪಡುವದಿಲ್ಲ. ಈ ಲೋಕದಲ್ಲಿ ದೇವರು ನಮಗೆ ಅನೇಕ ಸಂಗತಿಗಳನ್ನು ನೀಡಿದ್ದಾನೆ. ಅವುಗಳಲ್ಲಿ ಕೆಲವು ಈ ಕಾರ್ಯಕ್ಕಾಗಿ ನೀಡಲ್ಪಟ್ಟಿರಬಹುದು. ಆ ಸಂಗತಿಗಳು ಯಾವುವು ಎಂದು ನಾವು ವಿವೇಚಿಸಬೇಕು ಮತ್ತು ಗುರುತಿಸಬೇಕು. ಮತ್ತಾಯ 5:40ರಲ್ಲಿ ಯೇಸು ಉಲ್ಲೇಖಿಸಿರುವ ಮೇಲಿನ ವಹಿವಾಟಿನಲ್ಲಿ ಯಾವುದು ದೇವರ ಕೆಲಸ ಮತ್ತು ಯಾವುದು ನಮ್ಮ ಕೆಲಸ? ಎಂದು ನಾವು ತಿಳಿದುಕೊಳ್ಳಬೇಕು.

ಮೊದಲು ನಾವು ಕೊಡಬೇಕಿರುವ ವಸ್ತ್ರ ಮತ್ತು ಮೇಲಂಗಿಯನ್ನು ಕ್ರಿಸ್ತನು ನಮಗೆ ನೀಡಬೇಕು. ಅದು ಮಾತ್ರವೇ ಅಲ್ಲ, ಈಗ ಕ್ರಿಸ್ತನು ನಾವು ಮೇಲಂಗಿಯನ್ನು ಯಾರಿಗೆ ಕೊಡಬೇಕೋ ಅವನನ್ನು ನಮ್ಮ ಬಳಿಗೆ ಬರಲು ಅನುವುಮಾಡಬೇಕು. ಸಾಮಾನ್ಯವಾಗಿ ಈ ಕಾರ್ಯದಲ್ಲಿ ಕ್ರಿಸ್ತ ನಮಗೆ ಒಂದೂ ಬಟ್ಟೆಯನ್ನು ನೀಡದೆ ನಾವು ಅದನ್ನು ಬೇರೆಯವರಿಗೆ ನೀಡಲು ಬಯಸುವದಿಲ್ಲ. ನಾವು ಕೇಳಬಹುದು ಯಾಕೆ ದೇವರು ಈ ವಹಿವಾಟನ್ನು ಅನುಮತಿಸುತ್ತಾನೆ? ನಮ್ಮ ಸೂಖೆಯನ್ನು ನಾಶಮಾಡಲು ಮತ್ತು ಬೆಲೆಯನ್ನು ಪಾವತಿಸಲು ಇದರ ಅಗತ್ಯವಿದೆ. ಕ್ರಿಸ್ತನು ನಮಗೆ ಎರಡು ವಸ್ತುಗಳನ್ನು ನೀಡಿದ್ದರೆ, ಅವೆರಡೂ ನಮಗಾಗಿ ಅಲ್ಲದಿರಬಹುದು, ಒಂದು ನಾವು ಈ ವಹಿವಾಟಿಗೆ ನೀಡಲಿಕ್ಕಿರಬಹುದು. ನಾವು ಒಂದನ್ನು ನೀಡಿದರೆ ಬೆಲೆಯನ್ನು ಪಾವತಿಸುತ್ತೇವೆ. ಕೊಡುವ ಸಲುವಾಗಿ ನಮಗೆ ಬೇಕಿರುವ ಎಲ್ಲಾ ಭೌತಿಕ ವಸ್ತುಗಳು ನಮ್ಮ ಪರಲೋಕದ ತಂದೆಯಿಂದ ಪೂರೈಸಲ್ಪಡುತ್ತವೆ. ತಂದೆಯು ನಮಗೆ ಪೂರೈಸದೇ, ನಾವು ಏನನ್ನೂ ನೀಡಲು ಆಗುವದಿಲ್ಲ. ದೇವರ ವಾಕ್ಯಕ್ಕೆ ವಿಧೇಯರಾಗಿ ನಾವು ನೀಡಿದಾಗ, ದೇವರ ಮಹಾ ಶಕ್ತಿ ನಮ್ಮ ಮೂಲಕ ಪ್ರಕಟವಾಗುತ್ತದೆ. ದೇವರು ಅವರ ಮೂಲಕ ಮಾಡುತ್ತಿರುವ ಕಾರ್ಯದ ಆಧಾರದ ಮೇಲೆ ಕೆಲವರಿಗೆ ಇದು ಅಲ್ಪ ಅಥವಾ ಅತ್ಯಲ್ಪ ಪಾವತಿಸಬೇಕಾದ ಬೆಲೆಯಾಗಿರಬಹುದು ಮತ್ತು ಕೆಲವರಿಗೆ ದೊಡ್ಡದಾಗಿರಬಹುದು, ಆದರೆ ನಾವೆಲ್ಲರೂ ಇದಕ್ಕಾಗಿ ಮೊದಲೇ ಆರಿಸಲ್ಪಟ್ಟಿದ್ದೇವೆ. ನಾವು ಇದರ ಮೂಲಕ ಹಾದುಹೋಗುವಾಗ, ಶರೀರದಲ್ಲಿ ಕಾರ್ಯಮಾಡಬಾರದು ಮತ್ತು ಜಗಳಮಾಡಬಾರದು, ಯಾಕಂದರೆ ನಾವು ಹಾಗೆ ಮಾಡಿದರೆ, ಅದೇ ಗಳಿಗೆಯಲ್ಲಿ ನಮ್ಮ ಆತ್ಮೀಕ ಬಲ ಕುಂದುತ್ತದೆ. ಜಗಳಮಾಡುವ ಬದಲು ನಾವು ಅದನ್ನು ನಿರ್ಲಕ್ಷಿಸಬೇಕು.

> ಬಾಧೆಗಳ ಮೂಲಕ ಹಾದುಹೋಗುವ ಬದಲಿಗೆ ನಾವು ಶರೀರದಲ್ಲಿ ಕಾರ್ಯಮಾಡಬಾರದು ಮತ್ತು ಜಗಳಮಾಡಬಾರದು. ನಾವು ಜಗಳಮಾಡಿದರೆ, ಅದೇ ಗಳಿಗೆಯಲ್ಲಿ ನಮ್ಮ ಆತ್ಮೀಕ ಬಲ ಕೆಳಗಿಳಿಯುತ್ತದೆ.

ಬರೆಯಲ್ಪಟ್ಟಿರುವ ಉದ್ದೇಶವೇನೆಂದರೆ ಮಾನವ ಕೌಶಲ್ಯಗಳು ನಮ್ಮ ಕಣ್ಣುಗಳನ್ನು ಮುಚ್ಚಿ ಮೂರ್ಖತನವಾಗಿ ಕಾರ್ಯಮಾಡುವದಲ್ಲ,

ಬದಲಿಗೆ ದೇವರಾತ್ಮನ ಮಾರ್ಗದರ್ಶನದಿಂದ ಪ್ರತೀ ಕ್ಷಣವೂ ಕಾರ್ಯನಿರ್ವಹಿಸುವದಾಗಿದೆ. ಲೋಕದ ದಾರಿಯ ಪ್ರಕಾರ ನಾವು ಯಾವುದೇ ಪ್ರಕರಣಕ್ಕೂ ಹೋಗಬಾರದು. ಈ ಲೋಕದ ಪ್ರಕರಣಕ್ಕೆ ನಾವು ಹೋಗುವಂತೆ, ಸೈತಾನನು ಅನೇಕರ ಮೂಲಕ ನಮ್ಮನ್ನು ತಳ್ಳಲು ಪ್ರಯತ್ನಿಸುತ್ತಾನೆ. ಆದರೆ, ನಾವು ಅದಕ್ಕೆ ಹೋಗಬಾರದು. ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ, ಈ ಗದ್ದಲಗಳನ್ನು ತಡೆಯಲು ನಿಮ್ಮಲ್ಲಿ ಒಬ್ಬ ಬುದ್ಧಿವಂತನೂ ಇಲ್ಲವೋ? ಯಾರಾದರೂ ನಮ್ಮ ವಿರುದ್ಧ ಅನ್ಯಾಯ ಮಾಡುತ್ತಿದ್ದರೆ, ನಾವು ಅನುಭವಿಸಬೇಕು.

**"ನಾವು ದೇವದೂತರಿಗೂ ತೀರ್ಪುಮಾಡುವೆವೆಂಬದು ನಿಮಗೆ ತಿಳಿಯದೋ?"** ಈ ಪ್ರಶ್ನೆಯನ್ನು 1 ಕೊರಿಂಥದವರಿಗೆ 6ನೇ ಅಧ್ಯಾಯದಲ್ಲಿ ನಾವು ಕಾಣಬಹುದು. (1 ಕೊರಿ 6:3)

1ಕೊರಿಂಥದವರಿಗೆ 6:1-8ರಲ್ಲಿ, ಸಭೆಯಲ್ಲಿ ಒಂದು ಘಟನೆ ಸಂಭವಿಸಿತು ಮತ್ತು ಸದಸ್ಯರುಗಳು ಲೋಕದ ನಿಯಮದ ಪ್ರಕಾರ ನ್ಯಾಯವನ್ನು ಹುಡುಕಲು ಹೋಗುತ್ತಿದ್ದರು. ಆದುದರಿಂದ, ಪೌಲನ ಮುಖಾಂತರ ದೇವರು ಅವರನ್ನು ಗದರಿಸುತ್ತಾನೆ, "ನೀವು ಅನ್ಯಾಯಸ್ಥರ ಬಳಿಗೆ ಅಥವಾ ಲೋಕದ ಜನರ ಬಳಿಗೆ ಪರಿಹಾರಕ್ಕಾಗಿ (ಪ್ರಕರಣವನ್ನು ಪರಿಹರಿಸುವುದು) ಹೋಗುತ್ತಿದ್ದೀರಾ?" ಲೋಕಕ್ಕೆ ತೀರ್ಪುಮಾಡಲು ನೀವು ಕರೆಯಲ್ಪಡುವಿರೆಂದು ನಿಮಗೆ ತಿಳಿಯದೋ? ಅದು ಸಣ್ಣ ಜವಾಬ್ದಾರಿ ಎಂದು ನೀವು ನೆನೆಸುತ್ತೀರಾ?

ದೇವದೂತರನ್ನು ಹೇಗೆ ತೀರ್ಪುಮಾಡುವುದು? ದೇವರ ಚಿತ್ತವಾದರೆ ಇದನ್ನು "ದೇವರ ಕುಟುಂಬ" ಎಂಬ ನನ್ನ ಮುಂದಿನ ಪುಸ್ತಕದಲ್ಲಿ ನೋಡೋಣ. ಅದು ಶೀಘ್ರದಲ್ಲಿ ಬಿಡುಗಡೆಯಾಗಲಿದೆ.

ನಿಮ್ಮೊಳಗೆ (ವಿಶ್ವಾಸಿಗಳು) ವ್ಯಾಜ್ಯವಿದ್ದರೆ, ಸ್ವತಃ ಆ ವ್ಯಾಜ್ಯವೇ ಕ್ರಿಸ್ತನನ್ನು ಕಳಪೆ ಬೆಳಕಿನಲ್ಲಿ ತೋರಿಸುತ್ತದೆ. ಆದರೆ ನಷ್ಟವನ್ನು ಅನುಭವಿಸುವ ಬದಲು ನಾವು ಲೋಕದಿಂದ ನ್ಯಾಯವನ್ನು ಹುಡುಕುತ್ತೇವೆ. ನಾವು ಇದನ್ನು ಸಾಮಾನ್ಯ ರೀತಿಯಲ್ಲಿ ನೋಡಿದರೆ, ಆಸ್ತಿ ನಮ್ಮದಾಗಿರುವುದರಿಂದ ನಾವು ನಷ್ಟವನ್ನು ಅನುಭವಿಸುವವರಾಗಿರಬಾರದು. ಆದರೆ ವಾಕ್ಯವು ಹೇಳುತ್ತದೆ, "ಮೇಲಂಗಿ ನಮ್ಮದಾಗಿರುವುದರಿಂದ ತಪ್ಪಾಗಿ ನಮ್ಮ ಮೇಲೆ ಮೊಕದ್ದಮೆ ಹೂಡಲಾಗುತ್ತಿದೆ." ಇದನ್ನೇ ಕ್ರಿಸ್ತನು ಮತ್ತಾಯ 5:40ರಲ್ಲಿ ಹೇಳಿದ್ದು, "ನಿಮ್ಮ ವಿರುದ್ಧ ದೂರು ನೀಡುತ್ತಿರುವವರು ಅವರ ಮೇಲಂಗಿಯನ್ನಲ್ಲ ಬದಲಿಗೆ ನಿಮ್ಮ ಮೇಲಂಗಿಯನ್ನು ತೆಗೆದುಕೊಳ್ಳುತ್ತಿದ್ದಾರೆ." ಇದು ಅನ್ಯಾಯ ಮತ್ತು ಅವರು ನಮ್ಮ ಅಂಗಿಯನ್ನು ತೆಗೆದುಕೊಂಡರೆ ನಾವು ನಷ್ಟವನ್ನು ಹೊರಬೇಕು ಮತ್ತು ಅನುಭವಿಸಬೇಕು. ನಾವು ಬಾಧೆಪಡುವಾಗ ಬೆಲೆಯನ್ನು ಪಾವತಿಸುತ್ತಿದ್ದೇವೆ. ವಾಕ್ಯದ ಪ್ರಕಾರ, ಈ ಲೋಕದಲ್ಲಿ ನಾವು ನಷ್ಟವನ್ನು ಹೊರುವಾಗ, ದೇವರ ರಾಜ್ಯದ ಸಂಪತ್ತನ್ನು ನಾವು ಸಂಪಾದಿಸುತ್ತೇವೆ.

**"ಸಹೋದರನು ಸಹೋದರನ ಮೇಲೆ ವ್ಯಾಜ್ಯವಾಡುವದು ಅಲ್ಲದೆ ಅದನ್ನು ಕ್ರಿಸ್ತಭಕ್ತರಲ್ಲದವರ ಮುಂದೆ ತೆಗೆದುಕೊಂಡು ಹೋಗುವದು ಸರಿಯೋ?** ನಿಮ್ಮ ನಿಮ್ಮಲ್ಲಿ

**ವ್ಯಾಜ್ಯವಾಡುವದೇ ನೀವು ಸೋತವರೆಂಬದಕ್ಕೆ ಗುರುತು. ಅದಕ್ಕಿಂತ ಅನ್ಯಾಯವನ್ನು ಯಾಕೆ ಸಹಿಸಬಾರದು? ಆಸ್ತಿಯ ನಷ್ಟವನ್ನು ಯಾಕೆ ತಾಳಬಾರದು?." (1 ಕೊರಿ 6:6-7)**

ಅನ್ಯಾಯಮಾಡುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. (1 ಕೊರಿ 6:9) ಒಂದು ನಗರದಲ್ಲಿ ಒಮ್ಮೆ ಒಬ್ಬ ಸೇವಕನಿಗೆ ದೇವರು ಎರಡು ಸಂಸ್ಥೆಗಳನ್ನು ನೀಡಿದರು. ಅವನು ಪ್ರಸಂಗಿಯಾಗಿರುವುದರಿಂದ, ಪ್ರಪಂಚದಾದ್ಯಂತ ದೇವರ ವಾಕ್ಯವನ್ನು ಪ್ರಸಂಗಿಸುತ್ತಿದ್ದನು. ಒಮ್ಮೆ ನಂಬಿಗಸ್ತನಾಗಿ ಕಂಡಂತಹ ಒಬ್ಬನಿಗೆ ಅವನ ಸಂಸ್ಥೆಯನ್ನು ನೀಡಿದನು ಮತ್ತು ಅನೇಕ ಸ್ಥಳಗಳಿಗೆ ದೇವರ ಕೆಲಸಕ್ಕಾಗಿ ಹೋದನು. ಸುವಾರ್ತೆಯನ್ನು ಸಾರಿ ಅವನು ಹಿಂದಿರುಗಿ ಬಂದಾಗ, ಅವನು ಅನೇಕ ನಿದ್ರಾಹೀನ ರಾತ್ರಿಗಳೊಂದಿಗೆ ಪೋಷಿಸಿದ್ದಂತಹ ಮತ್ತು ಚೆನ್ನಾಗಿ ಬೆಳೆಸಿದ್ದಂತಹ ಅವನ ಸಂಸ್ಥೆಗಳಲ್ಲೊಂದು ತಾನು ಎಲ್ಲಾ ಕೆಲಸಗಳನ್ನು ಕಲಿಸಿದ್ದಂತಹ ಜನರಿಂದಲೇ ತೆಗೆದುಕೊಳ್ಳಲ್ಪಟ್ಟಿರುವುದನ್ನು ಕಂಡನು. ಇದು ಅವನ ಒಂದು ಕೈ ಕತ್ತರಿಸಲ್ಪಟ್ಟಿದ್ದಂತಿತ್ತು. ಅವನು ದೇವರ ಮುಂದೆ ಮೊಣಕಾಲೂರಿದನು. ದೇವರಾತ್ಮನು ಅವನಿಗೆ ಹೇಳಿದರು, "ವಾಕ್ಯವನ್ನು ಪೂರ್ತೀಕರಿಸುವ ಸಮಯ ಇದಾಗಿದೆ."

**"ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು." (ಮತ್ತಾ 5:40)**

ಅವನ ಹೃದಯ ಚೂರುಚೂರಾಯಿತು, ಕಾರಣ ಈ ಸಂಸ್ಥೆಯನ್ನು ಬೆಳೆಸಲು ಅವರು ಎಲ್ಲವನ್ನೂ ವ್ಯಯಿಸಿ, ಅದಕ್ಕಾಗಿ ಬಹಳವಾಗಿ ಶ್ರಮಿಸಿದ್ದರು ಆದರೆ ದೇವರ ವಾಕ್ಯಕ್ಕೆ ವಿಧೇಯನಾಗಿ ಅವನು ಆ ಜನರನ್ನು ಕರೆದು ಅವರಿಗೆ ಹೀಗೆ ಹೇಳಿದ, "ನನಗೆ ಏನೂ ಬೇಡ, ನೀವೇ ಎಲ್ಲವನ್ನೂ ತೆಗೆದುಕೊಳ್ಳಬಹುದು." ಆದಾಗ್ಯೂ ಸಂಗತಿಗಳು ಅಲ್ಲಿಗೇ ಕೊನೆಗೊಳ್ಳಲಿಲ್ಲ. ಈ ಸೇವಕನು ಮುಂದಿನ ವರ್ಷ ಪ್ರಕಟವಾಗಬೇಕಿದ್ದ ಒಂದು ಜಾಹಿರಾತನ್ನು ಒಂದು ಕಂಪನಿಗೆ ನೀಡಿದ್ದನು. ಇದು ಅವನು ಮುಂದೆ ನಡೆಸಲಿರುವ ಭವಿಷ್ಯದ ವ್ಯವಹಾರಕ್ಕಾಗಿತ್ತು. ಈ ಹಣವು ನೂತನವಾಗಿ ಸಂಸ್ಥೆಯನ್ನು ಕೈಗೆತ್ತಿಕೊಂಡವರಿಂದ ನೀಡಲ್ಪಡಬೇಕಾಗಿತ್ತು ಆದರೆ ಈ ದೇವರ ಸೇವಕನು ಕಂಪನಿಗೆ ಆದೇಶವನ್ನು ನೀಡಿದ್ದನು ಮತ್ತು ಕಂಪನಿಯೊಂದಿಗೆ ರುಜುಹಾಕಿ ಒಪ್ಪಂದವನ್ನು ಮಾಡಿಕೊಂಡಿದ್ದನು. ಸಂಸ್ಥೆಯನ್ನು ನೀಡಲಾಗಿದ್ದರಿಂದ ಮತ್ತು ನೂತನ ಜಾಹಿರಾತು ಭವಿಷ್ಯದಲ್ಲಿ ಪ್ರಕಟವಾಗಬೇಕಿದ್ದದರಿಂದ, ಸಂಸ್ಥೆಯನ್ನು ಕೈಗೆತ್ತಿಕೊಂಡಂತಹ ಜನರು ಮೊತ್ತವನ್ನು ಪಾವತಿಸುವ ಬದಲಾಗಿ ಈಗಾಗಲೇ ಲಕ್ಷಾನುಗಟ್ಟಲೆ ಬೆಲೆಬಾಳುವ ಕಂಪನಿಯನ್ನು ಕಳೆದುಕೊಂಡಿದ್ದಂತಹ ದೇವರ ಸೇವಕನಿಗೆ ಬೆಲೆಪಟ್ಟಿಯನ್ನು ಕಳುಹಿಸಿದರು. ದೇವರ ಸೇವಕನು ತುಂಬಾ ದುಃಖದಿಂದ ಮತ್ತು ಮುರಿದ ಹೃದಯದಿಂದ ಪ್ರಾರ್ಥಿಸುತ್ತಾ, ಅವನು ದೇವರ ಕೆಲಸವನ್ನು ಮಾಡುತ್ತಿದ್ದಾಗ ಯಾಕೆ ತನ್ನ ಸಂಸ್ಥೆಯನ್ನು ನೋಡಿಕೊಳ್ಳಲಿಲ್ಲ ಎಂದು ದೇವರನ್ನು ಕೇಳುತ್ತಿದ್ದ ಸಮಯದಲ್ಲಿ ಈ ಬೆಲೆಪಟ್ಟಿಯು ದೇವರ ಸೇವಕರ ಬಳಿಗೆ ಬಂದಿತು.

ಈಗ ಇತರರು ಅನುಭವಿಸಲಿರುವ ಆಶೀರ್ವಾದಕ್ಕಾಗಿ ದೇವರ ಸೇವಕರು ಹಣ

ಪಾವತಿಸುವಂತೆ ನಿರೀಕ್ಷಿಸಲಾಯಿತು. ಅವನು ತನ್ನ ಮೊಣಕಾಲೂರಿದಾಗ ಮತ್ತು ಮುರಿಯಲ್ಪಟ್ಟಾಗ, ದೇವರು ಅವನೊಂದಿಗೆ ಮಾತಾಡಿದರು ಹಾಗೂ ಹೇಳಿದರು, "ಇಲ್ಲಿಯವರೆಗೂ ನೀನು ನಿನ್ನ ಮೇಲಂಗಿಯನ್ನು ಮಾತ್ರ ನೀಡಿದ್ದೀಯ, ಈಗ ನಿನ್ನ ಒಳಂಗಿಯೂ ನೀಡುವದಕ್ಕೆ ಬಾಕಿಯಿದೆ." ದೇವರ ಸೇವಕನು ಇದನ್ನು ಕೇಳಿದಾಗ, ಅವನ ಬಳಿ ಹಣವಿಲ್ಲದ್ದರಿಂದ ಅವನು ಕಂಪನಿಗೆ 'ನಂತರದ-ದಿನಾಂಕದ' ಚೆಕ್ ನ್ನು ಬರೆದುಕೊಟ್ಟನು. ಯಾಕೆ?

**"ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು." (ಮತ್ತಾ 5:40)**

ದೇವರ ಸೇವಕನ ಕೆಲಸವು ಬದಲಾಯಿತು. ಬಾಹೀರಿಕದಿಂದ ಆಂತರಿಕಕ್ಕಿದ್ದ ಕಾರ್ಯವು, ದೇವರಾತ್ಮನ ಮೂಲಕ, ಆಂತರಿಕದಿಂದ ಬಾಹೀರಿಕಕ್ಕೆ ಬದಲಾಯಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಲೋಕದ ಪ್ರಕಾರವಾಗಿದ್ದಂತಹದ್ದು, ದೇವರ ರಾಜ್ಯದ ಪ್ರಕಾರವಾಗಿ ಬದಲಾಯಿತು. ನೀವು ಕೇಳಬಹುದು ಈ ಎಲ್ಲಾದರ ಅರ್ಥವೇನು?

> ಈ ಲೋಕದ್ದನ್ನು ನೀಡಲು ನಾವು ಯಾವ ಮಟ್ಟಕ್ಕೆ ಸಿದ್ಧವಿದ್ದೇವೋ ಅದೇ ಮಟ್ಟಕ್ಕೆ ದೇವರ ರಾಜ್ಯದ ಸಂಗತಿಗಳು ನಮ್ಮಲ್ಲಿ ತುಂಬುತ್ತವೆ.

ಈ ಲೋಕದ್ದನ್ನು ನೀಡಲು ನಾವು ಯಾವ ಮಟ್ಟಕ್ಕೆ ಸಿದ್ಧವಿದ್ದೇವೋ ಅದೇ ಮಟ್ಟಕ್ಕೆ ದೇವರ ರಾಜ್ಯದ ಸಂಗತಿಗಳು ನಮ್ಮಲ್ಲಿ ತುಂಬುತ್ತವೆ. ನಮ್ಮ ಜೀವನದಲ್ಲಿ ಕೆಲವು ವಸ್ತುಗಳನ್ನು ದೇವರು ಯಾಕೆ ನೀಡಿದ್ದಾನೆಂದು ನಿಮಗೆ ಗೊತ್ತಾ? ಅದು ಕೊಡುವುದಕ್ಕಾಗಿ. ದೇವರು ಅದನ್ನು ಮೊದಲು ನಮಗೆ ನೀಡದ ಹೊರತು ನಾವು ಕೊಡುವಂತೆ ಆತನು ಕೇಳುವದಿಲ್ಲ. ಯಾತಕ್ಕಾಗಿ? ನಮ್ಮ ಜೀವನದಲ್ಲಿ ಬದಲಾವಣೆಗಾಗಿ. ಅದನ್ನು ನೀಡದೆ ನಾವು ಇಟ್ಟುಕೊಂಡರೆ ಹೆಚ್ಚು ಕಾಲ ಅದನ್ನು ಉಪಯೋಗಿಸಲು ನಮಗೆ ಆಗುವದಿಲ್ಲ.

## ಆ) ಭೂಮಿಯ ಮೇಲ್ವಿಚಾರಕರು

ಈ ಭೂಮಿಯ ಸಂಪತ್ತು ನಮ್ಮದಲ್ಲ. ನಮ್ಮ ಹೆಸರಿನಲ್ಲಿರುವ ಆಸ್ತಿ ಅಥವಾ ಭೂಮಿ ಏನಾದರಾಗಿರಬಹುದು ಅದು ನಮ್ಮದಲ್ಲ. ನಾವು ಅದನ್ನು ನೋಡಿಕೊಳ್ಳುವವರು ಮಾತ್ರ. ನನ್ನ ತಂದೆ ಮತ್ತು ತಾಯಿ ನನ್ನ ಕುರಿತು ಅವರ ಪ್ರೀತಿಯಿಂದ, ಅವರ ಆಸ್ತಿ ಮತ್ತು ಮನೆಯನ್ನು ನನ್ನ ಹೆಸರಿನಲ್ಲಿ ಬರೆದರು. ಅದನ್ನು ಅವರು ನನಗೆ ಕೊಟ್ಟರು. ಪಾವತಿಸಬೇಕಾಗಿರುವ ಮೊತ್ತವನ್ನು ಗ್ರಾಮ ಕಛೇರಿಯಲ್ಲಿ ಪಾವತಿಸಲು ಅವರು ನನಗೆ ಹೇಳಿದರು. ಒಮ್ಮೆ ಅಲ್ಲಿ ಹಿಂದೆ 1955ರಲ್ಲಿ ಮರಿಯ ಎಂದು ಕರೆಯಲ್ಪಡುವ ಯಾರೋ ಒಬ್ಬರ ಹೆಸರಿನಲ್ಲಿ ಈ ಭೂಮಿ ಬರೆಯಲ್ಪಟ್ಟಿದ್ದನ್ನು ನಾನು ನೋಡಿದೆ. ಈ ಮರಿಯ ನಮ್ಮೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ನನ್ನ

> ಈ ಭೂಮಿಯಲ್ಲಿ ನಾವು ಹೊಂದಿರುವ ಆ ಲೌಕಿಕ ಆಶೀರ್ವಾದಗಳ ತಾತ್ಕಾಲಿಕ ಮೇಲ್ವಿಚಾರಕರು ಮಾತ್ರ ನಾವಾಗಿದ್ದೇವೆ.

ಪೋಷಕರು ಈ ಆಸ್ತಿಯನ್ನು 1975ರಲ್ಲಿ ಕೊಂಡುಕೊಂಡರು. ನಾವು ಅದನ್ನು ಹಿಂದೆ ಕೊಂಡುಕೊಂಡಾಗ, ಅದು ವರ್ಕಿ ಎಂಬ ಇನ್ನೊಬ್ಬ ವ್ಯಕ್ತಿಯ ಹೆಸರಿನಲ್ಲಿತ್ತು. 1975ರಿಂದ ಈ ಭೂಮಿ ನನ್ನ ತಾಯಿ ಟ್ರೆಸ್ಸಾರ ಹೆಸರಿನಲ್ಲಿತ್ತು ಆದರೆ ಈಗ ಅದು ಶಾಜಿ ಎಂಬ ನನ್ನ ಹೆಸರಿನಲ್ಲಿದೆ. ಆಸ್ತಿಯು ಬದಲಾಗಿಲ್ಲ, ಆದರೆ ವ್ಯಕ್ತಿಗಳ ಹೆಸರು ಬದಲಾಗುತ್ತಾ ಸಾಗಿತು. ಇದು ಮರಿಯಳ ಹೆಸರಿನಲ್ಲಿದ್ದಾಗ ಅದು ತನ್ನ ಸ್ವಂತದ್ದಲ್ಲ ಎಂದು ಆಕೆ ಹೇಳಿರಬಹುದು. ಮತ್ತು ನಂತರ ಖರೀದಿಸಿದ ಎಲ್ಲರೂ ಅದನ್ನೇ ಹೇಳಿರಬಹುದು. ಆದರೆ ಈಗ, ಇದು ನನ್ನ ಸ್ವಂತದ್ದು ಎಂದು ನಾನು ಹೇಳುವದಿಲ್ಲ. ಸ್ವಲ್ಪ ಸಮಯದವರೆಗೆ ವ್ಯವಹಾರಕ್ಕಾಗಿ ದೇವರು ಅದನ್ನು ನನಗೆ ಒಪ್ಪಿಸಿದ್ದಾರೆ. ಸ್ವಲ್ಪ ಸಮಯದ ನಂತರ, ಇದು ಬೇರೆ ಇನ್ನೊಬ್ಬರ ಪಾಲಾಗಬಹುದು. ಈ ಭೂಮಿಯಲ್ಲಿ ನಮ್ಮದ್ದಾಗಿ ನಾವೇನೂ ಹೊಂದಿಲ್ಲ.

**"ನಾವಾದರೋ ಪರಲೋಕಸಂಸ್ಥಾನದವರು." (ಫಿಲಿ 3:19)**

ಪರಲೋಕದಕಡೆ ನೋಡಿರಿ, ನಿಮ್ಮ ಸಂಪತ್ತನ್ನು ಅಲ್ಲಿ ಕೂಡಿಡಿ. ಕ್ರಿಸ್ತನು ಹೇಳಿದ್ದು, ಇಲ್ಲಿ ನೀವು ಕಳೆದುಕೊಂಡಾಗ, ಅಲ್ಲಿ ಅದನ್ನು ಪಡೆದುಕೊಳ್ಳುವಿರಿ. ಇಲ್ಲಿ ನೀವು ಸೂಖೆಯನ್ನು (ಜೀವ) ಕಳೆದುಕೊಂಡರೆ, ಅಲ್ಲಿ ನೀವು ಸೂಖೆಯನ್ನು (ಜೀವ) ಪಡೆಯುತ್ತೀರಿ. ಸೂಖೆ ಝೋಯೆಗೆ ಸೇರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾರೆ, ಮನುಷ್ಯನ ಜೀವವು ದೇವರ ಜೀವಕ್ಕೆ ಸೇರುತ್ತದೆ. (ಮತ್ತಾ 16:25)

ಮೇಲಿನದ್ದರಿಂದ ಬೆಲೆಯೆಂದರೆ ಏನು ಮತ್ತು ಹೇಗೆ ಅದನ್ನು ಪಾವತಿಸಬೇಕು ಎಂದು ಈಗ ನಾವು ಅರ್ಥಮಾಡಿಕೊಂಡೆವು. ಆಯ್ಕೆ ನಿಮ್ಮದು, ನೀವು ಪಾವತಿಸಬಹುದು ಅಥವಾ ಪಾವತಿಸದೇ ಇರಬಹುದು. ಆದರೆ ಕರ್ತನು ಏನು ಹೇಳಿದನೆಂದು ನೆನಪಿಸಿಕೊಳ್ಳಿರಿ,

**"ತನ್ನ ಪ್ರಾಣವನ್ನು (ಸೂಖೆ) ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು (ಸೂಖೆ) ಕಳಕೊಂಡವನು ಅದನ್ನು ಕಂಡುಕೊಳ್ಳುವನು." (ಮತ್ತಾ 16:25)**

ಅಪೋಸ್ತಲರ ಕೃತ್ಯ 20:28ರಲ್ಲಿ ಹೇಳಲಾಗಿದೆ **"ಸ್ವರಕ್ತದಿಂದ ಸಂಪಾದಿಸಿಕೊಂಡ."**

ಬೆಲೆಯನ್ನು ಪಾವತಿಸದ ಹೊರತು ಕ್ರಿಸ್ತನು ಕಾರ್ಯಮಾಡಲಾಗುವುದಿಲ್ಲ. ಕ್ರಿಸ್ತನು ಬೆಲೆಯನ್ನು ಕಟ್ಟಿದನು ಹಾಗೂ ಸಭೆಯನ್ನು ಸಂಪಾದಿಸಿದನು.

ಇಂದು ನಾವು ಅನುಭವಿಸುತ್ತಿರುವ ರಕ್ಷಣೆ ಇದಾಗಿದೆ. ನಾವು ಬೆಲೆಯನ್ನು ಪಾವತಿಸಿದರೆ ಮಾತ್ರವೇ ದೇವರ ರಾಜ್ಯವನ್ನು ಪಡೆಯುತ್ತೇವೆ.

ರಕ್ಷಣೆಯನ್ನು ನಮಗೆ ಉಚಿತವಾಗಿ ನೀಡಲಾಯಿತು, ಆದರೆ ದೇವರ ರಾಜ್ಯವು ಉಚಿತವಾಗಿಲ್ಲ. ನಾವು ಅದನ್ನು ಪಡೆದುಕೊಳ್ಳಬೇಕು.

## ಇ) ಬೆಲೆಯನ್ನು ಪಾವತಿಸುವುದರ ಮಹತ್ವ (ಹೇಗೆ ಪಡೆಯುವುದು?)

ಒಮ್ಮೆ ಯುರೋಪ್ ನಲ್ಲಿ ಮನಮುರಿಯುವ ಘಟನೆಯನ್ನು ನಾನು ಕೇಳಿದೆ. 18 ವರ್ಷದ ಸುಂದರ ಮಗಳನ್ನು ಹೊಂದಿದ್ದ ಒಬ್ಬ ದೇವರ ಸೇವಕರಿದ್ದರು. ಆಕೆ ಅಭಿಷಿಕ್ತ ದೇವರ ಮಗುವಾಗಿದ್ದಳು ಮತ್ತು ದೇವರ ವಾಕ್ಯವನ್ನು ತುಂಬಾ ಚೆನ್ನಾಗಿ ಸಾರುತ್ತಿದ್ದಳು. ಅವರು ಸಂತೋಷಭರಿತ ಕುಟುಂಬವಾಗಿದ್ದರು. ಒಮ್ಮೆ ವಾಕ್ಯವನ್ನು ಸಾರಿದ ನಂತರ ಹಿಂದಿರುಗುವಾಗ, ಏನೋ ಒಂದು ದುರದೃಷ್ಟಕರ ಸಂಗತಿ ಆ ಮಗುವಿಗೆ ಸಂಭವಿಸಿತು. ಆಕೆ ತನ್ನ ಜೀವವನ್ನು ವಿಮಾನ ಅಪಘಾತದಲ್ಲಿ ಕಳೆದುಕೊಂಡಳು. ದೇವರ ಸೇವಕನಿಗೆ ಇದರ ಬಗ್ಗೆ ತಿಳಿಸಿದಾಗ ಅವನಿಗೆ ಇದನ್ನು ನಂಬಲಾಗಲಿಲ್ಲ. ದೇವರಿಗೆ ಪ್ರಿಯಳಾಗಿದ್ದ ಮತ್ತು ಸುವಾರ್ತೆಯನ್ನು ಸಾರಿದ ಅವನ ಮಗಳಿಗೆ ಅಂತಹ ಸಂಗತಿ ಸಂಭವಿಸುವುದಿಲ್ಲ ಎಂದು ನಂಬುತ್ತಾ ಅವನು ಆಸ್ಪತ್ರೆಗೆ ಹೋದ. ಆದರೆ ಅವನು ತನ್ನ ಮಗಳು ಶವವಾಗಿ ಮಲಗಿರುವುದನ್ನು ನೋಡಿದಾಗ ವಾಸ್ತವತೆ ಅವನನ್ನು ಜೋರಾಗಿ ಹೊಡೆಯಿತು. ಪಾರ್ಥಿವ ಶರೀರವನ್ನು ನೋಡಿ, ಅವನ ಹೃದಯ ಚೂರುಚೂರಾಯಿತು ಮತ್ತು ಅವನು ತಕ್ಷಣವೇ ಹೇಳಲು ಪ್ರಾರಂಭಿಸಿದ, "ಮಗಳೇ ಕ್ರಿಸ್ತನ ಹೆಸರಿನಲ್ಲಿ ಎದ್ದೇಳು." ಆದಾಗ್ಯೂ ಅವನೊಳಗೆ ಪರಿಶುದ್ಧಾತ್ಮನು ಹೇಳಿದನು, **"ಅವಳನ್ನು ಬಿಡು, ಅವಳು ಪರಲೋಕದಲ್ಲಿದ್ದಾಳೆ."** ಆ ಮಗುವಿಗೆ ಮತ್ತು ಕುಟುಂಬಕ್ಕೆ ಯಾಕೆ ಇದು ಸಂಭವಿಸಿತು ಎಂದು ನೀವು ಆಶ್ಚರ್ಯಗೊಳ್ಳಬಹುದು. ಯಾಕೆ ದೇವರಾತ್ಮನು ಈ ರೀತಿಯಾಗಿ ಮಾತಾಡಿದನು?

ಈ ದೇವರ ಸೇವಕನು ತನ್ನ ಮಗಳ ಮೇಲೆ ಕಾನೂನುಬದ್ಧ ಅಧಿಕಾರವನ್ನು ಹೊಂದಿದ್ದನು. ಅವನ ಪ್ರಕಾರ ಮಗುವು ಬರಬೇಕಾಗಿತ್ತು ಮತ್ತು ಈಗ ಸಾಯಬಾರದಾಗಿತ್ತು ಹಾಗೂ ಇದು ಅನ್ಯಾಯವಾಗಿ ಮಾಡಲಾದ ಸೈತಾನನ ಕಾರ್ಯವಾಗಿತ್ತು ಎಂದು ಪ್ರತಿಪಾದಿಸುತ್ತಿದ್ದನು. ಆದರೆ ದೇವರಾತ್ಮನು ಅವನೊಂದಿಗೆ ಮಾತಾಡಿದಾಗ, ಅವನು ವಿಧೇಯನಾಗಿ, ಸತ್ತವಳನ್ನು ಎಬ್ಬಿಸುವ ಕಾರ್ಯವನ್ನು ನಿಲ್ಲಿಸಿ ಮನೆಗೆ ಹೋದನು. ಆದರೆ ತನ್ನ ಮನಸ್ಸಿನಲ್ಲಿ, "ಇದು ಅನ್ಯಾಯ, ಇದು ಅನ್ಯಾಯ" ಎಂದು ಗುಣುಗುಟ್ಟುತ್ತಿದ್ದನು.

ಅವನ ಪ್ರಿಯಳಾದ ಮಗಳು ಮರಣಿಸಿದ್ದಳು. ನಿತ್ಯಕ್ರಮದಂತೆ, ದೈನಂದಿನ ಎಲ್ಲಾ ಆರಾಧನೆಗಳು ಮತ್ತು ಇತರೆ ಪ್ರಾರ್ಥನೆಗಳು ಭಾನುವಾರದ ಆರಾಧನೆಗಳು ಸಾಮಾನ್ಯವಾಗಿ ನಡೆಯುವಂತೆ ಜರುಗಿದವು. ಈ ದೇವರ ಸೇವಕನು ಯಂತ್ರದ ರೀತಿಯಲ್ಲಿ ಹಾಡಿದನು, ಪ್ರಸಂಗಿಸಿದನು ಮತ್ತು ವಾಕ್ಯವನ್ನು ಸಾರಿದನು ಆದರೆ ಅವನ ಮನಸ್ಸಿನಲ್ಲಿ "ಇದು ಅನ್ಯಾಯ, ಇದು ಅನ್ಯಾಯ" ಎಂದು ಹೇಳುತ್ತಲೇ ಇದ್ದನು. ವಿಮಾನ ಅಪಘಾತವು ಮುಂಜಾನೆ 3 ಗಂಟೆಗೆ ಸಂಭವಿಸಿತ್ತು. ಒಂದು ತಿಂಗಳ ನಂತರ, ಮುಂಜಾನೆ 3 ಗಂಟೆಗೆ ಅವನ ಹಾಸಿಗೆಯ ಬಳಿ ಕ್ರಿಸ್ತನು ಅವನ ಮುಂದೆ ನಿಂತಿರುವಂತೆ ದರ್ಶನವನ್ನು ಕಂಡನು.

ಯಾವುದೇ ಪರಿಚಯವನ್ನು ನೀಡದೇ, ಕ್ರಿಸ್ತನು ಅವನಿಗೆ ನೇರವಾಗಿ ಹೇಳಲು ಪ್ರಾರಂಭಿಸಿದ್ದೇನೆಂದರೆ, "ನೀನು ನಿನ್ನ ಹೃದಯದಲ್ಲಿ, ಇದು ಅನ್ಯಾಯ ಎಂದು

ಹೇಳುತ್ತಿದ್ದೀಯ. ನಿನಗೆ ಗೊತ್ತಾ! ನನ್ನ ಪ್ರಮುಖ ಮೂರೂ ನಾಯಕರೂ ಕಳೆದು ಹೋದರು, ಅದೂ ಸಹ ಅನ್ಯಾಯ. ನಾನು ಸ್ನಾನಿಕನಾದ ಯೋಹಾನನನ್ನು ಕಳೆದುಕೊಂಡೆ, ಅದೂ ಅನ್ಯಾಯವಾಗಿತ್ತು. ನಾನು ಸ್ತೆಫನನನ್ನು ಕಳೆದುಕೊಂಡೆ, ಅದೂ ಕೂಡಾ ಅನ್ಯಾಯವಾಗಿತ್ತು. ನಾನು ಯಾಕೋಬನನ್ನೂ ಕಳೆದುಕೊಂಡೆ ಮತ್ತು ಅದೂ ಸಹ ಅನ್ಯಾಯವಾಗಿತ್ತು. ನೀನು ಹೋಗು ಮತ್ತು ದೇವರ ವಾಕ್ಯವನ್ನು ಓದು ಹಾಗೂ ಆ ಪ್ರತಿಯೊಬ್ಬರನ್ನೂ ನಾನು ಅನ್ಯಾಯವಾಗಿ ಕಳೆದುಕೊಂಡಾಗ ಸಭೆಗೆ ಏನು ಮಾಡಿದ್ದೇನೆಂದು ಕಂಡುಕೋ."

ಅವನು ಸತ್ಯವೇದವನ್ನು ಓದಲು ಪ್ರಾರಂಭಿಸಿದನು. ಮತ್ತಾಯ 4:12ರಲ್ಲಿ, ಸ್ನಾನಿಕನಾದ ಯೋಹಾನನು ಬಂಧಿಸಲ್ಪಟ್ಟನು ಎಂದು ನಾವು ನೋಡುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವದಾದರೆ "ಬೆಳಕು" ಬಂಧಿಸಲ್ಪಟ್ಟಿತ್ತು. ಮತ್ತಾಯ 4:12ರಲ್ಲಿ "ಬೆಳಕು" ಸೆರೆಗೆಹಾಕಲ್ಪಟ್ಟಾಗ, ಮತ್ತಾಯ 4:17ರಲ್ಲಿ "ಸೂರ್ಯ ಅಥವಾ ಮಗ" ಕಾಣಿಸಿಕೊಂಡನು. "ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂದು ಯೇಸು ಪ್ರಥಮ ಬಾರಿಗೆ ಪ್ರಸಂಗಿಸಿದನು. ಯೋಹಾನನು ಬೆಲೆಯನ್ನು ಪಾವತಿಸಿದಾಗ, ಯೋಹಾನನಿಗಿಂತಲೂ ಬಲಶಾಲಿಯಾದವನು ಕಾಣಿಸಿಕೊಂಡನು.

ಅಪೋಸ್ತಲರ ಕೃತ್ಯ 7ರಲ್ಲಿ, ಸ್ತೆಫನನು ಕಲ್ಲೆಸೆದು ಕೊಲ್ಲಲ್ಪಟ್ಟನು. ಸ್ತೆಫನನು ಪಾವತಿಸಿದ ಬೆಲೆಯಲ್ಲಿ, ಕಲ್ಲುಗಳನ್ನು ಎಸೆದಂತಹವರ ಬಟ್ಟೆಗಳನ್ನು ನೋಡಿಕೊಂಡ ಸೌಲನೆಂಬ ಒಬ್ಬ ಯೌವನಸ್ಥನಿದ್ದನು. ಸ್ತೆಫನನ ಮೇಲಿದ್ದಂತಹ ಅಭಿಷೇಕ ಸೌಲನೆಂಬ ಹೆಸರಿನ ಪೌಲನ ಮೇಲೆ ಬಂತು. ಸ್ತೆಫನನು ಪಾವತಿಸಿದ ಬೆಲೆಗೆ ಸೌಲನು ಬೆಳಕಿಗೆ ಬಂದನು. ದೇವರು ಪೌಲನನ್ನು ಪ್ರಬಲವಾಗಿ ಉಪಯೋಗಿಸಿದರು ಮತ್ತು ಅವನ ಮೂಲಕ 13 ಪತ್ರಿಕೆಗಳನ್ನು ಬರೆಯಲು ಅನುವುಮಾಡಿದರು. ಸ್ತೆಫನನು ನಾಶವಾದಾಗ, ಕೇವಲ ಯೆರೂಸಲೇಮಿನಲ್ಲಿದ್ದ ಸಭೆಯು ಯೆರೂಸಲೇಮಿನಿಂದ ಯೂದಾಯಕ್ಕೆ, ಸಮಾರ್ಯಕ್ಕೆ ಮತ್ತು ಲೋಕದ ಕಟ್ಟಕಡೆಯವರೆಗೂ ಬೆಳೆಯಲು ಪ್ರಾರಂಭಿಸಿತು. (ಅ.ಕೃ 8:1)

ಅ.ಕೃ 12ರಲ್ಲಿ ಯಾಕೋಬನು ಖಡ್ಗದಿಂದ ಕೊಲ್ಲಲ್ಪಟ್ಟನು ಮತ್ತು ಅ.ಕೃ 12ರಲ್ಲಿ ಪರಿಶುದ್ಧಾತ್ಮನು ತಾನು ಕರೆದಿದ್ದ ಕೆಲಸಕ್ಕಾಗಿ ಬೇರ್ಪಡುವಂತೆ ಬಾರ್ನಬ ಮತ್ತು ಸೌಲರಿಗೆ ಆದೇಶಿಸಿದನು. ಒಬ್ಬ ಬೆಲೆಯನ್ನು ಪಾವತಿಸಿದ ಮತ್ತು ಇನ್ನೊಬ್ಬ ಮೇಲೆದ್ದ. ನಾವು ಬೆಲೆಯನ್ನು ಪಾವತಿಸುವಾಗ, ದೇವರು ಈ ಭೂಮಿಯ ಮೇಲೆ ಇನ್ನೊಂದು ಮಹಾ ಸಂಗತಿಯನ್ನು ತನ್ನ ಸಭೆಯಲ್ಲಿ ಮಾಡುತ್ತಾನೆ. ದೇವರ ಸೇವಕನು ತನ್ನ ಮಗಳು ಪಾವತಿಸಿದ ಬೆಲೆಯಿಂದ, ಅವನ ಸೇವೆಯ ಮೂಲಕ ದೇವರು ಏನೋ ಮಹತ್ತನ್ನು ಸಭೆಯಲ್ಲಿ ಮಾಡಲಿಕ್ಕಿದ್ದಾನೆ ಎಂದು ಅರ್ಥಮಾಡಿಕೊಂಡನು. ಕಲ್ವಾರಿಯಲ್ಲಿ, ಸ್ವತಃ ಯೇಸುವೇ ಬೆಲೆಯಾದನು ಮತ್ತು ಅದರ ಕಾರಣದಿಂದ ಸಭೆಯು ರೂಪುಗೊಂಡಿತು!

**"ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ." (ಅ.ಕೃ 20:28)**

ಬೆಲೆಯನ್ನು ಪಾವತಿಸದೇ, ನಾವು ಜೀವನದಲ್ಲಿ ಏನನ್ನೂ ಸಂಪಾದಿಸಲು ಆಗುವದಿಲ್ಲ. ಯೋಬ ಅವನ ಜೀವನದಲ್ಲಿ ಸಮಸ್ಯೆಗಳನ್ನು ಅನುಭವಿಸಲು ಪ್ರಾರಂಭಿಸಿದಾಗ, ನಮ್ಮಂತೆಯೇ ಅವನು ಸಮಸ್ಯೆಯನ್ನು ತೆಗೆದುಹಾಕಲು ಪ್ರಾರ್ಥಿಸಿರಬಹುದು. ಆದರೆ ಸಮಸ್ಯೆ ತೆಗೆದುಹಾಕಲ್ಪಡಲಿಲ್ಲ. ಯೋಬನನ್ನು ಟೀಕಿಸಲು ಪ್ರಾರಂಭಿಸಿದ ಅವನ ಸ್ನೇಹಿತರ ವಿರೋಧವಾಗಿ ಯೋಬ ತನ್ನ ಹೃದಯದಲ್ಲಿ ಅಸಮಾಧಾನವನ್ನು ಹೊಂದಿದ್ದ. ಆದದರಿಂದ, ಅವನು ತನ್ನ ಸ್ನೇಹಿತರಿಗೆ ಪ್ರಾರ್ಥಿಸಲು ಸಾಧ್ಯವಾಗುತ್ತಿಲ್ಲ ಎಂದು ದೇವರಿಗೆ ತಿಳಿದಿತ್ತು. ದೇವರು ಯೋಬನಿಗೆ ಏನು ಹೇಳಿದನೆಂದು ವಿವರಿಸಲು ನನಗೆ ಅನುವುಮಾಡಿಕೊಡಿ;

> ಬೆಲೆಯನ್ನು ಪಾವತಿಸದೇ, ಜೀವನದಲ್ಲಿ ನಾವು ಏನನ್ನೂ ಪಡೆಯಲು ಸಾಧ್ಯವಿಲ್ಲ.

"ಯೋಬನೇ, ನೀನು ಬೆಲೆಯನ್ನು ಪಾವತಿಸಬೇಕು," ಹೇಗೆಂದು ನಾನು ನಿನಗೆ ಹೇಳುತ್ತೇನೆ?

ನಿನ್ನನ್ನು ಟೀಕಿಸುತ್ತಿರುವ ನಿನ್ನ ಸ್ನೇಹಿತರಿಗಾಗಿ ಪ್ರಾರ್ಥಿಸಲು ನಿನಗೆ ಆಗುವದಿಲ್ಲ ಎಂದು ನನಗೆ ಗೊತ್ತು ಆದರೆ ನೀನು ಅವರಿಗಾಗಿ ಪ್ರಾರ್ಥಿಸಬೇಕು. ನೀನು ನಿನ್ನ "ಸ್ವಾರ್ಥ"ವನ್ನು ನಾಶಮಾಡಲು ಮತ್ತು ಬೆಲೆಯನ್ನು ಪಾವತಿಸಲು ಇದೊಂದೇ ದಾರಿ. ನಂತರ ಯೋಬನು ತನಗಾಗಿ ಪ್ರಾರ್ಥಿಸುವದನ್ನು ನಿಲ್ಲಿಸಿದನು ಮತ್ತು ಅವನ ಸ್ನೇಹಿತರಿಗಾಗಿ ಪ್ರಾರ್ಥಿಸಲು ಪ್ರಾರಂಭಿಸಿದನು. ಅವನ "ಸ್ವಾರ್ಥ" ಮಾಡಲು ಆಗದ್ದನ್ನು, ಅಂದರೆ ಅವನನ್ನು ಟೀಕಿಸಿದವರಿಗಾಗಿ ಪ್ರಾರ್ಥಿಸಲಾಗದ್ದನ್ನು ದೇವರು ಅವನಿಂದಾಗುವಂತೆ ಮಾಡಿದರು. ಯೋಬನು ಪ್ರಾರ್ಥಿಸಿದಾಗ ಯಾವುದು ನಾಶವಾಯಿತು? ಅವನ ಸೂಖಿ (ಸ್ವಾರ್ಥ) ನಾಶವಾಯಿತು. ಯೋಬನು ಬೆಲೆಯನ್ನು ಪಾವತಿಸಿದನು. ಅದರಂತೆಯೇ ಯೋಬ ತಾನು ಕಳೆದುಕೊಂಡಿದ್ದರ ಎರಡರಷ್ಟನ್ನು ಪಡೆದುಕೊಂಡನು.

ಯಾತಕ್ಕಾಗಿ ನಾವು ಬೆಲೆಯನ್ನು ಪಾವತಿಸಬೇಕು?

ಯಾವ ಮಟ್ಟಕ್ಕೆ ನಾವು ನಮ್ಮ ಸೂಖಿಯನ್ನು (ಸ್ವಾರ್ಥ) ನಾಶಮಾಡುತ್ತೇವೋ ಅದೇ ಮಟ್ಟಕ್ಕೆ ಝೋಯೆ ನಮ್ಮಲ್ಲಿ ಬೆಳೆಯುತ್ತದೆ. ಮತ್ತು ಝೋಯೆ ಯಾವ ಮಟ್ಟಕ್ಕೆ ನಮ್ಮಲ್ಲಿ ಬೆಳೆಯುತ್ತದೋ ಅದೇ ಮಟ್ಟಕ್ಕೆ ದೇವರ ರಾಜ್ಯದ ಐಶ್ವರ್ಯ ನಮ್ಮಲ್ಲಿ ತುಂಬಲ್ಪಡುತ್ತದೆ. ಇದು ದೇವರು ನಮ್ಮ ಮೂಲಕ ಕಾರ್ಯಮಾಡುವ ಏಕೈಕ ಮಾರ್ಗವಾಗಿದೆ. ದೇವರ ವಾಕ್ಯದ ಪ್ರಕಾರ, ನಮ್ಮೊಳಗಿನ ಆತನ ಐಶ್ವರ್ಯದ ಪ್ರಕಾರ ಅವನು ನಮ್ಮನ್ನು ಆಶೀರ್ವದಿಸುತ್ತಾನೆ. ಬೆಲೆಯನ್ನು ಪಾವತಿಸಿದ ನಂತರ ಮಾತ್ರವೇ ದೇವರ ಕಾರ್ಯ ನಮ್ಮ ಮೂಲಕ ಸಂಭವಿಸಲು ಪ್ರಾರಂಭಿಸುತ್ತದೆ.

> ದೇವರ ಐಶ್ವರ್ಯ ನಮ್ಮಲ್ಲಿ ಎಷ್ಟರ ಮಟ್ಟಿಗೆ ಕಾರ್ಯಮಾಡುತ್ತಿದೆ ಎನ್ನುವುದರ ಆಧಾರದ ಮೇಲೆ ನಮ್ಮ ಮೂಲಕ ಲೋಕಕ್ಕೆ ದೇವರ ಆಶೀರ್ವಾದಗಳು ಬಿಡುಗಡೆಯಾಗುತ್ತವೆ.

ಮೊದಲು, ಬಡರಾಷ್ಟ್ರಗಳು ಯಾಕೆ ಬಡರಾಷ್ಟ್ರಗಳಾಗಿ ಮುಂದುವರೆಯುತ್ತಿವೆ ಎಂದು

ನಾನು ಆಶ್ಚರ್ಯಗೊಳ್ಳುತ್ತಿದ್ದೆ? ಅವರು ಅಲ್ಲಿ ಒಳ್ಳೆಯ ಗುಣಮಟ್ಟದ ಕಾಗದ ಮತ್ತು ಒಳ್ಳೆಯ ಅಚ್ಚುಹಾಕುವ ಯಂತ್ರಗಳನ್ನು ಹೊಂದಿಲ್ಲವೇ? ಅವರು ತಮ್ಮ ಬಡತನವನ್ನು ತೆಗೆದುಹಾಕಲು ಒಳ್ಳೆಯ ಕಾಗದಗಳನ್ನು ಖರೀದಿಸಿ ಕೆಲವು ಡಾಲರ್ ಗಳನ್ನು ಮುದ್ರಿಸಬಹುದಲ್ಲವೇ ಎಂದು ನಾನು ಯೋಚಿಸುತ್ತಿದ್ದೆ. ನಂತರದಲ್ಲಿ ಇದರ ಕುರಿತು ನಾನು ಕೆಲವು ಬ್ಯಾಂಕ್ ಅಧಿಕಾರಿಗಳನ್ನು ವಿಚಾರಿಸಿದಾಗ, ಅವರು ಇದರ ಕುರಿತು ಯಾವ ಅರಿವನ್ನೂ ಹೊಂದಿಲ್ಲ ಎಂದು ಹೇಳಿದರು. ಕೊನೆಗೂ ನಾನು ಒಬ್ಬ ಸಹೋದರನನ್ನು ಕೇಳಿದಾಗ ಅವರು ಹೇಳಿದರು, ನಾವು ಆ ರೀತಿಯಾಗಿ ನೋಟುಗಳನ್ನು ಮುದ್ರಿಸಲು ಆಗುವದಿಲ್ಲ. ಬದಲಿಗೆ ನಾವು ಮುದ್ರಿಸಲು ಉದ್ದೇಶಿಸುತ್ತಿರುವಷ್ಟು ನೋಟಿನ ಆಧಾರದ ಮೇಲೆ ಸಮಾನವಾದ ಹಣದ ಮೊತ್ತವನ್ನು ವಿಶ್ವಬ್ಯಾಂಕ್ ನಲ್ಲಿ ಠೇವಣಿ ಇಡಬೇಕು. ನಾವು ಚಿನ್ನವಾಗಿ, ತೈಲವಾಗಿ ಅಥವಾ ಬೇರೆ ಏನಾದರೋ ಆಗಿ ಠೇವಣಿ ಇಟ್ಟ ನಂತರವೇ ನಾವು ನೋಟುಗಳನ್ನು ಮುದ್ರಿಸಬಹುದು. ಆದ್ದರಿಂದ ನಾವು ಸಮಾನವಾದ ಬೆಲೆಯನ್ನು ಅದಕ್ಕಾಗಿ ಪಾವತಿಸಬೇಕು. ದೇವರ ರಾಜ್ಯದಲ್ಲಿಯೂ ಇದು ಇದೇ ರೀತಿಯಾಗಿದೆ.

ಯಾಕೆ ಯೇಸು ಕ್ರಿಸ್ತನು ಈ ಲೋಕಕ್ಕೆ ಪರಲೋಕದಿಂದ ಬರಬೇಕು ಮತ್ತು ಶಿಲುಬೆಯ ಮೇಲೆ ಸಾಯಬೇಕು? ನಿಯಮ ನಿಯಮವೇ, ಮತ್ತು ನಮ್ಮ ದೇವರು ನಿಯಮಗಳಿಂದ ಕೆಲಸಮಾಡುವ ದೇವರಾಗಿದ್ದಾನೆ.

**"ನನ್ನ ಒಡಂಬಡಿಕೆಯನ್ನು ಭಂಗಪಡಿಸುವದಿಲ್ಲ; ನನ್ನ ಮಾತನ್ನು ಬದಲಿಸುವದಿಲ್ಲ."**
**(ಕೀರ್ತನೆ 89:34)**

ದೇವರು ತನ್ನ ನಿಯಮವನ್ನು ಬದಿಗಿಟ್ಟು ಬಲಕ್ಕಾಗಲಿ ಎಡಕ್ಕಾಗಲಿ ತಿರುಗುವದಿಲ್ಲ. ದೇವರು ನಮ್ಮ ಮೇಲೆ ದಯಪಾಲಿಸಿರುವ ಆಶೀರ್ವಾದಗಳನ್ನು ಅನುಭವಿಸಲಿಕ್ಕೆ ನಮಗೆ ಏಕೆ ಆಗುತ್ತಿಲ್ಲ ಎಂದು ನೀವು ಅರ್ಥಮಾಡಿಕೊಂಡಿರಬಹುದೆಂದು ನಾನು ಆಶಿಸುತ್ತೇನೆ. ನಮ್ಮ ಸೂಖಿಯನ್ನು ನಾಶಮಾಡಲು ಮತ್ತು ಝೋಯೆಯ ಮೂಲಕ ಸೂಖಿಯನ್ನು ಜಯಿಸಲು ದೇವರು ನಮ್ಮಲ್ಲಿ ಕಾರ್ಯಮಾಡುತ್ತಿದ್ದಾನೆ. ನಾವು ಆ ಕಾರ್ಯದಲ್ಲಿ ಸಹಕಾರ ನೀಡದಿದ್ದರೆ ಪ್ರತೀ ನಿಮಿಷವೂ ನಾವು ಆತ್ಮೀಕವಾಗಿ ಕೊರತೆಯುಳ್ಳ ಹಸುಮಕ್ಕಳಾಗಿ ಮುಂದುವರೆಯುತ್ತೇವೆ. ಲೋಕಕ್ಕೆ ಕ್ರಿಸ್ತನನ್ನು ತೋರಿಸುವ ಬದಲು, ನಮ್ಮನ್ನು ನಾವು ತೋರಿಸುತ್ತೇವೆ, ಶರೀರಕ್ಕೆ ಅನುಗುಣವಾಗಿ ಕಾರ್ಯಮಾಡುತ್ತೇವೆ, ಕ್ರಿಸ್ತನ ಹೆಸರಿಗೆ ಅವಮಾನ ತರುತ್ತೇವೆ. ಪ್ರಕಟಣೆ 3:14ರ ಪ್ರಕಾರ ಲವೊದಿಕೀಯ ಸಭೆಗೆ ಸಂಭವಿಸಿದ್ದು ಇದೆ. ದೇವರ ವಾಕ್ಯದ ಪ್ರಕಾರ ಪರಿವರ್ತನೆಯಾಗಿರಿ. ನಾವು ಮುಂದೆ ಹೆಚ್ಚು ಸಮಯವನ್ನು ಹೊಂದಿಲ್ಲ. ಸರ್ವಶಕ್ತ ದೇವರು ನಮ್ಮೊಂದಿಗಿದ್ದಾನೆ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ನನ್ನ ಸ್ವಂತ ಬಯಕೆಗಳನ್ನು ತ್ಯಾಗಮಾಡಿ ನಿನ್ನ ರಾಜ್ಯವನ್ನು ನೋಡಲು ಮತ್ತು ಬಾಧ್ಯಮಾಡಿಕೊಳ್ಳಲು ನನಗೆ ಸಹಾಯ ಮಾಡು. ನನ್ನ ಮೂಲಕ ಈ ಲೋಕದಲ್ಲಿ ನಿನ್ನ ಬಯಕೆಗಳು ನೆರವೇರಲು ನಾನು ನಿನ್ನ ಚಿತ್ತದಂತೆ ಕೆಲಸಮಾಡಲು ಕೃಪೆಮಾಡು. ನಾನು ಈ ಲೋಕದಲ್ಲಿ ಹೊಂದಿರುವ ಸ್ವತ್ತುಗಳು ನನ್ನದಲ್ಲ ಮತ್ತು ನಾನು ಅದನ್ನು ನೋಡಿಕೊಳ್ಳುವವನು ಮಾತ್ರ ಎಂದು ಅರಿತುಕೊಳ್ಳಲು ನನಗೆ ಸಹಾಯ ಮಾಡು. ಈ ಭೂಮಿಯ ಮೇಲೆ ನಿನ್ನ ಇಚ್ಛೆಯನ್ನು ನೆರವೇರಿಸುವ ಮೂಲಕ ನನ್ನ ಆಂತರಿಕ ಮನುಷ್ಯ ಮತ್ತು ಅವನ ಶಾಶ್ವತ ಸಂಪತ್ತಿನತ್ತ ಹೆಚ್ಚು ಗಮನಹರಿಸಲು ನನಗೆ ಸಹಾಯಮಾಡು. ಈ ಆತ್ಮೀಕ ಒಳನೋಟಕ್ಕಾಗಿ ವಂದನೆಗಳು ತಂದೆ. ಎಲ್ಲಾ ಮಹಿಮೆಯೂ ನಿನಗೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಮೊದಲು ನೋಡಿ ಹಾಗೂ ನಂತರ ಅದನ್ನು ಬಾಧ್ಯಮಾಡಿಕೊಳ್ಳಿ.
2. ಸೈತಾನನಿಂದ ತಾತ್ಕಾಲಿಕವಾಗಿ ಆಳಲ್ಪಡುವ ಈ ಲೋಕದಲ್ಲಿ ನಮ್ಮ ಕಾನೂನು ಹಕ್ಕನ್ನು ಅಥವಾ ನಮ್ಮ ಬಯಕೆಗಳನ್ನು ದೇವರ ಕಾರ್ಯಕ್ಕಾಗಿ ಸ್ವಇಚ್ಛೆಯಿಂದ ನಾವು ತ್ಯಾಗಮಾಡಬೇಕು. ಇದೇ ನಾವು ಪಾವತಿಸಬೇಕಾಗಿರುವ ಬೆಲೆ.
3. "ಹೊಸದಾಗಿ ಹುಟ್ಟಿರುವಂಥ" ನಾವು ಒಂದೇ ಸಮಯದಲ್ಲಿ ಎರಡು ಲೋಕಗಳಲ್ಲಿ ಜೀವಿಸುತ್ತಿದ್ದೇವೆ ಎಂದು ಅರ್ಥಮಾಡಿಕೊಳ್ಳಬೇಕು. ನಾವು ಹಳೆಯ ಮತ್ತು ಹೊಸ "ಸ್ವಯಂ" ಅನ್ನು ಹೊಂದಿದ್ದೇವೆ. ಹಳೆಯದನ್ನು ಹೊಸದರಿಂದ ಬದಲಿಸಲು ಹಳೆಯದರಲ್ಲಿನ ಆಲೋಚನೆಗಳು ನಾಶವಾಗಬೇಕು.
4. ಬಾಧೆಗಳ ಮಧ್ಯದಲ್ಲಿ ಹಾದುಹೋಗುವ ಬದಲು, ನಾವು ಶರೀರದಲ್ಲಿ ಕಾರ್ಯಮಾಡಬಾರದು ಮತ್ತು ಅದರ ವಿರುದ್ಧ ಹೋರಾಡಬಾರದು. ನಾವು ಹೋರಾಡಿದರೆ ಅದೇ ಗಳಿಗೆಯಲ್ಲಿ ನಮ್ಮ ಆತ್ಮೀಕ ಬಲ ಕುಂದಿಹೋಗುತ್ತದೆ.
5. ಲೋಕದ್ದನ್ನು ನಾವು ನೀಡುವ ಅದೇ ಮಟ್ಟಕ್ಕೆ ದೇವರ ರಾಜ್ಯದ ಸಂಗತಿಗಳು ನಮ್ಮಲ್ಲಿ ತುಂಬುತ್ತವೆ.
6. ಈ ಭೂಮಿಯ ಸಂಪತ್ತು ನಮ್ಮದಲ್ಲ. ನಾವು ನಮ್ಮದ್ದೆಂದು ಯೋಚಿಸುವ, ನಮ್ಮ ಹೆಸರಿನಲ್ಲಿನ ಆಸ್ತಿ ಅಥವಾ ಭೂಮಿ, ವಾಸ್ತವವಾಗಿ ನಮ್ಮದಲ್ಲ. ನಾವು ಅದರ ವ್ಯವಸ್ಥಾಪಕರು ಅಥವಾ ಅದನ್ನು ನೋಡಿಕೊಳ್ಳುವವರು ಮಾತ್ರ.
7. ರಕ್ಷಣೆ ನಮಗೆ ಉಚಿತವಾಗಿ ನೀಡಲ್ಪಟ್ಟಿದೆ, ನಾವು ಅದನ್ನು ಉಚಿತವಾಗಿ ಸ್ವೀಕರಿಸುತ್ತೇವೆ. ಆದರೆ ದೇವರ ರಾಜ್ಯವು ಉಚಿತವಾಗಿಲ್ಲ, 'ಪರಿಶುದ್ಧಾತ್ಮನು ನೀಡುವ ದೇವರ ವಾಕ್ಯಕ್ಕೆ ವಿಧೇಯತೆಯೆಂಬ' ಬೆಲೆಯನ್ನು ಪಾವತಿಸುವುದರಿಂದ ನಾವು ಅದನ್ನು ಬಾಧ್ಯಮಾಡಿಕೊಳ್ಳಬೇಕು.

8. ನಾವು ಬೆಲೆಯನ್ನು ಪಾವತಿಸದ ಹೊರತು ನಮ್ಮ ಜೀವನದಲ್ಲಿ ಏನನ್ನೂ ನಾವು ಸಂಪಾದಿಸಲು ಆಗುವದಿಲ್ಲ.
9. ಬೆಲೆಯನ್ನು ಪಾವತಿಸದ ಹೊರತು ಕ್ರಿಸ್ತನು ಕಾರ್ಯಮಾಡಲಾಗುವದಿಲ್ಲ. ಕ್ರಿಸ್ತನು ಬೆಲೆಯನ್ನು ಕಟ್ಟಿದನು ಮತ್ತು ಸಭೆಯನ್ನು ಸಂಪಾದಿಸಿಕೊಂಡನು.
10. ನಮ್ಮನ್ನು ನಾವು ನಾಶವಾಗಲು ಎಷ್ಟು ಒಪ್ಪಿಸುತ್ತೇವೋ, ಅಷ್ಟರ ಮಟ್ಟಕ್ಕೆ ನಮ್ಮೊಳಗಿನ ದೇವರ  ರಾಜ್ಯದ ಸಂಪತ್ತನ್ನು ಉಪಯೋಗಿಸಿ ದೇವರು ನಮ್ಮನ್ನು ಪುನರ್ ನಿರ್ಮಿಸುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಪರಿಶುದ್ಧಾತ್ಮನ ಶಿಸ್ತಿನಿಂದ ನಮ್ಮ ಪ್ರಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಹೊಸದಾಗಿ ಹುಟ್ಟಿದ ಆತ್ಮದಲ್ಲಿ ದೇವರ ಸಂಪತ್ತಿನ ವ್ಯಾಪ್ತಿಯನ್ನು ಆಧರಿಸಿ ದೇವರು ತನ್ನ ಆಶೀರ್ವಾದಗಳನ್ನು ನಮ್ಮ ಮೂಲಕ ಜಗತ್ತಿಗೆ ಬಿಡುಗಡೆಮಾಡಲು ಸಾಧ್ಯವಾಗುತ್ತದೆ. (ಮತ್ತಾ11:29)



*ಅಧ್ಯಾಯ 16*

# ಶಿಲುಬೆಯ ಮೂರು ವೈರಿಗಳು

*"ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು." (ಮತ್ತಾ 11:29)*

ಇಂದು ವಿಶ್ವಾಸಿಗಳು ನಾವು "ಬಾಧೆಯ" ಕುರಿತು ಮಾತಾಡುವಾಗ ಸಾಮಾನ್ಯವಾಗಿ ಭಯಗೊಳ್ಳುತ್ತಾರೆ. ಜನರನ್ನು ಎಲ್ಲಾ ರೀತಿಯ ಬಾಧೆಯಿಂದ ರಕ್ಷಿಸಲು ಇಂದು ಅನೇಕ ಸಭೆಗಳು ಬಿಡುಗಡೆಯ ಕೂಟವನ್ನು ನಡೆಸುವದಕ್ಕೆ ಇದೂ ಒಂದು ಕಾರಣವಾಗಿದೆ. ಈ ಬಾಧೆಯ ಕಾರಣವೇನೆಂದು ಅವರು ಅರ್ಥಮಾಡಿಕೊಳ್ಳುವದಿಲ್ಲ ಹಾಗೂ ಅದನ್ನು ತೊಡೆದುಹಾಕಲು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಾರೆ. ಯಾವುದು ನ್ಯಾಯಯುತ ಮತ್ತು ಯಾವುದು ನ್ಯಾಯಯುತವಲ್ಲ ಎಂದು ಅರ್ಥಮಾಡಿಕೊಳ್ಳದೆಯೇ, ಈ "ಬಾಧೆಗಳನ್ನು" ತೆಗೆದುಹಾಕುವದಕ್ಕಾಗಿ ಅವರು ಬಿಡುಗಡೆ ಸೇವೆಗಳಿಗೆ ಹೋಗುತ್ತಾರೆ. ಆದಾಗ್ಯೂ ವಿಷಯಗಳನ್ನು ನಮ್ಮ ಸ್ವಂತ ಕೈಗೆತ್ತಿಕೊಳ್ಳಲು ನಿರ್ಧರಿಸುವ ಮೊದಲು ನಾವು ಅರ್ಥಮಾಡಿಕೊಳ್ಳಬೇಕು.

ಮೂಲತಃವಾಗಿ ಎರಡು ರೀತಿಯ ಬಾಧೆಗಳಿವೆ – ಒಂದು ಕರ್ತನು ಅನುಮತಿಸಿರುವದು ಹಾಗೂ ಇನ್ನೊಂದು ಕರ್ತನು ಅನುಮತಿಸದೆ ಇರುವದು. ಒಬ್ಬ ವಿಶ್ವಾಸಿ ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ನಂತರವೇ ಸಮಸ್ಯೆಯನ್ನು ತೊಲಗಿಸುವ ಸಲುವಾಗಿ ಉಪವಾಸ ಹಾಗೂ ಪ್ರಾರ್ಥನೆಯನ್ನು ಪ್ರಾರಂಭಿಸಬೇಕು. ಕರ್ತನನ್ನು ಕೇಳಿರಿ,

"ಕರ್ತನಾದ ಯೇಸುವೇ, ನಿನ್ನ ಅರಿವಿಲ್ಲದೇ ನನ್ನ ತಲೆಯಿಂದ ಒಂದು ಕೂದಲೂ ಸಹ ಬೀಳುವದಿಲ್ಲ. ಪ್ರತಿಯೊಂದು ಎಳೆಯೂ ನಿನ್ನಿಂದ ಎಣಿಸಲ್ಪಟ್ಟಿದೆ, ಹಾಗೆಯೇ ಈಗ ನಾನು ಎದುರಿಸುತ್ತಿರುವ ಸಮಸ್ಯೆಯೂ ಸಹ. ನನ್ನ ಕರ್ತನೇ, ನೀನು ಅದರ ಕುರಿತು ಎಲ್ಲವನ್ನೂ ತಿಳಿದಿದ್ದೀಯ. ಈ ಬಾಧೆಯ ಮೂಲಕ ನೀನು ನನಗೆ ನೀಡಲು ಬಯಸುತ್ತಿರುವ ಸಂದೇಶವೇನು?"

ಇದನ್ನು ನಾವು ಅರ್ಥಮಾಡಿಕೊಂಡರೆ, ನಮ್ಮ ಆತ್ಮೀಕ ಬೆಳವಣಿಗೆ ಶೀಘ್ರವೇ ಸ್ಪಷ್ಟವಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಇದನ್ನು ಅರ್ಥಮಾಡಿಕೊಳ್ಳದೇ ನಾವು ಲೋಕೀಯ ಸ್ವಭಾವದಲ್ಲಿ ಮುಂದುವರೆದರೆ, ನಮ್ಮ ಬೆಳವಣಿಗೆ ಕ್ಷೀಣಿಸುತ್ತದೆ.

## ಅ) ನೊಗ (ಶಿಲುಬೆ)

ಮತ್ತಾಯ 11:29ರಲ್ಲಿ ಕ್ರಿಸ್ತನು ನಮಗೆ ಹೇಳುತ್ತಾನೆ, **"ನಾನು ಸಾತ್ವಿಕನೂ ದೀನ**

**ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು."**

ನಾವು ಆತನೊಂದಿಗೆ ನಿತ್ಯತ್ವದಲ್ಲಿ ಸಂತೋಷವಾಗಿರಬೇಕೆಂದರೆ ನಾವು ಆತನ ನೊಗವನ್ನು (ಶಿಲುಬೆ) ತೆಗೆದುಕೊಳ್ಳಬೇಕೆಂದು ಕ್ರಿಸ್ತನು ನಮಗೆ ತಿಳಿಸುತ್ತಾನೆ. ದೇವರು ಪ್ರತಿಯೊಬ್ಬರಿಗೂ ಅಳೆದಿರುವ, ಲೆಕ್ಕಹಾಕಿರುವ ಮತ್ತು ಇಟ್ಟುಕೊಂಡಿರುವ ಒಂದು ವಿಷಯವೇನೆಂದರೆ "ಆತನ ನೊಗ." ನಾವು ನಿತ್ಯತ್ವದಲ್ಲಿ ಕ್ರಿಸ್ತನೊಂದಿಗೆ ವಾಸಿಸಲು ಬಯಸಿದರೆ ಅದನ್ನು ತೆಗೆದುಕೊಳ್ಳಲು ನಾವು ಸಿದ್ಧವಾಗಿರಬೇಕು. ಯೇಸು ಕ್ರಿಸ್ತನು ಹೇಳಿದನು, "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು (ನೊಗ) ಹೊತ್ತುಕೊಂಡು ನನ್ನ ಹಿಂದೆ ಬರಲಿ." (ಮತ್ತಾ 16:24)

ಈಗ ಓದುಗರು ಒಂದು ಪ್ರಶ್ನೆಯನ್ನು ಕೇಳಬಹುದು, "ಯಾಕೆ ಈ ಪ್ರೀತಿಸುವ ದೇವರು ಈ ಶಿಲುಬೆಯನ್ನು (ನೊಗ) ನಮಗೆ ನೀಡುತ್ತಾನೆ?"

ಪ್ರಿಯರೇ, ಇದಕ್ಕೆ ಒಂದು ಕಾರಣವೇನೆಂದರೆ ತಂದೆ ಮತ್ತು ತಾಯಿ ಹುಣ್ಣುಗಳಿಂದ ಸೋಂಕಿತವಾಗಿರುವ ಮಗು, ಕುಡಿಯಲು ಇಷ್ಟಪಡದಿರುವ ಔಷಧಿಯನ್ನು ಅದರ ಬಾಯಿಗೆ ಸುರಿಯುವದಕ್ಕೆ ಹೋಲುತ್ತದೆ. ಅದರಂತೆಯೇ ಶರೀರದ ಲೌಕಿಕ ಭಾವಗಳಿಂದ ಆವರಿಸಿರುವ, ನಮ್ಮ ಕೆಟ್ಟತನ ತುಂಬಿರುವ ಸ್ವಭಾವವನ್ನು ಬದಲಾಯಿಸುವ ಸಲುವಾಗಿ ಮತ್ತು ಪರಲೋಕದ ಸ್ವಭಾವದಿಂದ ನಮ್ಮನ್ನು ತುಂಬಿಸುವದಕ್ಕಾಗಿ, ನಮ್ಮ ತಂದೆ ಮತ್ತು ತಾಯಿಯಂತಿರುವ ದೇವರು ಈ ನೊಗ ಅಥವಾ ಶಿಲುಬೆಯನ್ನು ಹೊರಲು ನಮಗೆ ನೀಡುತ್ತಿದ್ದಾರೆ. ಇನ್ನೊಂದು ಕಾರಣವೇನೆಂದರೆ ನಾವು ವಿಧೇಯತ್ವವನ್ನು ಕಲಿಯಬೇಕು ಹಾಗೂ ಪರಿಪೂರ್ಣರಾಗಬೇಕು, ಹಾಗಾದರೆ ನಾವು ದೇವರ ಪುತ್ರರಾಗಿ ಪ್ರಕಟವಾಗುತ್ತೇವೆ.

**"ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು." (ಇಬ್ರಿ 5:8-9)**

## ಆ) ಸೈತಾನನ ಬಯಕೆ ಏನಾಗಿರಬಹುದು?

ಕ್ರಿಸ್ತನು ನಮಗೆ ಇಟ್ಟಿರುವ ನೊಗವನ್ನು ನಾವು ತೆಗೆದುಕೊಳ್ಳಬಾರದು ಎಂದು ಸೈತಾನನ ಬಯಕೆಯಾಗಿದೆ, ಯಾಕಂದರೆ ನಾವು ತೆಗೆದುಕೊಂಡರೆ ನಮ್ಮ ಪ್ರಾಣವು ನಿತ್ಯತ್ವದಲ್ಲಿ ದೇವರೊಂದಿಗೆ ಜೊತೆಯಾಗಿ ಜೀವಿಸುತ್ತದೆ ಎಂದು ಅವನಿಗೆ ಗೊತ್ತು. ಮನುಷ್ಯರಾಗಿ ನಮ್ಮ ಬಯಕೆಯೇನೆಂದರೆ ನಮ್ಮ ಜೀವನದಲ್ಲಿ ಯಾವ ನೊಗವೂ (ಶಿಲುಬೆ, ಬಾಧೆ) ಬರಬಾರದು. ಇದನ್ನೇ ಸೈತಾನನು ಸಹ ನಮ್ಮ ಜೀವಿತದಲ್ಲಿ ಬಯಸುತ್ತಾನೆ. ಆದ್ದರಿಂದ ಕ್ರಿಸ್ತನು ನಮಗೆ ನೀಡುವ ನೊಗವನ್ನು ತೆಗೆದುಕೊಳ್ಳುವದರಿಂದ ನಮ್ಮನ್ನು

ತಡೆಯಲು ಸೈತಾನನು ಬಲವಾಗಿ ಪ್ರಯತ್ನಿಸುತ್ತಾನೆ.

**"ತಪ್ಪುಮಾಡಿ ಗುದ್ದು ತಿನ್ನುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ." (1 ಪೇತ್ರ 2:20)**

> ಕ್ರಿಸ್ತನು ಅನುಮತಿಸುವ ನೊಗವು ನಾವು ಪಾಪಮಾಡಿದ ನಂತರ ಬಳಲುವಂತದ್ದಲ್ಲ ಬದಲಿಗೆ ಒಳ್ಳೇದನ್ನು ಮಾಡಿದ ನಂತರ ನಾವು ಅನುಭವಿಸುವ ಬಾಧೆಯಾಗಿದೆ.

ನಾವು ಆತನ ನೊಗವನ್ನು ತೆಗೆದುಕೊಳ್ಳಬೇಕೆಂದು ಕ್ರಿಸ್ತನು ನಮಗೆ ಹೇಳುತ್ತಾನೆ. ಇದನ್ನು ನಾವು ಹೊತ್ತುಕೊಂಡರೆ ನಾವು ದುಃಖಿತರಾಗುತ್ತೇವೆ. ಆದರೆ ಕ್ರಿಸ್ತನು ಹೇಳುತ್ತಾನೆ, "ನನ್ನನ್ನು ನೋಡಿರಿ, ನಾನು ಆ ಕಷ್ಟಗಳ ಮೂಲಕ ಹೋದೆ, ಆ ಸಮಯದಲ್ಲಿ ನಾನು ಏನು ಮಾಡಿದೆನೆಂದು ನೋಡಿ. ನಾನು ಮಾಡಿರುವದನ್ನು ನೀವು ಮಾಡಿದರೆ ನಿಮ್ಮ ಪ್ರಾಣವು ವಿಶ್ರಾಂತಿ ಪಡೆಯುತ್ತದೆ. (ಮತ್ತಾ 11:29) ನಾನು ನಿಮ್ಮ ಮಾದರಿಯಾಗಿದ್ದೇನೆ ಹಾಗೂ ನನ್ನನ್ನು ಅನುಸರಿಸಲು ನಾನು ನಿಮ್ಮನ್ನು ಆರಿಸಿಕೊಂಡಿದ್ದೇನೆ."

## ೩) ನೊಗವನ್ನು ತೆಗೆದುಹಾಕಿರಿ

ಕ್ರಿಸ್ತನು ಇಟ್ಟಿರುವ ನೊಗವನ್ನು ತೆಗೆದುಹಾಕಲು ಪ್ರಯತ್ನಿಸುವುದು ಅಥವಾ ನೊಗವನ್ನು ನಿಮಗೆ ಮೊದಲು ನೀಡಲು ಅನುಮತಿಸದಿರುವುದು ಸೈತಾನನ ಮುಖ್ಯ ಉದ್ದೇಶವಾಗಿದೆ ಹಾಗೂ ಅವನ ಈ ತಂತ್ರದಿಂದ ಅನೇಕರು ಕ್ರೈಸ್ತ ಸಭೆಯಲ್ಲಿ ಬಿದ್ದಿದ್ದಾರೆ. ಇಂದು ಸಭೆಯಲ್ಲಿ ಹಸುಮಕ್ಕಳು ಹುಟ್ಟುತ್ತಾರೆ ಆದರೆ ಅವರು ದೇವರ ರಾಜ್ಯದಲ್ಲಿ ಎಂದಿಗೂ ತಮ್ಮ ಕಣ್ಣುಗಳನ್ನು ತೆರೆಯದ ಹಸುಮಕ್ಕಳಾಗಿ ಉಳಿಯಲು ಮುಂದುವರೆಸುತ್ತಾರೆ. ಸಭೆಗಳಲ್ಲಿ ಜನರ ಹಾಜರಾತಿ ಕಡಿಮೆಯಾಗುತ್ತಿರುವುದಕ್ಕೆ ಒಂದು ಮುಖ್ಯ ಕಾರಣವೇನೆಂದರೆ ಹೊಸಬರು ಸಭೆಯವರಲ್ಲಿನ ಕೆಟ್ಟ ಫಲಗಳನ್ನು ನೋಡುತ್ತಾರೆ. ಇದನ್ನು ನೋಡಿ ಅವರು ಸಭೆಗೆ ಬರಲು ಅಥವಾ ಸಭೆಯಲ್ಲಿನವರ ಹತ್ತಿರ ಬರಲು ಹಿಂಜರಿಯುತ್ತಾರೆ. ಸಭೆಯಲ್ಲಿರುವ ಕ್ರೈಸ್ತರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವ ಮೂಲಕ, ಅವರು ತಮ್ಮನ್ನು ತಾವು ಉತ್ತಮರೆಂದು ಪರಿಗಣಿಸುತ್ತಾರೆ ಮತ್ತು ಅವರು

> ಸಭೆಗಳಲ್ಲಿ ಜನರ ಹಾಜರಾತಿ ಕಡಿಮೆಯಾಗುತ್ತಿರುವದಕ್ಕೆ ಒಂದು ಮುಖ್ಯ ಕಾರಣವೇನೆಂದರೆ ಹೊಸಬರು ಸಭೆಯವರಲ್ಲಿನ ಕೆಟ್ಟ ಫಲಗಳನ್ನು ನೋಡುತ್ತಾರೆ. ಇದನ್ನು ನೋಡಿ ಅವರು ಸಭೆಗೆ ಬರಲು ಅಥವಾ ಸಭೆಯಲ್ಲಿನವರ ಹತ್ತಿರ ಬರಲು ಹಿಂಜರಿಯುತ್ತಾರೆ. ಸಭೆಯಲ್ಲಿರುವ ಕ್ರೈಸ್ತರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವ ಮೂಲಕ, ಅವರು ತಮ್ಮನ್ನು ತಾವು ಉತ್ತಮರೆಂದು ಪರಿಗಣಿಸುತ್ತಾರೆ ಮತ್ತು ಅವರು ಕ್ರಿಸ್ತನಿಂದ ದೂರ ಸರಿಯುವ ಸಾಧ್ಯತೆಗಳಿವೆ.

ಕ್ರಿಸ್ತನಿಂದ ದೂರ ಸರಿಯುವ ಸಾಧ್ಯತೆಗಳಿವೆ. ಅವರು ಕ್ರೈಸ್ತರಾಗಿ ಜನಿಸಿದ್ದರೂ, ತಮ್ಮ ಹಳೆಯ ಸ್ವಭಾವದಲ್ಲಿ ಕಾರ್ಯಮಾಡಲು ಇನ್ನೂ ಮುಂದುವರೆಸುತ್ತಾರೆ.

ಸೈತಾನನ ಕೆಲಸವು ದೇವರ ಮಗುವಿನಿಂದ ನೊಗವನ್ನು ದೂರಕ್ಕೆ ತೆಗೆದುಹಾಕುವಂಥದಾಗಿದೆ. "ನೊಗವು" ಕ್ರಿಸ್ತನು ನಮಗೆ ನೀಡುವ ಶಿಲುಬೆಯಾಗಿದೆ. ಕ್ರಿಸ್ತನು ಶಿಲುಬೆಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ, ಅವನು ಮೂರು ಶಕ್ತಿಗಳನ್ನು ಸೋಲಿಸಬೇಕಾಗಿತ್ತು. ನಮಗೆ ನೀಡಿರುವ ಶಿಲುಬೆ ಅಥವಾ "ನೊಗ"ವನ್ನು ಕೈಗೆತ್ತಿಕೊಳ್ಳಲು, ನಾವು ಈ ಮೂರು ಶಕ್ತಿಗಳನ್ನು ಸೋಲಿಸಬೇಕಾಗಿದೆ. ಇಲ್ಲವಾದರೆ ನಾವು ಅದನ್ನು ತೆಗೆದುಕೊಳ್ಳಲು ಸಾಧ್ಯವಾಗುವದಿಲ್ಲ.

## ಈ) ಶಿಲುಬೆಯ ಮೊದಲನೇ ವೈರಿ

### ಸೈತಾನನು

ವಂಚನೆಯ ಒಡೆಯನಾಗಿರುವ ಸೈತಾನನು, ನಮ್ಮ ಬಳಿಗೆ ಬರುವಾಗ ಅನೇಕ ತಂತ್ರಗಳನ್ನು ತರುತ್ತಾನೆ. ಸೈತಾನನು ಅವನ ಕೈಯಲ್ಲಿ ಯಾವುದೇ ಅಸ್ತ್ರವನ್ನು ಹೊಂದಿಲ್ಲ, ಕೇವಲ ತಂತ್ರಗಳನ್ನು ಮಾತ್ರ ಹೊಂದಿದ್ದಾನೆ. ಒಂದು ತಂತ್ರ ವಿಫಲವಾದರೆ, ಅವನು ಇನ್ನೊಂದನ್ನು ತರುತ್ತಾನೆ. ಅವನು ಯೇಸುವಿನ ಬಳಿಗೆ ತಂತ್ರದೊಂದಿಗೆ ಬಂದನು. ಯೇಸು ದೀಕ್ಷಾಸ್ನಾನ ತೆಗೆದುಕೊಂಡು ಉಪವಾಸವನ್ನು ಮುಗಿಸಿದ ನಂತರ, ಸೈತಾನನು ಅವನನ್ನು ಒಂದು ಎತ್ತರದ ಸ್ಥಳಕ್ಕೆ ಕರೆದುಕೊಂಡು ಹೋದನು ಮತ್ತು ಈ ಲೋಕದ ರಾಜ್ಯಗಳನ್ನು ಮತ್ತು ಎಲ್ಲಾ ವೈಭವವನ್ನೂ ಅವನಿಗೆ ತೋರಿಸಿದನು. ಇಂದೂ ಸಹ ಸೈತಾನನು ಈ ಲೋಕದ ವೈಭವವನ್ನು ನಮಗೆ ತೋರಿಸುತ್ತಾನೆ ಎಂದು ನೆನೆಪಿನಲ್ಲಿಟ್ಟುಕೊಳ್ಳಿರಿ.

ಸೈತಾನನು ಯೇಸುವಿಗೆ ಹೇಳಿದನು, "ಈ ಎಲ್ಲವೂ ನನಗೆ ಕೊಡಲ್ಪಟ್ಟಿವೆ. ನೀನು ನನ್ನನ್ನು ಕೇವಲ ಒಂದು ಸಾರಿ ಆರಾಧಿಸಿದರೆ, ಈ ಎಲ್ಲವುಗಳನ್ನೂ ನಾನು ನಿನಗೆ ಕೊಡುತ್ತೇನೆ..."

**ಶಿಲುಬೆಯ ಮೊದಲ ವಿರೋಧಿ ಸೈತಾನನಾಗಿದ್ದಾನೆ. ಅವನು 'ದೇವರ ಚಿತ್ತ'ದ ಮೇಲೆ 'ಮನುಷ್ಯನ ಚಿತ್ತ'ವನ್ನು ಆರಿಸಲು ನಮ್ಮನ್ನು ಪ್ರೇರೇಪಿಸುತ್ತಾನೆ.**

ಯೇಸುವಿನ ಮಾರ್ಗವನ್ನು ಬದಲಾಯಿಸಲು ಅಂತಹ ದೊಡ್ಡ ಬೆಲೆಯನ್ನು ನೀಡಲು ಸೈತಾನನು ಸಿದ್ಧನಿದ್ದರೆ, ಅವನು ನಮ್ಮನ್ನು ಬಿಡುತ್ತಾನೆ ಎಂದು ನೀವು ಯೋಚಿಸುತ್ತೀರಾ?.. ಅವನ ಪ್ರಸ್ತಾಪ ಭೂಮಿಯ ಮೇಲೆ ದೊಡ್ಡದು ಮತ್ತು ಉತ್ತಮವಾದದ್ದನ್ನು ಕೊಡುತ್ತೇನೆ ಎಂಬುದಾಗಿರುತ್ತದೆ. ಆದರೆ ಸೈತಾನನು ಈ ಲೋಕದ ತಾತ್ಕಾಲಿಕ ವಸ್ತುಗಳನ್ನು ಮಾತ್ರ ನೀಡಬಹುದು ಹಾಗೂ ಎಂದಿಗೂ ನಿತ್ಯವಾದದ್ದನ್ನು ನೀಡಲು ಸಾಧ್ಯವಾಗುವುದಿಲ್ಲ. ಏದೇನ್ ನಲ್ಲಿ ಅವನು ಹವ್ವಳೊಂದಿಗೆ ವ್ಯವಹರಿಸಿದಾಗ ಅವನು ಹವ್ವಳ ಮನಸ್ಸನ್ನು

ತಾತ್ಕಾಲಿಕವಾದದ್ದಕ್ಕೆ (ಭೂಮಿಯ ಮೇಲಿನ ಹಣ್ಣು) ವಿಚಲಿತಗೊಳಿಸಿದನು ಮತ್ತು ನಿತ್ಯವಾದದ್ದನ್ನು ಕದ್ದುಕೊಂಡನು. ಇಂದೂ ಸಹ ಈ ಲೋಕದಲ್ಲಿ ನಾವು ಅನೇಕ ಸಂದೇಶಗಳನ್ನು ಕೇಳುತ್ತಿದ್ದೇವೆ, ಆದರೆ ಅವುಗಳು ನಮ್ಮನ್ನು ನಿತ್ಯವಾದದ್ದಕ್ಕೆ ನಿರ್ದೇಶಿಸುತ್ತಿವೆಯೋ ಅಥವಾ ತಾತ್ಕಾಲಿಕವಾದದ್ದಕ್ಕೆ ನಿರ್ದೇಶಿಸುತ್ತಿವೆಯೋ ಎಂದು ನಾವು ಪರಿಶುದ್ಧಾತ್ಮನಿಂದ ಪ್ರತೀ ಸಂದೇಶಗಳನ್ನು ಗುರುತಿಸಬೇಕು. ಭಾವಾರ್ಥದಲ್ಲಿ, ಸೈತಾನನು ಯೇಸುವನ್ನು ಶೋಧಿಸಲು ಪ್ರಯತ್ನಿಸಿದಾಗ ಇದನ್ನೇ ಹೇಳಿದ್ದು, "ಏನಾದರಾಗಲಿ, ನೀನು ಈ ಎಲ್ಲವುಗಳನ್ನೂ ಸಂಪಾದಿಸಲು ಬಂದಿದ್ದೀಯ. ನೀನು ದೇವರ ಮಗನಾಗಿ ಮುಂದುವರೆಯಬಹುದು ಮತ್ತು ನೀನು ಯಾವುದೇ ಶಿಲುಬೆಯನ್ನು ಒಯ್ಯಬೇಕಾಗಿಲ್ಲ, ಈ ಎಲ್ಲವೂ ನಿನಗೆ ನೀಡಲ್ಪಡುತ್ತವೆ." ಕ್ರಿಸ್ತನಿಗೆ ಅದು ಎಷ್ಟು ಸುಲಭವಾಗಿರುತ್ತಿತ್ತು – ಶಿಲುಬೆಯನ್ನು ತೆಗೆದುಕೊಳ್ಳದೆಯೇ ಎಲ್ಲವೂ ಕ್ರಿಸ್ತನಿಗೆ ನೀಡಲ್ಪಡುತ್ತಿತ್ತು. ಯಾವ ಶಿಲುಬೆಯ ಅಗತ್ಯವಿರಲಿಲ್ಲ. ದೇವರ ಮಕ್ಕಳು ಇಂದು ವಂಚನೆಗೊಳಗಾಗುತ್ತಿರುವ ಸೈತಾನನ ಈ ಸಂದೇಶದಲ್ಲಿ ಒಂದು ದೊಡ್ಡ ಸುಳ್ಳು ಅಡಗಿದೆ.

"ನೀನು ಇವೆಲ್ಲವನ್ನೂ ಸಂಪಾದಿಸಲು ಬಂದಿದ್ದೀಯ. ನೀನು ದೇವರ ಮಗನಾಗಿ ಮುಂದುವರೆಯಬಹುದು. ಯಾವ ಶಿಲುಬೆಯನ್ನೂ ತೆಗೆದುಕೊಳ್ಳುವ ಅಗತ್ಯವಿಲ್ಲ ಮತ್ತು ಈ ಎಲ್ಲವೂ ನಿನಗೆ ನೀಡಲ್ಪಡುತ್ತವೆ."

ಮನೆಯಲ್ಲಿ ಬುದ್ಧಿವಂತ ಮಕ್ಕಳಿದ್ದರೆ ಮತ್ತು ಹಿರಿಯ ಸಹೋದರಿ ಮದುವೆಯಾಗಿಲ್ಲದಿದ್ದರೆ ಕಿರಿಯವರು ಹೇಳುತ್ತಾರೆ, "ಅಮ್ಮಾ, ನಮ್ಮ ಸಹೋದರಿಗೆ ನಾವು ವಿವಾಹವನ್ನು ಗೊತ್ತುಮಾಡಬಾರದೋ?" ಇಲ್ಲಿ ನಾವು ವಿಮರ್ಶಿಸೋಣ, ಯಾಕೆ ಆ ರೀತಿಯಾಗಿ ಮಗು ಸೂಚಿಸಬೇಕು? ಕಿರಿಯವನಿಗೆ ಮದುವೆಯಾಗಬೇಕು ಆದುದರಿಂದ ಅವನು/ಅವಳು ತಮ್ಮ ಮುಂದಿರುವ ತಡೆಯನ್ನು ಜಯಿಸಲು ಪ್ರಯತ್ನಿಸುತ್ತಿದ್ದಾರೆ. ಅದರಂತೆಯೇ ನೀವು ನನ್ನನ್ನು ಒಮ್ಮೆ ಆರಾಧಿಸಿದರೆ (ಲೋಕದ ವ್ಯವಸ್ಥೆಗೆ ಶರಣಾಗು) ನೀವು ನಂತರ "ದೇವರ ಮಗನಾಗಿ" ಮುಂದುವರೆಯಬಹುದು ಮತ್ತು ಬಹುಮಾನವಾಗಿ ಈ ಲೋಕದ ಎಲ್ಲವನ್ನೂ ನೀವು ಪಡೆಯುತ್ತೀರಿ ಎಂದು ಸೈತಾನನು ಹೇಳುತ್ತಿದ್ದಾನೆ. ಸೈತಾನನ ಬಯಕೆಯೇನೆಂದರೆ ವಿಶ್ವಾಸಿಗಳಾಗಿರುವ ನಾವು ಲೋಕದ ರೀತಿಯಲ್ಲಿ ಜೀವಿಸಲು ಮುಂದುವರೆಸಬೇಕೆಂಬದಾಗಿದೆ. ಕಾರಣವೇನೆಂದರೆ ಲೋಕದ ಸ್ನೇಹವು ದೇವರೊಂದಿಗೆ ವೈರತ್ವವಾಗಿದೆ. (ಯಾಕೋಬ 4:4) ನಮ್ಮ ಪ್ರಾಣವು ದೇವರ ರಾಜ್ಯದೊಂದಿಗೆ ತುಂಬಲ್ಪಡದ ಹೊರತು, ಈ ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುವದಕ್ಕೆ ಯೇಸುವಿನೊಂದಿಗೆ ಜೊತೆಗೂಡಲು ನಮಗೆ ಆಗುವದಿಲ್ಲ.

ನಮ್ಮ ಪ್ರಾಣವು ದೇವರ ರಾಜ್ಯದೊಂದಿಗೆ ತುಂಬಲ್ಪಡದ ಹೊರತು, ಈ ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುವದಕ್ಕೆ ಯೇಸುವಿನೊಂದಿಗೆ ಜೊತೆಗೂಡಲು ನಮಗೆ ಆಗುವದಿಲ್ಲ.

ಶಾಶ್ವತ ದೇವರ ರಾಜ್ಯದ ಮಾರ್ಗಗಳಿಗೆ ನಾವು ವಿಧೇಯರಾಗಬೇಕೆಂದು ಯೇಸು ಹೇಳುತ್ತಾರೆ. ಹಾಗಾದರೆ ಈ ಲೋಕದಲ್ಲಿ ನಿಮಗೆ ಅಗತ್ಯವಿರುವ ಎಲ್ಲಾ ವಸ್ತುಗಳು ನಿಮಗೆ ನೀಡಲ್ಪಡುತ್ತವೆ. (ಮತ್ತಾಯ 6:33) ನಾವು ತಾತ್ಕಾಲಿಕ ಲೋಕದ ಮಾರ್ಗಗಳಿಗೆ ವಿಧೇಯರಾಗಬೇಕು ಹಾಗಾದರೆ ಲೋಕದ ಎಲ್ಲಾ ವಸ್ತುಗಳು ನಮಗೆ ಕೊಡಲ್ಪಡುತ್ತವೆ ಎಂದು ಸೈತಾನನು ಹೇಳುತ್ತಾನೆ. (ಮತ್ತಾ 4:8,9)

**"ಹೀಗಿರುವುದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." (ಮತ್ತಾ 6:33)**

ಶಾಶ್ವತ ದೇವರ ರಾಜ್ಯದ ಮಾರ್ಗಗಳಿಗೆ ನಾವು ವಿಧೇಯರಾಗಬೇಕೆಂದು ಯೇಸು ಹೇಳುತ್ತಾರೆ. ಹಾಗಾದರೆ ಈ ಲೋಕದಲ್ಲಿ ನಮಗೆ ಅಗತ್ಯವಿರುವ ಎಲ್ಲಾ ವಸ್ತುಗಳು ದೇವರಿಂದ ನಮಗೆ ನೀಡಲ್ಪಡುತ್ತವೆ (ಮತ್ತಾ 6:33) ತಾತ್ಕಾಲಿಕ ಲೋಕದ ಮಾರ್ಗಗಳಿಗೆ ನಾವು ವಿಧೇಯರಾಗಬೇಕೆಂದು ಸೈತಾನನು ಹೇಳುತ್ತಾನೆ ಹಾಗಾದರೆ ಈ ಲೋಕದ ಎಲ್ಲಾ ವಸ್ತುಗಳು ನಮಗೆ ಸೈತಾನನಿಂದ ನೀಡಲ್ಪಡುತ್ತವೆ. (ಮತ್ತಾ 4:9)

ಮತ್ತೊಮ್ಮೆ, ಸೈತಾನನು ಯೇಸುವನ್ನು ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋದನು ಮತ್ತು ಅವನಿಗೆ ಲೋಕದ ಎಲ್ಲಾ ರಾಜ್ಯಗಳನ್ನೂ ಹಾಗೂ ಅವುಗಳ ವೈಭವವನ್ನೂ ತೋರಿಸಿದನು. **"ನೀನು ನನಗೆ ಸಾಷ್ಟಾಂಗನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು." (ಮತ್ತಾ 4:8,9)**

ದೇವರ ರಾಜ್ಯವು ಮೊದಲೇ ನಮಗೆ ತಿಳಿಸುತ್ತಿದೆ **"ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ." (ರೋಮಾ 12:2)**

ಇಂದು ಅನೇಕರು ಈ ಉರ್ಲಿಗೆ ಬಿದ್ದಿದ್ದಾರೆ. ಸೈತಾನನು ನಮ್ಮ ಜೀವನದೊಳಗೆ ಬರಲು ಇದೇ ಮಾರ್ಗವಾಗಿರಬಹುದು. ಯೇಸು ಸೈತಾನನ ತಂತ್ರಗಳಿಗೆ ಬೀಳಲಿಲ್ಲ. ಯೇಸುವಿನ ಬಳಿಗೆ ಬಂದ ಸೈತಾನನು ಅವನಿಗೆ "ನೊಗ"ವನ್ನು ತೆಗೆದುಕೊಳ್ಳದಿರಲು ಪರೋಕ್ಷವಾಗಿ ಹೇಳುತ್ತಿದ್ದನು. ಆದರೆ ಅವನ ವಂಚನೆಯ ಯೋಜನೆಗಳು ನಾಶವಾದವು. ಯೇಸು ಅವನನ್ನು ಜಯಿಸಿದರು.

## ಉ) ಶಿಲುಬೆಯ ಎರಡನೇಯ ವೈರಿ

**ಅಭ್ಯುದಯ (ಬೆಳವಣಿಗೆ ಹೊಂದದ) ಸಂದೇಶಗಳು ಹಾಗೂ ಸಂದೇಶಕರು:**

ಎಂದಿಗೂ ಪ್ರಯತ್ನಿಸುವುದನ್ನು ನಿಲ್ಲಿಸದ ವಿರೋಧಿ ನಮಗಿದ್ದಾನೆ. ನಮ್ಮ ಯಾವುದೇ ಯೋಜನೆಗಳು ಸಫಲವಾಗದಿದ್ದರೆ, ನಾವು ಏನನ್ನು ಯೋಚಿಸುತ್ತೇವೆ? "ನನ್ನ ಮೊದಲ ಯೋಜನೆ

(ಅಥವಾ ತಂತ್ರ) ಹಾಳಾಯಿತು, ನಾನು ಇನ್ನೊಂದು ಉತ್ತಮವಾದದ್ದನ್ನು ಕಂಡುಕೊಳ್ಳಬೇಕು." ಅದರಹಾಗೆಯೇ ಜಯಿಸುವ ಸಲುವಾಗಿ ಇನ್ನೊಂದು ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಸೈತಾನನು ಅರ್ಥಮಾಡಿಕೊಂಡನು. ಯೇಸುವಿನ ಎದುರು ವಿಫಲವಾದ ಸೈತಾನನು ಅವನನ್ನು ತುಂಬಾ ಹೆಚ್ಚು ಕಾಲ ಬಿಟ್ಟನು ಎಂದು ದೇವರ ವಾಕ್ಯವು ಹೇಳುತ್ತದೆ.

ಹಾಗಾದರೆ ಸೈತಾನನ ಮುಂದಿನ ಶೈಲಿ ಏನು?

## ಊ) ಬೆಳವಣಿಗೆಯನ್ನು ಸಾಧಿಸದ ದೇವರ ಸೇವಕ ಮತ್ತು ಬೆಳವಣಿಗೆಯನ್ನು ಸಾಧಿಸಿರುವ ದೇವರ ಸೇವಕ

ಮುಂದುವರಿಕೆಯಲ್ಲಿ ಯೇಸುವನ್ನು ಹೇಗೆ ಶಿಲುಬೆಯನ್ನು ತೆಗೆದುಕೊಳ್ಳುವುದರಿಂದ ತಾನು ನಿಲ್ಲಿಸಬಹುದು ಎಂದು ಸೈತಾನನು ವಿಚಾರಮಾಡಿಕೊಳ್ಳುತ್ತಿರಬಹುದು. ಮೂರು ವರ್ಷಗಳವರೆಗೆ ಸೈತಾನನು ಇದರ ಕುರಿತು ಯೋಚಿಸಿರಬಹುದು. ಯೇಸು ಪ್ರೀತಿಸಿದ ಮತ್ತು ಯೇಸುವನ್ನು ಇಷ್ಟಪಟ್ಟ ಪೇತ್ರನ ಮೂಲಕ ಕಾರ್ಯಮಾಡಲು ಅವನಿಗೆ ಒಂದು ಅವಕಾಶ ಸಿಕ್ಕಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಸಭೆಯ ಉನ್ನತ ಅಧಿಕಾರಿಗಳ ಮೂಲಕ ಕಾರ್ಯಮಾಡಲು ಅವನಿಗೆ ಅವಕಾಶಸಿಕ್ಕಿತು. ಯೇಸು ಹೇಳಿದನು, ನಾನು ಯೆರೂಸಲೇಮಿಗೆ ಹೋಗುತ್ತಿದ್ದೇನೆ. ಅಲ್ಲಿ ನಾನು ಮಹಾಯಾಜಕ ಮತ್ತು ಅನ್ಯರ ಕೈಗೆ ಒಪ್ಪಿಸಲ್ಪಡುತ್ತೇನೆ. ನಾನು ಶಿಲುಬೆಗೇರಿಸಲ್ಪಡುತ್ತೇನೆ. ಆ ಸಮಯದಲ್ಲಿ ಪೇತ್ರನು ಏನು ಮಾಡಿದನೆಂದು ನಮಗೆ ತಿಳಿದದೆ. ಅವನು ಯೇಸುವನ್ನು ಶಿಷ್ಯರಿಂದ ದೂರ ಕರೆದುಕೊಂಡು ಹೋದನು ಮತ್ತು ಅವನನ್ನು ಗದರಿಸಿದನು.

**"ಆಗ ಪೇತ್ರನು ಆತನ ಕೈ ಹಿಡಿದು - ಸ್ವಾಮಿ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು ಎಂದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು ಆತನು ತಿರಿಗಿಕೊಂಡು ಪೇತ್ರನಿಗೆ - ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು." (ಮತ್ತಾ 16:22-23)**

ಈ ಘಟನೆಗೂ ಸ್ವಲ್ಪ ಮೊದಲು, ಯೇಸು ಪೇತ್ರನಿಗೆ ಪರಲೋಕ ರಾಜ್ಯದ ಅಧಿಕಾರ ಮತ್ತು ಬೀಗದ ಕೈಗಳನ್ನು ನೀಡಿದ್ದನು.

**"ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು." (ಮತ್ತಾ 16:19)**

ನಂತರ ಪೇತ್ರ ಯೇಸುವನ್ನು ಗದರಿಸಿದನು ಎಂದು ದೇವರ ವಾಕ್ಯ ಹೇಳುತ್ತದೆ. (ಮತ್ತಾ 16:22-23)

"ಆ ಸಮಸ್ಯೆ ತೆಗೆದುಹಾಕಲ್ಪಡಲಿ, ಆ ಸಮಸ್ಯೆ ತೆಗೆದುಹಾಕಲ್ಪಡಲಿ" ಎಂದು ಅವನಿಗೆ ಅಧಿಕಾರ ನೀಡಿದ್ದ ಯೇಸುವಿನೊಂದಿಗೆ ಪೇತ್ರನು ತನ್ನ ಮೊದಲನೇ ಸೇವೆಯನ್ನು ಪ್ರಾರಂಭಿಸಿದನು. ಅವನಿಗೆ ಪರಲೋಕರಾಜ್ಯದ ಬೀಗದ ಕೈಗಳನ್ನು ನೀಡಿದವನಿಗೆ ಪೇತ್ರನು ಈ ರೀತಿಯಾಗಿ ಮಾತನಾಡಿದಾಗ, ಯೇಸು ಉತ್ತರಿಸಿದನು "ಸೈತಾನನೇ ನನ್ನನ್ನು ಬಿಡು ಮತ್ತು ಹೊರಟುಹೋಗು, ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ!" ಸಭೆಯ ಅತ್ಯುನ್ನತ ನಾಯಕನಾಗಿ ನೇಮಕವಾಗಿದ್ದ ವ್ಯಕ್ತಿಗೆ ಯೇಸು ಇದನ್ನೇ ಹೇಳಿದ್ದು.

> ಪ್ರಭುದ್ಧನಾಗಿಲ್ಲದ್ದ ಪೇತ್ರನ ಸಂದೇಶ, "ನೀನು ಶಿಲುಬೆಯನ್ನು ತೆಗೆದುಕೊಳ್ಳಬೇಡ." (ಮತ್ತಾ 16:22)

ಇಲ್ಲಿ, ಯೇಸು ಒಂದೇ ಸಮಯದಲ್ಲಿ ಎರಡು ವ್ಯಕ್ತಿಗಳ ಜೊತೆಗೆ ಮಾತಾಡುತ್ತಿದ್ದಾರೆ. ಆತ್ಮೀಕ ಪ್ರಪಂಚದಲ್ಲಿದ್ದ ವ್ಯಕ್ತಿ ಮತ್ತು ಭೌತಿಕ ಪ್ರಪಂಚದಲ್ಲಿದ್ದ ವ್ಯಕ್ತಿ. ಯೇಸು ಪೇತ್ರನನ್ನು "ಸೈತಾನ" ಎಂದು ಕರೆಯಲಿಲ್ಲ, ಬದಲಿಗೆ ಪೇತ್ರನ ಮೂಲಕ ಆತ್ಮೀಕ ಲೋಕದಲ್ಲಿ ಕಾರ್ಯಮಾಡುತ್ತಿದ್ದ ಸೈತಾನನಿಗೆ ಅವನು ಹೇಳಿದನು. ಆದಾಗ್ಯೂ ಮುಂದಿನ ವಾಕ್ಯ ಸೈತಾನನಿಗಲ್ಲ ಬದಲಿಗೆ ಪೇತ್ರನಿಗಾಗಿತ್ತು. "ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ." ಜನರು ಆಶೀರ್ವಾದ ಎಂದು ಹೇಳುವದನ್ನು ನೀನು ಪರಿಗಣಿಸುತ್ತಿದ್ದೀಯ ಎಂದು ಯೇಸು ಪೇತ್ರನಿಗೆ ಹೇಳಿದನು.

ಒಂದೇ ಸಮಯದಲ್ಲಿ ಯೇಸು ಇಬ್ಬರೊಂದಿಗೆ ಮಾತಾಡುತ್ತಿದ್ದಾನೆ. ಆತನು ಹೇಳಿದ್ದೇನೆಂದರೆ, "ನನಗೆ ನೀನು ವಿಘ್ನವಾಗಿದ್ದೀ." ಹಿಂಡನ್ನು ಮುನ್ನಡೆಸಬೇಕಾಗಿದ್ದ ಪೇತ್ರ ಈಗ ವಿಘ್ನ. ಶಿಲುಬೆಯನ್ನು ತೆಗೆದುಕೊಳ್ಳದ "ಪೇತ್ರನ ಸಂದೇಶಕ್ಕೆ" ಯೇಸು ವಿಧೇಯನಾಗಿದ್ದರೆ, ತಂದೆಯು ಮಗನಿಗೆ ನೀಡಿದ್ದ ಕೆಲಸವನ್ನು (ದೇವರ ಚಿತ್ತ) ಪೂರ್ತೀಕರಿಸಲು ಯೇಸುವಿಗೆ ಸಾಧ್ಯವಾಗುತ್ತಿರಲಿಲ್ಲ. ಹಾಗಾದರೆ ಏನು ತಡೆಯಾಗಿ ನಿಂತಿತ್ತು? ಅದು ಪೇತ್ರ ಎಂದು ನಾವು ಯೋಚಿಸಬಹುದು. ಆದರೆ ಅದು ಪೇತ್ರನಲ್ಲ, ಬದಲಿಗೆ "ಪೇತ್ರನ ಸಂದೇಶ." ಅಂದರೆ ಸೈತಾನನ ಆಲೋಚನೆಗಳ ಪ್ರಕಾರವಿದ್ದ ಪೇತ್ರನ ಸಂದೇಶ. ಯೇಸು ಪೇತ್ರನ ಸಂದೇಶವನ್ನು ಪಾಲಿಸಿದ್ದರೆ ನಾವ್ಯಾರೂ ರಕ್ಷಣೆಯ ಅನುಭವದೊಳಗೆ ಬರಲು ಆಗುತ್ತಿರಲಿಲ್ಲ.

ಇಂದು, ಬಹುತೇಕ ಸಭೆಗಳಿಗೆ ಸಭೆಗಳ ಉದ್ದೇಶವೇನೆಂದು ತಿಳಿದಿಲ್ಲ. ಈ ಸಂದೇಶವು ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವಾಗ, ಇದನ್ನು ನೋಡಿದಂತಹ ಒಬ್ಬ ಗೌರವಾನ್ವಿತ ದೇವರ ಸೇವಕನೊಂದಿಗೆ ನಾನು ಮಾತನಾಡಿದೆ. "ಜನರು ಇಷ್ಟಪಡುವ ಪ್ರಕಾರ ನಮ್ಮ ಸಂದೇಶವಿರಬೇಕು" ಎಂದು ಅವರು ನನಗೆ ಸಲಹೆ ನೀಡಿದರು. ತಕ್ಷಣ ನನ್ನ ಮನಸ್ಸಿಗೆ ಬಂದದ್ದೇನೆಂದರೆ ಯೇಸು ಪೇತ್ರನಿಗೆ ಹೇಳಿದ್ದು. **"ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ."**

ಇಲ್ಲಿ ಯೇಸು ಶಿಲುಬೆಯ ಎರಡನೇಯ ವೈರಿಯನ್ನು ಸೋಲಿಸಿದನು, ಅದು ಯಾವುದೆಂದರೆ ದೇವರ ಚಿತ್ತದಿಂದ ನಮ್ಮನ್ನು ವಿಚಲಿತಗೊಳಿಸುವ ಅಪ್ರಭುದ್ದ ಸಂದೇಶಗಳು. ಪ್ರಿಯ ಸಹೋದರರೇ, ಇಂದು ನಾವು ಅಪ್ರಭುದ್ಧನಾಗಿದ್ದ ಪೇತ್ರನಂತಹ ಅನೇಕ ಸಂದೇಶಗಳನ್ನು ಕೇಳುತ್ತಿದ್ದೇವೆ. ಯೇಸುವಿನಂತೆಯೇ ದೇವರು ನಮಗೆ ನೀಡುವ "ನೊಗ"ವನ್ನು ತೆಗೆದುಹಾಕಲು ಪ್ರಯತ್ನಿಸುತ್ತಿರುವ "ಸೈತಾನನ ಸಂದೇಶ"ವನ್ನು ನಾವೂ ಸಹ ಅರ್ಥಮಾಡಿಕೊಳ್ಳಬೇಕು.

ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ಈ ಭಾಗದಲ್ಲಿ ನಾವು ಎರಡು ಜನರನ್ನು ನೋಡಬಹುದು. ಯೇಸು (ಪ್ರಧಾನ ಸಭಾಪಾಲಕ) ಮತ್ತು ಪ್ರಧಾನ ಸಭಾಪಾಲಕನಿಂದ ನೇಮಿಸಲ್ಪಟ್ಟ ಪೇತ್ರ (ಕೇಂದ್ರ ಸಭಾಪಾಲಕ).

ನಾವು ಇಂದು ಪ್ರಪಂಚದಲ್ಲಿ ನೋಡುವಂತೆ ಅವರಿಬ್ಬರೂ ಒಂದೇ ಸಮಯದಲ್ಲಿ ಸಮಾವೇಶವನ್ನು ನಡೆಸುತ್ತಿದ್ದಾರೆ ಎಂದು ಊಹಿಸಿಕೊಳ್ಳಿ.

ಒಂದು ಫಲಕ ಸಭಾಪಾಲಕ ಪೇತ್ರನ ಸಮಾವೇಶವನ್ನು ಬಿಂಬಿಸುತ್ತದೆ,

> ಬಿಡುಗಡೆ!
> ಎಲ್ಲಾ ಸಮಸ್ಯೆಗಳಿಂದ ಮತ್ತು ಶಿಲುಬೆಯಿಂದ ಮಹಾ ಬಿಡುಗಡೆ.

ಇನ್ನೊಂದು ಸಮಾವೇಶ ಸಭಾಪಾಲಕ ಯೇಸುವಿನಿಂದ ಎಂದು ಬಿಂಬಿಸುತ್ತದೆ,

> ಬನ್ನಿ, ದೇವರ ರಾಜ್ಯದ ಆಶೀರ್ವಾದಗಳನ್ನು ಪಡೆಯಿರಿ, ಶಿಲುಬೆಯನ್ನು ಹೊತ್ತುಕೊಳ್ಳಿ,
> ನನ್ನ ನೊಗವನ್ನು ತೆಗೆದುಕೊಳ್ಳಿ ಮತ್ತು ನನ್ನಿಂದ ಕಲಿತುಕೊಳ್ಳಿ!

ನಾವು ಹೋಗುವದು ಯಾವ ಸಮಾವೇಶಕ್ಕೆ?

ಇಂದಿನ ಲೋಕ ಪೇತ್ರನ ಸಮಾವೇಶಕ್ಕೆ ಮಾತ್ರ ಹೋಗುತ್ತದೆ!

ನಾವು ಯೇಸುವಿನ ಸಮಾವೇಶಕ್ಕೆ ಹೋಗಬೇಕು ಯಾಕೆಂದರೆ ಈ ಲೋಕದಲ್ಲಿ ನಮ್ಮ ಜೀವನ ಅಲ್ಪ ಸಮಯ ಮಾತ್ರ. ನಿಜ ಜೀವನದಲ್ಲಿ ಪ್ರವೇಶಿಸಲು ನಮ್ಮನ್ನು ನಂಬಿಗಸ್ತರು

> ಈ ಲೋಕದಲ್ಲಿ ನಮ್ಮ ಜೀವನ ಅಲ್ಪ ಸಮಯ ಮಾತ್ರ. ನಿಜ ಜೀವನದಲ್ಲಿ
> ಪ್ರವೇಶಿಸಲು ನಮ್ಮನ್ನು ನಂಬಿಗಸ್ತರು ಎಂದು ಸಾಬೀತುಪಡಿಸುವ ಪರೀಕ್ಷೆ ಇದಾಗಿದೆ.

ಎಂದು ಸಾಬೀತುಪಡಿಸುವ ಪರೀಕ್ಷೆ ಇದಾಗಿದೆ. ಗೋಧಿಯ ಧಾನ್ಯದ ಒಳಗಿನ ಜೀವವು ಹೊರಬರಲು, ನೆಲಕ್ಕೆ ಬಿದ್ದು ಸಾಯುವಂತೆ ಹೊರಗಿನ ಮನುಷ್ಯನು ಸತ್ತ ನಂತರ ಮತ್ತು ಹೂಣಲ್ಪಟ್ಟ ನಂತರ ನಮ್ಮ ನಿಜ ಜೀವನವೂ ಸಹ ಪ್ರಾರಂಭವಾಗುತ್ತದೆ.

## ಖ) ಮನುಷ್ಯನ ಆಲೋಚನೆ ಹಾಗೂ ಸೈತಾನನ ಗುರಿ ಒಂದೇ ಆಗಿದೆ

ಯೇಸು ಸೈತಾನನನ್ನು ಗದರಿಸಿದನು, "ಸೈತಾನನೇ, ನನ್ನ ಮುಂದೆ ನಿಲ್ಲಬೇಡ."

ಪ್ರಶ್ನೆ : ಸೈತಾನನ ಚಿತ್ತ ಏನಾಗಿತ್ತು?

ಉತ್ತರ : ಯೇಸು ನೊಗವನ್ನು ಹೊರಬಾರದು.


ಪ್ರಶ್ನೆ : ಯೇಸುವಿಗೆ ಪೇತ್ರನ ಸಂದೇಶ ಏನಾಗಿತ್ತು?

ಉತ್ತರ : ಯೇಸು, ನೀನು ಶಿಲುಬೆಯನ್ನು ತೆಗೆದುಕೊಳ್ಳಬಾರದು.

ಪ್ರಶ್ನೆ : ಇಂದು ಜನರ ಚಿತ್ತ ಏನಾಗಿದೆ?

ಉತ್ತರ : ಯಾವ ನೊಗವೂ ಇರಬಾರದು.

ಮೇಲಿನ ಎಲ್ಲಾ ಉತ್ತರಗಳೂ ಒಂದೇ ಗುರಿಯ ಕಡೆಗೆ ಒಗ್ಗೂಡುತ್ತವೆ.




| ಸೈತಾನನ ಬಯಕೆ | ಪೂರ್ಣವಾಗಿ ಬೆಳೆಯದ ಪೇತ್ರನ ಸಂದೇಶ | ಜನರ ಬಯಕೆ |
|---|---|---|
| 1ನೇ ವೈರಿ | 2ನೇ ವೈರಿ | 3ನೇ ವೈರಿ |
| ನೊಗವನ್ನು ತೆಗೆದುಕೊಳ್ಳಬೇಡಿ | ನೊಗವನ್ನು ತೆಗೆದುಕೊಳ್ಳಲು ಅನುಮತಿಸುವದಿಲ್ಲ | ನೊಗವನ್ನು ತೆಗೆದುಕೊಳ್ಳಬೇಡಿ |

ಈ ಬಾಹ್ಯ ರೇಖೆಗಳಿಂದ ನಾವು ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬಹುದು. ಜ್ಞಾನದ ಕೊರತೆಯಿಂದ ಇಂದು ಅನೇಕ ದೇವರ ಸೇವಕರು, ದೇವರ ಮಕ್ಕಳು, ಅವರ ಅರಿವಿಲ್ಲದೆಯೇ ಈ ಭೂಮಿಯ ಮೇಲೆ ಸೈತಾನನ ಚಿತ್ತವನ್ನು ನೆರವೇರಿಸುವವರಾಗಿದ್ದಾರೆ.

ನಾವು ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ಅಗತ್ಯವಿರುವ ಜ್ಞಾನದ ಕೊರತೆ ಹೊಂದಿದ್ದ, ಆತ್ಮೀಕವಾಗಿ ಬೆಳೆಯಲು ಪ್ರಾರಂಭಿಸಿದ್ದ ಪೇತ್ರನು ಶಿಲುಬೆಯನ್ನು ತೆಗೆದುಕೊಳ್ಳಬಾರದೆಂದು ಯೇಸುವಿಗೆ ಹೇಳಿದನು. ಅವನು ಯೇಸುವಿನೊಂದಿಗೆ ಕೇವಲ 3½

ವರ್ಷಗಳಿಂದ ಮಾತ್ರ ನಡೆಯಲು ಪ್ರಾರಂಭಿಸಿದ್ದನು.

ಜ್ಞಾನದ ಕೊರತೆಯಿಂದ ಇಂದು ಅನೇಕ ದೇವರ ಸೇವಕರು, ದೇವರ ಮಕ್ಕಳು, ಅವರ ಅರಿವಿಲ್ಲದೆಯೇ ಈ ಭೂಮಿಯ ಮೇಲೆ ಸೈತಾನನ ಚಿತ್ತವನ್ನು ನೆರವೇರಿಸುವವರಾಗಿದ್ದಾರೆ.

ಅನೇಕ ವರ್ಷಗಳ ನಂತರ, ಆತ್ಮ ತುಂಬಿದ ಪೇತ್ರ, ಆತ್ಮೀಕವಾಗಿ ಬೆಳೆದ ಪೇತ್ರ ಬರೆದ ಸಂದೇಶಗಳಲ್ಲಿ ಹಗಲು ಮತ್ತು ರಾತ್ರಿಯಂತೆ ವ್ಯತ್ಯಾಸವನ್ನು ನಾವು ನೋಡುತ್ತೇವೆ. ಯೇಸುವಿನ ಜೀವನದಿಂದ ನೊಗವನ್ನು ತೆಗೆದುಹಾಕುವಂತೆ ಯೇಸುವನ್ನು ಗದರಿಸಿದ್ದ ಪೇತ್ರನು, ಈಗ ನಾವು ಬಾಧೆಪಡುವ ಮನಸ್ಸಿನೊಂದಿಗೆ ನಮ್ಮನ್ನು ನಾವು ಸಶಸ್ತ್ರಗೊಳಿಸಿಕೊಳ್ಳಬೇಕು ಎಂದು ಹೇಳುತ್ತಾನೆ.

**"ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿ..." (1 ಪೇತ್ರ 4:1)**

ಪ್ರಭುದ್ದ ಪೇತ್ರನ ಸಂದೇಶವೇನೆಂದರೆ, "ಒಳ್ಳೇದನ್ನು ಮಾಡಿ ಬಾಧೆಪಡುವದಕ್ಕಾಗಿಯೇ ನೀವು ಕರೆಯಲ್ಪಟ್ಟಿದ್ದೀರಿ." (1 ಪೇತ್ರ 2:20-21)

ಇನ್ನೊಂದು ಭಾಗದಲ್ಲಿ ಆತನು ಹೇಳುತ್ತಾನೆ,

**"ಆದರೆ ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರ ಮಟ್ಟಿಗೆ ಸಂತೋಷವುಳ್ಳವರಾಗಿರಿ: ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ ನೀವು ಸಂತೋಷಪಟ್ಟು ಉಲ್ಲಾಸಗೊಳ್ಳುವಿರಿ." (1 ಪೇತ್ರ 4:13)**

**"ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ." (1 ಪೇತ್ರ 4:16)**

**"ಹೀಗಿರಲಾಗಿ ದೇವರ ಚಿತ್ತಾನುಸಾರ ಬಾಧೆಪಡುವವರು ಒಳ್ಳೇದನ್ನು ಮಾಡುವವರಾಗಿದ್ದು ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸಲಿ." (1 ಪೇತ್ರ 4:19)**

ಪೇತ್ರನು ಆತ್ಮೀಕವಾಗಿ ಬೆಳೆದಾಗ ಅವನ ಜೀವನದಲ್ಲಿ ಒಂದು ದೊಡ್ಡ ಬದಲಾವಣೆಯಿರುವುದನ್ನು ನಾವು ನೋಡುತ್ತೇವೆ.

ದೇವರು ನಮಗೆ ನೀಡಿರುವ ದೇವರ ಸೇವಕರು, ಪ್ರಾರಂಭದಲ್ಲಿ ಪೇತ್ರನಂತೆ ಆತ್ಮೀಕವಾಗಿ ಅಪ್ರಭುದ್ಧರಾಗಿ ಮತ್ತು ಸ್ವತಃ ಯೇಸುವಿಗೆ ಸೈತಾನನ ಬಯಕೆಗಳನ್ನು ಪ್ರಸಂಗಿಸುವ ರೀತಿಯಲ್ಲಿಯೇ ಉಳಿಯದೆ; ದೇವರಲ್ಲಿ ಬೆಳೆಯಲು ಮತ್ತು ದೇವರ ಮಕ್ಕಳು ದೇವರ ಚಿತ್ತವನ್ನು ತಿಳಿಯಲು ಅನುವುಮಾಡುವಂತೆ ಹಾಗೂ ಪುಸ್ತಕಗಳ ಮೂಲಕ, ಪ್ರಸಂಗದ ಮೂಲಕ ಮತ್ತು ಅವರ ಸ್ವಂತ ಕಾರ್ಯಗಳ ಮೂಲಕ ದೇವರ ಚಿತ್ತವನ್ನು ಅವರು ಮಾಡುವಂತೆ ನಾವು ಪ್ರಾರ್ಥಿಸೋಣ.

## ಎ) ಶಿಲುಬೆಯ ಮೂರನೇ ವೈರಿ

**ಮನುಷ್ಯನ ಚಿತ್ತ:**

ನಾವು ಈಗ ಮೂರನೇ ದೊಡ್ಡ ವೈರಿಯನ್ನು ಪರಿಚಯಿಸುತ್ತೇವೆ. ಅದು ಯಾರೆಂದು ನೀವು ತಿಳಿಯಲು ಬಯಸುವಿರಾ? ಸರಿ, ಅದು ಬೇರೆ ಯಾರೂ ಅಲ್ಲ ನಮ್ಮ ಸ್ವಂತ ಚಿತ್ತ. ನಾವೂ ಸಹ ಶಿಲುಬೆಯ ವೈರಿಗಳಲ್ಲೊಬ್ಬರು.

ಯೇಸು ಗೆತ್ಸೇಮನೆಯಲ್ಲಿ ಪ್ರಾರ್ಥಿಸುತ್ತಿರುವಾಗ, ಆತನು ರಕ್ತವನ್ನು ಸುರಿಸಿದನು. ಯೇಸು ಈ ರೀತಿಯಾಗಿ ಪ್ರಾರ್ಥಿಸಿದನು. “ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ.” ಆದರೆ ಯೇಸು ತನ್ನ ಸ್ವಂತ ಬಯಕೆಯನ್ನು ಉತ್ತೇಜಿಸಲಿಲ್ಲ. ಯೇಸು “ತಂದೆಯೇ, ನನ್ನ ಚಿತ್ತವಲ್ಲ ನಿನ್ನ ಚಿತ್ತವೇ ನೆರವೇರಲಿ” ಎಂದು ಪ್ರಾರ್ಥಿಸಿದಾಗ ಶಿಲುಬೆ ಸಿದ್ಧವಾಗಿತ್ತು. ಶಿಲುಬೆಯಲ್ಲಿ ಆತನು ತನ್ನ ದೇಹದಲ್ಲಿ ನೋವನ್ನು ಅನುಭವಿಸಿದರೂ, ಗೆತ್ಸೇಮನೆಯಲ್ಲಿ ಅವನು ತನ್ನ ಸ್ವಯಂ ಅನ್ನು ನಾಶಮಾಡಿದ ಪರಿಸ್ಥಿತಿ ಇನ್ನೂ ಹೆಚ್ಚು ನೋವಿನಿಂದ ಕೂಡಿತ್ತು. ಆ ಸಮಯದಲ್ಲಿ, ಯೇಸು ಬೆವರಿನಂತೆ ರಕ್ತ ಸುರಿಸಿದನು.

ನಮ್ಮ ಜೀವನದಲ್ಲಿಯೂ ಸಹ, ಅಂತಹ ಘಟನೆಗಳು ಸಂಭವಿಸಿದಾಗ, ನಾವು ಯೇಸುವಿನ ದಾರಿಯನ್ನು ಅನುಸರಿಸಬೇಕು. ನಾವು ಕ್ರಿಸ್ತನ ನೊಗವನ್ನು ಕೈಗೆತ್ತಿಕೊಳ್ಳಬೇಕು ಮತ್ತು ಅವನಿಂದ ಕಲಿಯಬೇಕು. ಬಾಧೆಯನ್ನು ತೆಗೆದುಹಾಕಲು ಬಿಡುಗಡೆ ಕೂಟಗಳಿಗೆ ನಾವು ಹೋಗುವವರಾಗಿರಬಾರದು. ಬದಲಿಗೆ ನಾವು ನಮ್ಮ ಮೊಣಕಾಲೂರಿ ನಮ್ಮ ಬಯಕೆಗಳ ಮೇಲೆ ಜಯವನ್ನು ಸಾಧಿಸಲು ಪ್ರಾರ್ಥಿಸಬೇಕು ಹಾಗೂ ಪರಿಶುದ್ಧಾತ್ಮನ ಮಾರ್ಗದರ್ಶನದಿಂದ ನಮ್ಮ ‘ಸ್ವಯಂ’ನ ಮೇಲೆ ಜಯವನ್ನು ಸಾಧಿಸಬೇಕು. ಇದನ್ನೇ ದೇವರು ನಮ್ಮ ಜೀವನದಲ್ಲಿ ಬಯಸುವದು. ನಾವು ಮೊದಲನೇ ವೈರಿಯಿಂದ, ಎರಡನೇ ವೈರಿಯಿಂದ ಮತ್ತು ಮೂರನೇ ವೈರಿಯಿಂದಲೂ ಸೋಲಿಸಲ್ಪಟ್ಟಿರಬಹುದು. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ವಿಶ್ವಾಸಿಗಳಾಗಿದ್ದರೂ, ಈ ಲೋಕದ ಮಾನದಂಡಗಳಿಗೆ ಅನುಗುಣವಾಗಿರಬಹುದು ಹಾಗಾಗಿ ನಾವು ಸೈತಾನನ ಮೊದಲ ತಂತ್ರಕ್ಕೆ ಸೋತಿರಬಹುದು (ಶಿಲುಬೆಯ ಮೊದಲನೇ ವೈರಿ) ಅಥವಾ ನಾವು, ದೇವರ ಸೇವಕರು ಸೈತಾನನ ಆಲೋಚನೆಗಳ ಮೂಲಕ ನೀಡುವ ಜನಪ್ರಿಯ ಸಂದೇಶಗಳಲ್ಲಿ ಸಿಕ್ಕಿಬಿದ್ದವರಾಗಿರಬಹುದು (ಶಿಲುಬೆಯ ಎರಡನೇಯ ವೈರಿ). ಇಲ್ಲದಿದ್ದರೆ ನಾವು ನಮ್ಮ ಸ್ವಂತ ಬಯಕೆಗಳಿಂದ ಮತ್ತು ಇಚ್ಛೆಗಳಿಂದ ದೇವರ ಚಿತ್ತವನ್ನು (ನೊಗ) ತೆಗೆದುಹಾಕುವವರಾಗಿರಬಹುದು (ಶಿಲುಬೆಯ ಮೂರನೇಯ ವೈರಿ).

> ಸಭೆಗೆ ಮೊದಲಿಗೆ ಬೆಳೆಯದ ಪೇತ್ರನ ಅಗತ್ಯವಿಲ್ಲ, ಬದಲಿಗೆ ನಾವು ಪತ್ರಿಕೆಗಳಲ್ಲಿ ನೋಡುವ ಪೇತ್ರನಿಗೆ ಹೋಲಿಕೆಯಾಗಿ ಬೆಳೆದಿರುವ“ಪೇತ್ರರ” ಅಗತ್ಯವಿದೆ.

ಈ ಎಲ್ಲಾ ಸಂದರ್ಭಗಳಲ್ಲಿ, ಶಿಲುಬೆಯೆಂದರೆ ಅಕ್ಷರಶಃ “ಮನುಷ್ಯನ ಚಿತ್ತಕ್ಕೆ ವಿರುದ್ಧವಾಗಿರುವ ದೇವರ ಚಿತ್ತ.” ನಾವು ನಮ್ಮ ಚಿತ್ತವನ್ನು (ಸ್ವಯಂ) ನಿರಾಕರಿಸಿದಾಗ

ಮತ್ತು ದೇವರ ಚಿತ್ತವನ್ನು ಮಾಡಿದಾಗ, ನಮ್ಮ ಚಿತ್ತವನ್ನು ದೇವರ ಚಿತ್ತದೊಂದಿಗೆ ಬದಲಾಯಿಸಿಕೊಳ್ಳುತ್ತೇವೆ. ಇದೇ ಶಿಲುಬೆಯೆಂದರೆ. ಯೇಸುವೂ ಸಹ ಕಲ್ವಾರಿಯ ಶಿಲುಬೆಯ ಮೇಲೆ ಇದನ್ನೇ ಮಾಡಿದ್ದು.

ನಾವು ನಮ್ಮ ಚಿತ್ತವನ್ನು (ಸ್ವಯಂ) ನಿರಾಕರಿಸಿದಾಗ ಮತ್ತು ದೇವರ ಚಿತ್ತವನ್ನು ಮಾಡಿದಾಗ, ನಮ್ಮ ಚಿತ್ತವನ್ನು ದೇವರ ಚಿತ್ತದೊಂದಿಗೆ ಬದಲಾಯಿಸಿಕೊಳ್ಳುತ್ತೇವೆ. ಇದೇ ಶಿಲುಬೆಯೆಂದರೆ. ಯೇಸುವೂ ಸಹ ಕಲ್ವಾರಿಯ ಶಿಲುಬೆಯ ಮೇಲೆ ಇದನ್ನೇ ಮಾಡಿದ್ದು.

ಪ್ರಿಯ ಸ್ನೇಹಿತರೇ, ಈ ಮೂರೂ ವೈರಿಗಳನ್ನು ಸೋಲಿಸಲು ನಾವು ತೀರ್ಮಾನಿಸೋಣ! ನಿಜವಾದ ಪಶ್ಚಾತ್ತಾಪದೊಂದಿಗೆ ನಮ್ಮನ್ನು ನಾವು ದೀನತೆಯಿಂದ ಒಪ್ಪಿಸೋಣ. ಪರಿಶುದ್ಧಾತ್ಮನಿಂದ ಸಹಾಯವನ್ನು ಬೇಡೋಣ. ದೇವರ ಚಿತ್ತವನ್ನು ಮಾಡಲು ಸಿದ್ಧರಾಗಿರಿ. ದೇವರ ಮಹಾ ಕೈಗಳು ನಮ್ಮನ್ನು ಸಿದ್ಧಮಾಡಲಿ. ನಾವು ಈಗ ಬೆಳೆಯುತ್ತಿದ್ದೇವೆ. ನಾವು ಬೆಳೆಯಲು ಮುಂದುವರೆಸೋಣ.

ಈ ಲೋಕದಲ್ಲಿ ನಮ್ಮ ಪೋಷಕರಿಂದ ಜನಿಸಿರುವಂಥ ನಾವು, ಅನೇಕ ಸೋಲುಗಳನ್ನು ಎದುರಿಸಿರಬಹುದು. ಆದರೆ ನಾವು ಜಯಿಸುವದಕ್ಕಾಗಿ ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ್ದೇವೆ! ನಮಗೆ ಸೋಲು ಇಲ್ಲ, ಗೆಲುವು ಮಾತ್ರ!

ಈ ಪುಸ್ತಕ ನಿಮಗೆ ಆಶೀರ್ವಾದಕರವಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಸಹೋದರಿ ಮತ್ತು ಸಹೋದರರೊಂದಿಗೆ ಹಂಚಿಕೊಳ್ಳಿ. ಪರಿಶುದ್ಧಾತ್ಮನೊಂದಿಗೆ ನಾವು ಜೊತೆಯಾಗಿ ಕೆಲಸ ಮಾಡೋಣ ಮತ್ತು ಈ ಭೂಮಿಯ ಮೇಲೆ ದೇವರ ಚಿತ್ತವನ್ನು ನೆರವೇರಿಸೋಣ.

## ❖ ಪ್ರಾರ್ಥನೆ



*ಪರಲೋಕದ ತಂದೆಯೇ, ಶಿಲುಬೆಯ ಮೂರು ವೈರಿಗಳು ಸೈತಾನನು, ದೇವರಿಂದಲ್ಲದ ಸಂದೇಶಗಳು ಮತ್ತು ಸ್ವತಃ ನಾನೇ ಎಂದು ತಿಳಿದುಕೊಂಡೆ. ಈ ಮೂರೂ ವೈರಿಗಳು ನನ್ನನ್ನು ನಿನ್ನ ಚಿತ್ತದಿಂದ ಎಂದಿಗೂ ದೂರ ಎಳೆಯದಂತೆ ನನಗೆ ಸಹಾಯಮಾಡು. ಮನುಷ್ಯರನ್ನು ಮೆಚ್ಚಿಸದೇ ದೇವರ ಚಿತ್ತವನ್ನು ಮಾಡಲು ನನಗೆ ಸಹಾಯಮಾಡು ಅದರಿಂದ ಸ್ವತಃ ನಾನು ಹಾಗೆಯೇ ನನ್ನನ್ನು ಕೇಳುವವರೆಲ್ಲರೂ ದೇವರ ರಾಜ್ಯವನ್ನು ಬಾಧ್ಯಮಾಡಿಕೊಳ್ಳುತ್ತಾರೆ. ಈ ಸ್ವರ್ಗೀಯ ಲೇಖನಕ್ಕಾಗಿ ವಂದನೆಗಳು. ನಾನು ನಿಜವಾಗಿಯೂ ಆಶೀರ್ವದಿಸಲ್ಪಟ್ಟಿದ್ದೇನೆ... ಯೇಸುವಿನ ನಾಮದಲ್ಲಿ, ಆಮೆನ್.*

## ಮುಖ್ಯ ತತ್ವಗಳು

1. ಶಿಲುಬೆಯ ಮೂರು ವೈರಿಗಳಾವುವೆಂದರೆ ಸೈತಾನನು, ದೇವರಿಂದ ಬಂದಿಲ್ಲದ
2. ಸಂದೇಶಗಳು ಮತ್ತು ಸಂದೇಶಕರು ಹಾಗೂ ನಮ್ಮ ಚಿತ್ತ.
3. ಮೂರೂ ವೈರಿಗಳ ಗುರಿಯೇನೆಂದರೆ ಜನರನ್ನು 'ದೇವರ ಚಿತ್ತದಿಂದ ಮನುಷ್ಯನ ಚಿತ್ತಕ್ಕೆ' ಎಳೆಯುವದು.
4. ನಮ್ಮ ಜೀವನದಲ್ಲಿ ಸೈತಾನನ ತಂತ್ರವೇನೆಂದರೆ ಈ ಲೋಕದ ಸಂಪತ್ತು ಮತ್ತು ವೈಭವವನ್ನು ಕೊಡುವ ಭರವಸೆ ನೀಡಿ ನೊಗವನ್ನು (ಶಿಲುಬೆ) ತೆಗೆದುಕೊಳ್ಳದಂತೆ ನಮಗೆ ಮನವರಿಕೆ ಮಾಡುವುದು.
5. ತಂದೆ ಮತ್ತು ತಾಯಿ ಹುಣ್ಣುಗಳಿಂದ ಸೋಂಕಿತವಾಗಿರುವ ಮಗು, ಕುಡಿಯಲು ಇಷ್ಟಪಡದಿರುವ ಔಷಧಿಯನ್ನು ಅದರ ಬಾಯಿಗೆ ಸುರಿಯುವದಕ್ಕೆ ಹೋಲುವಂತೆಯೇ ಶರೀರದ ಲೌಕಿಕ ಭಾವಗಳಿಂದ ಆವರಿಸಿರುವ, ನಮ್ಮ ಕೆಟ್ಟತನ ತುಂಬಿರುವ ಸ್ವಭಾವವನ್ನು ಬದಲಾಯಿಸುವ ಸಲುವಾಗಿ ಮತ್ತು ಪರಲೋಕದ ಸ್ವಭಾವದಿಂದ ನಮ್ಮನ್ನು ತುಂಬಿಸುವದಕ್ಕಾಗಿ, ನಮ್ಮ ತಂದೆ ಮತ್ತು ತಾಯಿಯಂತಿರುವ ದೇವರು ಈ ನೊಗ ಅಥವಾ ಶಿಲುಬೆಯನ್ನು ಹೊರಲು ನಮಗೆ ನೀಡುತ್ತಿದ್ದಾರೆ.
6. ಸಭೆಗೆ, ಪ್ರಾರಂಭದಲ್ಲಿ ಅಪ್ರಭುದ್ಧನಾಗಿದ್ದ ಪೇತ್ರನಂತಿರುವ ಅಪ್ರಭುದ್ದ ಕುರುಬರ ಅಗತ್ಯವಿಲ್ಲ. ಬದಲಿಗೆ ನಾವು ಪತ್ರಿಕೆಗಳಲ್ಲಿ ನೋಡುವ ಪೇತ್ರನಿಗೆ ಹೋಲಿಕೆಯಾಗಿ ಬೆಳೆದಿರುವ ಪ್ರಭುದ್ದ "ಪೇತ್ರರ" ಅಗತ್ಯವಿದೆ.
7. ಮೊದಲು, ನಾವು ದೇವರಿಗೆ ಸೇರುತ್ತೇವೆ, ಆದ್ದರಿಂದ ಮನುಷ್ಯರನ್ನು ಮೆಚ್ಚಿಸುವುದಕ್ಕಿಂತ ಹೆಚ್ಚಾಗಿ ನಾವು ದೇವರ ಚಿತ್ತವನ್ನು ಪರಿಗಣಿಸಬೇಕು. ದೇವರ ಚಿತ್ತವನ್ನು ನಾವು ಪರಿಗಣಿಸಿದಾಗ ಮತ್ತು ಮಾಡಲು ಪ್ರಾರಂಭಿಸಿದಾಗ ದೇವಜನರು ಸಂತೋಷಗೊಳ್ಳುತ್ತಾರೆ ಮತ್ತು ದೇವರ ಚಿತ್ತವನ್ನು ಮಾಡುತ್ತಾರೆ. ನಂತರ ನಮ್ಮನ್ನು ಗಮನಿಸುವವರು ನಮ್ಮೊಂದಿಗೆ ದೇವರ ರಾಜ್ಯವನ್ನು ಬಾಧ್ಯಮಾಡಿಕೊಳ್ಳುತ್ತಾರೆ.
8. ನಾವು ನಮ್ಮ ಚಿತ್ತವನ್ನು (ಸ್ವಯಂ) ನಿರಾಕರಿಸಿದಾಗ ಮತ್ತು ದೇವರ ಚಿತ್ತವನ್ನು ಮಾಡಿದಾಗ, ನಾವು ನಮ್ಮ ಚಿತ್ತವನ್ನು ದೇವರ ಚಿತ್ತದೊಂದಿಗೆ ಬದಲಾಯಿಸಿಕೊಳ್ಳುತ್ತಿದ್ದೇವೆ. ಇದೇ ಶಿಲುಬೆಯೆಂದರೆ. ಯೇಸುವೂ ಸಹ ಕಲ್ವಾರಿಯ ಶಿಲುಬೆಯ ಮೇಲೆ ಇದನ್ನೇ ಮಾಡಿದ್ದು.

**"ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನೆಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು." (ಮತ್ತಾ 7:21)**

# ಮುಕ್ತಾಯ

ಪ್ರಿಯರೇ, ಈ ಪುಸ್ತಕದ ಪ್ರಕಟಣೆಗಳು ಅದ್ಭುತವಾದದ್ದು ಮತ್ತು ಆಳವಾದದ್ದು ಎಂದು ದೇವರ ಅನೇಕ ಸೇವಕರು ಅಭಿಪ್ರಾಯಪಟ್ಟಿದ್ದಾರೆ, ಆದರೆ ಈಗ ದೇವರು ನನಗೆ ನೀಡುತ್ತಿರುವ, ಈ ಪುಸ್ತಕದಲ್ಲಿ ಬರೆಯದಿರುವ ಸಂದೇಶಗಳಿಂದ ಬರೆದಿರುವದಕ್ಕೆ ಹೋಲಿಸಿದರೆ, ಈ ಸಂದೇಶಗಳು ಆಳವಾಗಿಲ್ಲ. ಈ ಪ್ರಕಟಣೆಗಳು ಒಬ್ಬ ಕ್ರೈಸ್ತನ ಜೀವಿತದಲ್ಲಿ ಅಡಿಪಾಯದ ಕಲ್ಲುಗಳು ಮಾತ್ರ ಹಾಗೂ ಈ ಮಾತುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದರೆ ನಿಮ್ಮ ಜೀವನದಲ್ಲಿ ನೀವು ಜಯವನ್ನು ಸಾಧಿಸುತ್ತೀರಿ.

ಈ ಪುಸ್ತಕದ ಪ್ರಕಟಣೆಗಳನ್ನು ಪರಿಶುದ್ಧಾತ್ಮನ ಸಹಾಯದೊಂದಿಗೆ ನೀವು ಪದೇ ಪದೇ ಓದಿದರೆ ಮತ್ತು ಅರ್ಥಮಾಡಿಕೊಂಡರೆ, ಇದು ನಿಮಗೆ ನಿಜವಾಗಿಯೂ ಆಶೀರ್ವಾದಕರವಾಗಿರುತ್ತದೆ. ನನ್ನ ಜೀವನದಲ್ಲಿ ಅನೇಕ ಉರಿಯುತ್ತಿರುವ ಸನ್ನಿವೇಶಗಳನ್ನು ಸಂಭವಿಸಲು ದೇವರು ಅವಕಾಶ ಮಾಡಿಕೊಟ್ಟನು ಹಾಗೂ ನಾನು ಈ ಉರಿಯನ್ನು ಬಹಳ ಕಷ್ಟದಿಂದ ಹಾದುಹೋದಾಗ, ವಾಕ್ಯದ ಪ್ರಕಟಣೆಗಳ ಮೂಲಕ, ಕಾಣದ ಲೋಕದಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ದೇವರು ನನಗೆ ಸಹಾಯ ಮಾಡಿದನು. ನನ್ನ ಆಲೋಚನೆಗಳು ಲೌಕಿಕ ಶರೀರದ ಭಾವಗಳಿಂದ ದೇವರ ರಾಜ್ಯದ ಆಲೋಚನೆಗಳಿಗೆ ತಿರುಗಿತು ಮತ್ತು ನಾನು ದೇವರ ರಾಜ್ಯದ ಈ ಆಲೋಚನೆಗಳಲ್ಲಿ ಕಾರ್ಯಮಾಡಿದಾಗ, ಉರಿಯುವ ಅನುಭವಗಳನ್ನು ಜಯಿಸಲು ಮತ್ತು ವಿಜಯವನ್ನು ಸಾಧಿಸಲು ಅವನು ನನಗೆ ಸಾಧ್ಯಮಾಡಿದನು. ಅದು ಮಾತ್ರವೇ ಅಲ್ಲ, ನನ್ನ ಸ್ವಂತ ಬಯಕೆಗಳಿಗೆ ಅನುಗುಣವಾಗಿ ನಡೆದು ಬದುಕುತ್ತಿದ್ದ ನನ್ನ ಮೊದಲಿದ್ದ ಸ್ಥಳದಿಂದ ದೂರ ಕೊಂಡೊಯ್ದು, ದೇವರು ನನ್ನನ್ನು ತನ್ನ ಸ್ವರ್ಗೀಯ ಉದ್ದೇಶಕ್ಕೆ ಕರೆತಂದನು.

ಈ ಪುಸ್ತಕದ ಪ್ರಕಟಣೆಯ ಮೂಲಕ ದೇವರ ರಾಜ್ಯದಲ್ಲಿ ದೇವರು ನಿಮಗೆ ನೀಡಿರುವ ಆಶೀರ್ವಾದಗಳು ಸಾಕಾರಗೊಳ್ಳಲಿ ಎಂದು ನಾನು ಯೇಸುವಿನ ಹೆಸರಿನಲ್ಲಿ ಸರ್ವಶಕ್ತ ದೇವರನ್ನು ಪ್ರಾರ್ಥಿಸುತ್ತೇನೆ ಮತ್ತು ಅದನ್ನು ನಿಮ್ಮ ಮೂಲಕ ಜಗತ್ತಿಗೆ ತರಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈ ಮಾತುಗಳು ನಿಮಗೆ ಆಶೀರ್ವಾದವಾಗಲಿ ಎಂದು ನಾನು ಘೋಷಿಸುತ್ತೇನೆ. ಕ್ರಿಸ್ತನಲ್ಲಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ ಮತ್ತು ನನಗಿಂತ ಹೆಚ್ಚು ಯೋಗ್ಯರೆಂದು ನಾನು ಭಾವಿಸುತ್ತೇನೆ.

ಕ್ರಿಸ್ತನಿಗಾಗಿ, ಕ್ರಿಸ್ತನ ಧ್ವನಿಯಾಗಿ
**ಸುವಾ. ಶಾಜಿ ಜೋಸೆಫ್**

"ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ."
(ಲೂಕ 17:10)

ಈ ಪುಸ್ತಕವು ನಿಮಗೆ ಆಶೀರ್ವಾದಕರವಾಗಿದ್ದರೆ, ನಮಗೆ ಬರೆದು ತಿಳಿಸಿ. ನಾವು ನಿಮ್ಮ ಸ್ಥಳಕ್ಕೆ ಬಂದು ಕ್ರಿಸ್ತನಿಗಾಗಿ ಸೇವೆಮಾಡುವುದನ್ನು ನೀವು ಬಯಸುವುದಾದರೆ, ನಮ್ಮನ್ನು ಸಂಪರ್ಕಿಸಿ. ದೇವರ ಚಿತ್ತವಾದರೆ, ನಾವು ಆಗಮಿಸುತ್ತೇವೆ ಮತ್ತು ನೀವು ಆಯೋಜಿಸುವ ಕೂಟದಲ್ಲಿ ಭಾಗವಹಿಸುತ್ತೇವೆ. ದೇವರು ಆತನ ಚಿತ್ತಕ್ಕನುಸಾರವಾಗಿ ನಮ್ಮ ಎಲ್ಲಾ ಪ್ರಯತ್ನಗಳಲ್ಲಿ ನಮಗೆ ಸಹಾಯಮಾಡಲಿ.

More details:

9495254997 (Ind)
9741118968 (Kar)
shajijosephemail@gmail.com
www.kingdommessages.com

**House of Prayer (Prarthanalayam) Ministries**
Kuzhivellipady, Panchayath Road, Edathala P.O
Pin: 683561
Ernakulam, Kerala
India

**Tel: 009 484 2411092**

**UAE**
**Tel: 00971-7-2211059**

Email: shajijosephemail@gmail.com
Website: www.kingdommessages.com


## “ದಿ ವಾಯ್ಸ್ ಆಫ್ ಗಾಡ್”
## ಟಿ ವಿ ಕಾರ್ಯಕ್ರಮ

ಪವರ್ ವಿಷನ್ ಟಿ ವಿ: ಮಂಗಳವಾರ ರಾತ್ರಿ 8 ಗಂಟೆಗೆ
ಹಾರ್ವೆಸ್ಟ್ ಟಿ ವಿ: ಶುಕ್ರವಾರ ರಾತ್ರಿ 7:30 ಶನಿವಾರ ಮಧ್ಯಾಹ್ನ 3 ಗಂಟೆಗೆ

# ಇತರ ಸಂದೇಶಗಳು
## ಸುವಾ. ಶಾಜಿ ಜೋಸೆಫರಿಂದ

### ಪುಸ್ತಕಗಳು

Spirit World and Spiritual Growth
ಪುಸ್ತಕ ಸಂಖ್ಯೆ 1 (Malayalam, English, Hindi, Kannada)

Spirit World and Spiritual Growth 2
Born Again for Victory- ಪುಸ್ತಕ ಸಂಖ್ಯೆ 2
(Malayalam, English)

Father's Business
Return Journey and Law of the Spirit-
ಪುಸ್ತಕ ಸಂಖ್ಯೆ 3 (Malayalam, English)

Father's Business
Solution for Man's Greatest Problem- ಪುಸ್ತಕ ಸಂಖ್ಯೆ 4
(Malayam, English)

ದೇವರ ರಾಜ್ಯದ ಸಂದೇಶ ಗೀತೆಗಳು -1(CD)- Malayalam

"ಯೇಸು ಪಾಪಿಗಳನ್ನು ರಕ್ಷಿಸುತ್ತಾರೆ, ರೋಗಿಗಳನ್ನು ಸ್ವಸ್ಥಮಾಡುತ್ತಾರೆ, ದೆವ್ವಗಳನ್ನು ಓಡಿಸುತ್ತಾರೆ ಮತ್ತು ನಿತ್ಯ ಜೀವವನ್ನು ನೀಡುತ್ತಾರೆ".

**ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು? (ಮತ್ತಾ 16:26)**

## ಪ್ರಾರ್ಥನಾಲಯಂನಲ್ಲಿನ ಕಾರ್ಯಕ್ರಮಗಳು

1. ಪ್ರತೀ ತಿಂಗಳ ಮೊದಲನೇ ಸೋಮವಾರ ಬೆಳಗ್ಗೆ 10 ಗಂಟೆಗೆ ಕೂಟವು ಪ್ರಾರಂಭವಾಗುತ್ತದೆ ಮತ್ತು ಶನಿವಾರ ಮಧ್ಯಾಹ್ನ 1 ಗಂಟೆಗೆ ಮುಕ್ತಾಯಗೊಳ್ಳುತ್ತದೆ (6 ದಿನಗಳು).
2. ಆತ್ಮೀಕ ಬೆಳವಣಿಗೆ ಕೂಟ (ವರ್ಷಕ್ಕೆ ಎರಡು ಬಾರಿ) – ಜನವರಿ & ಜುಲೈ.
3. ದೇವರ ಕಾರ್ಯವನ್ನು ಮಾಡಲು ಪರಿಶುದ್ಧಾತ್ಮನಲ್ಲಿ ವಿಶ್ವಾಸಿಗಳನ್ನು ಸಿದ್ಧಪಡಿಸಲು ಸ್ಪಿರಿಚುವಲ್ ಫೈರ್ ಕಾನ್ಫರೆನ್ಸ್ (ವರ್ಷಕ್ಕೊಮ್ಮೆ).
4. ದೇವರ ಚಿತ್ತವನ್ನು ಮಾಡುವ ಸಲುವಾಗಿ ಸಭೆಗಳ ಸಬಲೀಕರಣ.
5. ಸ್ಕೂಲ್ ಆಫ್ ಮಿನಿಸ್ಟ್ರೀಸ್

More details contact us:

9495254997 (Ind)

9741118968 (Kar)

shajijosephemail@gmail.com

**NOTES**

# ಹೊಸದಾಗಿ ಹುಟ್ಟಿದ ವ್ಯಕ್ತಿಯಲ್ಲಿ ಉಂಟಾಗುವ ಬದಲಾವಣೆಗಳು...

ಈ ಪುಸ್ತಕವು ಪ್ರಕಟಣೆಗಳ ಉಗ್ರಾಣವಾಗಿದೆ. ಒಬ್ಬ ದೇವರ ಮಗುವು ಈ ಪುಸ್ತಕವನ್ನು ಓದಿದಾಗ, ಅವನ ಜೀವದಲ್ಲಿ ದೇವರ ಜೀವ ಅಥವಾ ದೇವರ ಆತ್ಮದ ತುಂಬುವಿಕೆಯನ್ನು ಅನುಭವಿಸುತ್ತಾನೆ. ಈ ಪುಸ್ತಕವನ್ನು ಓದಿರುವಂತಹ ದೇವರ ಮಕ್ಕಳು ಅವರ ಅನುಭವದ ಬಗ್ಗೆ ಹಂಚಿಕೊಂಡಿದ್ದಾರೆ! ತನ್ನ ಜನರು ಕಾಣದ ದೇವರ ರಾಜ್ಯದ ರಹಸ್ಯಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಆತ್ಮೀಕವಾಗಿ ಬೆಳೆಯುವ ಸಲುವಾಗಿ ದೇವರು ಈ ಮಾತುಗಳನ್ನು ತನ್ನ ಸೇವಕನ ಮೂಲಕ ಸಾರಿದ್ದಾರೆ. ಈ ಸಂದೇಶಗಳನ್ನು ಡಿವಿಡಿಯಲ್ಲಿ ಕೇಳಿದಂತಹ ಅನೇಕ ದೇವರ ಸೇವಕರು, ಈ ಸತ್ಯಗಳಿಂದ ಆಶ್ಚರ್ಯಗೊಂಡರು. ಅವರ ಆತ್ಮೀಕ ಜೀವನದಲ್ಲಿ ಮತ್ತು ಸೇವೆಯಲ್ಲಿ ಮುಚ್ಚಿದ್ದಂತಹ ಅನೇಕ ಬಾಗಿಲುಗಳನ್ನು ದೇವರು ತೆರೆದರು. ಅಂತೆಯೇ, ನೀವು ಈ ಪುಸ್ತಕದ ಪುಟಗಳನ್ನು ತಿರುಗಿಸಿದಂತೆ ದೇವರು ಅನೇಕ ರಹಸ್ಯಗಳನ್ನು ಪ್ರಕಟಿಸುತ್ತಾರೆ.



**ಸ.ಪಾ. ಡಾ. ಕೆ.ಸಿ.ಜಾನ್**
ಅಧ್ಯಕ್ಷರು, ಪವರ್ ವಿಷನ್ ಟಿವಿ,
ಮಾಜಿ ಐಪಿಸಿ ಸಾಮಾನ್ಯ ಅಧ್ಯಕ್ಷ.

"ಇದು ಒಂದು ಅಸಾಮಾನ್ಯ ಪುಸ್ತಕ. ಈ ಪುಸ್ತಕವು ದೇವಜನರಿಗೆ, ವಿಶೇಷವಾಗಿ ಸತ್ಯವೇದ ಶಾಲಾ ವಿದ್ಯಾರ್ಥಿಗಳಿಗೆ, ಕ್ರಿಸ್ತನ ಸೇವಕರಿಗೆ ಮತ್ತು ಹಿರಿಯರಿಗೆ ಒಂದು ಆಶೀರ್ವಾದವಾಗಿದೆ."



**ಸುವಾ. ಜೆ.ಸಿ.ದೇವ್**
ಪ್ರಾಂಶುಪಾಲರು, ಫೈತ್ ಲೀಡರ್ಸ್
ಬೈಬಲ್ ಟ್ರೈನಿಂಗ್ ಸೆಂಟರ್, ಕೇರಳ.

"ನಾನು ಈ ಪುಸ್ತಕವನ್ನು ಓದಿ ಶ್ರೇಷ್ಟ ಲಾಭಗಳಿಸಿದೆನೆಂದು ಪರಿಗಣಿಸುತ್ತೇನೆ. ಈ ಪುಸ್ತಕವು ಪ್ರತೀ ವಿಶ್ವಾಸಿಗಳೂ ಅತ್ಯಂತ ಗಾಂಭೀರ್ಯದಿಂದ ಪರಿಗಣಿಸಬೇಕಾದ ಮಹತ್ತಾದ ಸತ್ಯಗಳನ್ನು ಒಳಗೊಂಡಿರುವ ಉಗ್ರಾಣವಾಗಿದೆ."




**ಸ.ಪಾ. ಜ್ಯುಕ್ಷಿ ಮ್ಯಾಥ್ಯು**
ಸಂಸ್ಥಾಪಕರು & ಅಧ್ಯಕ್ಷರು,
ಎಮ್.ಎಫ್.ಜಿ ಸಭೆಗಳು, ಯುಎಇ.

"ದೇವರ ರಾಜ್ಯದೆಡೆಗೆ ಒಂದು ಶ್ರೇಷ್ಟವಾದ ಒಳನೋಟವಾಗಿದೆ."



**ಸುವಾ. ಕೆ.ಜೆ.ಜಾರ್ಜ್**
ಹಿರಿಯ ವಕೀಲರು,
ಉಚ್ಛ ನ್ಯಾಯಾಲಯ, ಕೇರಳ.

ಈ ಪುಸ್ತಕವು ಎಲ್ಲಾ ಕ್ರೈಸ್ತರಿಗೂ ಬಹಳ ಪ್ರಾಮುಖ್ಯ ಹಾಗೂ ಬೆಲೆಕಟ್ಟಲಾಗದ ಪುಸ್ತಕವಾಗಿದೆ. ಸತ್ಯವೇದದ ನಂತರ ಈ ಪುಸ್ತಕಕ್ಕೆ ಹೆಚ್ಚು ಮಹತ್ವ ನೀಡುವಂತೆ ನಾನು ಶಿಫಾರಸ್ಸು ಮಾಡುತ್ತೇನೆ. ಪರಿಶುದ್ಧಾತ್ಮನು ಹೇಳುತ್ತಾನೆ, "ಭವಿಷ್ಯದಲ್ಲಿ ಲೋಕದ ವಿವಿಧ ಭಾಗಗಳಿಗೆ, ಅನೇಕ ಭಾಷೆಗಳಲ್ಲಿ ಈ ಪುಸ್ತಕವು ಬಿಡುಗಡೆಯಾಗುತ್ತದೆ."




"ಜ್ಞಾನವನ್ನು ಪಡೆಯಬೇಕೆಂಬುದೇ ಜ್ಞಾನಬೋಧೆಯ ಪ್ರಥಮಪಾಠ; ನಿನ್ನ ಎಲ್ಲಾ ಸಂಪತ್ತಿನಿಂದಲೂ ಜ್ಞಾನವನ್ನು ಪಡೆ."
ಜ್ಞಾನೋಕ್ತಿ 4:7

ಈ ಪುಸ್ತಕವು ನಿಮಗೆ, ನಿಮ್ಮ ಕುಟುಂಬಕ್ಕೆ ಮತ್ತು ಬರಲಿರುವ ನಿಮ್ಮ ಸಂತತಿಗೆ ಒಂದು ಅಮೂಲ್ಯವಾದ ನಿಧಿಯಾಗಿರಲಿದೆ.

**More Details**

120/-


www.kingdommessages.com shjijosephemail@gmail.com
9495254997(Ind) 9741118968(Kar)